ಚರಿತ್ರೆ ವಿಭಾಗ ಮಾಲೆ-೩

ಪರಿಸರ ಚಳುವಳಿಗಳು

ಏಕೀಕರಣೋತ್ತರ ಕರ್ನಾಟಕ ಚಳವಳಿ ಸಂಪುಟ-೩

ಕೆ. ಮೋಹನ್‌ಕೃಷ್ಣ ರೈ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿಸರ ಚಳವಳಿಗಳು

ಸಂಪುಟ ೩

ಚರಿತ್ರೆ ವಿಭಾಗ ಮಾಲೆ - ೩

ಪರಿಸರ ಚಳವಳಿಗಳು

ಏಕೀಕರಣೋತ್ತರ ಕರ್ನಾಟಕ ಚಳವಳಿ ಸಂಪುಟ - ೩

ಕೆ. ಮೋಹನ್‌ಕೃಷ್ಣ ರೈ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

PARISARA CHALAVALIGALU
A Study of Environment Movements
by K. Mohankrishna Rai
Lecturer, Department of History
Kannada University, Hampi
(Post Unification Karnataka Movements Series, Vol. 3)

Published by
Prof. A. V. Navada
Director, Prasaranga
Kannada University, Hampi
Vidyaranya - 583 276

Pages : x+100

First Edition 1999

Price : Rs. 50/-

© Kannada University, Hampi, 1999

ಪ್ರಕಾಶಕರು
ಪ್ರೊ. ಎ. ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಬೆಲೆ : ರೂ. ೫೦/-

ಮುಖಪುಟ : ಕೆ. ಕೆ. ಮಕಾಳಿ

ಮುದ್ರಣ
ಲಕ್ಷ್ಮಿ ಮುದ್ರಣಾಲಯ
೧೧೭/೨, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು - ೧೮
✆ ೬೬೧೩೧೨೩, ೬೬೧೮೭೫೨

*

ದೇಸಿಯೊಳ್ ಪುಗುವುದು

ಡಾ. ಎಂ.ಎಂ.ಕಲಬುರ್ಗಿ
ಕುಲಪತಿಗಳು

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಶಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳ್ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನಪದ್ಧತಿಯಾಗಿದೆ. ಕನ್ನಡಿಗರ ಇಂಥ ಜೀವನಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ; ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನ ಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶಿ ಚಳವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶ ಗಳನ್ನು ಗುರುತಿಸುವುದು; ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳುವುದು. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ

ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆಯ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ 'ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರಮಾಧ್ಯಮ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿ ವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ 'ಪುಸ್ತಕ ಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತರುತ್ತಲಿರುವ ಈ ಪ್ರಸಾರಾಂಗದ ಇತ್ತೀಚಿನ ಪ್ರಕಟಣೆಯಾಗಿದೆ 'ಪರಿಸರ ಚಳವಳಿಗಳು'.

ಅನ್ಯಾಯವನ್ನು ಸಹಿಸಿಕೊಂಡು ಹೋಗುತ್ತಲಿರುವ ಸ್ವಭಾವದ ಭಾರತೀಯರು ಇತ್ತೀಚೆ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ಮನೋಧರ್ಮವನ್ನು ರೂಢಿಸಿಕೊಂಡಿರುವ ಫಲ 'ಚಳವಳಿ'. ಏಕೀಕರಣೋತ್ತರ ಕರ್ನಾಟಕದಲ್ಲಿ ತಲೆದೋರಿದ ಇಂಥ ಆರು ಮುಖ್ಯ ಚಳವಳಿಗಳನ್ನು ಕುರಿತು ಚರಿತ್ರೆ ವಿಭಾಗವು ಯೋಜನೆಯೊಂದನ್ನು ಕೈಗೆತ್ತಿಕೊಂಡಿದೆ. ಇದರ ಅಂಗವಾಗಿ ಪ್ರಕಟವಾಗುತ್ತಲಿರುವ ಆರು ಕೃತಿಗಳಲ್ಲಿ 'ಪರಿಸರ ಚಳವಳಿಗಳು' ಒಂದು. ಇದನ್ನು ರಚಿಸಿದ ಶ್ರೀ ಕೆ. ಮೋಹನ್‌ಕೃಷ್ಣ ರೈ ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

❑❑

ಲೇಖಕರ ಮಾತು

ಪರಿಸರ ಇಂದು ಜಾಗತಿಕ ನೆಲೆಯಲ್ಲಿ ಚರ್ಚೆಗೊಳಗಾಗುತ್ತಿದೆ. ಪರಿಸರ ಚಳವಳಿಗಳನ್ನು ಯಾವುದೇ ಒಂದು ಪ್ರದೇಶಕ್ಕೆ ಸೀಮಿತಗೊಳಿಸಿ ಅಧ್ಯಯನ ನಡೆಸಲು ಸಾಧ್ಯವಾಗುವುದಿಲ್ಲ. ಪರಿಸರ ಕುರಿತಾದ ಹೇಳಿಕೆಗಳು ಬಹುಕಾಲದಿಂದಲೇ ಕೇಳಿಬರುತ್ತಿದ್ದರೂ ಅದೊಂದು ಸಮಸ್ಯೆಯಾಗಿ ಕಂಡುಬಂದಿರುವುದು ಇತ್ತೀಚಿನ ವರ್ಷಗಳಲ್ಲಿ. ಈ ಸಮಸ್ಯೆಗಳು ಚಳವಳಿಯಾಗಿ ಪರಿವರ್ತನೆಗೊಂಡ ನಂತರ ಪರಿಸರ ಕೇವಲ ಪರಿಸರವಾಗಿ ಮಾತ್ರ ಉಳಿದಿಲ್ಲ. ಪರಿಸರದೊಂದಿಗೆ ಮಾನವನಿರ್ಮಿತ ಧೋರಣೆಗಳೂ ಸೇರಿಕೊಂಡವು. ಇವು ಪರಿಸರ ಚಳವಳಿಯನ್ನು ಜಟಿಲ ಹಾಗೂ ಗೊಂದಲಮಯವನ್ನಾಗಿ ಮಾಡಿದವು. ಅದೇ ರೀತಿ ಪರಿಸರ ಚರ್ಚೆಯನ್ನು ಜಾಗತಿಕವನ್ನಾಗಿಸಿ ಪರಿಸರ ಬಿಕ್ಕಟ್ಟು ತಲೆದೋರುವಂತೆಯೂ ಮಾಡಿವೆ. ಸರಕಾರದ ಹೊಸ ಆರ್ಥಿಕ ನೀತಿ ಹಾಗೂ ಅದರ ಅನುಬಂಧಗಳು ಬಹುದೊಡ್ಡ ಸಂಖ್ಯೆಯ ಜನರ ಬದುಕನ್ನು ಪರಿಗಣನೆಗೆ ತೆಗೆದುಕೊಳ್ಳದೆ ಆಧುನೀಕರಣವನ್ನು ಮುಂದುವರಿಸಿವೆ. ಇದು ಬಹುಸಂಖ್ಯಾತ ಜನವರ್ಗದ ಬದುಕನ್ನು ಸೀಮಿತವರ್ಗ ಬಂಡವಾಳದೊಂದಿಗೆ ನಿರ್ಧರಿಸುವ ಪ್ರಯತ್ನವೂ ಆಗಿದೆ. ಕೆಳವರ್ಗಗಳನ್ನು ಆಧುನಿಕತೆಯ ಲಾಭಗಳಿಂದ ವಂಚಿಸುವುದೇ ಇಲ್ಲಿನ ಮುಖ್ಯ ಉದ್ದೇಶವಾಗಿ ಕಂಡುಬರುತ್ತದೆ. ಇದರೊಡನೆ ಸಂಪ್ರದಾಯ ಮತ್ತು ಆಧುನಿಕತೆಗಳನ್ನು ವಿಷಯವನ್ನಾಗಿ ಇಟ್ಟುಕೊಂಡು ಮೇಲ್ವರ್ಗವು ನಡೆಸುತ್ತಿರುವ ಸಾಂಸ್ಕೃತಿಕ ರಾಜಕೀಯವೂ ಸೇರಿಕೊಂಡಿದೆ. ಕಳೆದ ಮೂರು ದಶಕಗಳಿಂದೀಚೆ ಕರ್ನಾಟಕದಲ್ಲಿ ಕಾಣಿಸಿಕೊಂಡಿರುವ ಪರಿಸರ ಚಳವಳಿಗಳು ಮೇಲೆ ವಿವರಿಸಿದ ಎಲ್ಲ ಲಕ್ಷಣಗಳನ್ನೂ ಹೊಂದಿರುವುದು ಅಧ್ಯಯನದಿಂದ ತಿಳಿದುಬಂದಿದೆ. ಸಾಮಾಜಿಕ ವಾಸ್ತವತೆಯನ್ನು ಅರ್ಥೈಸಿಕೊಳ್ಳಬೇಕಾದರೆ ಈ ಅಧ್ಯಯನ ವಿಧಾನ ಅತ್ಯಗತ್ಯ ಎನ್ನುವುದು ನನ್ನ ನಂಬಿಕೆ.

ಪ್ರಸ್ತುತ ಕೃತಿಯಲ್ಲಿ ಏಕೀಕರಣೋತ್ತರ ಕರ್ನಾಟಕದಲ್ಲಿ ನಡೆದ ಪ್ರಮುಖ ಪರಿಸರ ಚಳವಳಿಗಳ ಅಧ್ಯಯನ ನಡೆಸಲಾಗಿದೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿರುವ ಪರಿಸರ ಸಂಘಟನೆಗಳು, ಸಂಘ-ಸಂಸ್ಥೆಗಳು ಹಾಗೂ ಪರಿಸರವಾದಿಗಳ ಕೆಲಸ ಕಾರ್ಯಗಳು ಮತ್ತು ವಿಚಾರಗಳನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ. ಇದೊಂದು ಕಾಲಮಿತಿ ಯೋಜನೆಯಾಗಿದ್ದರಿಂದಾಗಿ ಏಕೀಕರಣೋತ್ತರ ಕರ್ನಾಟಕದಲ್ಲಿ ನಡೆದ ಎಲ್ಲ ಪರಿಸರ ಚಳವಳಿಗಳ ಅಧ್ಯಯನವನ್ನು ನಡೆಸುವುದು ಸಾಧ್ಯವಾಗಿಲ್ಲ. ಆದರೆ ಪರಿಸರ ಚಳವಳಿಗಳ ಹಿನ್ನೆಲೆ, ಸ್ವರೂಪ ಮತ್ತು ಸೈದ್ಧಾಂತಿಕ ನೆಲೆಗಳನ್ನು ಪತ್ತೆಹಚ್ಚುವ ಕೆಲಸವನ್ನು ಮಾಡಲಾಗಿದೆ. ಇದರಿಂದಾಗಿ ಕರ್ನಾಟಕದಾದ್ಯಂತ ಏಕರೂಪದ ಪರಿಸರ ಚಳವಳಿ ನಡೆದಿಲ್ಲ ಎನ್ನುವ ವಾಸ್ತವ ವಿವರಣೆ ಸಾಧ್ಯವಾಯಿತು. ಕರ್ನಾಟಕದ ಪ್ರಾಕೃತಿಕ ವಿಭಾಗಗಳಾದ ಪಶ್ಚಿಮದ

ಕರಾವಳಿ, ಪಶ್ಚಿಮಘಟ್ಟಗಳು, ದಕ್ಷಿಣದ ಬಯಲುಸೀಮೆ ಹಾಗೂ ಉತ್ತರದ ಬಯಲು ಸೀಮೆಗಳಲ್ಲಿನ ಪರಿಸರ ಚಳವಳಿಗಳು ಪರಸ್ಪರ ಭಿನ್ನವಾಗಿವೆ. ಈ ಭಿನ್ನತೆಗೆ ಆಯಾ ಪ್ರದೇಶದ ಭೌಗೋಳಿಕತೆ, ಸಾಮಾಜಿಕ ರಚನೆ ಹಾಗೂ ಸಂಪತ್ತಿನ ಹಂಚಿಕೆಯಲ್ಲಾದ ಏರುಪೇರುಗಳೇ ಮೂಲಕಾರಣವಾಗಿ ಕಂಡುಬರುತ್ತದೆ. ಪರಿಸರ ಚಳವಳಿಗಳ ಮೂಲಕ ಈ ಸಾಮಾಜಿಕ - ಆರ್ಥಿಕ ಅಸಮಾನತೆಯನ್ನು ಕಂಡುಹಿಡಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಪರಿಸರದ ಕುರಿತಾಗಿ ಕೆಲಸ ಮಾಡುತ್ತಿರುವ ಅನೇಕರ ಸ್ವಂತ ಅಭಿಪ್ರಾಯಗಳೂ, ವಿಚಾರಗಳೂ ಇಲ್ಲಿ ಪ್ರತಿಬಿಂಬಿತವಾಗಿವೆ. ವ್ಯಕ್ತಿನಿಷ್ಠವಾದ ಕೆಲವೊಂದು ಅಂಶಗಳು ಈ ಕೃತಿಯಲ್ಲಿ ನುಸುಳಿರಬಹುದಾದರೂ ಅವು ವಾಸ್ತವಸ್ಥಿತಿಗೆ ಪೂರಕವಾಗಿಯೇ ಇವೆ.

ಈ ಕೃತಿಯನ್ನು ಸಿದ್ಧಪಡಿಸುವಲ್ಲಿ ಅನೇಕರ ನೆರವನ್ನು ಪಡೆದುಕೊಳ್ಳಲಾಗಿದೆ. ಕೃತಿಯು ಪೂರ್ಣಗೊಳ್ಳುವುದಕ್ಕೆ ಅನೇಕ ರೀತಿಯಲ್ಲಿ ಸಹಕಾರ ನೀಡಿದ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ನಾನು ಋಣಿಯಾಗಿದ್ದೇನೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿಗಳನ್ನು ನೀಡಿ ಸಹಕರಿಸಿದ ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆಯ ಎಲ್ಲ ಮಿತ್ರರು ಹಾಗೂ ವಿವಿಧ ಪರಿಸರ ಸಂಘಟನೆಗಳ ಕಾರ್ಯಕರ್ತರು ಮತ್ತು ಪರಿಸರ ಪ್ರೇಮಿಗಳಿಗೆ ವಂದನೆಗಳು. ಚರಿತ್ರೆ ವಿಭಾಗದ ನನ್ನ ಸಹೋದ್ಯೋಗಿಗಳು, ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎ. ವಿ. ನಾವಡ, ಕಲಾವಿದ ಕೆ. ಕೆ. ಮಕಾಳಿ, ಅಂದವಾಗಿ ಮುದ್ರಿಸಿದ ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು ಅವರಿಗೂ ಯೋಜನೆಯ ಕೆಲಸ ಕಾರ್ಯಗಳಲ್ಲಿ ಸಹಕರಿಸಿದ ಸಂಗಾತಿ ಸುನೀತಾ ಇವರೆಲ್ಲರಿಗೂ ನನ್ನ ವಂದನೆಗಳು.

ಕೆ. ಮೋಹನ್‌ಕೃಷ್ಣ ರೈ

ಪರಿವಿಡಿ

೧. ಪ್ರವೇಶ

ಶತಮಾನಗಳು ಉರುಳುತ್ತಿದ್ದಂತೆ ಹೊಸ ಹೊಸ ವಿಷಯಗಳು ಚರ್ಚೆಗೆ ಪ್ರವೇಶ ಪಡೆಯುತ್ತಿರುತ್ತವೆ. ಇದರಲ್ಲಿ ಪರಿಸರವೂ ಒಂದು. ಕರ್ನಾಟಕದಲ್ಲಿ ಪರಿಸರ ಸಮಸ್ಯೆ ಮತ್ತು ಚಳವಳಿಗಳು ಕಾಣಿಸಿಕೊಂಡಿರುವುದು ಕಳೆದ ಮೂರು ದಶಕಗಳಿಂದೀಚೆಗೆ. ಇವುಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಇವು ಅತ್ಯಂತ ಜಟಿಲ ಹಾಗೂ ಗೊಂದಲಮಯದಿಂದ ಕೂಡಿವೆ. ತೀರಾ ಭಿನ್ನವಾದ ಹಿತಗಳ ನಡುವೆ ಮತ್ತು ಅತಿರೇಕಗಳ ನಡುವೆ ಇಂದು ಪರಿಸರ ಚಳವಳಿಗಳು ನಡೆಯುತ್ತಿವೆ. ಪ್ರಸ್ತುತ ಬರೆಹದಲ್ಲಿ ಪರಿಸರ ಕುರಿತ ಹಳೆಯ ಗ್ರಹಿಕೆಯನ್ನು ಮರುಪರಿಶೀಲನೆಗೆ ಒಡ್ಡುವ ಪ್ರಯತ್ನವನ್ನು ಮಾಡಲಾಗಿದೆ. ಪರಿಸರ ಪದದ ಅರ್ಥ ಇಂದು ವಿಸ್ತಾರವಾಗಿದೆ. ಪರಿಸರ ವೆಂದರೆ ಹಸಿರಾಗಿರುವ ಗಿಡಮರಗಳುಳ್ಳ ಅರಣ್ಯಗಳು ಎಂಬ ಅರ್ಥ ರೂಢಿಯಲ್ಲಿತ್ತು. ಆದರೆ ಇಂದು ಪರಿಸರ ಪರಿಕಲ್ಪನೆ ಜೀವ-ನಿರ್ಜೀವ, ಭೌತ-ಅಭೌತ, ನಿರ್ಮಿತ-ಸ್ವಾಭಾವಿಕವಾದ ಎಲ್ಲ ವಸ್ತು ಸಂದರ್ಭ ಸ್ಥಿತಿಗತಿಗಳನ್ನು ಒಳಗೊಂಡಿದೆ. ಪರಿಸರ ಅಧ್ಯಯನವನ್ನು ಯಾವುದೇ ಒಂದು ಶಿಸ್ತಿಗೆ ಸಂಬಂಧಿಸಿದ್ದು ಎಂದು ವ್ಯಾಖ್ಯಾನಿಸಲು ಸಾಧ್ಯವಾಗುವುದಿಲ್ಲ. ವಿಜ್ಞಾನ, ಸಮಾಜ ವಿಜ್ಞಾನ, ಸಾಹಿತ್ಯ, ಕಲೆ ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಪರಿಸರವನ್ನು ಪ್ರತಿನಿಧಿಸುತ್ತಿರುತ್ತವೆ. ಈ ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳ ಮತ್ತು ಚಳವಳಿಗಳ ವಿವಿಧ ಮುಖಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡುವ ಅವಶ್ಯಕತೆ ಇದೆ. ಈ ಸಮಸ್ಯೆಗೆ ಹಿನ್ನೆಲೆಯಾಗಿ ಅರ್ಥಪೂರ್ಣ ಮಾಹಿತಿಗಳನ್ನು ಮತ್ತು ತಾತ್ವಿಕ ಪ್ರತಿಫಲನಗಳನ್ನು ನೀಡುವುದೂ ಪ್ರಾಮುಖ್ಯವೆನಿಸುತ್ತದೆ. ಇಲ್ಲಿ ನಾವು ಗಮನದಲ್ಲಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ, ಮಾನವ ನಿರ್ಮಿತ ಸಮಾಜ ಪರಿಸರದ ಧೋರಣೆಗಳು. ಈ ಧೋರಣೆಗಳು ಪರಿಸರ ಚಳವಳಿಯನ್ನು ಯಾವ ದಿಕ್ಕಿನತ್ತ ಕೊಂಡೊಯ್ಯುತ್ತಿವೆ ಎನ್ನುವುದನ್ನು ಉದಾಹರಣೆ ಸಹಿತ ವಿಶ್ಲೇಷಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಕರ್ನಾಟಕ ಏಕೀಕರಣಗೊಂಡ ನಂತರದ ಎರಡು ದಶಕಗಳಲ್ಲಿ ಪರಿಸರ ಚರ್ಚೆಯ ವಸ್ತುವಾಗಿ ರೂಪುಗೊಂಡಿರಲಿಲ್ಲ. ಅದರ ಅನಿವಾರ್ಯತೆಯೂ ಅಷ್ಟಾಗಿ ಇರಲಿಲ್ಲ. ಆದರೆ ಇಂದು ಪರಿಸರ ಜಾಗತಿಕ ನೆಲೆಯಲ್ಲಿ ಚರ್ಚೆಗೆ ಒಳಗಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಹೊಸ ಆರ್ಥಿಕ ನೀತಿ ಹಾಗೂ ಅದರ ಅನುಬಂಧಗಳಾದ ಖಾಸಗೀಕರಣ, ಉದಾರೀಕರಣ, ಜಾಗತೀಕರಣ, ಮಾರುಕಟ್ಟೆ ಆರ್ಥಿಕ ನೀತಿ ಮುಂತಾದ ಪ್ರಕ್ರಿಯೆಗಳು. ಇದರಿಂದಾಗಿ ಶಿಲಾನ್ಯಾಸಗೊಂಡು ಕಾರ್ಯರೂಪಕ್ಕೆ ಬರಲು ಕಾಯುತ್ತಿದ್ದ ಅನೇಕ ಉದ್ದಿಮೆಗಳು ಬೃಹತ್ ಪ್ರಮಾಣದಲ್ಲಿ ಕಾರ್ಯಾರಂಭಿಸಿವೆ. ಇದು ಪರಿಸರ ಚರ್ಚೆಯನ್ನು

ಜಾಗತಿಕವನ್ನಾಗಿಸಿ ಪರಿಸರ ಬಿಕ್ಕಟ್ಟು ತಲೆದೋರುವಂತೆ ಮಾಡಿದೆ. ಪರಿಸರಕ್ಕೆ ಸಂಬಂಧಪಟ್ಟ ಸಣ್ಣಮಟ್ಟದ ಚಟುವಟಿಕೆಗಳೂ ಇಂದು ಬೃಹತ್ ಆಗಿ ಬೆಳೆದು ಸಮಸ್ಯೆಯ ಸ್ವರೂಪವೇ ಬದಲಾಗಿದೆ. ಪರಿಸರ ಬಿಕ್ಕಟ್ಟಿಗೆ ಕಾರಣವಾದ ಹಲವಾರು ಅಂಶಗಳ ನಡುವಿನ ಸೂಕ್ಷ್ಮವಾದ ಅಂತರ್ ಸಂಬಂಧಗಳ ಅಧ್ಯಯನ ನಡೆಯಬೇಕಾಗಿದೆ. ಹೊಸ ಆರ್ಥಿಕತೆ ಮತ್ತು ಬಂಡವಾಳ ಪರಿಸರದ ಮೇಲೆ ಹೇರಿರುವ ಬೇಡಿಕೆಗಳು ಮತ್ತು ಈ ಬೇಡಿಕೆಗಳನ್ನು ಈಡೇರಿಸುವಲ್ಲಿ ಪರಿಸರದ ಭಾಗವೇ ಆಗಿರುವ ನೈಸರ್ಗಿಕ ಶಕ್ತಿಗಳ ಸಾಮರ್ಥ್ಯ ಇವೆರಡರ ನಡುವೆ ಇರುವ ಬಿರುಕನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಆದರೆ ಇಂದು ನಡೆಯುತ್ತಿರುವ ಪರಿಸರ ಸಂಬಂಧಿತ ಚಳವಳಿಗಳು ಈ ಸೂಕ್ಷ್ಮವನ್ನು ಗಮನದಲ್ಲಿಟ್ಟುಕೊಂಡಂತೆ ಕಂಡುಬರುವುದಿಲ್ಲ.

ಪರಿಸರ ಚಳವಳಿಗಳು ಇಡೀ ವ್ಯವಸ್ಥೆಯನ್ನು ಪ್ರಶ್ನಿಸುವ ಬದಲು ಗೊತ್ತಾದ ಕೆಲವೇ ಬಂಡವಾಳಿಗರ ವಿರುದ್ಧ ನಡೆಯುತ್ತಿರುತ್ತವೆ. ಇಡೀ ವ್ಯವಸ್ಥೆಯನ್ನು ಪ್ರಶ್ನಿಸುವ ಹಂತಕ್ಕೆ ಬರುವ ಮೊದಲೇ ಚಳವಳಿಯನ್ನು ಹಿಮ್ಮೆಟ್ಟಿಸಲಾಗುತ್ತದೆ. ಇಲ್ಲಿ ಹಿಮ್ಮೆಟ್ಟಿಸುವ ಶಕ್ತಿಗಳು ಯಾವುವು ಎಂಬ ಪ್ರಶ್ನೆ ಹಾಕಿಕೊಂಡಾಗ ಎರಡು ರೀತಿಯ ನಿಯಂತ್ರಣ ವ್ಯವಸ್ಥೆ ಕಂಡುಬರುತ್ತದೆ. ಅವುಗಳೆಂದರೆ ವಸಾಹತುಶಾಹಿಯ ಕಾಲದಿಂದ ಬಂದ ಸರಕಾರಿ ನಿಯಂತ್ರಣ ಮತ್ತು ಸ್ಥಳೀಯ ಸಾಮಾಜಿಕ ನಿಯಂತ್ರಣ. ಸರಕಾರಿ ನಿಯಂತ್ರಣದಿಂದಾಗಿ ಸಾಮೂಹಿಕ ಸಂಪನ್ಮೂಲಗಳು ಸರಕಾರಿ ಸಂಪನ್ಮೂಲಗಳಾಗಿ ಪರಿವರ್ತನೆಗೊಂಡಿವೆ. ಇಲ್ಲಿ ಅಧಿಕಾರಶಾಹಿತ್ವದ ಎಲ್ಲಾ ಲಕ್ಷಣಗಳನ್ನು ಗುರುತಿಸಲು ಸಾಧ್ಯ. ಜನಸಾಮಾನ್ಯರು ಈ ವ್ಯವಸ್ಥೆಯಲ್ಲಿ ಪರಿಸರದಿಂದ ಬಹಿಷ್ಕೃತಗೊಂಡಿರುತ್ತಾರೆ. ಸಾಮಾಜಿಕ ನಿಯಂತ್ರಣವೂ ವೈಜ್ಞಾನಿಕವಾಗಬೇಕಾಗಿದೆ. ಇಲ್ಲಿ ವೈಯಕ್ತಿಕ ಹಿತಾಸಕ್ತಿಗಳೇ ಪ್ರಮುಖವಾಗಿವೆ. ಆದ್ದರಿಂದ ಪರಿಸರದ ನಿಯಂತ್ರಣದ ರೀತಿಯನ್ನು ಹೊಸದುಗೊಳಿಸಿ ಅದನ್ನು ಪುನರ್‌ರಚಿಸುವುದು ಅನಿವಾರ್ಯವಾಗಿದೆ. ಬಂಡವಾಳಶಾಹಿ ನಿಯಂತ್ರಣ ವ್ಯವಸ್ಥೆಯಾಗಲಿ ಅಥವಾ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಾಗಲಿ ಸಡಿಲಗೊಳ್ಳಬೇಕಾದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ ಮತ್ತು ಆರ್ಥಿಕ ಸ್ವಾವಲಂಬನೆ ದೊರಕಬೇಕಾಗಿದೆ. ಈ ಎರಡು ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಿರುವ ಪ್ರದೇಶಗಳಲ್ಲಿ ನಡೆಯುತ್ತಿರುವ ಪರಿಸರ ಚಳವಳಿಗೂ ಇನ್ನಿತರ ಪ್ರದೇಶಗಳಲ್ಲಿ ನಡೆಯುತ್ತಿರುವ ಪರಿಸರ ಚಳವಳಿಗೂ ಅನೇಕ ವ್ಯತ್ಯಾಸಗಳಿರುವುದು ಕಂಡುಬಂದಿದೆ.

ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶ, ಏಕೀಕರಣೋತ್ತರ ಕರ್ನಾಟಕದಲ್ಲಿ ನಡೆದ ಮತ್ತು ನಡೆಯುತ್ತಿರುವ ಪರಿಸರ ಸಂಬಂಧಿತ ಚಳವಳಿಗಳ ಸ್ವರೂಪವನ್ನು ವಿಶ್ಲೇಷಿಸುವುದಾಗಿದೆ. ಇದನ್ನು ಪರಿಸರ ಚಳವಳಿ : ಹಿನ್ನೆಲೆ, ಸ್ವರೂಪ ಮತ್ತು ಸೈದ್ಧಾಂತಿಕ ನೆಲೆಗಳು ಹಾಗೂ ಪ್ರಮುಖ ಪರಿಸರ ಚಳವಳಿಗಳು ಎಂಬ ಎರಡು ಭಾಗಗಳಲ್ಲಿ ವಿವರಿಸಲಾಗಿದೆ. ಭಾಗ ಒಂದರಲ್ಲಿ ಪರಿಸರ ಚಳವಳಿಗಳ ಕುರಿತ ಕೆಲವು ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವ ಪ್ರಯತ್ನವನ್ನು ಮಾಡಲಾಗಿದೆ. ಅವುಗಳೆಂದರೆ, ಪರಿಸರ ಎಂದರೇನು? ಪರಿಸರವಾದಿಗಳು ಯಾರು? ಪರಿಸರ ಸಂಬಂಧಿ ಚಳವಳಿಗಳ ಸ್ವರೂಪವೇನು? ಪರಿಸರ ಚಳವಳಿಯನ್ನು ಸಮಾಜದ ಯಾವ ವರ್ಗ ಪ್ರತಿನಿಧಿಸುತ್ತಿದೆ? ಕೈಗಾರಿಕೀಕರಣದ ಪ್ರಯೋಜನ ಸಮಾಜದ ಯಾವ ವರ್ಗಕ್ಕೆ ಹೋಗುತ್ತಿದೆ? ಬಂಡವಾಳಶಾಹಿಯ ಪಾತ್ರವೇನು? ಮುಂತಾದ ಸಂಕೀರ್ಣ ಪ್ರಶ್ನೆಗಳು. ಈ ಎಲ್ಲಾ ಸಮಸ್ಯೆಗಳನ್ನು

ಒಂದು ಸೈದ್ಧಾಂತಿಕ ಚೌಕಟ್ಟಿಗೆ ಒಳಪಡಿಸಿ ವಿವರಿಸುವ ಪ್ರಯತ್ನವನ್ನು ಪ್ರಸ್ತುತ ಬರೆಹದಲ್ಲಿ ಮಾಡಲಾಗಿದೆ. "ಪರಿಸರವನ್ನು ಉಳಿಸಿ ಅಭಿವೃದ್ಧಿಯನ್ನು ನಡೆಸಿ" ಎನ್ನುವ ಧ್ಯೇಯವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಅದೇ ರೀತಿ ಪರಿಸರವನ್ನು ಬಳಸಿಕೊಂಡು ಮೇಲ್ವರ್ಗದ ಜನ ನಡೆಸುತ್ತಿರುವ ಸಾಂಸ್ಕೃತಿಕ ರಾಜಕೀಯ, ಪಶ್ಚಿಮದ ಅನುಕರಣೆ, ಉತ್ಪಾದನಾ ವಿಧಾನ ಮತ್ತು ಉತ್ಪಾದನಾ ತಂತ್ರದ ವಿಚಾರದಲ್ಲಾದ ಬದಲಾವಣೆಗಳು ಇವೇ ಮುಂತಾದವುಗಳನ್ನು ಈ ಭಾಗದಲ್ಲಿ ಚರ್ಚಿಸಲಾಗುವುದು.

ಎರಡನೆಯ ಭಾಗದಲ್ಲಿ ೧೯೫೬ ರಿಂದ ೧೯೯೯ರ ವರೆಗೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನಡೆದ ಪ್ರಮುಖ ಪರಿಸರ ಸಂಬಂಧಿತ ಚಳವಳಿಗಳ ಕೂಲಂಕಷ ಅಧ್ಯಯನ ನಡೆಸಲಾಗಿದೆ. ಇದೇ ಭಾಗದಲ್ಲಿ ಈ ಪರಿಸರ ಚಳವಳಿಗಳನ್ನು ನಡೆಸುತ್ತಿರುವ ವಿವಿಧ ಪರಿಸರ ಸಂಘಟನೆಗಳು, ಸಂಘ-ಸಂಸ್ಥೆಗಳು ಹಾಗೂ ಪರಿಸರವಾದಿಗಳ ವಿಚಾರಗಳನ್ನು ಕೂಡಾ ಚರ್ಚಿಸಲಾಗಿದೆ. ಈ ವಿಚಾರಗಳು ಅತ್ಯಂತ ಸೂಕ್ಷ್ಮವಾಗಿದ್ದು ಅಧಿಕಾರಿಶಾಹಿ ಯುದ್ದಕ್ಕೂ ಬೇರುಗಳನ್ನು ಪಸರಿಸಿಕೊಂಡಿವೆ. ಬೂರ್ಶ್ವಾವರ್ಗದ ನಾಯಕತ್ವ ಪರಿಸರ ಚಳವಳಿಯನ್ನು ಇನ್ನೂ ಗೊಂದಲಮಯವನ್ನಾಗಿಸಿದೆ. ಮಧ್ಯಮ ವರ್ಗದ ಗೈರುಹಾಜರಿಯೂ ಪರಿಸರ ಚಳವಳಿಗಳ ದ್ವಂದ್ವಕ್ಕೆ ಕಾರಣವಾಗಿವೆ. ಇನ್ನು ಪರಿಸರವಾದಿಗಳ ಅಸಹಜ ವಾದ ಪರಿಸರ ಚಳವಳಿಯ ದಿಕ್ಕನ್ನು ತಪ್ಪಿಸಿ ಸಂಸ್ಕೃತಿ ವೈಭವೀಕರಣದಲ್ಲಿ ತೊಡಗಿವೆ. ಇದು ಪರಿಸರ ಚಳವಳಿ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ಇರುವಂತೆ ಒತ್ತಡವನ್ನು ಹೇರುತ್ತಿದೆ. ಇಲ್ಲಿ ಪರಿಸರ ಚಳವಳಿ ಸಮಾಜದ ಯಾವ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಕಸಿದುಕೊಳ್ಳಲು ಬುನಾದಿಯಾಗಿದೆ ಎಂಬುದನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

ಐವತ್ತರ ದಶಕದಿಂದೀಚೆಗೆ ವಸಾಹತು ನೀತಿಯು ಹೊಸ ರೂಪದಲ್ಲಿ ನಮ್ಮ ಮುಂದೆ ಕೆಲಸ ಮಾಡುತ್ತಿದೆ. ಈ ನವವಸಾಹತುಶಾಹಿ ನೀತಿಯ ಸಂದರ್ಭದಲ್ಲಾಗುವ ಚಳವಳಿಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅಧ್ಯಯನದ ವ್ಯಾಪ್ತಿಯೂ ಇದೇ ಆಗಿರುವುದರಿಂದಾಗಿ ಈ ಅವಧಿಯಲ್ಲಿನ ಪರಿಸರ ಚಳವಳಿಗಳು ಆರ್ಥಿಕ-ಸಾಮಾಜಿಕ ಸಂರಚನೆಗಳತ್ತ ಗಮನಹರಿಸಿವೆಯೇ ಎನ್ನುವ ಪ್ರಶ್ನೆಗೆ ಉತ್ತರವನ್ನು ಹುಡುಕಬೇಕಾಗಿದೆ. ಕಳೆದ ನಾಲ್ಕು ದಶಕಗಳಲ್ಲಿ ನಡೆದ ವಿದ್ಯಮಾನಗಳ ವಿಶ್ಲೇಷಣೆ ನಡೆಸಿದರೆ ಮಾತ್ರ ಪರಿಸರ ಚಳವಳಿಯ ವ್ಯಾಪ್ತಿಯನ್ನು ಅರ್ಥೈಸಿಕೊಳ್ಳಲು ಸಾಧ್ಯ. ಏಕೆಂದರೆ ಪರಿಸರ ಚಳವಳಿಗಳು ಕೇವಲ ಪರಿಸರಕ್ಕಷ್ಟೇ ಸೀಮಿತವಾಗಿಲ್ಲ. ಅದೊಂದು ವೇದಿಕೆ ಮಾತ್ರ ಆಗಿದೆ. ಜಾತಿ-ವರ್ಗ, ಮೇಲು-ಕೀಳು, ಬಡವ-ಧನಿಕ, ಮತ-ಧರ್ಮ, ಪ್ರಾದೇಶಿಕ ವಸ್ತುಸ್ಥಿತಿ, ಆಡಳಿತ ಮತ್ತು ರಾಜಕೀಯ ಇವೆಲ್ಲಾ ಪರಿಸರ ಚಳವಳಿಯೊಳಗೆ ಸೇರಿಕೊಂಡಿವೆ. ಈ ಕಾರಣಕ್ಕಾಗಿಯೇ ಚಳವಳಿಗಳ ವಿವರಣೆಯ ವ್ಯಾಪ್ತಿಯನ್ನು ವಿಸ್ತರಿಸಿ ವಿಶಾಲಾರ್ಥದಲ್ಲಿ ನಿರ್ವಚಿಸುವುದು ಅನಿವಾರ್ಯವಾಗಿದೆ. ಏಕೀಕರಣೋತ್ತರ ಕರ್ನಾಟಕದಲ್ಲಿ ಪರಿಸರ ಸಂಬಂಧಿತವಾಗಿ ನಡೆದ ಪ್ರತಿಯೊಂದು ಚಳವಳಿಯೂ ನಿವಾರಿಸಲಾಗದಂಥ ವಿರೋಧಗಳನ್ನು ಎದುರಿಸಿವೆ. ಸಂಪೂರ್ಣವಾಗಿ ರಾಜ್ಯದ ಅಭಿವೃದ್ಧಿಯ ಉದ್ದೇಶದಿಂದ ಈ ಪ್ರತಿಬಂಧಕಗಳು ಸೃಷ್ಟಿಯಾಗಿದ್ದರೆ ಅದು ಅನಿವಾರ್ಯ ಎನ್ನುವ ಮಾತನ್ನು ಒಪ್ಪಬಹುದಾಗಿತ್ತು. ಆದರೆ

ವಸ್ತುಸ್ಥಿತಿಯೇ ಬೇರೆ ಆಗಿರುವುದರಿಂದಾಗಿ ಚಳವಳಿಯೊಳಗಿನಿಂದಲೇ ಹುಟ್ಟಿಕೊಳ್ಳುವ ಪ್ರತಿಬಂಧಕಗಳು ಹಾಗೂ ನವವಸಾಹತುಶಾಹಿಯು ನಿರ್ಮಾಣಗೊಳಿಸಿದ ಅಭಿವೃದ್ಧಿಯ ಕಲ್ಪನೆ ಇವುಗಳೆರಡರ ಕುರಿತು ಇಂದು ಚಿಂತನೆ ನಡೆಸುವಂತಾಗಿದೆ. ಅದೇ ರೀತಿ ಸಂಪ್ರದಾಯ ಮತ್ತು ಆಧುನಿಕತೆಗಳ ಪರಸ್ಪರ ಸಂಘರ್ಷ ಮತ್ತು ಒಡಂಬಡಿಕೆಗಳಿಗೂ ಪರಿಸರ ಚಳವಳಿಗಳು ವೇದಿಕೆಗಳಾಗಿರುವುದು ಸಮಾಜ ವ್ಯವಸ್ಥೆ ಇನ್ನಷ್ಟು ಸಂಕೀರ್ಣಗೊಳ್ಳುವುದಕ್ಕೆ ಕಾರಣವಾಗಿದೆ. ಈ ವಿಚಾರಗಳ ವಾಸ್ತವ ಅಧ್ಯಯನವನ್ನು ನಡೆಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

❑❑

೨. ಪರಿಸರ ಚಳವಳಿ : ಹಿನ್ನೆಲೆ, ಸ್ವರೂಪ ಮತ್ತು ಸೈದ್ಧಾಂತಿಕ ನೆಲೆಗಳು

ಪರಿಸರ ಸಂಬಂಧಿ ಚಳವಳಿಗಳ ಕುರಿತಾಗಿ ಅಧ್ಯಯನ ನಡೆಸುವಾಗ ಚಳವಳಿಗಳ ಚರಿತ್ರೆಯ ಪರಿಚಯವೂ ಅಗತ್ಯವೆನಿಸುತ್ತದೆ. ಇಲ್ಲಿ ಯುರೋಪಿಯನ್ನರ ವಸಾಹತುಶಾಹಿ ಧೋರಣೆ ಹಾಗೂ ಅದರ ಮುಂದಿನ ಭಾಗಗಳು ಚರ್ಚೆಯೊಳಗೆ ಸೇರುತ್ತವೆ. ಪರಿಸರದ ಮೇಲೆ ಮಾನವ ಅಧಿಕ ಪ್ರಮಾಣದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಹೊರಟಿದ್ದು ವಸಾಹತು ಆಳ್ವಿಕೆಯ ನಂತರದ ದಿನಗಳಲ್ಲಿ. ಉದಾಹರಣೆಗೆ, ವಸಾಹತುಶಾಹಿ ಆಳ್ವಿಕೆ ಪ್ರಾರಂಭಗೊಂಡ ನಂತರ ಪಶ್ಚಿಮ ಘಟ್ಟಗಳು ರಬ್ಬರ್, ತಂಬಾಕು, ಟೀ, ಕಾಫೀ ತೋಟಗಳಾಗಿ ಪರಿವರ್ತನೆ ಹೊಂದಲು ಪ್ರಾರಂಭವಾಯಿತು. ವಾಣಿಜ್ಯ ಬೆಳೆ ಬೆಳೆಯುವ ಪ್ರವೃತ್ತಿ ಇಲ್ಲಿಂದ ಪ್ರಾರಂಭಗೊಂಡಿತು. ವಸಾಹತು ಆಳ್ವಿಕೆ ರೂಪಿಸಿದ ಔದ್ಯಮಿಕ, ಆರ್ಥಿಕ ನೀತಿ ವಸಾಹತೋತ್ತರ ಘಟ್ಟದಲ್ಲಿಯೂ ಬೆಳೆಯುತ್ತಾ ಹೋಯಿತು. ಗುಡಿ ಕೈಗಾರಿಕೆ ಹೋಗಿ ಬೃಹತ್ ಯಂತ್ರಗಾರಿಕೆ ಪ್ರಚಾರಕ್ಕೆ ಬಂತು. ಈ ಸಂದರ್ಭದಲ್ಲಿ ಪರಿಸರ ಚರ್ಚೆಯ ವಸ್ತುವಾಗಿ ಪರಿವರ್ತನೆಗೊಂಡಿತು. ಆದರೆ ಪರಿಸರ ಮಾಲಿನ್ಯ ಎಂಬುದಾಗಿ ಧ್ವನಿ ಎತ್ತಿದರೆ ಅದು ಪ್ರಗತಿ ವಿರೋಧಿ ಧ್ವನಿ ಎಂಬುದಾಗಿ ತೀರ್ಮಾನಿಸಲಾಗುತ್ತಿತ್ತು. ಆಗ ಕೈಗಾರಿಕೆಗಳು ವಿರಳವಾಗಿ ಬೆಳೆಯುತ್ತಿದ್ದವಾದರೂ ಕೃಷಿಯಲ್ಲಿ ಆಧುನಿಕತೆಯ ಪ್ರವೇಶವಾಗಿ ಪರಿಸರಮಾಲಿನ್ಯಗಳು ಪ್ರಾರಂಭವಾಯಿತು. ಇದು ಪ್ರಗತಿಯೇ ಹೌದಾದರೂ ಇದರಿಂದಾಗುವ ಅನಾಹುತಗಳ ಕಡೆಗೂ ಮುನ್ನೆಚ್ಚರಿಕೆಯನ್ನು ವಹಿಸಬೇಕಾಗಿತ್ತು. ವಸಾಹತೋತ್ತರ ಘಟ್ಟದಲ್ಲಿ ಈ ಪ್ರಕ್ರಿಯೆ ಚುರುಕುಗೊಳ್ಳಲಾರಂಭಿಸಿತು. ಅದೇ ರೀತಿ ಕೈಗಾರಿಕೀಕರಣ ಹಾಗೂ ನಗರೀಕರಣಗಳೆರಡೂ ಕ್ಷಿಪ್ರಗತಿಯಲ್ಲಿ ಬೆಳವಣಿಗೆಯನ್ನು ಕಂಡವು. ನವವಸಾಹತುಶಾಹಿ ಘಟ್ಟದಲ್ಲಿ ಬೃಹತ್ ಉದ್ದಿಮೆಗಳು ಹೊಸ ಆರ್ಥಿಕ ನೀತಿಯೊಂದಿಗೆ ಅಸ್ತಿತ್ವಕ್ಕೆ ಬಂದವು. ಗ್ಯಾಟ್, ಡಂಕೆಲ್‌ನಂಥ ಒಪ್ಪಂದಗಳು ಏರ್ಪಟ್ಟು ಬಂಡವಾಳಶಾಹಿ ರಾಷ್ಟ್ರಗಳು ನಿರ್ಧಾರಕ ಶಕ್ತಿಗಳಾದವು. ಬಂಡವಾಳ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಇದರಿಂದಾಗಿ ಇಪ್ಪತ್ತನೇ ಶತಮಾನದ ಕೊನೆಯಲ್ಲಿ ಜಾಗತೀಕರಣ ದೊಂದಿಗೆ ಬಂದ ಹೊಸ ಆರ್ಥಿಕನೀತಿ ಪರಿಸರವನ್ನು ಜಾಗತಿಕ ನೆಲೆಯಲ್ಲಿ ಚರ್ಚಿಸುವಂತೆ ಮಾಡಿತು.

ಏಕೀಕರಣೋತ್ತರ ಕರ್ನಾಟಕದಲ್ಲಿ ನಡೆದ ಪರಿಸರ ಚಳವಳಿಗಳು ಬಂಡವಾಳಶಾಹಿ ನಿರ್ಮಿಸಿದ ವ್ಯೂಹದೊಳಗೇ ಕಾರ್ಯನಿರ್ವಹಿಸುತ್ತಿರುವಂತೆ ಕಂಡುಬರುತ್ತವೆ. ಏಕೆಂದರೆ ಚಳವಳಿಗಳು ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿದಂತೆಲ್ಲಾ ಹೊಸ ಹೊಸ ಯೋಜನೆಗಳು ಭರದಿಂದ ಮುನ್ನುಗ್ಗುತ್ತಿವೆ. ಇವುಗಳ ಪ್ರವಾಹವನ್ನು ಎದುರಿಸುವಲ್ಲಿ ಪರಿಸರ ಚಳವಳಿಗಳು

ವಿಫಲವಾಗಿವೆ. ಖಾಸಗಿ ಬಂಡವಾಳದ ಸರ್ವಾಧಿಕಾರವನ್ನು ಪರಿಣಾಮಕಾರಿಯಾಗಿ ಹತ್ತೋಟಿಯಲ್ಲಿಡಲು ಸರಕಾರ ಹೆಚ್ಚಿನ ಗಮನ ಕೊಟ್ಟಿಲ್ಲ. ಬಂಡವಾಳಶಾಹಿಯ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವ ವಲಯದಲ್ಲಿರುವ ಹೆಚ್ಚಿನ ರಾಜಕೀಯ ಧುರೀಣರು ಜನಸಾಮಾನ್ಯರ ಒಳಿತನ್ನು ಸಾಧಿಸುವುದರಲ್ಲಿ ಉದ್ಯುಕ್ತರಾಗಿರುವುದಿಲ್ಲ. ಬಂಡವಳಿಗರ ಹಿತಾಸಕ್ತಿಗಳೇ ಇಲ್ಲಿ ರಕ್ಷಣೆಗೊಳ್ಳುತ್ತಿರುತ್ತವೆ. ಉದ್ಯಮಪತಿಗಳು ತಮಗೆ ಬೇಕಾದಂತೆ ಕಾನೂನು-ಕಾಯಿದೆಗಳನ್ನು ಜಾರಿಗೊಳಿಸಿಕೊಂಡು ಪರಿಸರ ಸಂರಕ್ಷಣೆಯ ಪ್ರತಿಜ್ಞೆಯನ್ನು ಕೈಗೊಂಡು ಯೋಜನೆಗಳನ್ನು ಪ್ರಾರಂಭಿಸುವುದು ವಾಡಿಕೆಯಾಗಿದೆ. ತಾವು ಯೋಜನೆಗಾಗಿ ಆಯ್ಕೆಮಾಡಿಕೊಂಡ ಪ್ರದೇಶದಲ್ಲಿ ಕೆಲವು ಎಕರೆ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸಿ ಪರಿಸರ ಸಂರಕ್ಷಣೆಯ ಕೆಲಸವನ್ನು ಮುಗಿಸಿಬಿಡುತ್ತಾರೆ. ಆದರೆ ಇದು ಕೇವಲ ಜನರನ್ನು ಸಂತೈಸುವ ಅಥವಾ ಮೋಸಗೊಳಿಸುವ ಪ್ರಯತ್ನವಾಗಿದೆಯೇ ವಿನಹ ಪರಿಸರದ ರಕ್ಷಣೆಯಲ್ಲ. ಇದು ಬಂಡವಾಳಶಾಹಿ ಹೊಸ ಆರ್ಥಿಕ ನೀತಿಯೊಂದಿಗೆ ಮಾಡಹೊರಟಿರುವ ಘನವಾದ ಕೆಲಸ.

ಉತ್ಪಾದನಾ ಸಾಧನಗಳ ಒಡೆಯರಾದ ಬಂಡವಾಳಶಾಹಿಗಳು ತಮಗೆ ಸರಿ ಕಂಡ ರೀತಿಯಲ್ಲಿ ಉತ್ಪಾದನಾ ಸಾಧನಗಳನ್ನು ದುಡಿಸಿಕೊಳ್ಳುತ್ತಾರೆ. ಉತ್ಪಾದನಾ ಸಾಧನಗಳಾದ ಭೂಮಿ, ಕಚ್ಚಾವಸ್ತುಗಳು, ಕಾರ್ಖಾನೆಗಳು, ಯಂತ್ರಗಳು ಮುಂತಾದವುಗಳ ಆಧಾರದ ಮೇಲೆ ಸಮಾಜದಲ್ಲಿ ಒಬ್ಬ ವ್ಯಕ್ತಿಯ ಸ್ಥಾನವನ್ನು ನಿರ್ಣಯಿಸಲಾಗುತ್ತದೆ. ಉತ್ಪಾದನಾ ಸಾಧನಗಳ ಮಾಲೀಕರು ಮತ್ತು ದುಡಿಯುವ ವರ್ಗಗಳ ಹಿತಾಸಕ್ತಿಗಳು ಪರಸ್ಪರ ವಿರುದ್ಧವಾಗಿವೆ. ಇಂಥ ಸಂದರ್ಭದಲ್ಲಿ ಚಳವಳಿಗಳ ಸಾಧ್ಯತೆಯೂ ಪ್ರಶ್ನಾರ್ಹ. ಯಾವುದೇ ಉತ್ಪಾದನಾ ವ್ಯವಸ್ಥೆ ಏಕವ್ಯಕ್ತಿಯನ್ನು ಅವಲಂಬಿಸಿಲ್ಲ. ಸಾಮುದಾಯಿಕ ಸಹಕಾರದಿಂದ ಉತ್ಪಾದನೆಯೆಂಬುವುದು ನಿಜ. ಆದರೆ ಉತ್ಪಾದಿಸಿದ ವಸ್ತುಗಳು ಮಾತ್ರ ನೇರವಾಗಿ ಸಮುದಾಯಕ್ಕೆ ಸೇರುವುದಿಲ್ಲ. ಮಾಲೀಕತ್ವ ಪಡೆಯುವುದು ಬಂಡವಾಳಶಾಹಿ ಮಾತ್ರ. ಸಾಮುದಾಯಕ ಉತ್ಪಾದನೆ ಹಾಗೂ ವೈಯಕ್ತಿಕ ಮಾಲೀಕತ್ವಗಳ ನಡುವಿನ ತಿಕ್ಕಾಟ ಪರಿಸರ ಚಳವಳಿಗಳ ನಿರ್ಧಾರಕ ಅಂಶವೂ ಆಗಿದೆ. ಇಲ್ಲಿ ಸಂಪನ್ಮೂಲಗಳ ಹಂಚಿಕೆ ಸಮನಾಗಿರುವುದಿಲ್ಲ. ಈ ಬಿರುಕು ಚಳವಳಿಗಳು ನಡೆದರೂ ಬಂಡವಾಳಶಾಹಿ ವ್ಯವಸ್ಥೆ ಕ್ಷೀಣಿಸದಂತೆ ನೋಡಿಕೊಳ್ಳುತ್ತದೆ. ಶ್ರೀಮಂತವರ್ಗ ಇಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿರುವುದಂತೂ ನಿಜ. ಈ ಒಡಂಬಡಿಕೆಯಿಂದಾಗಿ ಬಂಡವಾಳಶಾಹಿ ವ್ಯವಸ್ಥೆ ಪರಿಸರ ಮತ್ತು ಅಭಿವೃದ್ಧಿಯ ನಡುವೆ ತಾತ್ಕಾಲಿಕವಾದ ಸಮನ್ವಯವನ್ನು ಸಾಧಿಸಿಬಿಡುತ್ತದೆ. ಈ ಸಮನ್ವಯ ಪರಿಸರ ಚಳವಳಿಗಳ ಸ್ವರೂಪವನ್ನು ಬದಲಾಯಿಸುವಷ್ಟು ಸಾಮರ್ಥ್ಯವನ್ನು ಹೊಂದಿದೆ.

ಪರಿಸರ ಚಳವಳಿಗಳ ಸ್ವರೂಪದ ವಿಶ್ಲೇಷಣೆ ನಡೆಸುವಾಗ ನಾಯಕತ್ವದ ಪ್ರಶ್ನೆ ಉದ್ಭವಿಸುತ್ತದೆ. ಏಕೀಕರಣೋತ್ತರ ಕರ್ನಾಟಕದ ಪರಿಸರ ಸಂಬಂಧಿತ ಸಮಸ್ಯೆಗಳು ಮತ್ತು ಚಳವಳಿಗಳಲ್ಲಿ ಬೂರ್ಶ್ವಾವರ್ಗದ ನಾಯಕತ್ವವೇ ಎದ್ದು ಕಾಣುತ್ತದೆ. ಒಟ್ಟು ಆಶಯವನ್ನು ನಾಯಕತ್ವ ವಹಿಸಿದವರ ವರ್ಗ ಹಿನ್ನೆಲೆ ನಿಯಂತ್ರಿಸುತ್ತಿರುವುದನ್ನು ಕಾಣಬಹುದಾಗಿದೆ. ಆದರೆ ಇದೇ ಸಂದರ್ಭದಲ್ಲಿ ಎಲ್ಲಾ ಜನವರ್ಗಗಳು ಜಾತಿ, ವರ್ಗ

ಭೇದವಿಲ್ಲದೆ ಚಳವಳಿಯಲ್ಲಿ ಭಾಗವಹಿಸಿದವು ಎನ್ನುವ ತಪ್ಪು ವರದಿಯೂ ದಾಖಲುಗೊಳ್ಳುತ್ತಿರುತ್ತದೆ. ೧೯೫೬ ರಿಂದ ೧೯೯೯ ರವರೆಗೆ ಕರ್ನಾಟಕದಲ್ಲಿ ನಡೆದ ಪರಿಸರ ಸಂಬಂಧಿತ ಚಳವಳಿಗಳನ್ನು ಅವಲೋಕಿಸಿದಾಗ ನಮ್ಮಲ್ಲಿನ ಜಾತಿವಿಭಜಿತ ಸಮಾಜದ ಪ್ರಪಂಚ ತೆರೆದುಕೊಳ್ಳುತ್ತದೆ. ಇದು ಪರಿಸರ ಚಳವಳಿಗಳಿಗೆ ಮುಖ್ಯ ತೊಡಕಾಗಿ ಪರಿಣಮಿಸಿದೆ. ಪರಿಸರ ಚಳವಳಿಗಳು ಹೊರನೋಟಕ್ಕೆ ಕೃಷಿ ಅಥವಾ ಉದ್ದಿಮೆ ಗಳಿಂದಾಗುವ ಪರಿಸರ ಮಾಲಿನ್ಯದ ವಿರುದ್ಧ ನಡೆಯುತ್ತಿರುವ ಹಾಗೆ ಕಂಡುಬಂದರೂ ತಮ್ಮ ಒಡಲಲ್ಲಿ ಮುಚ್ಚಿದ ಸಮಾಜದ ಲಕ್ಷಣಗಳನ್ನು ಹೊಂದಿವೆ. ಇಲ್ಲಿ ಮುಚ್ಚಿದ ಸಮಾಜವೆಂದರೆ ಜಾತಿ-ಧರ್ಮಗಳ, ಮೇಲು-ಕೀಳುಗಳ ಅಥವಾ ಜಾತಿ ವಿಭಜಿತ ಸಮಾಜವೆಂದೇ ಅರ್ಥ. ಇಂಥ ಸಮಾಜದಲ್ಲಿ ನಡೆಯುತ್ತಿರುವ ಪರಿಸರ ಚಳವಳಿಗಳ ಸ್ವರೂಪವನ್ನು ನಿರ್ಧರಿಸುವುದು ಕಷ್ಟದ ಕೆಲಸ. ಅದೇ ರೀತಿ ಚಳವಳಿಯ ಮೂಲಕ ಮೂಲಭೂತ ಬದಲಾವಣೆಯನ್ನು ಸಾಧಿಸುವ ಪ್ರಮೇಯವೂ ಕಡಿಮೆ. ಆದ್ದರಿಂದಲೇ ಇಲ್ಲಿ ಘಟಿಸಿದ ಹೆಚ್ಚಿನ ಪರಿಸರ ಚಳವಳಿಗಳು ನೆಲಕಚ್ಚಿವೆ. ಆದರೂ ಚಳವಳಿಗಳು ನಡೆಯಲೇಬೇಕು ಎನ್ನುವ ಕಾರಣಕ್ಕಾಗಿ ನಡೆಯುತ್ತಿವೆ. ಇದು ಸಮಾಜದ ಮೇಲ್‌ರಚನೆಯ ಮತ್ತು ಕೆಳರಚನೆಯ ರಾಜಕೀಯವಾಗಿದ್ದು, ಪುರೋಗಾಮಿ ಅಥವಾ ಪ್ರತಿಗಾಮಿ ಸ್ವರೂಪವನ್ನು ಹೊಂದಿದೆ. ಈ ದ್ವಂದ್ವಗಳು ಪರಿಸರ ಚಳವಳಿಯ ಚರಿತ್ರೆಯುದ್ದಕ್ಕೂ ಕಂಡುಬರುತ್ತವೆ.

ಬುಡಕಟ್ಟು ಮತ್ತು ಗ್ರಾಮೀಣ ಪ್ರದೇಶದ ಜನವರ್ಗ ಚಳವಳಿಯನ್ನು ನಡೆಸುವಷ್ಟು ಸಮರ್ಥರೇ? ಎಂದು ಪ್ರಶ್ನಿಸಿಕೊಂಡಾಗ ಅನೇಕ ಉಪಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಬುಡಕಟ್ಟು ಮತ್ತು ಗ್ರಾಮೀಣ ಪ್ರದೇಶದ ಜನವರ್ಗ ನಡೆಸುವ ಹೋರಾಟಗಳು ಎಲ್ಲೂ ದಾಖಲುಗೊಳ್ಳುವುದಿಲ್ಲ ಮತ್ತು ಅದಕ್ಕೆ ಪ್ರಚಾರವೂ ಸಿಗುವುದಿಲ್ಲ. ಏಕೆಂದರೆ ಇವುಗಳ ಹಿಂದೆ ವ್ಯವಸ್ಥಿತ ಶಕ್ತಿಯೊಂದು ಕಾರ್ಯನಿರ್ವಹಿಸುತ್ತಿರುತ್ತದೆ. ಹೆಚ್ಚಾಗಿ ಕೃಷಿ ಅಥವಾ ಕೃಷಿ ಸಂಬಂಧಿತ ವೃತ್ತಿಗಳಲ್ಲಿ ತೊಡಗಿರುವ ಜನಸಮುದಾಯ ಸ್ವಾಭಾವಿಕವಾಗಿಯೇ ಒಂದು ಬಗೆಯ ಸ್ಥಾನಬದ್ಧತೆಯಲ್ಲಿರುತ್ತದೆ. ಹೊರನಾಡಿನೊಡನೆ ಅಷ್ಟಾಗಿ ಸಂಪರ್ಕ ಇಟ್ಟುಕೊಂಡಿರಲು ಸಾಧ್ಯವಾಗಿರುವುದಿಲ್ಲ. ಊಳಿಗಮಾನ್ಯ ವ್ಯವಸ್ಥೆಯ ಚೌಕಟ್ಟಿನ ಹೊರಗೆ ನಡೆಯುತ್ತಿರುವ ಬದಲಾವಣೆಗಳ ಸ್ಪಷ್ಟ ಚಿತ್ರಣವೂ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಈ ಬಹುಸಂಖ್ಯಾತ ಜನವರ್ಗ ಮೇಲ್ವರ್ಗದ ನಾಯಕತ್ವವನ್ನು ಒಪ್ಪಿಕೊಂಡು ಚಳವಳಿಯನ್ನು ನಡೆಸಿ ನಿರಂತರ ಮೋಸಕ್ಕೊಳಗಾಗುತ್ತಿರುತ್ತವೆ. ಇಲ್ಲಿ ಬೂರ್ಶ್ವಾವರ್ಗ ಜನರಲ್ಲಿ ಮೂಡಿಸುವ ಪರಿಸರ ಪ್ರಜ್ಞೆಯ ಸ್ವರೂಪವೂ ನಿರ್ಧಾರವಾಗಬೇಕಾಗಿದೆ. ಚಳವಳಿಗಳು ಯಾವಾಗಲೂ ಜನಪರವಾಗಿದ್ದು, ಜನರೊಡನೆ ಇರಬೇಕು. ಜನರಿಂದ ದೂರವಾದೊಡನೆ ಅಂತರ ಏರ್ಪಟ್ಟು ರಾಜಕೀಯದ ಪ್ರವೇಶವಾಗಿ ಜನರ ವಿಶ್ವಾಸವನ್ನು ಕಳೆದುಕೊಂಡುಬಿಡುತ್ತವೆ. ಇಂದಿನ ಪರಿಸರ ಚಳವಳಿಗಳು ಈ ಬಗೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಇವು ಸಮಾಜದ ಬದಲಾವಣೆಯ ಸ್ಪಷ್ಟ ಉದ್ದೇಶವಿರಿಸಿಕೊಂಡು, ಆರ್ಥಿಕ-ರಾಜಕೀಯ ಆಯಾಮಗಳನ್ನೂ ಹೊಂದಿದ್ದರೆ ಮಾತ್ರ ನಿಶ್ಚಿತ ಗುರಿಯನ್ನು ಹೊಂದಲು ಸಾಧ್ಯ.

ಇತ್ತೀಚಿನ ದಶಕಗಳಲ್ಲಿ ಪರಿಸರ ಪ್ರಶ್ನೆ ಬಲಗೊಳ್ಳಲು ಪ್ರಮುಖ ಕಾರಣ ಮೇಲೆ

ಬಂಡವಾಳಶಾಹಿಯೂ ತನ್ನ ಕಾರ್ಯಸಾಧನೆಗಾಗಿ ಈ ಬೆಳವಣಿಗೆಯನ್ನೇ ಎದುರು ನೋಡುತ್ತಿರುತ್ತದೆ.

೨. ಶ್ರೀಮಂತ ಬಂಡವಾಳಶಾಹಿಯ ಪ್ರವೇಶವಾದರೆ ತಾವು ಸ್ಪರ್ಧೆ ನೀಡಲಾರೆವೇನೋ ಎನ್ನುವ ಭಯದಿಂದ ಸ್ಥಳೀಯ ಶ್ರೀಮಂತವರ್ಗ ಹೊಸ ಯೋಜನೆಗಳನ್ನು ವಿರೋಧಿಸಲು ಪ್ರಾರಂಭಿಸಿತು. ಇದಕ್ಕಾಗಿ ಪರಿಸರ ಚಳವಳಿಯನ್ನು ನಡೆಸುವ ಅಗತ್ಯವಿತ್ತು. ಹೊಸ ಯೋಜನೆಗಳಿಂದಾಗಿ ಪರಿಸರ ಮಾಲಿನ್ಯ ಉಂಟಾಗುತ್ತದೆ ಎನ್ನುವ ಪರಿಸರಪರ ಕಾಳಜಿ ತೋರಿಸಿ ಸ್ಥಳೀಯ ಜನರು ಉದ್ದಿಮೆಗಳನ್ನು ವಿರೋಧಿಸುವಂತೆ ಪ್ರಚೋದನೆ ನೀಡಲಾಯಿತು. ಆಧುನೀಕರಣದ ಯಾವ ಸೌಕರ್ಯಗಳನ್ನೂ ಪಡೆಯದ ಜನವರ್ಗ ಆಧುನೀಕರಣವನ್ನು ವಿರೋಧಿಸುವಂತೆ ಮಾಡುವಲ್ಲಿ ಮೇಲ್ವರ್ಗ ಸಫಲವಾಯಿತು. ಇದು ಕೇವಲ ಸಾಂಸ್ಕೃತಿಕ ರಾಜಕೀಯವೇ ಹೊರತು ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಪ್ರಯತ್ನವಲ್ಲ. ಪರಿಸರ ಇಲ್ಲಿ ಸ್ಥಳೀಯ ಶ್ರೀಮಂತವರ್ಗದ ಸ್ವಾರ್ಥಸಾಧನೆಗೆ ವಸ್ತುವಾಗಿ ಪರಿವರ್ತನೆಗೊಂಡಿದೆ.

ಪರಿಸರವನ್ನು ಸೀಮಿತಾರ್ಥದಲ್ಲಿ ಅರ್ಥೈಸಿಕೊಂಡಿರುವುದೇ ಈ ಸಂಕುಚಿತ ಮನೋಭಾವಕ್ಕೆ ಮೂಲ ಕಾರಣ. ಪರಿಸರ ಇಂದು ಜಾಗತಿಕ ನೆಲೆಯಲ್ಲಿ ಚರ್ಚೆಯ ವಸ್ತುವಾಗಿದೆ. ಪರಿಸರ ಸಂರಕ್ಷಣೆ ಚಳವಳಿಯು ಇಂದು ವಿಶ್ವವ್ಯಾಪಿಯಾಗಿ ಬೆಳೆದು ನಿಂತಿದೆ. ಪ್ರಪಂಚದ ಯಾವುದೇ ಭಾಗದಲ್ಲಿಯಾದರೂ ಚಳವಳಿಗಳು ಕಾಣಿಸಿಕೊಂಡರೂ ಅದು ಜಾಗತಿಕ ಆಂದೋಲನದ ಒಂದು ಭಾಗ ಮಾತ್ರ. ಏಕೆಂದರೆ ಕೃಷಿ ಮತ್ತು ಕೈಗಾರಿಕೆಗಳ ಹೆಸರಿನಲ್ಲಿ ಇಂದು ಪರಿಸರ ಮಾಲಿನ್ಯಗೊಳ್ಳುತ್ತಿರುವುದು ಯಾವುದೇ ರಾಜ್ಯ, ದೇಶಗಳ ಗಡಿಗೆ ಸೀಮಿತವಾಗಿಲ್ಲ. ಈ ಗಡಿಗಳನ್ನು ದಾಟಿ ಪರಿಣಾಮವನ್ನು ಬೀರುವ ಸಾಮರ್ಥ್ಯವನ್ನು ಅವು ಹೊಂದಿವೆ. ಆದ್ದರಿಂದ ಪರಿಸರ ಚಳವಳಿಗಳ ಕುರಿತಾಗಿ ಚರ್ಚಿಸುವಾಗ ಒಂದು ರೇಖೆಯನ್ನು ಎಳೆದು ವಿವರಿಸಲು ಸಾಧ್ಯವಾಗುವುದಿಲ್ಲ. ಓಜೋನ್ ಪದರಗಳ ನಾಶ, ಎಲ್ಲೋ ಸಂಭವಿಸುವ ಅಣು ವಿಕಿರಣ ದುರಂತಗಳು ಮುಂತಾದವು ಜಾಗತಿಕ ಸಮಸ್ಯೆಗಳಾಗಿವೆ. ಆದರೆ ಸ್ವಾರ್ಥಸಾಧನೆಯ ಸಂದರ್ಭದಲ್ಲಿ ಪರಿಸರದ ವ್ಯಾಪ್ತಿಯೂ ವಿಸ್ತರಿಸುವುದಿಲ್ಲ. ಕಳೆದ ಎರಡು ದಶಕಗಳಿಂದೀಚೆಗೆ ಪರಿಸರಮಾಲಿನ್ಯ ಹಾಗೂ ಅದರಿಂದಾಗುವ ಅನಾಹುತಗಳ ಬಗ್ಗೆ ಅನೇಕ ನಾಗರೀಕ ವೇದಿಕೆಗಳು, ರಾಜಕಾರಣಿಗಳು ಹಾಗೂ ಕೈಗಾರಿಕೋದ್ಯಮಿಗಳ ನೀತಿಗಳನ್ನು ವಿರೋಧಿಸಿ ಹರತಾಳಗಳನ್ನು, ಪ್ರದರ್ಶನಗಳನ್ನು ಏರ್ಪಡಿಸುತ್ತಿವೆ. ಆದರೆ ಹೆಚ್ಚಿನ ವೇದಿಕೆಗಳ ಚಳವಳಿ ನಿಜವಾಗಿಯೂ ಚಳವಳಿಯ ರೂಪವನ್ನು ಪಡೆಯದೆ ಮಂದಗತಿಯಲ್ಲಿ ಸಾಗುತ್ತಿದೆ.

ಪರಿಸರ ಸಂಘಟನೆಗಳು ಹಾಗೂ ಶೈಕ್ಷಣಿಕ ಸಂಘ-ಸಂಸ್ಥೆಗಳು ಏರ್ಪಡಿಸುವ ಪರಿಸರ ಸಂಬಂಧಿತ ಸಮ್ಮೇಳನಗಳಲ್ಲಿ ತಾಂತ್ರಿಕವಾದ ಪ್ರಬಂಧಗಳು ಹಾಗೂ ಸ್ವಾನುಭವಗಳಷ್ಟೇ ಮಂಡಿಸಲ್ಪಡುತ್ತವೆ. ಯಾರೂ ಮಾಲಿನ್ಯದ ಸಮಸ್ಯೆಗೆ ಇರಬಹುದಾದ ಮೂಲಕಾರಣಗಳನ್ನು ಕೆದಕಿ ಮಾತನಾಡಲು ಇಷ್ಟಪಡುವುದಿಲ್ಲ. ಏಕೆಂದರೆ ಇದು ಅತ್ಯಂತ ಸೂಕ್ಷ್ಮ ವಿಷಯವಾಗಿದ್ದು ಅಧಿಕಾರಿಶಾಹಿಯುದ್ದಕ್ಕೂ ಬೇರುಗಳನ್ನು ಪಸರಿಸಿಕೊಂಡಿದೆ. ತಮಗೆ ಸಿಗಬಹುದಾದ ದಿನಭತ್ಯೆ, ಪ್ರಯಾಣಭತ್ಯೆ ಹಾಗೂ ಸಭಾ ಭತ್ಯೆಗಳನ್ನಷ್ಟೇ ಗಮನದಲ್ಲಿರಿಸಿಕೊಂಡು

ಸಮ್ಮೇಳನಗಳಿಗೆ ಅಥವಾ ವಿಚಾರಸಂಕಿರಣಗಳಿಗೆ ಬರುವ ವಿದ್ವಾಂಸರ (ಪರಿಸರವಾದಿಗಳು) ಸಂಖ್ಯೆಯೇ ಹೆಚ್ಚು. ಇವರಿಗೆ ತಾವು ಚರ್ಚಿಸುವ ವಿಷಯದ ಕುರಿತು ಯಾವುದೇ ರೀತಿಯ ಸಂಬಂಧವೂ ಇರುವುದಿಲ್ಲ. ಇಂದು ನಾವು ಹೆಸರಿಸುವ ಪರಿಸರವಾದಿಗಳಲ್ಲಿಯೂ ಈ ರೀತಿಯ ವಾದಿಗಳ ಪ್ರಮಾಣ ಸಾಕಷ್ಟಿದೆ. ಸರಕಾರದ ಇಲ್ಲವೇ ಉದ್ದಿಮೆಗಾರರ ಪರವಾಗಿ ವಾದಿಸುವ ಪರಿಸರವಾದಿಗಳೂ ಇದ್ದಾರೆ. ಇವರಲ್ಲಿ ಪರಿಸರ ವಿಜ್ಞಾನಿಗಳನ್ನು ಹಾಗೂ ಸಂಬಂಧಿಸಿದ ಇಲಾಖೆಗಳನ್ನು ಸೇರಿಸಬಹುದು. ಇವರು ಸ್ಥಳದ ಅಧ್ಯಯನ ನಡೆಸಿ ಉದ್ದಿಮೆಗಳ ಸ್ಥಾಪನೆಗೆ ಅನುಮತಿ ನೀಡುತ್ತಾರೆ. ಇವರನ್ನು ಸರಕಾರಿ ಪರಿಸರವಾದಿಗಳು ಇಲ್ಲವೇ ಬಂಡವಾಳಶಾಹಿ ಪರಿಸರವಾದಿಗಳು ಎಂದು ಕರೆಯಬಹುದು. ಇವರು ಅಧಿಕಾರಶಾಹಿಯಿಂದ ಸನ್ಮಾನಗಳನ್ನು ಸ್ವೀಕರಿಸಿ ಪರಿಸರದ ಕುರಿತಾಗಿ ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಂತವನ್ನು ತಲುಪಿರುತ್ತಾರೆ. ಬಂಡವಾಳಶಾಹಿಗೆ ಉದ್ದಿಮೆಗಳು ಎಷ್ಟು ಮುಖ್ಯವೋ ಸರಕಾರಿ ಪರಿಸರವಾದಿಗಳಿಗೆ ಪರಿಸರ ಮಾಲಿನ್ಯವೂ ಅಷ್ಟೇ ಮುಖ್ಯ. ಆದರೆ ಇಲ್ಲಿ ಮೋಸಹೋಗುವುದು ನಿಜವಾಗಿಯೂ ಪರಿಸರದ ಬಗ್ಗೆ ಕಾಳಜಿ ಇರುವ, ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಂಡಿರುವ ಜನವರ್ಗ.

ಪರಿಸರ ರಕ್ಷಣೆಯ ಹೋರಾಟದಲ್ಲಿ ಬುಡಕಟ್ಟುಗಳದ್ದು ಅಸ್ತಿತ್ವದ ಪ್ರಶ್ನೆಯಾದರೆ, ನಗರ ಬುದ್ಧಿಜೀವಿಗಳದ್ದು ಶೋಕಿಯ ಹೋರಾಟ. ಇವರನ್ನು ಪರಿಸರವಾದಿಗಳು ಎನ್ನುವ ಬದಲು ಅವಕಾಶವಾದಿಗಳು ಎಂದು ಕರೆದರೂ ತಪ್ಪಾಗಲಾರದು. ಇವರು ನಡೆಸುವ ಹೋರಾಟದ ಬಗ್ಗೆ ಗ್ರಾಮೀಣ ಪ್ರದೇಶದ ಜನರಲ್ಲಿ ಇತ್ತೀಚೆಗೆ ಸ್ವಲ್ಪಮಟ್ಟಿನ ಎಚ್ಚರ ಮೂಡಿದಂತೆ ಕಂಡುಬರುತ್ತದೆ. ಶ್ರೀಮಂತ ವರ್ಗ ಪರಿಸರ ಚಳವಳಿಯನ್ನು ತನ್ನ ಕಾರ್ಯಸಾಧನೆಗೆ ಬಳಸಿಕೊಂಡಂತೆ ಈ ಬುದ್ಧಿಜೀವಿಗಳ ವರ್ಗ ಪರಿಸರವನ್ನು ತನ್ನ ಚರ್ಚೆಗೆ ವಸ್ತುವನ್ನಾಗಿ ಆಯ್ಕೆಮಾಡಿಕೊಂಡಿದೆ. ಆದರೆ ಇದರಿಂದ ಪರಿಸರ ಮಾಲಿನ್ಯದ ಪ್ರಮಾಣವೂ ಕಡಿಮೆಯಾಗಿಲ್ಲ, ಪುನರ್ವಸತಿ ಸಮಸ್ಯೆಯೂ ಬಗೆಹರಿಯಲಿಲ್ಲ. ಆದರೆ ಸಾಂತ್ವನ ಹೇಳುವವರ ಸಂಖ್ಯೆ ಮಾತ್ರ ಹೆಚ್ಚಿದೆ. ಗಣ್ಯರ ಪ್ರಚಾರಪ್ರಿಯತೆ ಹಾಗೂ ಆತ್ಮವಂಚಕ ವ್ಯಕ್ತಿತ್ವದಿಂದಾಗಿ ಪರಿಸರ ಚಳವಳಿಗಳು ದಾರಿತಪ್ಪಿವೆ. ಪರಿಸರ ನಮ್ಮ ಬದುಕಿನೊಂದಿಗೇ ಸಮೀಕರಣಗೊಂಡಿರುವುದರಿಂದಾಗಿ ವ್ಯಕ್ತಿಯೊಬ್ಬ ತನ್ನನ್ನು ಪರಿಸರವಾದಿ ಎಂದು ಗುರುತಿಸಿಕೊಳ್ಳುವುದು ಅಷ್ಟೊಂದು ಸಮಂಜಸ ಎನಿಸುವುದಿಲ್ಲ. ಆ ರೀತಿ ಕರೆಯಿಸಿಕೊಂಡಾಗ ಆತ ಸಮಾಜದಿಂದ ಬೇರ್ಪಟ್ಟು ನಿಲ್ಲುತ್ತಾನೆ ಮತ್ತು ಪ್ರಚಾರ ಗಿಟ್ಟಿಸಿಕೊಳ್ಳುತ್ತಾನೆ. ನಿಜವಾದ ಪರಿಸರ ಕಾಳಜಿ ಇರುವ ವ್ಯಕ್ತಿ ಪರಿಸರದಿಂದ ಲಂಚವನ್ನು ಬಯಸುವುದಿಲ್ಲ. ಸುಂದರ್‌ಲಾಲ್ ಬಹುಗುಣ, ಮೇಧಾ ಪಾಟ್ಕರ್, ಸಾಲುಮರದ ತಿಮ್ಮಕ್ಕ, ಕುಸುಮಾ ಸೊರಬ ಮುಂತಾದ ಪರಿಸರ ಪ್ರೇಮಿಗಳು ತಮ್ಮನ್ನು ಪರಿಸರವಾದಿಗಳು ಎಂದು ಕರೆಯಿಸಿಕೊಳ್ಳಲು ಇಷ್ಟಪಟ್ಟಿಲ್ಲ. ಆದರೆ ಇವರು ಪರಿಸರದ ಬಗ್ಗೆ ಖಚಿತವಾದ ನಿರ್ಧಾರಗಳನ್ನು ಹೊಂದಿದ್ದು, ಶ್ರೀಮಂತವರ್ಗ, ಸರಕಾರ ಮತ್ತು ಉದ್ಯಮಪತಿಗಳ ಉದ್ದೇಶಗಳ ಬಗ್ಗೆ ಅನುಮಾನವನ್ನು ಹೊಂದಿದ್ದಾರೆ. ಉದ್ದಿಮೆಗಳ ಸ್ಥಾಪನೆಯಿಂದಾಗುವ ಪ್ರಯೋಜನಗಳಷ್ಟೇ ಪ್ರಮಾಣದಲ್ಲಿ ಅಪಾಯಗಳೂ ಇರುತ್ತವೆ, ಇವುಗಳ ಬಗ್ಗೆ ಮುನ್ನೆಚ್ಚರಿಕೆಯನ್ನು ವಹಿಸಬೇಕಾಗುತ್ತದೆ ಎನ್ನುವುದು ಇವರ ಅಭಿಪ್ರಾಯ. ಅಂದರೆ ಪರಿಸರದ ಬಗ್ಗೆ ದ್ವಂದ್ವಾತ್ಮಕ ನಿಲುವನ್ನು ಹೊಂದಿರಬಾರದು.

ಪರಿಸರವೂ ಮಾಲಿನ್ಯಕ್ಕೊಳಗಾಗಬಾರದು ಹಾಗೂ ಅಭಿವೃದ್ಧಿಯೂ ನಿರಂತರವಾಗಿ ನಡೆಯುತ್ತಿರಬೇಕು ಎನ್ನುವ ಸಿದ್ಧಾಂತ ಸರಿಯಲ್ಲ. ಪರಿಸರ ನಾಶವಿಲ್ಲದೆ ಅಭಿವೃದ್ಧಿಯನ್ನು ನಡೆಸುವುದು ಕಷ್ಟದ ಕೆಲಸ. ಪರಿಸರ ಸಂಬಂಧಿತ ನಿಯಮಗಳನ್ನು ಜಾರಿಗೆ ತಂದು ಅದರ ಪ್ರಕಾರ ಅಭಿವೃದ್ಧಿಯನ್ನು ನಡೆಸಿದರೆ ಮಾಲಿನ್ಯದ ಪ್ರಮಾಣ ಕಡಿಮೆಯಾಗುತ್ತದೆ. ಅಭಿವೃದ್ಧಿ ಪರಿಕಲ್ಪನೆಯೂ ಸೀಮಿತಾರ್ಥದಲ್ಲಿ ಬಳಕೆಯಾಗಿದೆ. ಇದನ್ನು ಆಧುನಿಕತೆ ಮತ್ತು ಸಂಪ್ರದಾಯಗಳ ನಡುವಿನ ತಿಕ್ಕಾಟವಾಗಿ ಉದ್ದೇಶಪೂರಕವಾಗಿ ಪರಿವರ್ತಿಸಲಾಗಿದೆ. ಪಶ್ಚಿಮದ ಮಾದರಿಯನ್ನು ಅನುಸರಿಸಿರುವುದು ಇದಕ್ಕೆ ಮೂಲ ಕಾರಣ. ವಿವಿಧ ಜಾತಿ, ವರ್ಗಗಳು ಈ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಚಳವಳಿ ನಡೆಸಿ ಸಾಮಾಜಿಕ ಸ್ಥಿತಿಯನ್ನು ಸಂಕೀರ್ಣಗೊಳಿಸಿವೆ. ಪರಿಸರ ಎಲ್ಲರ ಆಸ್ತಿ. ಪರಿಸರದ ಮೇಲೆ ಎಲ್ಲರಿಗೂ ಸಮಾನ ಹಕ್ಕಿದೆ. ಆದರೆ ಅಭಿವೃದ್ಧಿ ಮಾತ್ರ ಈ ನಿಯಮವನ್ನು ಅನುಸರಿಸಿಲ್ಲ. ಅಭಿವೃದ್ಧಿ ಕೆಲವರಿಗಾಗಿ ಮಾತ್ರ ನಡೆಯುತ್ತಿದೆ. ಉದ್ದಿಮೆಗಳ ಸ್ಥಾಪನೆಯನ್ನೇ ಅಭಿವೃದ್ಧಿಯೆಂದು ವ್ಯಾಖ್ಯಾನಿಸಲು ಸಾಧ್ಯವಾಗುವುದಿಲ್ಲ. ಇದು ಕೇವಲ ಬಂಡವಾಳಶಾಹೀ ಉತ್ಪಾದನಾ ವ್ಯವಸ್ಥೆಯ ತಂತ್ರಗಾರಿಕೆ. ಅಭಿವೃದ್ಧಿ ಅನಿವಾರ್ಯ, ಅದೇ ರೀತಿ ಪರಿಸರ ರಕ್ಷಣೆಯೂ ಅಷ್ಟೇ ಅನಿವಾರ್ಯ. ಪರಸ್ಪರ ಹೊಂದಾಣಿಕೆಯನ್ನು ಏರ್ಪಡಿಸಿಕೊಳ್ಳುವುದೇ ಇದಕ್ಕಿರುವ ಮಾರ್ಗೋಪಾಯ. ಆದರೆ ಹೊಂದಾಣಿಕೆಯೂ ಶ್ರೀಮಂತವರ್ಗದ ಮತ್ತು ಬಂಡವಾಳಶಾಹಿಯ ಹಿಡಿತದಲ್ಲಿ ಸಿಕ್ಕಿಕೊಂಡಿದೆ. ಉತ್ಪಾದನೆಯ ನಂತರ ಪರಿಸರದ ಮೇಲಾಗುವ ಪರಿಣಾಮಗಳ ಫಲವನ್ನು ಅನುಭವಿಸುವ ವರ್ಗದ ಸೃಷ್ಟಿಯೂ ಈ ಹೊಂದಾಣಿಕೆಯಲ್ಲಿಯೇ ಸೇರಿಕೊಂಡಿದೆ. ನಗರ ಪ್ರದೇಶಗಳಲ್ಲಿ ಅತಿರೇಕದ ನಗರೀಕರಣದಿಂದಾಗಿ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಕೊಳೆಗೇರಿಗಳನ್ನು ಇಲ್ಲಿ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಅಭಿವೃದ್ಧಿ ಹೊಂದುತ್ತಿರುವ ಜನವರ್ಗದ ಸಮಸ್ಯೆಗಳು ಕೊಳೆಗೇರಿಗಳಿಗೆ ರವಾನಿಸಲ್ಪಡುತ್ತವೆ. ಉದ್ದಿಮೆಗಳನ್ನು ಸ್ಥಾಪಿಸುವ ಪ್ರಾರಂಭಿಕ ಹಂತದಲ್ಲಿಯೇ ಇವುಗಳ ಬಗ್ಗೆ ಗಮನಹರಿಸಿದರೆ ಆಗಬಹುದಾದ ಅನಾಹುತಗಳ ಪ್ರಮಾಣವನ್ನು ಕಡಿಮೆಗೊಳಿಸಬಹುದು.

ಫ್ರೆಡರಿಕ್ ಏಂಗೆಲ್ಸ್‌ರವರು ಮಾನವನ ಮತ್ತು ಪರಿಸರದ ಸಂಬಂಧಗಳನ್ನು ಸರಿಯಾಗಿಯೇ ಗ್ರಹಿಸಿದ್ದಾರೆ. ಅವರ ಪ್ರಕಾರ, "ಪ್ರಕೃತಿಯ ವಿರುದ್ಧ ನಡೆಸುವ ಪ್ರತಿಯೊಂದು ಹೋರಾಟದಲ್ಲಿಯೂ ಮನುಷ್ಯನಿಗೆ ಊಹಿಸಿದಂತೆ ಮೊದಲ ಹಂತದಲ್ಲಿ ಜಯ ಲಭಿಸುತ್ತದೆ. ಆದರೆ ಎರಡನೆಯ ಮತ್ತು ಮೂರನೆಯ ಹಂತದಲ್ಲಿ ನಾವು ಊಹಿಸಲಾಗದ ಪರಿಣಾಮಗಳು ಉಂಟಾಗಿ ಅನೇಕ ವೇಳೆ ಮೊದಲನೆಯ ಹಂತದಲ್ಲಿ ಲಭಿಸಿದ್ದ ಗೆಲುವು ಸಹ ನಿಷ್ಪ್ರಯೋಜಕವಾಗುತ್ತದೆ." ಏಂಗೆಲ್ಸ್‌ರವರ ಪರಿಸರ ಕುರಿತ ಈ ಅಭಿಪ್ರಾಯ ಪರಿಸರ ಚಳವಳಿಗಳಿಗೆ ಹೆಚ್ಚು ಅನ್ವಯಿಸುತ್ತದೆ. ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯು ಉತ್ಪಾದನಾ ವಿಧಾನ ಹಾಗೂ ಸಂಬಂಧಗಳಲ್ಲಿ ತಂದಿರುವ ಬದಲಾವಣೆಗಳು ಪ್ರಕೃತಿಯ ನಿಯಮದ ವಿರುದ್ಧ ನಡೆಯುತ್ತಿರುವ ಪ್ರಕ್ರಿಯೆಗಳು ಎನ್ನುವುದು ಏಂಗೆಲ್ಸ್‌ರವರ ವಾದ. ಕಾರ್ಲ್‌ಮಾರ್ಕ್ಸ್‌ರವರೂ ಏಂಗೆಲ್ಸ್‌ರವರ ವಾದವನ್ನು ಬೆಂಬಲಿಸಿದ್ದಾರೆ. ಇವರಿಬ್ಬರೂ ಸುಮಾರು ನೂರೈವತ್ತು ವರ್ಷಗಳ ಹಿಂದೆ ಬಂಡವಾಳಶಾಹಿ

ಉತ್ಪಾದನಾ ವ್ಯವಸ್ಥೆಯ ಬಗ್ಗೆ ನೀಡಿರುವ ಹೇಳಿಕೆಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಕೈಗಾರಿಕಾ ಕ್ರಾಂತಿಯಿಂದಾಗಿ ಮಾನವ ಪರಿಸರವನ್ನು ತನ್ನ ಉದ್ದೇಶಗಳಿಗೆ ಬಳಸುವ ಪ್ರಕ್ರಿಯೆ ಆಗ ಪ್ರಾರಂಭಗೊಂಡಿತ್ತು. ಈಗ ಅದು ಎರಡನೆಯ ಮತ್ತು ಮೂರನೆಯ ಹಂತಕ್ಕೆ ಪ್ರವೇಶಿಸಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸರಿಸಮಕ್ಕೆ ಬರಬೇಕೆನ್ನುವ ಸ್ಪರ್ಧೆಯೂ ಇದಕ್ಕೆ ಕಾರಣವಾಗಿದೆ. ಇಂಥ ಸಂದರ್ಭಗಳಲ್ಲಿ ಪರಿಸರ ರಕ್ಷಣೆ ಚರ್ಚೆಯ ವಸ್ತುವಾಗಲಿಲ್ಲ.

ಪರಿಸರನಾಶದ ಕಡೆಗೆ ಗಮನಕೊಡದೆ ಉದ್ದಿಮೆಗಳನ್ನು ಸ್ಥಾಪಿಸುವುದು ಒಂದು ವಿಧಾನ. ಇದರಲ್ಲಿ ಉದ್ದಿಮೆಗಾರರಿಗೆ ಲಾಭವೇ ಹೆಚ್ಚು. ಏಕೆಂದರೆ ಹೆಚ್ಚು ಬಂಡವಾಳವನ್ನು ಇಲ್ಲಿ ವಿನಿಯೋಗಿಸುವ ಅಗತ್ಯವಿರುವುದಿಲ್ಲ. ಪರಿಸರವನ್ನು ಅಂದರೆ, ನದಿ, ಪರ್ವತ, ಖನಿಜಗಳು ಮುಂತಾದವುಗಳನ್ನು ತಮಗೆ ಅನುಕೂಲವಾಗುವಂತೆ ಬಳಸಿಕೊಳ್ಳಬಹುದು. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಆರಂಭದ ಹಂತದಲ್ಲಿ ಇದೇ ರೀತಿಯ ಬೆಳವಣಿಗೆ ಕಂಡುಬಂತು. ಇದನ್ನು ವಿರೋಧಿಸುವ ಧೋರಣೆಯೂ ಆ ದಿನಗಳಲ್ಲೇ ಕಾಣಿಸಿಕೊಂಡವು. ಇದು ಪರಿಸರ ಚರ್ಚೆಗೆ ಒಳಗಾದ ಪ್ರಥಮ ಹಂತ. ಆದರೆ ಅನೇಕ ದೇಶಗಳು ಈಗ ಈ ಸ್ಥಿತಿಯನ್ನು ಎದುರಿಸುತ್ತಿವೆ. ಮುಂದುವರಿದ ರಾಷ್ಟ್ರಗಳು ಇದನ್ನೇ ಬಂಡವಾಳವನ್ನಾಗಿಸಿ ತಮ್ಮ ಬಂಡವಾಳ ಶೇಖರಣೆಯ ಗೀಳನ್ನು ಪೂರೈಸಿಕೊಳ್ಳುತ್ತಿವೆ. ಮುಂದುವರಿದ ರಾಷ್ಟ್ರಗಳು ಈಗ ಎಲ್ಲಾ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡು ಉದ್ದಿಮೆಗಳನ್ನು ಸ್ಥಾಪಿಸುತ್ತಿರುವುದರಿಂದಾಗಿ ಪರಿಸರ ಮಾಲಿನ್ಯದ ಪ್ರಮಾಣವನ್ನು ಸಾಕಷ್ಟು ಕಡಿಮೆಗೊಳಿಸುವ ಪ್ರಯತ್ನದಲ್ಲಿವೆ. ಆದರೆ ತಾವು ಬಂಡವಾಳ ಹೂಡುತ್ತಿರುವ ಬಡರಾಷ್ಟ್ರಗಳಲ್ಲೂ ಈ ಮುನ್ನೆಚ್ಚರಿಕೆಯ ಕ್ರಮಗಳನ್ನು ಜಾರಿಗೊಳಿಸುವ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಇದರ ಬದಲಾಗಿ ಇಂದಿನ ಬದಲಾದ ಆರ್ಥಿಕ ನೀತಿಯಲ್ಲಿ ಪರಿಸರ ರಕ್ಷಣೆಯ ಕುರಿತು ವಿವೇಚಿಸುವುದು ತಪ್ಪು ಎನ್ನುವ ವಾದವನ್ನು ಮುಂದಿಟ್ಟಿವೆ. ಏಕೆಂದರೆ ಬಹುರಾಷ್ಟ್ರೀಯ ಕಂಪೆನಿಗಳು ಪರಿಸರಕ್ಕೆ ಧಕ್ಕೆ ಉಂಟುಮಾಡುವ ಉದ್ದಿಮೆಗಳನ್ನು ಹೊರರಾಷ್ಟ್ರಗಳಲ್ಲಿ ಸ್ಥಾಪಿಸಿ ಲಾಭವನ್ನು ಮಾತ್ರ ಪಡೆಯುವ ಉದ್ದೇಶವನ್ನು ಹೊಂದಿವೆ. ಇಲ್ಲಿ ಪರಿಸರ ನಾಶವಾದರೆ ಬಹುರಾಷ್ಟ್ರೀಯ ಕಂಪೆನಿಗಳಿಗೇನೂ ನಷ್ಟವಿಲ್ಲ. ಸ್ಥಳೀಯ ಉದ್ದಿಮೆಗಾರರೂ ಸ್ಪರ್ಧೆಯನ್ನು ನೀಡುವುದಕ್ಕಾಗಿ ಇದೇ ಮಾದರಿಯನ್ನು ಅನುಸರಿಸುತ್ತಿದ್ದಾರೆ. ಪರಿಸರ ಸಂಬಂಧಿತ ನೀತಿ, ನಿಯಮಗಳನ್ನು ಜಾರಿಗೆ ತರುವಲ್ಲಿ ಯಾರೂ ಆಸಕ್ತಿ ವಹಿಸಲಿಲ್ಲ. ಪರಿಸರ ಚಳವಳಿಗಳೂ ಈ ಸೂಕ್ಷ್ಮಗಳನ್ನು ಅರಿತುಕೊಂಡಂತೆ ಕಂಡುಬರುವುದಿಲ್ಲ.

ಈ ಪ್ರಕ್ರಿಯೆಗಳಿಗೆ ರಿಚರ್ಡ್ ಬಾಲ್ಡ್‌ವಿನ್‌ರವರು ಹೊಸದಾದ ವಿವರಣೆಯನ್ನು ನೀಡಿದ್ದಾರೆ. ಇದನ್ನು ಪರಿಸರವಾದಿ ಪರಿವರ್ತನಾ ಪ್ರಕ್ರಿಯೆ ಎಂಬ ಹೆಸರಿನಿಂದ ಕರೆಯಲಾಗಿದೆ (ಬಾಲ್ಡ್‌ವಿನ್, ೧೯೯೫). ಆದರೆ ಇದು ಮುಂದುವರಿದ ರಾಷ್ಟ್ರಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಿದ ಪರಿಸರ ಸಂಬಂಧಿತ ಸಿದ್ಧಾಂತವಾಗಿದೆ. ಬಾಲ್ಡ್‌ವಿನ್‌ರವರು ತಮ್ಮ ಸಿದ್ಧಾಂತದಲ್ಲಿ ಮೂರು ಹಂತಗಳನ್ನು ಗುರುತಿಸಿಕೊಂಡಿದ್ದಾರೆ. ಸಮಾಜ ಕೃಷಿ ಪ್ರಧಾನವಾಗಿದ್ದಾಗ ಪರಿಸರ ಮಾಲಿನ್ಯ ಸಮಸ್ಯೆ ಇರುವುದಿಲ್ಲ. ಇದು ಮೊದಲ ಹಂತ. ಈ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಪರಿಸರ ಮಾಲಿನ್ಯ

ಕೇವಲ ಕೈಗಾರೀಕರಣದಿಂದ ಮಾತ್ರ ಆಗಿಲ್ಲ. ಗುಡ್ಡುಗಾಡು ಪ್ರದೇಶಗಳು ಕೃಷಿ ವ್ಯವಸ್ಥೆಗೆ ಪರಿವರ್ತನೆ ಹೊಂದುವಾಗ ಸಾಕಷ್ಟು ಪರಿಸರ ನಾಶ ಆಗಿದೆ. ಇವನ್ನು ಪರಿಸರದ ಪರಿವರ್ತನೆ ಎಂದೂ ಕರೆಯಬಹುದು. ಆದ್ದರಿಂದ ಇದೊಂದು ಆದರ್ಶ ಸಮಾಜ ಎಂದು ಗುರುತಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಇದೊಂದು ನಿರಂತರ ಪ್ರಕ್ರಿಯೆ. ಎರಡನೆಯ ಹಂತ ಪರಿಸರಮಾಲಿನ್ಯದ ಆಸ್ಫೋಟದ ಹಂತ. ಇದು ಕೃಷಿ ವ್ಯವಸ್ಥೆ ಪ್ರಧಾನ ಸ್ಥಾನ ಕಳೆದುಕೊಂಡು ಕೈಗಾರಿಕಾ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ಹಂತ. ಆದರೆ ಈ ಹಂತದಲ್ಲೂ ಕೃಷಿ ವ್ಯವಸ್ಥೆ ಕೈಗಾರಿಕೆಗಳಷ್ಟೇ ವಿಸ್ತಾರವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಆಧುನಿಕ ಕೃಷಿ, ವಾಣಿಜ್ಯ ಬೆಳೆಗಳು, ರಸಗೊಬ್ಬರ ಬಳಕೆ ಮುಂತಾದವು ಪರಿಸರ ಮಾಲಿನ್ಯಕ್ಕೆ ನೇರವಾಗಿ ಕಾರಣವಾಗಿವೆ. ಆದರೆ ಬಾಲ್ಡ್‌ವಿನ್‌ರವರು ಕೈಗಾರಿಕೆಗಳಿಗೆ ಮಾತ್ರ ತಮ್ಮ ಸಿದ್ಧಾಂತವನ್ನು ಸೀಮಿತಗೊಳಿಸಿದ್ದಾರೆ. ಸಂಪೂರ್ಣ ಅಭಿವೃದ್ಧಿ ಹೊಂದಿದ ಬಳಿಕ ಪರಿಸರ ಪ್ರಜ್ಞೆ ಮೂಡಿ, ಪರಿಸರ ಮಾಲಿನ್ಯ ನಿಯಂತ್ರಣ ಸಾಧ್ಯವಾಗುತ್ತದೆ ಎನ್ನುವುದು ಮೂರನೆಯ ಹಂತ. ಇದು ಮುಂದುವರಿದ ರಾಷ್ಟ್ರಗಳಿಗೆ ಅನ್ವಯವಾಗುವ ಸಿದ್ಧಾಂತವಾಗಿದೆ. ಬಹುರಾಷ್ಟ್ರೀಯ ಕಂಪೆನಿಗಳು ಬಡರಾಷ್ಟ್ರಗಳಲ್ಲಿ ಬಂಡವಾಳ ಹೂಡಿ ಉದ್ದಿಮೆಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಬಾಲ್ಡ್‌ವಿನ್‌ರವರ ವಾದ ಹೆಚ್ಚು ಪ್ರಸ್ತುತವೆನಿಸುವುದಿಲ್ಲ. ಇದು ಬಡರಾಷ್ಟ್ರ ಗಳನ್ನು ಮೋಸಗೊಳಿಸುವ ತಂತ್ರವಾಗಿ ಕಂಡುಬರುತ್ತದೆ. ಏಕೆಂದರೆ ಮೂರನೆಯ ಹಂತದಲ್ಲಿ ಉದ್ಯಮೀಕರಣವು ಪರಿಸರವಾದಿಯಾಗಿ ಪರಿವರ್ತನೆಗೊಂಡರೂ ಬಡರಾಷ್ಟ್ರಗಳಿಗೆ ಯಾವ ಪ್ರಯೋಜನವೂ ಇಲ್ಲ. ಬಂಡವಾಳಶಾಹಿಯು ತನ್ನ ಉದ್ದೇಶವನ್ನು ಈಡೇರಿಸಿಕೊಂಡ ಬಳಿಕ ಪರಿಸರ ಪ್ರಜ್ಞೆಯ ಕುರಿತಾಗಿ ಅರಿವು ಮೂಡಿಸುವ ಪ್ರಯತ್ನ ಮಾಡುವುದರಲ್ಲಿ ಹೊಸತೇನೂ ಇಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಉತ್ಪಾದನಾ ತಂತ್ರಗಳು ಮತ್ತು ಅದಕ್ಕೆ ಪೂರಕವಾದ ಸಾಂಸ್ಥಿಕ ಚೌಕಟ್ಟುಗಳು, ಮೌಲ್ಯಗಳು ಜೊತೆಜೊತೆಗೇ ರೂಪುಗೊಂಡವು. ಆದರೆ ನಮ್ಮಲ್ಲಿ ಅದರಲ್ಲೂ ಏಕೀಕರಣೋತ್ತರ ಕರ್ನಾಟಕದಲ್ಲಿ ಸಂಕೀರ್ಣ ಸಾಮಾಜಿಕ ಸ್ಥಿತಿಯೊಂದರ ನಿರ್ಮಾಣವಾಯಿತು. ವರ್ಗ ಮತ್ತು ಜಾತಿ ಪ್ರಶ್ನೆಗಳು ಪರಿಸರ ಸಮಸ್ಯೆ ಯೊಡನೆ ಸೇರಿಕೊಂಡವು. ಮೇಲು ಮತ್ತು ಕೀಳು, ಕೃಷಿ ಮತ್ತು ಕೈಗಾರಿಕೆ, ಗ್ರಾಮ ಮತ್ತು ನಗರ, ಆಧುನಿಕ ಮತ್ತು ಸಾಂಪ್ರದಾಯಿಕ ಎಂಬ ವಿವರಣೆಗಳೇ ನಮ್ಮ ಪರಿಸರ ಸಂಬಂಧಿತ ಚಳವಳಿಗಳಲ್ಲಿ ಮುಖ್ಯ ಪಾತ್ರವನ್ನು ವಹಿಸಿದವು. ಆದ್ದರಿಂದ ಯುರೋಪ್ ಕೇಂದ್ರಿತ ಅಧ್ಯಯನ ಕ್ರಮವನ್ನಾಗಲೀ ಅಥವಾ ಅಭಿವೃದ್ಧಿಯ ಸೂತ್ರವನ್ನಾಗಲೀ ಇಟ್ಟುಕೊಂಡು ಪರಿಸರವನ್ನು ನಿರ್ವಚಿಸಲು ಸಾಧ್ಯವಿಲ್ಲ.

ಕೈಗಾರಿಕೋದ್ಯಮಿಗಳು ಪರಿಸರವಾದಿಗಳಾಗಿಯೂ ಮಾರ್ಪಾಟು ಹೊಂದುವುದು ಕುತೂಹಲಕಾರಿ ವಿಷಯವಾಗಿದೆ. ಆರ್ಥಿಕ ಲಾಭವನ್ನು ಪಡೆದುಕೊಂಡ ಬಳಿಕ ಸಾಮಾಜಿಕ ಲಾಭವನ್ನು ಪಡೆಯುವುದೇ ಈ ಮಾರ್ಪಾಟಿನ ಹಿಂದಿರುವ ಉದ್ದೇಶ. ಒಂದು ಉದ್ದಿಮೆ ಸ್ಥಾಪನೆಯಾಗಬೇಕಾದರೆ ಸಾವಿರಾರು ಎಕರೆ ಭೂಮಿ ಬಳಕೆಯಾಗಬೇಕಾಗುತ್ತದೆ. ಆ ಸಂದರ್ಭದಲ್ಲಿ ಪರಿಹಾರ, ಪುನರ್ವಸತಿ, ಉದ್ಯೋಗ ಮುಂತಾದ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಸಮಸ್ಯೆಗಳಿಂದಾಗಿಯೇ ಚಳವಳಿಗಳು ಹುಟ್ಟಿಕೊಳ್ಳುತ್ತವೆ. ಈ ಹಂತದಲ್ಲಿ

ಉದ್ಯಮಿಗಳು ಪರಿಸರಪ್ರೇಯರಾಗಿ ನಟಿಸಲಾರಂಭಿಸುತ್ತಾರೆ. ಸೂಕ್ತ ಪರಿಹಾರವನ್ನು ನೀಡುವ ಆಶ್ವಾಸನೆಗಳನ್ನೂ ನೀಡುತ್ತಾರೆ. ಉದ್ದಿಮೆಗಳ ಸ್ಥಾಪನೆಯಿಂದಾಗಿ ಪ್ರಕೃತಿಗಾದ ಅನ್ಯಾಯವನ್ನು ಸರಿಪಡಿಸುತ್ತಿದ್ದೇವೆ ಎನ್ನುವ ಅರ್ಥದಲ್ಲಿ ಉದ್ಯಾನಗಳನ್ನು ನಿರ್ಮಿಸಲಾಗುತ್ತದೆ. ವಿಶ್ವ ಪರಿಸರ ದಿನಾಚರಣೆಗಳನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ. ನಿರಾಶ್ರಿತರ ಹಾಗೂ ಉದ್ಯಮಿಗಳ ನಡುವೆ ಮಧ್ಯವರ್ತಿಗಳು ಕಾಣಿಸಿಕೊಳ್ಳುವುದು ಈ ಹಂತದಲ್ಲಿಯೇ. ಹೊಸ ಉದ್ಯಾನಗಳನ್ನು ನಿರ್ಮಿಸಿ ನಾವು ಪ್ರಕೃತಿಯ ಸಮತೋಲನವನ್ನು ಕಾಯ್ದುಕೊಂಡು ಬರುತ್ತಿದ್ದೇವೆ ಎನ್ನುವುದು ಮೂರ್ಖತನವಾದರೂ,ಬಂಡವಾಳಶಾಹಿಯ ದೃಷ್ಟಿಯಿಂದ ಅಭಿವೃದ್ಧಿಯ ಕಲ್ಪನೆಯೇ ಆಗಿದೆ. ಒಂದು ಭೌಗೋಳಿಕ ಭೂಪ್ರದೇಶ ಪರಿವರ್ತನೆ ಹೊಂದುವಾಗ ಸಾಮಾಜಿಕ ರಚನೆಯೂ ಪರಿವರ್ತನೆ ಹೊಂದುತ್ತದೆ ಎನ್ನುವ ವಾದವೂ ಇದರಲ್ಲಿ ಅಡಕವಾಗಿದೆ. ಆದರೆ ಈ ವಾದದಲ್ಲಿ ಯಾವುದೇ ಸತ್ಯಾಂಶವೂ ಇಲ್ಲ. ಇಲ್ಲಿ ಪರಿಸರ ಮತ್ತು ಸಾಮಾಜಿಕ ರಚನೆಗಳ ನಡುವಿನ ಸಂಬಂಧವನ್ನೇ ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಾಮಾಜಿಕ ವ್ಯವಸ್ಥೆಯನ್ನಾಗಲೀ, ಸಂಬಂಧವನ್ನಾಗಲೀ, ಪರಿಸರ ಪದದ ವ್ಯಾಖ್ಯಾನವನ್ನಾಗಲೀ ಪ್ರಶ್ನಿಸುವಂತಿಲ್ಲ. ಏಕೆಂದರೆ ಅವು ನೇರವಾಗಿ ಬಂಡವಾಳಶಾಹಿಯಿಂದಲೇ ನಿರ್ಧರಿಸಲ್ಪಡುತ್ತವೆ. ಪರಿಸರವಾದ, ಪರಿಸರ ಪ್ರಜ್ಞೆ, ಪರಿಸರ ಶಿಕ್ಷಣ ಮುಂತಾದ ಹೊಸ ಪದಗಳೂ ಈ ಕಾರಣಗಳಿಗಾಗಿಯೇ ಹುಟ್ಟಿಕೊಂಡವು. ಇವು ಉದ್ಯಮಿಗಳ ಅಸ್ತಿತ್ವದ ಪ್ರಶ್ನೆಯಾಗಿ ಕಂಡುಬರುತ್ತವೆ. ನವ ಸಂಪ್ರದಾಯವಾದಿಗಳು ಇದನ್ನೇ ವೆಸ್ಟರ್ನೈಸೇಷನ್ ಎಂದು ಕರೆದು ಟೀಕಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಪರೋಕ್ಷವಾಗಿ ಸಂಸ್ಕೃತಿಯ ಹೆಸರಿನಲ್ಲಿ ಅವರೂ ಇದೇ ಕೆಲಸವನ್ನು ಮಾಡುತ್ತಿದ್ದಾರೆ. ಕೈಗಾರಿಕೋದ್ಯಮಿಗಳಿಗೂ, ಇಲ್ಲಿನ ಶ್ರೀಮಂತವರ್ಗಕ್ಕೂ ಈ ವಿಚಾರದಲ್ಲಿ ಹೆಚ್ಚಿನ ಸಾಮ್ಯತೆ ಕಂಡುಬರುತ್ತದೆ. ಪ್ರಕೃತಿ ಹಾಳಾಗ್ತಾ ಇದೆ, ಅದನ್ನು ರಕ್ಷಿಸಬೇಕು ಎನ್ನುವ ಧ್ವನಿಯ ಹಿಂದಿರುವ ಉದ್ದೇಶ ಮೇಲೆ ವಿವರಿಸಿದಂತೆ ಆರ್ಥಿಕ ಮತ್ತು ಸಾಮಾಜಿಕ ಲಾಭಗಳಿಕೆಯೇ ಆಗಿದೆ. ಇದು ಪ್ರಕೃತಿ ಮತ್ತು ಮಾನವನ ನಡುವಿನ ಸಂಬಂಧದ ಪುನರ್‌ವ್ಯಾಖ್ಯಾನ ಸಾಧ್ಯವಿಲ್ಲದಂತೆ ಮಾಡುವ ಸಂಭವವೇ ಹೆಚ್ಚು.

ಈ ಎಲ್ಲಾ ವಿವರಗಳು ಪರಿಸರ ಬಿಕ್ಕಟ್ಟಿಗೆ ಕಾರಣವಾದ ಅಂಶಗಳನ್ನು ಮತ್ತು ಅವುಗಳ ಸ್ವರೂಪವನ್ನು ಗುರುತಿಸಲು ಸಹಕಾರಿಯಾಗಿವೆ. ಪರಿಸರಕ್ಕೆ ಸಂಬಂಧಪಟ್ಟ ಸಣ್ಣಮಟ್ಟದ ಚಟುವಟಿಕೆಗಳು ವಿಸ್ತಾರವಾಗಿ ಬೆಳೆದು ಜಾಗತಿಕ ಮಟ್ಟದಲ್ಲಿ ಚರ್ಚೆಯ ವಸ್ತುವಾದಾಗಲೇ ಪರಿಸರ ಬಿಕ್ಕಟ್ಟು ತಲೆದೋರಿರುವುದು ಗಮನಕ್ಕೆ ಬಂತು. ಯಂತ್ರಗಾರಿಕೆಯಲ್ಲಾದ ಆವಿಷ್ಕಾರಗಳು ಉತ್ಪಾದನಾ ವಿಧಾನ ಮತ್ತು ಸಂಬಂಧಗಳಲ್ಲಿ ಮೂಲಭೂತ ಬದಲಾವಣೆಯನ್ನು ತಂದವು. ಇದು ಪ್ರಕೃತಿಯ ಮೇಲೆ ಅತಿಯಾದ ಒತ್ತಡವನ್ನು ಹೇರಲು ಪ್ರಾರಂಭಿಸಿತು. ಇಲ್ಲಿಂದಲೇ ಪರಿಸರ ಬಿಕ್ಕಟ್ಟು ಸಣ್ಣ ಪ್ರಮಾಣದಲ್ಲಿ ಪ್ರಾರಂಭಗೊಂಡಿತಾದರೂ ಯಾರೂ ಈ ಸಂಬಂಧವಾಗಿ ತಲೆಕೆಡಿಸಿಕೊಳ್ಳಲೇ ಇಲ್ಲ. ನಂತರದ ದಿನಗಳಲ್ಲಿ ಪರಿಸರಕ್ಕೆ ಸಂಬಂಧಪಡದ ಅನೇಕ ವಿಚಾರಗಳೂ ಪರಿಸರದೊಳಗೆ ಸೇರಿಕೊಂಡವು. ಇಂದು ಅವು ಬೇರ್ಪಡಲಾರದಷ್ಟು ಗಟ್ಟಿಯಾಗಿ ಪರಿಸರ ಸಮಸ್ಯೆಯೊಡನೆ ಮಿಲನವಾಗಿವೆ. ಆದ್ದರಿಂದ ಪರಿಸರ ಬಿಕ್ಕಟ್ಟು ಒಮ್ಮಿಂದೊಮ್ಮೆಗ್ರೇ ಕಾಣಿಸಿಕೊಂಡಿಲ್ಲ.

ಅದಕ್ಕೊಂದು ಚರಿತ್ರೆಯೇ ಇದೆ. ಚರಿತ್ರೆಯುದ್ದಕ್ಕೂ ಅದು ಹೊಸ ಹೊಸ ಆಯಾಮಗಳನ್ನು ಪಡೆದುಕೊಂಡು ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿಕೊಂಡಿತು. ವಸಾಹತುಶಾಹಿ ರಾಷ್ಟ್ರಗಳು ಮತ್ತು ಸ್ಥಳೀಯ ಅರಸುಮನೆತನಗಳು ತಮ್ಮ ವ್ಯಾಪಾರ ಹಾಗೂ ರಾಜ್ಯವಿಸ್ತಾರದ ಧೋರಣೆಗಾಗಿ ಪರಿಸರವನ್ನು ನಿರ್ದಾಕ್ಷಿಣ್ಯವಾಗಿ ಬಳಸಿಕೊಂಡವು. ಮೌನವಾಗಿದ್ದ ಪ್ರಕೃತಿಯನ್ನು ಜ್ವಾಲಾಮುಖಿಯ ರೀತಿ ಆಸ್ಫೋಟಿಸುವಂತೆ ಮಾಡಿದವು. ಸ್ಥಳೀಯ ಅರಸು ಮನೆತನಗಳು ಪ್ರಾಮುಖ್ಯತೆಯನ್ನು ಕಳೆದುಕೊಂಡ ಬಳಿಕ ಸ್ಥಳೀಯ ಶ್ರೀಮಂತವರ್ಗ ಆ ಸ್ಥಾನವನ್ನು ತುಂಬಿಕೊಂಡಿತು. ನವವಸಾಹತುಶಾಹಿಯೊಡನೆ ಇವರು ಮುಖಾಮುಖಿ ಯಾದರು. ಪರಿಸರ ಚಳವಳಿಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಈ ಚಾರಿತ್ರಿಕ ಹಿನ್ನೆಲೆಯ ಕೊರತೆ ಎದ್ದು ಕಾಣುತ್ತದೆ. ಪರಿಸರ ಬಿಕ್ಕಟ್ಟನ್ನು ಅರ್ಥೈಸಿಕೊಳ್ಳಬೇಕಾದರೆ ಈ ಚಾರಿತ್ರಿಕ ಹಿನ್ನೆಲೆಯ ಅಗತ್ಯವಿದೆ.

ಇಪ್ಪತ್ತನೇ ಶತಮಾನದ ದ್ವಿತೀಯಾರ್ಧದಲ್ಲಿ ಕೈಗಾರಿಕೀಕರಣ ಮತ್ತು ನಗರೀಕರಣಗಳೇ ಪರಿಸರ ಬಿಕ್ಕಟ್ಟಿಗೆ ಮೂಲ ಕಾರಣಗಳು ಎಂಬಂತೆ ಕಂಡುಬರುತ್ತದೆ. ಇನ್ನೂ ಅನೇಕ ಕಾರಣಗಳಿದ್ದರೂ ಅವು ಒಂದಲ್ಲ ಒಂದು ರೀತಿಯಲ್ಲಿ ಇವೆರಡರೊಡನೆ ಬೆಸೆದುಕೊಂಡಿವೆ. ಗಣಿಗಾರಿಕೆ, ಜಲವಿದ್ಯುತ್‌ಯೋಜನೆ, ಅಣುವಿದ್ಯುತ್ ಯೋಜನೆ ಹಾಗೂ ಇನ್ನಿತರ ಯೋಜನೆಗಳ ಹೆಸರಿನಲ್ಲಿ ದಟ್ಟ ಅರಣ್ಯಗಳು ಜಲಾಶಯಗಳಾಗಿಯೊ ಇಲ್ಲವೇ ಕಾಂಕ್ರೀಟ್ ಕಾಡುಗಳಾಗಿಯೋ, ಅಣು ರಿಯಾಕ್ಟರ್‌ಗಳಾಗಿಯೋ ರೂಪ ತಳೆದಿವೆ. ಇವು ಕರ್ನಾಟಕದ ಬಹುತೇಕ ಎಲ್ಲಾ ಜಿಲ್ಲೆಗಳಿಗೂ ಹರಡಿಕೊಂಡಿವೆ. ಈ ಎಲ್ಲಾ ಯೋಜನೆಗಳು ರಾಜ್ಯದ ಆರ್ಥಿಕ ಪ್ರಗತಿಗೆ ಪೂರಕವಾಗಿದ್ದರೂ ವ್ಯವಸ್ಥಿತವಾಗಿ ಮತ್ತು ಯೋಜನಾಬದ್ಧವಾಗಿ ನಡೆಯಬೇಕಾಗಿತ್ತು. ಹೊಸ ಆರ್ಥಿಕ ನೀತಿಯೊಂದಿಗೆ ಮರುಪ್ರವೇಶ ಪಡೆದಿರುವ ಬಂಡವಾಳಶಾಹಿ ವ್ಯವಸ್ಥೆ ಏನೆಲ್ಲಾ ಅನಾಹುತಗಳಿಗೆ ಕಾರಣವಾಗುತ್ತದೆ ಎನ್ನುವ ನಿಜಾಂಶದ ಅರಿವು ಶ್ರೀಮಂತವರ್ಗ ಮತ್ತು ಸರಕಾರಕ್ಕೆ ಇರಬೇಕಾಗಿತ್ತು. ಕೈಗಾರಿಕೆಗಳನ್ನು ಸ್ಥಾಪಿಸುವ ಪ್ರಾರಂಭಿಕ ಹಂತದಲ್ಲಿ ಪ್ರಕೃತಿಯ ಮೇಲೆ ಅತಿಯಾದ ಭರವಸೆಯನ್ನು ಹೊಂದಿದ್ದೇ ಇಂದಿನ ಪರಿಸರ ಬಿಕ್ಕಟ್ಟಿಗೆ ಮೂಲ ಕಾರಣವಾಗಿದೆ. ಕೈಗಾರಿಕೆಗಳನ್ನು ಸ್ಥಾಪಿಸುವಾಗ ಅದರಿಂದ ಪರಿಸರದ ಮೇಲಾಗುವ ಪರಿಣಾಮಗಳ ಕುರಿತು ಯಾರೂ ತಲೆಕೆಡಿಸಿಕೊಳ್ಳಲೇ ಇಲ್ಲ. ಸ್ಥಳೀಯ ನಿವಾಸಿಗಳು ಹೋರಾಟ ನಡೆಸಿದರೂ ಅದು ಬೇರೆ ಬೇರೆ ಉದ್ದೇಶಗಳಿಗೆ ವೇದಿಕೆಯಾಯಿತು. ಅಧಿಕಾರಶಾಹಿ, ಸರಕಾರ ಮತ್ತು ಉದ್ಯಮಪತಿಗಳ ಕೂಡುವಿಕೆಯಿಂದಾಗಿ ಹೋರಾಟದ ಸ್ವರೂಪವೇ ಬದಲಾಯಿತು. ಶ್ರೀಮಂತವರ್ಗ ತನ್ನ ಅನುಕೂಲಕ್ಕೆ ತಕ್ಕಂತೆ ಚಳವಳಿಯಲ್ಲಿ ಮಾರ್ಪಾಡುಮಾಡಿಕೊಂಡಿತು. ಈ ಕಾರಣಗಳಿಂದಾಗಿ ಪರಿಸರ ಸಂಬಂಧಿತ ಚಳವಳಿಗಳನ್ನು ಕೆಳಕಂಡಂತೆ ವರ್ಗೀಕರಿಸ ಬಹುದಾಗಿದೆ.

೧. ಯಾವುದೋ ಒಂದು ಘಟನೆಯನ್ನು ವಿರೋಧಿಸಿ ನಡೆಯುವ ಚಳವಳಿ. ಇದು ತನ್ನ ಉದ್ದೇಶ ಈಡೇರಿದ ಬಳಿಕ ಸುಮ್ಮನಾಗುತ್ತದೆ. ಪರಿಸರ ಜಾಗತಿಕ ನೆಲೆಯಲ್ಲಿ ಚರ್ಚೆಗೊಳ್ಳುತ್ತಿರುವ ವಸ್ತು ಎನ್ನುವುದು ಇಲ್ಲಿ ಅಪ್ರಸ್ತುತ. ಸ್ವಂತ ಹಿತಾಸಕ್ತಿಗಳೇ ಇಲ್ಲಿ ಪರಿಸರ ಚಳವಳಿ ನಡೆಸುವಂತೆ ಪ್ರೇರೇಪಿಸುತ್ತಿರುತ್ತವೆ.

೨. ನಮ್ಮ ಪ್ರದೇಶದಲ್ಲಿ (ಒಂದು ಭೌಗೋಳಿಕ ಪ್ರದೇಶಕ್ಕೆ ಸೀಮಿತಗೊಂಡಂತೆ) ಉದ್ದಿಮೆಗಳು ಸ್ಥಾಪನೆಗೊಳ್ಳುವುದು ಬೇಡ ಎನ್ನುವ ಸಂಕುಚಿತ ಮನೋಭಾವದ ಚಳವಳಿಗಳು. ಇದು ಮುಂದುವರಿದ ರಾಷ್ಟ್ರಗಳು ಪರಿಸರ ಮಾಲಿನ್ಯ ಉಂಟುಮಾಡಬಹುದಾದ ಉದ್ದಿಮೆಗಳನ್ನು ಬಡರಾಷ್ಟ್ರಗಳಲ್ಲಿ ಸ್ಥಾಪಿಸಿದಂತೆ ಆಗುತ್ತದೆ. ಇದರಿಂದ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸಾಧ್ಯವಿಲ್ಲ. ಅದೇ ರೀತಿ ಪರಿಸರ ಮಾಲಿನ್ಯ ಎನ್ನುವುದು ಒಂದು ಭೌಗೋಳಿಕ ಪ್ರದೇಶಕ್ಕೆ ಸಂಬಂಧಪಟ್ಟ ವಿಷಯವೂ ಅಲ್ಲ.

೩. ಪರಿಸರವನ್ನೇ ವಸ್ತುವನ್ನಾಗಿರಿಸಿಕೊಂಡು ನಡೆಯುವ ನಿರಂತರ ಹೋರಾಟ.

ಈ ರೀತಿ ಹೋರಾಟ ನಡೆಸುವವರ ಸಂಖ್ಯೆ ತುಂಬಾ ಕಡಿಮೆ. ಇವರು ನಿರಂತರವಾಗಿ ಸರಕಾರ, ಅಧಿಕಾರಶಾಹಿ ಮತ್ತು ಉದ್ಯಮಪತಿಗಳ ವಿರೋಧವನ್ನು ಎದುರಿಸಬೇಕಾಗುತ್ತದೆ. ಇವರಲ್ಲೂ ಕೆಲವರು ಪ್ರಚಾರಪ್ರೀಯರಿರುತ್ತಾರೆ. ಇನ್ನು ಕೆಲವರು ಲೇಖನ, ಪುಸ್ತಕಗಳನ್ನು ಬರೆಯುತ್ತಾ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ಪರಿಸರವಾದಿಗಳಾಗಿಬಿಡುತ್ತಾರೆ. ಪರಿಸರ ಮಾಲಿನ್ಯದ ಹೆಸರಿನಲ್ಲಿ ಬೇರೆ ಬೇರೆ ಮೂಲಗಳಿಂದ ಹಣ ಸಂಗ್ರಹಿಸುವ ವರ್ಗವೂ ಇಲ್ಲಿದೆ. ಇವರಿಗೆ ಪರಿಸರ ಚಳವಳಿಗಳು ನಿರಂತರವಾಗಿ ನಡೆಯುತ್ತಿರಬೇಕು. ಕೆಲವು ಮಧ್ಯವರ್ತಿಗಳೂ ಈ ಗುಂಪಿನಲ್ಲಿರುತ್ತಾರೆ. ಪುನರ್ವಸತಿ ಮುಂತಾದ ಸಮಸ್ಯೆಗಳ ಸಂದರ್ಭದಲ್ಲಿ ಇವರು ಸಕ್ರೀಯವಾಗಿ ಭಾಗವಹಿಸುತ್ತಾರೆ. ಆದರೆ ಇವರಿಗೆ ಖಚಿತವಾದ ಸೈದ್ಧಾಂತಿಕ ನಿಲುವುಗಳಿಲ್ಲ. ಒಂದು ಸಂದರ್ಭದಲ್ಲಿ ನಿರಾಶ್ರಿತರ ಪರವಾಗಿದ್ದರೆ ಇನ್ನೊಮ್ಮೆ ಉದ್ಯಮಪತಿಗಳ ಪರವಾಗಿರುತ್ತಾರೆ. ಅದೇ ರೀತಿ ಸರಕಾರಕ್ಕೂ ಸ್ಥಳೀಯ ಮಾಹಿತಿಗಳನ್ನು ಒದಗಿಸುತ್ತಿರುತ್ತಾರೆ.

ಈ ರೀತಿಯ ಬೆಳವಣಿಗೆಗಳನ್ನು ನಗರೀಕರಣದ ಸಂದರ್ಭದಲ್ಲೂ ಕಾಣಬಹುದಾಗಿದೆ. ನಗರಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿವೆಯಾದರೂ ಇಂದು ಅವುಗಳ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಕೈಗಾರಿಕಾ ಕ್ಷೇತ್ರದಲ್ಲಾದ ಕ್ರಾಂತಿಯಿಂದಾಗಿ ನಗರೀಕರಣ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಉಂಟಾದವು. ಬೃಹತ್ ಉದ್ದಿಮೆಗಳು ನಗರ ಕೇಂದ್ರಗಳಲ್ಲಿ ಸ್ಥಾಪನೆಗೊಳ್ಳುತ್ತಿವೆ. ಸಾವಿರಾರು ಎಕರೆ ಫಲವತ್ತಾದ ಕೃಷಿಭೂಮಿ ಈ ಉದ್ದೇಶಕ್ಕಾಗಿ ಬಳಕೆಯಾಗುತ್ತಿದೆ. ಇದರ ವಿರುದ್ಧ ವ್ಯಾಪಕ ಚಳವಳಿ ಪ್ರಾರಂಭಗೊಂಡಿದೆ. ಚಳವಳಿಯ ಸ್ವರೂಪವನ್ನು ಈ ಹಿಂದೆಯೇ ವಿವರಿಸಲಾಗಿದೆ. ನಗರ ಪ್ರದೇಶಗಳಲ್ಲಿ ಸೃಷ್ಟಿಯಾಗಿರುವ ಕೊಳೆಗೇರಿ ಸಮಸ್ಯೆ ಪರಿಸರ ಮಾಲಿನ್ಯಕ್ಕೆ ಹೊಸ ಸೇರ್ಪಡೆಯಾಗಿದೆ. ಒಂದೇ ಸಮನೆ ಬೆಳೆಯುತ್ತಿರುವ ಜನಸಂಖ್ಯೆ, ವಾಹನಗಳ ದಟ್ಟಣೆ, ಬೃಹತ್ ಕಾರ್ಖಾನೆಗಳು ಇವೆಲ್ಲಾ ನಗರ ಜೀವನವನ್ನು ಸಂಕೀರ್ಣಗೊಳಿಸಿವೆ. ಇದಕ್ಕೆ ಸುತ್ತಮುತ್ತಲ ಪ್ರಾಂತ್ಯದ ಆರ್ಥಿಕ ಹಾಗೂ ಪರಿಸರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡೇ ಯೋಜನಾ ಪ್ರಕ್ರಿಯೆ ಆರಂಭಿಸಬೇಕಾಗುತ್ತದೆ. ನಗರವನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ಹೊರಗಿನ ಪರಿಧಿಯನ್ನು ವೀಕ್ಷಿಸುವಂಥ ಯೋಜನೆಯ ಬದಲು, ಹೊರಗಿನ ವಿಶಾಲಕ್ಷೇತ್ರದಲ್ಲಿ ನಗರ ವಸತಿಯನ್ನು ಹೇಗೆ ಅಳವಡಿಸಬೇಕೆಂಬ ಯೋಜನೆ ರೂಪಿತವಾಗಬೇಕು. ಅದೇರೀತಿ ನಗರವಾಸಿಗಳ ವಿವಿಧ

ಚಟುವಟಿಕೆಗಳ ಮೇಲೆ ಸುತ್ತಲ ಪರಿಸರದ ಪ್ರಭಾವ ಹೇಗೆ ಆಗುತ್ತದೆಂದು ಪರಿಶೀಲಿಸಿ, ಇಂಥ ಚಟುವಟಿಕೆಗಳ ಆಂತರಿಕ ಸಂಬಂಧ ಹೊರಗಿನ ಪ್ರಪಂಚದ ಮೇಲೆ ಬೀರಬಹುದಾದ ಪರಿಣಾಮವನ್ನು ನಿರ್ಣಯಿಸಬೇಕು. ನಗರದ ಅಸ್ತಿತ್ವವು ಅದರ ಹೊರಗಿನ ಪರಿಸರದೊಂದಿಗೆ ತಾದಾತ್ಮ್ಯ ಹೊಂದಿರಬೇಕು. ಇದರಿಂದ ನಗರೀಕರಣದಿಂದಾಗಿ ಪರಿಸರದ ಮೇಲಾಗುವ ದುಷ್ಪರಿಣಾಮಗಳನ್ನು ಮಿತಿಗೊಳಿಸಬಲ್ಲ ಆರ್ಥಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಾಧ್ಯ. ಅಂದರೆ ಮನುಷ್ಯ ತಾನು ನಿರ್ಮಿಸಿದ ಕೃತಕ ಪರಿಸರದ ಕುರಿತು ಮರುಚಿಂತನೆ ನಡೆಸುವ ಅಗತ್ಯವಿದೆ.

ಪರಿಸರದ ಮೇಲಾಗುತ್ತಿರುವ ಮನುಷ್ಯಪ್ರೇರಿತ ಒತ್ತಡಗಳು ಈಗಾಗಲೇ ಜಾಗತಿಕ ಸ್ವರೂಪವನ್ನು ಪಡೆದುಕೊಂಡಿವೆ. ಮನುಷ್ಯ ಬದುಕಲು ಬೇಕಾಗಿರುವ ಗಾಳಿ, ನೀರು, ಭೂಮಿ ಪ್ರಾಮುಖ್ಯತೆಯನ್ನು ಕಳೆದುಕೊಂಡಿವೆ. ಇವು ಯಾವಾಗಲೂ ಇರುತ್ತವೆ ಮತ್ತು ಸದಾ ಉಪಯೋಗಿಸಿಕೊಳ್ಳಬಹುದು ಎನ್ನುವ ಭರವಸೆಯನ್ನು ಹೊಂದಿರುವುದೇ ಇದಕ್ಕೆ ಕಾರಣ. ಈ ಹಿನ್ನೆಲೆಯಿಂದಲೇ ಕೈಗಾರಿಕಾ ನೀತಿಗಳನ್ನು ರೂಪುಗೊಳಿಸಲಾಯಿತು. ಕೈಗಾರಿಕಾ ನೀತಿಗಳಿಗೆ ತಳಹದಿಯಾಗಿರುವ ಪ್ರಕೃತಿ ಇಲ್ಲಿ ಯಾವ ಸ್ಥಾನವನ್ನೂ ಪಡೆದುಕೊಂಡಿಲ್ಲ. ಇದು ಮನುಷ್ಯ ಪರಿಸರವನ್ನು ಅರ್ಥೈಸಿಕೊಂಡ ಬಗೆ ಮತ್ತು ಅದರೊಡನೆ ಹೊಂದಿರುವ ಸಂಬಂಧಗಳ ಪರಿಚಯವನ್ನು ಮಾಡಿಸುತ್ತದೆ. ಪ್ರಕೃತಿ ಕೆಲವೊಂದು ಸಂದರ್ಭಗಳಲ್ಲಿ ಅನಿರೀಕ್ಷಿತವಾಗಿ ಮಾನವನ ವಿರುದ್ಧ ಕ್ಷಿಪ್ರ ಕಾರ್ಯಾಚರಣೆ ಕೈಗೊಳ್ಳುತ್ತದೆ. ಅವುಗಳೆಂದರೆ ಭೂಕಂಪ, ಜ್ವಾಲಾಮುಖಿ, ಬಿರುಗಾಳಿ, ಭೂಕುಸಿತ, ಸಮುದ್ರ ಕೊರೆತ ಮುಂತಾದ ಆಕಸ್ಮಿಕಗಳು. ಮನುಷ್ಯ ಎಷ್ಟೇ ಪ್ರಗತಿಯನ್ನು ಹೊಂದಿದರೂ, ಆತನ ಕಣ್ಣೆದುರಿಗೇ ಇವುಗಳು ಘಟಿಸುತ್ತವೆ. ಆದರೂ ಪ್ರಕೃತಿಯ ಮೇಲೆ ಮಾನವನ ಹಸ್ತಕ್ಷೇಪದಿಂದಾಗಿ ಉಂಟಾಗಿರುವ ಪರಿಸರ ಮಾಲಿನ್ಯವೇ ಹೆಚ್ಚು ಚರ್ಚೆಗೆ ಒಳಪಟ್ಟಿದೆ. ನೈಸರ್ಗಿಕ ವಿಕೋಪಗಳು ಸ್ವಾಭಾವಿಕವಾದದ್ದು, ಅದರಲ್ಲಿ ಮಾನವನ ಕೈವಾಡ ಇಲ್ಲವೆಂದೇ ಇತ್ತೀಚಿನವರೆಗೂ ನಂಬಲಾಗಿತ್ತು. ಇಲ್ಲಿ ಎಲ್ಲಾ ವಿಕೋಪಗಳಲ್ಲೂ ಮಾನವನ ಪಾತ್ರ ಇದೆ ಎಂದಲ್ಲವಾದರೂ ಭೂಕಂಪ, ಭೂಕುಸಿತ ಮುಂತಾದವುಗಳಲ್ಲಿ ಮಾನವನ ಪಾತ್ರ ಇದೆ ಎನ್ನುವ ನಿಜಾಂಶ ಇಂದಿನ ಅಧ್ಯಯನಗಳಿಂದ ಸಾಬೀತುಗೊಂಡಿದೆ. ಜಲಾಶಯಗಳ ನಿರ್ಮಾಣದಿಂದಾಗಿ ನೆಲದಾಳಕ್ಕೆ ನೀರು ಇಳಿದು ಶಿಲಾಸರಿತಗಳು ಹೆಚ್ಚಾಗಿ ಭೂಕಂಪನಗಳು ಆಗುತ್ತವೆ. ಅದೇರೀತಿ ಪರಮಾಣು ವಸ್ತುಗಳನ್ನು ಸ್ಫೋಟಿಸುವುದರಿಂದಲೂ ಭೂಕಂಪಗಳಾಗುತ್ತವೆ. ಅರಣ್ಯನಾಶದಿಂದಾಗಿ ಭೂಕುಸಿತಗಳು ಉಂಟಾಗುತ್ತವೆ. ಆದ್ದರಿಂದ ನೈಸರ್ಗಿಕ ವಿಕೋಪಗಳ ಬಗ್ಗೆ ನಾವು ಈಗಾಗಲೇ ತೆಗೆದುಕೊಂಡಿರುವ ತೀರ್ಮಾನಗಳನ್ನು ಪುನರ್ವಿಮರ್ಶಿಸಬೇಕಾಗಿದೆ. ಇನ್ನೊಂದು ಪ್ರಶ್ನೆ ಪುನರ್ವಸತಿಗೆ ಸಂಬಂಧಿಸಿದ್ದು. ಪ್ರಕೃತಿಯ ಮೇಲೆ ಮಾನವನ ಹಸ್ತಕ್ಷೇಪದ ಮತ್ತು ನೈಸರ್ಗಿಕ ವಿಕೋಪದ ಎರಡೂ ಸಂದರ್ಭಗಳಲ್ಲಿ ಪುನರ್ವಸತಿ ಸಮಸ್ಯೆ ಎದುರಾಗುತ್ತದೆ. ಪರಿಹಾರ ಒದಗಿಸುವಲ್ಲಿ ಅಸಮಾಧಾನ, ಮಧ್ಯವರ್ತಿಗಳ ಪ್ರವೇಶ, ಸರಕಾರದ ವಿಳಂಬ ನೀತಿ ಮುಂತಾದ ಕಾರಣಗಳಿಗಾಗಿ ಚಳವಳಿಗಳು ನಡೆಯುತ್ತವೆ. ಎರಡೂ ಸಂದರ್ಭಗಳಲ್ಲಿಯೂ ಸ್ವಂತ ಹಿತಾಸಕ್ತಿಗಳು ಮತ್ತು ರಾಜಕೀಯದ ಪ್ರವೇಶವನ್ನು ಕಾಣುತ್ತೇವೆ. ಈ ಕಾರಣಕ್ಕಾಗಿಯೇ ಇವುಗಳ ಸಂದರ್ಭದಲ್ಲಿ ನಡೆಯುವ

ಚಳವಳಿಗಳ ಅಧ್ಯಯನ ಪ್ರಾಮುಖ್ಯವೂ, ಕುತೂಹಲಕಾರಿಯೂ ಆಗಿದೆ. ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಈ ಬೆಳವಣಿಗೆಗಳನ್ನು ಅಪಾಯಕಾರಿ ಎಂದೇ ಪರಿಗಣಿಸಬೇಕಾಗುತ್ತದೆ.

ಕರ್ನಾಟಕ ಏಕೀಕರಣಗೊಂಡ ನಂತರ ಆರ್ಥಿಕಾಭಿವೃದ್ಧಿಯನ್ನು ತ್ವರಿತಗೊಳಿಸುವ ಅನೇಕ ಪ್ರಯತ್ನಗಳು ನಡೆದವು. ಆದರೆ ಇಂದಿಗೂ ಆರ್ಥಿಕ ಅಸಮಾನತೆ ಮುಂದುವರಿದುಕೊಂಡೇ ಬಂದಿದೆ. ಈ ಅಸಮಾನತೆ ಅನೇಕ ಚಳವಳಿಗಳನ್ನು ಹುಟ್ಟಿಹಾಕಿರುವುದಂತೂ ನಿಜ. ಒಂದು ಪ್ರದೇಶದ ಆರ್ಥಿಕಾಭಿವೃದ್ಧಿಯ ಸ್ವರೂಪ ಮತ್ತು ವೇಗವನ್ನು ನಿರ್ಧರಿಸುವ ಅಂಶವೆಂದರೆ ಅಲ್ಲಿನ ನಿಸರ್ಗ ಸಂಪತ್ತು. ಆದರೆ ನಿಸರ್ಗ ಸಂಪತ್ತಿನ ಗಾತ್ರ ಮತ್ತು ಗುಣ ಹಾಗೂ ಅಬಿವೃದ್ಧಿ ಶಕ್ತಿಗಳ ಗಾತ್ರ ಮತ್ತು ಗುಣ ಇವೆರಡೂ ಮೊದಲೇ ನಿರ್ಧಾರವಾಗಬೇಕು. ಇವುಗಳ ಆಧಾರದ ಮೇಲೆ ಪರಿಸರ ನೀತಿಯನ್ನು ಅಥವಾ ಅಭಿವೃದ್ಧಿಯ ಸ್ವರೂಪನ್ನು ನಿರ್ಧರಿಸಬಹುದು. ಇಲ್ಲಿ ಮಾನವ ಶ್ರಮ, ಯೋಜನೆ ಹಾಗೂ ಬಂಡವಾಳಗಳು ಸಂಘಟಿತ ಕ್ರಿಯೆ ನಡೆಸುತ್ತಿರುತ್ತವೆ. ಕೇವಲ ಅಭಿವೃದ್ಧಿಯ ವೇಗ ಮತ್ತು ಗತಿಯೇ ಪ್ರಧಾನವಾದರೆ ಪ್ರಕೃತಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ. ಆದ್ದರಿಂದ ಇದಕ್ಕೆ ಮೊದಲೇ ಪ್ರಕೃತಿಯ ಗಾತ್ರ ಮತ್ತು ಗುಣಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಪರಿಸರ ಚಳವಳಿಗಳು ಈ ಪ್ರಮೇಯಗಳನ್ನು ಹೊಂದಿರಬೇಕು. ಆದಾಗಲೇ ಚಳವಳಿಗಳಿಗೆ ಅಧಿಕೃತತೆ ಲಭಿಸಲು ಸಾಧ್ಯ. ಆದರೆ ನಮ್ಮಲ್ಲಿ ಯೋಜನೆಗಳನ್ನು ಈ ಪ್ರಮೇಯಗಳಿಗೆ ವಿರುದ್ಧವಾಗಿ ರೂಪಿಸಲಾಯಿತು. ಕೃಷಿ ಇಲ್ಲವೇ ಕೈಗಾರಿಕೆಗೆ ಸಂಬಂಧಿಸಿದ ಯೋಜನೆಗಳನ್ನು ಕ್ಷೇತ್ರಕಾರ್ಯ ನಡೆಸದೆ ರಾಜಧಾನಿಯಲ್ಲಿ ಅದರಲ್ಲೂ ಪಂಚತಾರಾ ಹೋಟೆಲುಗಳ ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ರಚಿಸಲಾಯಿತು. ಇದರಿಂದ ಮತ್ತೊಮ್ಮೆ ಅನ್ಯಾಯಕ್ಕೊಳಗಾದದ್ದು ಬಡವರ್ಗದ ಜನತೆ. ಈ ಯೋಜನೆಗಳಿಂದಾಗಿ ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ಐಶ್ವರ್ಯವಂತ ವರ್ಗ ಸಮಾಜದ ಮೇಲಿನ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿಕೊಂಡಿತು. ಈ ಶ್ರೀಮಂತ ವರ್ಗ ಸಾಂಪ್ರದಾಯಕ ಚೌಕಟ್ಟಿನಲ್ಲಿಯೇ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಆದರೆ ಆಧುನಿಕತೆಯ ಎಲ್ಲಾ ಲಾಭಗಳನ್ನೂ ಪಡೆದುಕೊಂಡಿರುತ್ತದೆ.

ಸಂಪ್ರದಾಯದ ಚೌಕಟ್ಟಿನಲ್ಲಿ ಆಧುನಿಕತೆಯ ಲಾಭವನ್ನು ಪಡೆದುಕೊಳ್ಳುವ ವರ್ಗವೇ ಅವೆರಡೂ ಪರಸ್ಪರ ವಿರುದ್ಧವಾದ ವಿಷಯಗಳು ಎಂಬ ವಾದವನ್ನೂ ಮುಂದಿಡುತ್ತದೆ. ಈ ವಾದಕ್ಕೆ ಪರಿಸರ ಚಳವಳಿಗಳೂ ವಸ್ತುಗಳಾಗಿವೆ. ಡಾ. ಆರ್. ಶಶಿಧರ ಅವರು ತಮ್ಮ "ಸಂಪ್ರದಾಯ ಮತ್ತು ಆಧುನಿಕತೆ" ಎಂಬ ಲೇಖನದಲ್ಲಿ ಈ ವಿಷಯದ ಕುರಿತು ವಿಶ್ಲೇಷಣೆ ನಡೆಸಿದ್ದಾರೆ (ಶಶಿಧರ, ೧೯೯೭). ಅವರ ಪ್ರಕಾರ, 'ಸಂಪ್ರದಾಯ ಮತ್ತು ಆಧುನಿಕತೆ ಎನ್ನುವ ಎರಡು ಶಬ್ದಗಳು ಪರಸ್ಪರ ಡಿಕ್ಕಿ ಹೊಡೆಯುವ ಬೇರೆ ಬೇರೆಯಾದ ಶಬ್ದಗಳಲ್ಲ. ಒಂದು ಇನ್ನೊಂದನ್ನು ಪರಸ್ಪರ ಹೊರಗಿಡೋದಿಲ್ಲ; ಒಂದರ ಒಳಗೇ ಇನ್ನೊಂದಿರುತ್ತದೆ. ಒಂದು ಇನ್ನೊಂದನ್ನು ಡಿಫೈನ್ ಮಾಡುತ್ತೆ; ಒಂದು ಇರೋದ್ರಿಂದಲೇ ಇನ್ನೊಂದನ್ನು ಯೋಚನೆ ಮಾಡೋದು ನಮಗೆ ಸಾಧ್ಯವಾಗುತ್ತೆ.' ಇವೆರಡೂ ಬೇರೆ ಬೇರೆ ಶಬ್ದಗಳು ಹಾಗೂ ಆಧುನಿಕತೆ ಅಪಾಯಕಾರಿ ಎನ್ನುವ ವಾದ ಮಾಡುತ್ತಿರುವವರು

ನವಸಂಪ್ರದಾಯವಾದಿಗಳು ಮತ್ತು ಪೋಸ್ಟ್ ಮಾಡರ್ನಿಸ್ಟರು. ಇವರಿಗೆ ಈ ಪ್ರಶ್ನೆ ಯಜಮಾನಿಕೆಯ, ಸಾಮಾಜಿಕ ಪ್ರತಿಷ್ಠೆ, ಗೌರವದ ದೃಷ್ಟಿಯಿಂದ ಪ್ರಾಮುಖ್ಯವೆನಿಸುತ್ತದೆ. ಇವರ್ಯಾರೂ ಆಧುನಿಕತೆಯನ್ನು ಆರಂಭಿಕ ಹಂತದಲ್ಲಿ ವಿರೋಧಿಸಿಲ್ಲ. ಅದರ ಸಂಪೂರ್ಣ ಲಾಭಪಡೆದುಕೊಂಡರು. ಸಮಾಜದ ಕೆಳಸ್ತರದ ಜನರಿಗೆ ಆಧುನಿಕತೆಯಿಂದ ಲಾಭವಾಗುವುದನ್ನು ಇವರು ಸಹಿಸುವುದಿಲ್ಲ. ಉತ್ಪಾದನಾ ವ್ಯವಸ್ಥೆ ಹಿಂದಿನಂತೆಯೇ ಬೆಳೆದುಕೊಂಡು ಹೋಗಬೇಕೆನ್ನುವುದೇ ಇಲ್ಲಿನ ಉದ್ದೇಶ. ಆದರೆ ಇದರ ಜೊತೆಗೆ ಜನರ ಸಹಾನುಭೂತಿಯನ್ನು ಕಳೆದುಕೊಳ್ಳುತ್ತೇವೇನೋ ಎನ್ನುವ ಭಯವೂ ಇದೆ. ಈ ರೀತಿಯ ಸಿದ್ಧಾಂತಗಳು ಹದಿನೆಂಟನೆಯ ಶತಮಾನದ ಯುರೋಪಿನಲ್ಲಿಯೇ ಕಾಣಿಸಿಕೊಂಡಿದ್ದವು. ಇಂದು ಪರಿಸರದಂತಹ ಅನೇಕ ಚಳವಳಿಗಳು ಈ ಸಿದ್ಧಾಂತಗಳ ಅನುಷ್ಠಾನಕ್ಕೆ ವೇದಿಕೆಗಳಾಗಿವೆ. ಈ ಪ್ರಯೋಗ ಮೇಲ್ನೋಟಕ್ಕೆ ಕಂಡುಬರದಿದ್ದರೂ ಚಳವಳಿಗಳ ಸ್ವರೂಪವೇ ಇದಕ್ಕೆ ಸಾಕ್ಷಿಯಾಗಿದೆ.

ಇಂದು ಕೈಗಾರಿಕೀಕರಣದಿಂದಾಗಿ ಪರಿಸರ ನಾಶವಾಗುತ್ತಿದೆ ಎಂದು ಗೊಣಗುತ್ತಿರುವ ಜನರೇ ಆರಂಭಿಕ ಹಂತದಲ್ಲಿ ಕೈಗಾರಿಕೆಗಳನ್ನು ಸ್ವಾಗತಿಸಿದರು. ಆಗ ಅವರಿಗೆ ಪ್ರಕೃತಿ ಹಾಳಾಗ್ತಾ ಇದೆ ಎನ್ನುವ ಭಾವನೆ ಮೂಡಿರಲಿಲ್ಲ. ಆದರೆ ಈಗ ಪರಿಸರ ನಾಶವಾಗುತ್ತಿದೆ ಎನ್ನುವ ಬ್ಯಾನರ್‌ನಡಿಯಲ್ಲಿ ಚಳವಳಿ ನಡೆಸುತ್ತಿದ್ದಾರೆ. ಇದು ತಾವು ಮಾಡಿದ ತಪ್ಪನ್ನು ಇನ್ನೊಬ್ಬರ ಮೇಲೆ ಹೇರುವ ಪ್ರಯತ್ನ. ಆ ಮೂಲಕ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿಯೂ ನಿರ್ಣಾಯಕ ಪಾತ್ರವನ್ನು ವಹಿಸುವ ಉದ್ದೇಶ. ಈ ಉದ್ದೇಶವೇ ಜನಸಾಮಾನ್ಯರು ವಿಜ್ಞಾನ, ತಂತ್ರಜ್ಞಾನವನ್ನು ದ್ವೇಷಿಸುವಂತೆ ಮಾಡಿತು. ಆದರೆ ನಿಜಾರ್ಥದಲ್ಲಿ ವಿಜ್ಞಾನವಾಗಲೀ, ತಂತ್ರಜ್ಞಾನವಾಗಲೀ ಕೆಟ್ಟದ್ದನ್ನು ಮಾಡಿಲ್ಲ. ಅದನ್ನು ಯಾವ ರೀತಿ ಉಪಯೋಗಿಸಿಕೊಳ್ಳಲಾಗಿದೆ ಎನ್ನುವ ಪ್ರಶ್ನೆಯಲ್ಲಿಯೇ ಉತ್ತರವೂ ಅಡಕವಾಗಿದೆ. ಕೇವಲ ಯಾವುದೋ ಒಂದು ಗುಂಪಿನ ಹಿತಾಸಕ್ತಿ ಮಾತ್ರ ಮುಖ್ಯವಾಗಿದ್ದಾಗ ಈ ರೀತಿಯ ತಪ್ಪುಗಳಾಗುವುದು ಸಹಜ. ಇದನ್ನು ಗಮನಿಸಿದರೆ ಪರಿಸರ ನಾಶವಾಗುತ್ತಿರುವುದು ಸಾಂಸ್ಕೃತಿಕ ರಾಜಕೀಯದಿಂದಲೇ ಹೊರತು ಆಧುನೀಕತೆಯಿಂದಲ್ಲ ಎಂದೆನಿಸುತ್ತದೆ. ಮೇಲ್ವರ್ಗದ ಸಂಕುಚಿತ ಮನೋಭಾವನೆಯೇ ಪರಿಸರ ಚಳವಳಿಗಳ ಹುಟ್ಟಿಗೆ ಹಾಗೂ ಅವುಗಳ ಅನಿಯಂತ್ರಿತ, ಅವ್ಯವಸ್ಥಿತ ಬೆಳವಣಿಗೆಗೆ ಕಾರಣವಾಗಿ ಕಂಡುಬರುತ್ತದೆ. ಇವುಗಳಿಂದ ಯಾವ ನಿರ್ದಿಷ್ಟ ಫಲಿತಾಂಶವನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿಯೇ ಹಳೆಯ ಮೌಲ್ಯಗಳು, ಹಳೆಯ ಜ್ಞಾನ ಪರಂಪರೆ, ನಮ್ಮ ಸಂಸ್ಕೃತಿ ಮುಂತಾದ ಹೇಳಿಕೆಗಳು ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿವೆ. ವೈಜ್ಞಾನಿಕ ದೃಷ್ಟಿಕೋನವಾಗಲೀ, ಸಮಾನತೆಯ ತತ್ವವಾಗಲೀ ಇಲ್ಲಿ ಕಾಣಿಸಿಕೊಳ್ಳುವುದಿಲ್ಲ. ಇದೊಂದು ಹಳೆಯದನ್ನು ಪುನರ್‌ಪರಿಶೀಲಿಸುವ ಪ್ರಯತ್ನವಾಗಿದೆ. ಇದರರ್ಥ ಹಳೆಯ ಸಾಮಾಜಿಕ - ಆರ್ಥಿಕ ಸಂಬಂಧಗಳ ಪುನರ್‌ಪರಿಶೀಲನೆ ಎಂದಲ್ಲ. ಈ ಪ್ರಯತ್ನ ಸಾಮಾಜಿಕ ಗೊಂದಲವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿದೆ. ಇದನ್ನು ಪರಿಸರ ಮಾಲಿನ್ಯ ಎನ್ನುವುದಕ್ಕಿಂತಲೂ ಮನಸ್ಸು ಮಾಲಿನ್ಯಕ್ಕೀಡಾಗಿದೆ ಎನ್ನುವುದೇ ಹೆಚ್ಚು ಅರ್ಥವತ್ತಾಗಿರುತ್ತದೆ.

ಪರಿಸರ ಮಾಲಿನ್ಯದ ದೃಷ್ಟಿಯಿಂದ ರಾಸಾಯನಿಕ ಕೃಷಿಯ ಬದಲಾಗಿ ಸಾವಯವ ಕೃಷಿ ಇಂದು ಹೆಚ್ಚು ಪ್ರಚಾರಗೊಳ್ಳುತ್ತಿದೆ. ಇಲ್ಲೂ ಸಂಪ್ರದಾಯವಾದಿಗಳು ನುಸುಳಿ ಕೊಂಡಿರುವುದನ್ನು ಗಮನಿಸಬಹುದು. ಸಾವಯವ ಕೃಷಿಯನ್ನು ಸಾಂಪ್ರದಾಯಕ ಕೃಷಿ ಎಂಬ ಹೆಸರಿನಿಂದ ಕರೆದು ಸಂಪ್ರದಾಯದ ಚೌಕಟ್ಟಿನಲ್ಲಿಯೇ ಇರುವಂತೆ ಮಾಡುವ ಉದ್ದೇಶವನ್ನು ಈ ಮೂಲಭೂತವಾದಿಗಳು ಹೊಂದಿದ್ದಾರೆ. ಸಾವಯವ ಕೃಷಿ ಪದ್ಧತಿ ಸಾಂಪ್ರದಾಯಕ ಕೃಷಿ ಪದ್ಧತಿಯಾಗಿ ಪರಿವರ್ತನೆಗೊಂಡು ಬೆಳೆಗಳನ್ನು ಬೆಳೆಯುವುದಕ್ಕೆ ಮಾತ್ರ ಸೀಮಿತವಾಗಿರದೆ ಬದುಕಿನ ಇತರ ಕ್ಷೇತ್ರಗಳಿಗೂ ವಿಸ್ತರಿಸುತ್ತಾ ಹೋಗಿದೆ. ರಾಸಾಯನಿಕ ಕೃಷಿಯನ್ನು ವಿರೋಧಿಸುವ ಭರದಲ್ಲಿ ವೈಜ್ಞಾನಿಕ ಚಿಂತನೆ ಬದಿಗೆ ಸರಿದು ಹಳೆಯ ಸಂಪ್ರದಾಯಗಳು ಮುಖ್ಯ ಭೂಮಿಕೆಗೆ ಬರುವ ಹುನ್ನಾರಗಳು ನಡೆದಿವೆ. ಹೀಗಾದಲ್ಲಿ ಈ ಪದ್ಧತಿ ಭತ್ತ, ಗೋಧಿ ಬೆಳೆಯುವಲ್ಲಿ ಮಾತ್ರ ಸೀಮಿತವಾಗದೆ ಮಾನವನ ಮನಸ್ಸನ್ನು ಸಂಪ್ರದಾಯದ ಹಿನ್ನೆಲೆಯಲ್ಲಿಯೇ ಬೆಳೆಸುವುದು ಖಂಡಿತ. ಸಾವಯವ ಕೃಷಿ ಬಹುಬೇಗ ಮೂಲಭೂತವಾದಿಗಳ ಹಿಡಿತಕ್ಕೆ ಬರುವ ಎಲ್ಲಾ ಸಾಧ್ಯತೆಗಳೂ ಕಂಡುಬರುತ್ತಿದ್ದು, ಪರಿಸರ ಸಂಘಟನೆಗಳು ಹಾಗೂ ರೈತರು ಎಚ್ಚರವಹಿಸಬೇಕಾಗಿದೆ. ಸಾವಯವ ಕೃಷಿಯೂ ವೈಜ್ಞಾನಿಕವಾದದ್ದು ಎನ್ನುವ ದೃಢವಾದ ನಂಬಿಕೆ ರೈತರಲ್ಲಿ ಮೂಡಬೇಕಾಗಿದೆ. ಪರಿಸರ ನೈರ್ಮಲ್ಯವನ್ನು ಕಾಪಾಡುವ ಯಾವ ವಿಧಾನವಾದರೂ ಅದು ವೈಜ್ಞಾನಿಕ ವಿವೇಚನೆಯಲ್ಲಿ ಇರಬೇಕೇ ವಿನಹ ಧಾರ್ಮಿಕ ಶಾಸ್ತ್ರಾಚಾರಗಳಲ್ಲಿ ಅಲ್ಲ. ಸಹಜ ಕೃಷಿ, ಸಾವಯವ ಕೃಷಿ ಅಥವಾ ರಾಸಾಯನಿಕ ಕೃಷಿ ಪದ್ಧತಿಗಳು ವೈಜ್ಞಾನಿಕ ಮನೋಧರ್ಮ ಮತ್ತು ಪರಿಸರ ಪ್ರಜ್ಞೆಯನ್ನು ಹೊಂದಿರಬೇಕಾಗುತ್ತದೆ. ಜಪಾನಿನ ವಿಜ್ಞಾನಿ-ಕೃಷಿಕ ಮಸಾನೋಬು ಫುಕುವೋಕರವರು ಸುಮಾರು ಮೂವತ್ತೈದು ವರ್ಷಗಳ ಹಿಂದೆಯೇ ಸಹಜ ಕೃಷಿಯ ಕುರಿತಾಗಿ ಜನರ ಗಮನ ಸೆಳೆದಿದ್ದಾರೆ. ರಾಸಾಯನಿಕ ಗೊಬ್ಬರಗಳು, ಕ್ರಿಮಿ-ಕೀಟನಾಶಕಗಳಿಂದಾಗಿ ಭೂಮಿಯೇ ಕಾರ್ಖಾನೆಯಾಗಿದ್ದು, ನಮ್ಮ ಪರಿಸರವನ್ನು ನಾವೇ ನಾಶಮಾಡುತ್ತಿದ್ದೇವೆ ಎನ್ನುವುದು ಫುಕುವೋಕರ ಅಭಿಪ್ರಾಯ. ಕೃಷಿ ಇಂದು ಉದ್ದಿಮೆಗಳು ಉತ್ಪಾದಿಸುವ ರಾಸಾಯನಿಕ ಗೊಬ್ಬರಗಳನ್ನು ಮತ್ತು ವಿದ್ಯುತ್ತನ್ನು ಅವಲಂಬಿಸುವಂತೆ ಹಸಿರುಕ್ರಾಂತಿಯ ಹೆಸರಿನಲ್ಲಾದ ಬದಲಾವಣೆಗಳು ಮಾಡಿವೆ. ಇದರಿಂದಾಗಿ ಕೃಷಿಕ ತಾನು ಬೇಕೆಂದಾಗ ಕೃಷಿ ಮಾಡುವ ಸ್ಥಿತಿಯಲ್ಲಿಲ್ಲ. ಇದು ಸಾವಯವ ಅಥವಾ ಸಹಜ ಕೃಷಿಯ ಧೋರಣೆಯಾಗಿದ್ದು, ಸಂಪ್ರದಾಯಸ್ಥರಿಂದಾಗಿ ವೇದ-ಶಾಸ್ತ್ರಗಳ ಹಿನ್ನೆಲೆಯಿಂದ ವಿಶ್ಲೇಷಣೆಗೊಳ್ಳುತ್ತಿದೆ. ಕೃಷಿಕ ಈ ಅಪಾಯದಿಂದ ಪಾರಾಗಬೇಕಾದರೆ ಪರಿಸರ ಪ್ರಜ್ಞೆಯನ್ನು ಹೊಂದಿರಬೇಕು. ಆದರೆ ಈ ಪ್ರಜ್ಞೆಯನ್ನು ಮೂಡಿಸುವವರು ಯಾರು ಮತ್ತು ಅದರ ಸ್ವರೂಪವೇನು ಎನ್ನುವ ಪ್ರಶ್ನೆಗಳು ಉದ್ಭವಿಸುತ್ತವೆ.

ಪರಿಸರ ಸಮಸ್ಯೆಗೆ ಸಂಬಂಧಪಟ್ಟಂತೆ ಜಾಗತಿಕ ಮಟ್ಟದಲ್ಲಿ ವಿಚಾರಸಂಕಿರಣಗಳು, ಸಮ್ಮೇಳನಗಳು ನಡೆದಿವೆ. ಇವುಗಳ ಕುರಿತು ಅಧ್ಯಯನ ನಡೆಸುವಾಗ ನಮ್ಮ ಗಮನ ಸೆಳೆಯುವ ಸಂಗತಿಯೆಂದರೆ ೧೯೭೨ರಲ್ಲಿ ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿ ನಡೆದ ಪರಿಸರ ಕುರಿತ ಪ್ರಥಮ ಅಂತರ್‌ರಾಷ್ಟ್ರೀಯ ಸಮ್ಮೇಳನ. ಇಲ್ಲಿ ವಾಯುಮಾಲಿನ್ಯ, ಜಲಮಾಲಿನ್ಯ, ಸಮಸ್ತ ಪ್ರಾಣಿ ಹಾಗೂ ಸಸ್ಯವರ್ಗಗಳ ನಾಶ, ಹದಗೆಡುತ್ತಿರುವ ಆರೋಗ್ಯ

ಮುಂತಾದ ಸಮಸ್ಯೆಗಳ ಕುರಿತಂತೆ ಚರ್ಚೆ ನಡೆಯಿತು. ಇಲ್ಲಿ ಬಂಡವಾಳಶಾಹಿಯ ಕೈವಾಡವನ್ನು ಗುರುತಿಸಬಹುದಾದರೂ, ಇದಾದನಂತರ ಜಾಗತಿಕ - ರಾಷ್ಟ್ರ - ರಾಜ್ಯಮಟ್ಟಗಳಲ್ಲಿ ಪರಿಸರ ಸಂರಕ್ಷಣೆಯ ಕುರಿತಂತೆ ಹಾಗೂ ಇದಕ್ಕೆ ನೆರವಾಗುವಂಥ ಶಿಕ್ಷಣ ಕ್ರಮವನ್ನು ರೂಪಿಸುವ ಪ್ರಯತ್ನಗಳು ನಡೆದವು. ಇದರ ಪ್ರಭಾವದಿಂದಾಗಿ ಅನೇಕ ಪರಿಸರ ಸಂಘಟನೆಗಳು ಹುಟ್ಟಿಕೊಂಡವು. ಈ ಸಮ್ಮೇಳನದ ಮಾದರಿಯಲ್ಲೇ ನಡೆದ ಇನ್ನೊಂದು ಮಹತ್ವದ ಪರಿಸರ ಸಂಬಂಧಿ ಸಮ್ಮೇಳನ ಬ್ರೆಜಿಲ್‌ನ ಪೂರ್ವ ಕರಾವಳಿ ತೀರದ ನಗರ ರಿಯೋದಲ್ಲಿ ೧೯೯೨ರ ಜೂನ್‌ನಲ್ಲಿ ನಡೆಯಿತು. ಜಗತ್ತಿನ ಪರಿಸರದ ಪರಿಸ್ಥಿತಿಯ ಕುರಿತು ಚರ್ಚಿಸಲು ನೂರಕ್ಕಿಂತಲೂ ಹೆಚ್ಚು ದೇಶಗಳ ಸುಮಾರು ಹನ್ನೆರಡು ಸಾವಿರ ಪ್ರತಿನಿಧಿಗಳು ಭಾಗವಹಿಸಿದರು. ಇದೊಂದು ಪರಿಸರ ಸಮಸ್ಯೆಗೆ ಜಾಗತಿಕ ಪರಿಹಾರ ಕಂಡುಹಿಡಿಯುವ ಪ್ರಯತ್ನ. ಆದರೆ ಈ ಪ್ರಯತ್ನ ಸಫಲವಾಗಲಿಲ್ಲ. ಬಂಡವಾಳಶಾಹಿ ರಾಷ್ಟ್ರಗಳು ರಿಯೋದಲ್ಲಿ ತಮ್ಮ ಉದ್ದೇಶವನ್ನು ಈಡೇರಿಸಿಕೊಂಡವು. ಬಡರಾಷ್ಟ್ರಗಳಿಗೆ ಸಾಂತ್ವನವಷ್ಟೇ ದೊರಕಿತು. ೧೯೯೭ರಲ್ಲಿ ನ್ಯೂಯಾರ್ಕ್‌ನಲ್ಲಿ ಮತ್ತೊಮ್ಮೆ ಸಭೆ ಸೇರಲಾಯಿತು. ಇದು ಕೇವಲ ಪ್ರತಿನಿಧಿಗಳ ಭಾಷಣಗಳಿಗಷ್ಟೇ ಮೀಸಲಾಯಿತು. ಪಂಚತಾರಾ ಹೋಟೇಲ್‌ಗಳಲ್ಲಿ ಸಭೆ ನಡೆದು ಬಂಡವಾಳಶಾಹಿ ರಾಷ್ಟ್ರಗಳು ಮತ್ತೊಮ್ಮೆ ತಮ್ಮ ನೀತಿಯನ್ನು ಪುನರ್‌ರಚಿಸಿಕೊಂಡವು. ಶಕ್ತಿಶಾಲಿ ರಾಷ್ಟ್ರಗಳಿಗೆ ಶಕ್ತಿಹೀನ ರಾಷ್ಟ್ರಗಳು ನೈಸರ್ಗಿಕ ಸಂಪನ್ಮೂಲಗಳನ್ನು ಕೊಡುವ ಭರವಸೆಯಿತ್ತು ಆರ್ಥಿಕ ಸಹಾಯವನ್ನು ಯಾಚಿಸಿದವು. ಇದು ಅಂತರ್‌ರಾಷ್ಟ್ರೀಯ ಪರಿಸರ ಸಮ್ಮೇಳನಗಳ ಒಟ್ಟು ಫಲಿತಾಂಶ ಮತ್ತು ಪರಿಣಾಮ.

ಕರ್ನಾಟಕದಲ್ಲೂ ೧೯೭೨ರ ಈಚೆಗೆ ನಿರ್ದಿಷ್ಟವಾಗಿ ಪರಿಸರದ ಹಣೆಪಟ್ಟಿ ಹೊತ್ತ ಲೇಖನಗಳು, ಗ್ರಂಥಗಳು ಬರಲಾರಂಭಿಸಿದವು. ೧೯೭೩ರ ಚಿಪ್ಕೋ ಚಳವಳಿ, ೧೯೮೦ರ ಬೇಡ್ತಿ ಕುರಿತ ವಿಚಾರಸಂಕಿರಣಗಳಿಂದ ಪರಿಸರ ಸಂರಕ್ಷಣೆಯ ಕಾಳಜಿ ಮತ್ತು ಬರಹಗಳು ಹೆಚ್ಚಲು ಪ್ರಾರಂಭವಾಯಿತು. ನಂತರ ಅನೇಕ ಪರಿಸರ ಸಂಘಟನೆಗಳು ಹುಟ್ಟಿಕೊಂಡು ಅರಣ್ಯ ರಕ್ಷಣೆ, ಗಿಡಗಳನ್ನು ನೆಡುವುದು, ಕೊಳಚೆ ನಿರ್ಮೂಲನೆ, ಉದ್ದಿಮೆಗಳನ್ನು ವಿರೋಧಿಸುವುದು, ಪಾನ ನಿಷೇಧ, ಗುಟ್ಕಾ ನಿಷೇಧ, ಪರಿಸರ ಶಿಕ್ಷಣವನ್ನು ನೀಡುವುದು ಮುಂತಾದ ಪರಿಸರ ಪರ ಕೆಲಸ ಕಾರ್ಯಗಳನ್ನು ಹಮ್ಮಿಕೊಂಡಿವೆ. ಭಾರತ ಸರ್ಕಾರವು ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಜಾರಿಗೆ ತಂದ ಅನೇಕ ಪರಿಸರ ಶಾಸನಗಳು ಕರ್ನಾಟಕದಲ್ಲಿ ಜಾರಿಗೆ ಬಂದಿವೆ. ಅವುಗಳೆಂದರೆ, ಜಲಮಾಲಿನ್ಯ ನಿಯಂತ್ರಣ ಮತ್ತು ನಿವಾರಣ ಕಾಯ್ದೆ ೧೯೭೪, ಜಲಮಾಲಿನ್ಯ ನಿಯಂತ್ರಣ ಮತ್ತು ನಿವಾರಣಾ ಕಾಯ್ದೆ ೧೯೭೭, ವಾಯುಮಾಲಿನ್ಯ ನಿಯಂತ್ರಣ ಮತ್ತು ನಿವಾರಣಾ ಕಾಯ್ದೆ ೧೯೮೧, ಪರಿಸರ ಸಂರಕ್ಷಣಾ ಕಾಯ್ದೆ ೧೯೮೬. ಅದೇ ರೀತಿ ಮಾಲಿನ್ಯ ನಿಯಂತ್ರಣವನ್ನು ನಿರ್ವಹಿಸಲು ಪ್ರಾದೇಶಿಕ ಕಛೇರಿಗಳನ್ನು ಬೆಂಗಳೂರು, ಮೈಸೂರು, ದಾವಣಗೆರೆ, ಮಂಗಳೂರು, ರಾಯಚೂರು, ಹಾಸನ, ಧಾರವಾಡ, ಬೆಳಗಾಂ, ಗುಲ್ಬರ್ಗಾ, ಬೀದರ್ ಹಾಗೂ ತುಮಕೂರಿನಲ್ಲಿ ಸ್ಥಾಪಿಸಲಾಗಿದೆ. ಮೂರು ವಿಭಾಗೀಯ ಕಛೇರಿಗಳನ್ನು ಧಾರವಾಡ, ಮಂಗಳೂರು ಹಾಗೂ ಗುಲ್ಬರ್ಗ ನಗರಗಳಲ್ಲಿ ತೆರೆಯಲಾಗಿದೆ.

ಪರಿಸರ ಪ್ರಜ್ಞೆಯನ್ನು ಜನಸಮುದಾಯದಲ್ಲಿ ಬೆಳೆಸುವ ಉದ್ದೇಶದಿಂದ ಪರಿಸರ ಶಿಕ್ಷಣಕ್ಕೆ ಇಂದು ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ. ಸುತ್ತಲಿನ ವಿದ್ಯಮಾನಗಳ ಅರಿವು ಇರುವುದು ಮತ್ತು ಅವುಗಳನ್ನು ಮನವರಿಕೆ ಮಾಡಿಕೊಳ್ಳುವುದು ಪರಿಸರ ಪ್ರಜ್ಞೆಯಲ್ಲಿ ಅಡಕವಾಗಿದೆ. ಈ ಪ್ರಜ್ಞೆ ಇರುವ ಮನುಷ್ಯ ಪರಿಸರದ ವಾಸ್ತವಿಕತೆಯನ್ನು ಅರಿತು ಪ್ರಾಯೋಗಿಕ ಚಟುವಟಿಕೆಗಳನ್ನು ಸಂಘಟಿಸಲು ತೊಡಗುತ್ತಾನೆ. ಈ ಪ್ರಜ್ಞೆಯು ಸಮಾಜದ ಚಾರಿತ್ರಿಕ ಬೆಳವಣಿಗೆಯ ಪರಿಣಾಮವಾಗಿದ್ದು, ಸಾಮಾಜಿಕ ಸ್ವರೂಪನ್ನು ಹೊಂದಿರುತ್ತದೆ. ಆದರೆ ಇದು ಜಟಿಲವಾದ ಚಲನಪ್ರಕ್ರಿಯೆಯಾಗಿದ್ದು, ಅಪೂರ್ಣವಾದ ನಿಷ್ಕೃಷ್ಟವಲ್ಲದ ಜ್ಞಾನದಿಂದ ಹೆಚ್ಚು ಪೂರ್ಣವಾದ ನಿಖರವಾದ ಜ್ಞಾನದ ಹಂತವಾಗಿದೆ. ಮಾನವನ ಪ್ರಾಯೋಗಿಕ ಅಗತ್ಯಗಳ ಪರಿಣಾಮವಾಗಿಯೇ ವಾಸ್ತವತಾವಾದದ ಕುರಿತು ಅಧ್ಯಯನ ನಡೆಸುವ ಅನಿವಾರ್ಯ ಉಂಟಾಯಿತು. ಇದು ಮುಖ್ಯವಾಗಿ ಮೂರು ಕೆಲಸಗಳನ್ನು ಮಾಡಬೇಕಾಗುತ್ತದೆ. ಅವುಗಳೆಂದರೆ,

೧. ಸಮಸ್ಯೆಯ ಪರಿಚಯವನ್ನು ಮಾಡಿಕೊಡುವುದು

೨. ಪರಿಣಾಮಗಳನ್ನು ಎತ್ತಿತೋರಿಸುವುದು

೩. ಪರಿಹಾರದ ಮಾರ್ಗವನ್ನು ಸೂಚಿಸುವುದು

ಅದೇ ರೀತಿ ಸಾಂಪ್ರದಾಯಕ ಶಿಕ್ಷಣ ಪದ್ಧತಿಯ ಗಡಿಯನ್ನು ದಾಟಿ ನಿಂತು ಪರಿಸರವನ್ನು ನೋಡುವ, ಅಭ್ಯಸಿಸುವ ಕೆಲಸ ಆಗಬೇಕಾಗಿದೆ. ಇದು ವಿಶಾಲಾರ್ಥದಿಂದ ಕೂಡಿದ್ದು, ಜನಸಮುದಾಯದಲ್ಲಿ ಪರಿಸರ ಪ್ರಜ್ಞೆಯನ್ನು ಮೂಡಿಸುವ ಕೆಲಸವನ್ನು ಮಾಡಬಹುದು. ಇಂದು ಹಲವಾರು ಸ್ವಯಂಸೇವಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದರೆ ಇವು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದಾವೆಯೇ ಎನ್ನುವುದು ಪ್ರಶ್ನಾರ್ಹ. ಪರಿಸರ ಸಮಸ್ಯೆಗಳಿಗೆ ಸರಕಾರ, ಬಂಡವಾಳಶಾಹಿಯ ನೀತಿಗಳಷ್ಟೇ ಕಾರಣವಾಗಿರದೆ ಸ್ಥಳೀಯ ಜಾತಿ/ವರ್ಗ ರಾಜಕೀಯವೂ ಕಾರಣವಾಗಿರುವುದು ಹೆಚ್ಚಿನ ಪರಿಸರ ಸಂಘಟನೆಗಳಿಗೆ, ಪರಿಸರವಾದಿಗಳಿಗೆ ಗೊತ್ತಿಲ್ಲದೇ ಇರುವುದು ಈ ಅಧ್ಯಯನದಿಂದ ಸಾಬೀತುಗೊಂಡಿದೆ. ಆದ್ದರಿಂದ ಚಳವಳಿಗಳೂ ಯಶಸ್ವಿಯಾಗುತ್ತಿಲ್ಲ. ಈ ಅಪಾಯವನ್ನು ಮೀರಿ ನಿಂತು ಚಳವಳಿಯನ್ನು ನಡೆಸುವುದು ಇಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಕಷ್ಟಸಾಧ್ಯ. ಅದೇರೀತಿ ಪರಿಸರವನ್ನು ತಮ್ಮ ಪ್ರತಿಷ್ಠೆ, ಗೌರವಗಳಿಗಾಗಿ ಸ್ವಂತ ಆಸ್ತಿಯನ್ನಾಗಿ ಉಪಯೋಗಿಸಿಕೊಳ್ಳುವ ಜನವರ್ಗದಿಂದ ಸಮಸ್ಯೆಯನ್ನು ಎದುರಿಸುತ್ತಿರುವ ಜನವರ್ಗಕ್ಕೆ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಇವರು ಸಮಸ್ಯೆಯ ಮೂಲವನ್ನು ಕೆದಕುವುದಿಲ್ಲ ಹಾಗೂ ಸಮಸ್ಯೆಗೆ ಪರಿಹಾರವನ್ನೂ ಸೂಚಿಸುವುದಿಲ್ಲ. ಪರಿಸರ ಇಂದು ವಿಜ್ಞಾನಿಗಳ, ರಾಜಕಾರಣಿಗಳ, ವಿಚಾರವಾದಿಗಳ, ಸಾಹಿತಿಗಳ ಚರ್ಚೆಯ ವಸ್ತುವಾಗಿದೆ. ಇದರರ್ಥ ಇದು ಪರಿಸರ ಪ್ರಜ್ಞೆಯನ್ನು ಹುಟ್ಟುಹಾಕುತ್ತದೆ ಎಂದಲ್ಲ. ಪರಿಸರವನ್ನೇ ವಸ್ತುವನ್ನಾಗಿರಿಸಿಕೊಂಡು ಅನೇಕ ಬರೆಹಗಳು ಪ್ರಕಟಗೊಂಡಿವೆ. ಆದರೆ ಇವು ಪರಿಸರನಾಶವೂ ಆಗಬಾರದು, ಪ್ರಗತಿಯೂ ಆಗಬೇಕು ಎನ್ನುವ ಜಾರಿಕೆಯ ಉತ್ತರವನ್ನಷ್ಟೇ ನೀಡುತ್ತವೆ. ಪರಿಸರ ವಿಜ್ಞಾನದ ಮಾಹಿತಿಯನ್ನಾಗಲೀ ಅಥವಾ ಉತ್ಪಾದನಾ ವ್ಯವಸ್ಥೆಯ ಸ್ವರೂಪವನ್ನಾಗಲೀ ಇವು ಚರ್ಚಿಸುವುದಿಲ್ಲ. ಪರಿಸರ

ಚಳವಳಿಯನ್ನು ನಡೆಸುವ ಮೊದಲು ಪರಿಸರ ವ್ಯವಸ್ಥೆಯ ಅಥವಾ ಜೀವಾವಾಸ (Eco System)ದ ಮಾಹಿತಿಯನ್ನು ಹೊಂದಿರಬೇಕು. ಪರಿಸರ ವಿಜ್ಞಾನ ಮೂಲಭೂತವಾಗಿ ಜೀವ ವಿಜ್ಞಾನದ ಒಂದು ಭಾಗ. ಜೀವಿ ಜೀವಿಗಳ ನಡುವೆಯಿರುವ ಸಂಬಂಧ ಮತ್ತು ಜೀವಿ-ಭೌತ ಪರಿಸರಗಳ ನಡುವೆಯಿರುವ ಸಂಬಂಧವೇ ಪರಿಸರ ವಿಜ್ಞಾನದ ವಸ್ತು. ಸಸ್ಯ, ಪ್ರಾಣಿ, ಕ್ರಿಮಿಕೀಟಗಳು ಜೀವಿ ಸಮುದಾಯದಲ್ಲಿ ಬಂದರೆ, ಗಾಳಿ, ನೀರು, ಮಣ್ಣು, ಬೆಳಕು, ಖನಿಜಗಳು ಮುಂತಾದವು ಭೌತಪರಿಸರ ಎನಿಸಿಕೊಳ್ಳುತ್ತವೆ. ಇವು ನಿರ್ಜೀವ ವಸ್ತುಗಳು. ಜೀವಿ ಸಮುದಾಯ ಮತ್ತು ಭೌತ ಪರಿಸರ ಒಂದಕ್ಕೊಂದು ಪ್ರತಿಕ್ರಿಯೆ ತೋರಿಸುತ್ತಿರುತ್ತವೆ ಮತ್ತು ಪರಿಣಾಮ ಬೀರುತ್ತಿರುತ್ತವೆ. ಜೀವಿ ಪರಿಸರ ಬದುಕುವುದಕ್ಕೋಸ್ಕರ ಭೌತಪರಿಸರವನ್ನು ಅವಲಂಬಿಸಿಕೊಂಡಿರುತ್ತದೆ. ಇವೆರಡನ್ನೂ ಒಟ್ಟಿಗೆ ಸೇರಿಸಿದರೆ ಮಾತ್ರ ಪರಿಸರ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಇದು ಜೀವಾವಾಸದ ಮೂಲವನ್ನು ಕೆದಕುವ ಪ್ರಯತ್ನವಾಗಿದ್ದು ಪರಿಸರ ಚಳವಳಿಗಳಿಗೆ ತಳಹದಿಯಾಗಿರಬೇಕು. ಪರಿಸರ ಪ್ರಜ್ಞೆಯೂ ಈ ಅರಿವಿನೊಂದಿಗೆ ರೂಪುಗೊಳ್ಳಬೇಕು. ಹೀಗಾದಲ್ಲಿ ಮಾತ್ರ ಮಾನವ ಪ್ರಕೃತಿಯೊಡನೆ ತನ್ನ ಸಂಬಂಧಗಳನ್ನು ಉತ್ತಮಗೊಳಿಸಲು ಸಾಧ್ಯ.

ಮಾನವ ಮತ್ತು ಪ್ರಕೃತಿಯ ನಡುವಿನ ಸಂಬಂಧ ಚಳವಳಿಗಳ ವಸ್ತುಗಳಾಗಿಲ್ಲ. ಬಂಡವಾಳಶಾಹಿಯನ್ನು ವಿರೋಧಿಸುವ ಸಂದರ್ಭದಲ್ಲಿ ಪ್ರಕೃತಿ ಒಂದು ನೆಪವಾಗಿ ಕಾಣಿಸಿಕೊಳ್ಳುತ್ತದೆ. ನಮ್ಮ ಪರಿಸರ ನಾಶವಾಗುತ್ತಿದೆ, ಅದರೊಂದಿಗೆ ನಮ್ಮ ಸಂಸ್ಕೃತಿಯೂ ನಾಶವಾಗುತ್ತಿದೆ ಎನ್ನುವ ಕೂಗು ಎಲ್ಲೆಡೆ ಕೇಳಿಬರುತ್ತಿದೆ. ಇದು ಸ್ವಾರ್ಥಪೂರಿತ ಮತ್ತು ವೈಯಕ್ತಿಕ ಹಿತಾಸಕ್ತಿಗಳನ್ನು ಒಳಗೊಂಡ ಕೂಗು. ಮೇಲ್ವರ್ಗಗಳ ಉದ್ದೇಶ ಈಡೇರ ಬೇಕಾದರೆ ಪರಿಸರ ಚಳವಳಿಯಂಥ ಅನೇಕ ಚಳವಳಿಗಳು ನಿರಂತರವಾಗಿ ನಡೆಯುತ್ತಲೇ ಇರಬೇಕು. ಈ ಕಾರಣದಿಂದಾಗಿಯೇ ಇಂದು ಹೆಚ್ಚೆಚ್ಚು ಚಳವಳಿಗಳು ಕಾಣಿಸಿಕೊಳ್ಳುತ್ತಿವೆ. ಈ ಚಳವಳಿಗಳು ಪ್ರಕೃತಿಯನ್ನು ಗಂಭೀರವಾಗಿ ಗಣನೆಗೆ ತೆಗೆದುಕೊಂಡಿಲ್ಲ. ಇವರ ನೇರ ಪರಿಣಾಮಕ್ಕೆ ಒಳಗಾಗುವವರೆಂದರೆ ಯೋಜನೆಗಾಗಿ ಆಯ್ಕೆ ಮಾಡಿದ ಪ್ರದೇಶದ ಮತ್ತು ಸುತ್ತಮುತ್ತಲಿನ ಪ್ರದೇಶದ ಜನರು. ಇವರು ನಡೆಯುತ್ತಿರುವ ಬೆಳವಣಿಗೆಗಳಿಗೆ ಮೂಕ ಸಾಕ್ಷಿಗಳಾಗಿರುತ್ತಾರೆ. ಚಳವಳಿಗಳು ಒಂದು ಹಂತದಲ್ಲಿ ಕಾಣಿಸಿಕೊಂಡು ನಂತರ ಸುಮ್ಮನಾಗಿಬಿಡುತ್ತವೆ. ಆದರೆ ಸ್ಥಳೀಯರು ನಿರಂತರ ಸಮಸ್ಯೆಗಳನ್ನು ಎದುರಿಸುತ್ತಲೇ ಇರಬೇಕಾಗುತ್ತದೆ. ಪರಿಸರವಾದಿ ಸಾಲುಮರದ ತಿಮ್ಮಕ್ಕನವರು ಮರ ನೆಡುವ ತಮ್ಮ ಕೆಲಸದ ಮೂಲಕ ಮಾನವ ಮತ್ತು ಪ್ರಕೃತಿಯ ಸಂಬಂಧವನ್ನು ತೋರಿಸಿಕೊಡುವ ಪ್ರಯತ್ನವನ್ನು ಮಾಡಿದರು. ಮರಕಡಿಯುವುದನ್ನು ವಿರೋಧಿಸುವುದು ಒಂದು ವಿಧಾನವಾದರೆ, ವಿರೋಧಿಸುವ ಜೊತೆ ಜೊತೆಗೇ ಮರಗಳನ್ನು ಬೆಳೆಸುವ ಉದ್ದೇಶವನ್ನು ಹೊಂದಿರುವುದು ಇನ್ನೊಂದು ವಿಧಾನ. ಇಲ್ಲಿ ಎರಡನೆಯ ವಿಧಾನವೇ ನಿಜವಾದ ಪರಿಸರ ಚಳವಳಿ. ಹೀಗಾದಲ್ಲಿ ಮಾತ್ರ ಮಾನವ ಪ್ರಕೃತಿಯೊಡನೆ ನೇರ ಸಂಬಂಧವನ್ನು ಇಟ್ಟುಕೊಳ್ಳಲು ಸಾಧ್ಯ. ವಿಜ್ಞಾನ, ತಂತ್ರಜ್ಞಾನಗಳ ಮೂಲಕ ಪ್ರಕೃತಿಯನ್ನು ಮಾರ್ಪಾಟು ಗೊಳಿಸುವುದು ತುಂಬಾ ಸುಲಭ. ಆದರೆ ಈ ಮಾರ್ಪಾಟಿನಿಂದಾಗಿ ಸಾಮಾಜಿಕ ರಚನೆಯೇ

ಬದಲಾಗಿಬಿಡುತ್ತದೆ ಎನ್ನುವ ವಾದ ತಪ್ಪು. ಆದರೆ ಈ ವಾದವನ್ನೇ ಮುಂದಿಟ್ಟುಕೊಂಡು ಚಳವಳಿಗಳು ನಡೆಯುತ್ತಿವೆ. ಇದು ಪ್ರಕೃತಿ ಮತ್ತು ಮಾನವನ ಸಂಬಂಧಗಳನ್ನು ಇನ್ನಷ್ಟು ಸಂಕೀರ್ಣಗೊಳಿಸುವ ಕೆಲಸವನ್ನಷ್ಟೇ ಮಾಡಲು ಸಾಧ್ಯ.

ಪ್ರಕೃತಿ ಮತ್ತು ಮಾನವನ ನಡುವಿನ ಸಂಬಂಧವನ್ನು ಸಂಕೀರ್ಣಗೊಳಿಸುವ ಕೆಲಸವನ್ನು ರಾಜಕೀಯ ಪಕ್ಷಗಳೂ ಮಾಡುತ್ತಿವೆ. ಪರಿಸರ ಇಂದು ರಾಜಕೀಯ ಪಕ್ಷಗಳು ಹಾಗೂ ರಾಜಕೀಯ ಧುರೀಣರಿಗೆ ಚುನಾವಣೆಯ ವಿಷಯವೂ ಆಗಿದೆ. ಪರಿಸರ ಕುರಿತ ಚರ್ಚೆಗಳು ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವುದು ರಾಜಕೀಯದ ಪ್ರವೇಶಕ್ಕೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಪ್ರಚಲಿತದಲ್ಲಿರುವ ಸಮಸ್ಯೆಗಳ ಕಡೆಗೆ ಜನರ ಆಕರ್ಷಣೆ ಸಹಜವೇ ಆಗಿದೆ. ಆದರೆ ಪ್ರಜಾಸತ್ತಾತ್ಮಕ ಚುನಾವಣೆಗಳಿಗೆ ಪರಿಸರವೂ ವೇದಿಕೆ ಯಾಗಿರುವುದು ಆರೋಗ್ಯಕರ ಲಕ್ಷಣವಾಗಿ ಕಂಡುಬರುವುದಿಲ್ಲ. ಪರಿಸರವನ್ನು ರಾಜಕೀಯ ಗೊಳಿಸಿರುವುದು ಪರಿಸರ ರಕ್ಷಣೆಗಾಗಿ ಎನ್ನುವ ಘೋಷಣೆಗಳು ಕೇಳಿಬಂದರೂ, ತಮಗೆ ಬೇಕಾದ ಫಲಿತಾಂಶವನ್ನು ಪಡೆಯುವುದೇ ಇದರ ಹಿಂದಿರುವ ಶಕ್ತಿಗಳ ಮೂಲ ಉದ್ದೇಶ. ಪರಿಸರ ಹಿನ್ನೆಲೆಯ ಒಗ್ಗೂಡುವಿಕೆ ಬಲವಾದ ರಾಜಕೀಯ ಪ್ರಭಾವವನ್ನು ಹೊಂದಿರುತ್ತದೆ ಮತ್ತು ಅದನ್ನು ವ್ಯಾಪಕವಾಗಿ ಬಳಸುವುದಂತೂ ಖಂಡಿತ. ಇದರಿಂದ ಪರಿಸರ ಬಿಕ್ಕಟ್ಟು ಇನ್ನಷ್ಟು ವ್ಯಾಪಕವಾಗಿ ತಲೆದೋರುವುದಂತೂ ನಿಜ. ಶ್ರೀಮಂತವರ್ಗಗಳು ಕೆಳವರ್ಗಗಳನ್ನು ತಮ್ಮ ಅಂಕೆಗೆ ತೆಗೆದುಕೊಂಡಂತೆ ಪರಿಸರವನ್ನೂ ತಮ್ಮ ಅಧೀನಮಾಡಿಬಿಡುತ್ತವೆ. ಕೆಳವರ್ಗದ ಪ್ರತಿಭಟನೆಯನ್ನು ತಮ್ಮ ಪಕ್ಷಗಳ ಪ್ರಚಾರಕ್ಕಾಗಿ ಬಳಸಿಕೊಂಡು ರಾಜಕೀಯ ಲಾಭಗಳನ್ನು ಪಡೆದುಕೊಳ್ಳುವ ಪ್ರಯತ್ನವೂ ನಡೆಯುತ್ತದೆ. ಈಗಾಗಲೇ 'ಹಸಿರುಪಕ್ಷ'ವೆಂಬ ರಾಜಕೀಯ ಪಕ್ಷವೊಂದು ಹುಟ್ಟಿಕೊಂಡಿದ್ದು ಮುಂದಿನ ದಿನಗಳಲ್ಲಿ ಅದು ಪ್ರಮುಖ ರಾಜಕೀಯ ಪಕ್ಷವಾಗಿ ಬೆಳೆಯುವ ಎಲ್ಲ ಸಾಧ್ಯತೆಯೂ ಇದೆ. ಅದೇರೀತಿ ಪರಿಸರವನ್ನು ವಿಷಯವನ್ನಾಗಿಟ್ಟು ಕೊಂಡು ವಿವಿಧ ಪಕ್ಷಗಳ ನಾಯಕರು ಚನಾವಣೆಯನ್ನು ಎದುರಿಸುತ್ತಲೇ ಬಂದಿದ್ದಾರೆ. ಅಧಿಕಾರ ಮತ್ತು ಪರಿಸರವನ್ನು ಸಂಬಂಧಗೊಳಿಸುವುದರಿಂದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅನಾಹುತಗಳಷ್ಟೇ ಸಂಭವಿಸಬಹುದು. ಪರಿಸರ ರಾಜಕೀಯವಾದ ಪಾತ್ರಗಳನ್ನೂ ನಿರ್ವಹಿಸಲು ತೊಡಗಿರುವುದಕ್ಕೆ ಆಧುನಿಕತೆಯೇ ಕಾರಣ ಎಂಬ ವಾದವೂ ಕೇಳಿಬರುತ್ತಿದೆ. ಆದರೆ ಅಷ್ಟಕ್ಕೇ ಸೀಮಿತಗೊಳಿಸಲು ಸಾಧ್ಯವಾಗುವುದಿಲ್ಲ. ಶ್ರೀಮಂತವರ್ಗದ ಸಾಂಸ್ಕೃತಿಕ ರಾಜಕೀಯದ ಪಾಲು ಇದರಲ್ಲಿ ಹೆಚ್ಚಿನದು. ಇದು ಪರಿಸರ ಸಂಬಂಧಿ ಸಮಸ್ಯೆಯನ್ನು ಸೃಷ್ಟಿಸುವ ಹಾಗೂ ವಿರೋಧಿಸುವ ಕೆಲಸವೆರಡನ್ನೂ ಮಾಡುತ್ತಿರುತ್ತದೆ. ಆ ಸಂದರ್ಭದಲ್ಲಿಯೇ ವೆಸ್ಟರ್ನೈಸೇಷನ್ ಇದಕ್ಕೆಲ್ಲಾ ಮೂಲಕಾರಣವೆನ್ನುವ ನೆಪವನ್ನೂ ಒಡ್ಡುತ್ತಿರುತ್ತದೆ. ಈ ಕಾರಣಕ್ಕಾಗಿಯೇ ಇಂದು ಹೊಸ ಐಡಿಯಾಲಜಿಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಯಜಮಾನಿಕೆಯ ಪ್ರಶ್ನೆಯೇ ಪ್ರಮುಖವಾಗಿ ಕಂಡುಬರುತ್ತದೆ.

ಪ್ರಕೃತಿಯೊಡನೆ ನೇರ ಸಂಬಂಧವನ್ನು ಇಟ್ಟುಕೊಂಡಿರುವ ಜನಸಮುದಾಯಕ್ಕೆ ಪರಿಸರ ಶಿಕ್ಷಣದ ಅಗತ್ಯ ಹೆಚ್ಚಿನ ಪ್ರಮಾಣದಲ್ಲಿದೆ. ಆದರೆ ಪ್ರಕೃತಿಯನ್ನು ಆಳುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯು, ಪ್ರಕೃತಿಯನ್ನು ನಂಬಿ ದುಡಿಯುತ್ತಿರುವ ದುಡಿಯುವ ವರ್ಗ ಈ ಮಾಹಿತಿಯಿಂದ ದೂರವಿರುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಬಂಡವಾಳಶಾಹಿಯಿಂದ ಎಳೆಯಲ್ಪಟ್ಟ ಈ ಸೀಮಾರೇಖೆಯನ್ನು ದುಡಿಯುವ ವರ್ಗ

ದಾಟುವಂತಿಲ್ಲ. ಏಕೆಂದರೆ ಇದು ಬಡತನದ ಮತ್ತು ಉದ್ಯೋಗದ ಪ್ರಶ್ನೆಯಾಗಿದೆ. ಇಂಥ ಸಂದರ್ಭದಲ್ಲಿ ಪರಿಸರ ಪ್ರಜ್ಞೆಯಾಗಲೀ ಅಥವಾ ಪರಿಸರ ಶಿಕ್ಷಣವಾಗಲೀ ಅರ್ಥವನ್ನು ಕಳೆದುಕೊಂಡು ಬಿಡುತ್ತವೆ. ಜನರ ಬದುಕಿನಲ್ಲಿ ಆಮೂಲಾಗ್ರ ಬದಲಾವಣೆಯಾಗದೆ ಪರಿಸರದ ಬಗ್ಗೆ ಯಾವುದನ್ನೂ ನಿರೀಕ್ಷಿಸುವಂತಿಲ್ಲ. ಜನರ ಬದುಕಿನಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕಾದರೆ ಉತ್ಪಾದನಾ ವಿಧಾನ ಮತ್ತು ಹಂಚಿಕೆಯಲ್ಲಿ ಬದಲಾವಣೆಗಳಾಗಬೇಕು. ಪರಿಸರ ಚಳವಳಿಗಳು ಇವುಗಳತ್ತ ಗಮನಹರಿಸಬೇಕಾಗಿದೆ. ಉತ್ಪಾದಕ ಮತ್ತು ಅನುತ್ಪಾದಕ ವರ್ಗಗಳ ನಡುವಿನ ಸಂಬಂಧ ಮತ್ತು ಸಂಘರ್ಷಗಳು ಚರ್ಚೆಗೊಳಗಾಗಬೇಕು. ಈ ಚರ್ಚೆಯಲ್ಲಿ ಯಜಮಾನಿಕೆಯ ಸಂಕೇತಗಳಾದ ರಾಜಕೀಯ ಮತ್ತು ಅಧಿಕಾರದ ಪ್ರಶ್ನೆಗಳೂ ಸೇರಿಕೊಂಡಿರಬೇಕು. ಮಾನವನ ಭೌತಿಕ ಜೀವನವನ್ನು ಅವನು ಉತ್ಪಾದನೆಗೆ ಬಳಸಿದ ಹಾದಿ ಮತ್ತು ಉತ್ಪಾದನೆಯ ಪರಿಕರಗಳು ನಿರ್ಧರಿಸುತ್ತಿರುತ್ತವೆ. ಅದೇ ರೀತಿ ಉಪಕರಣಗಳಲ್ಲಾದ ಆವಿಷ್ಕಾರಗಳು ಜನರ ಬದುಕಿನ ಅಧ್ಯಯನಕ್ಕೆ ಬೇಕಾದ ಮಾಹಿತಿಗಳನ್ನು ನೀಡುತ್ತವೆ. ಈ ಕಾರಣಗಳಿಂದಾಗಿ ಪರಿಸರ ಮತ್ತು ಪರಿಸರ ಚಳವಳಿಗಳ ಈಗಾಗಲೇ ಒಪ್ಪಿದ ವ್ಯಾಖ್ಯಾನ ಪುನರ್‌ವಿಮರ್ಶೆಗೆ ಒಳಗಾಗಬೇಕಾಗಿದೆ.

❑❑

೩. ಪ್ರಮುಖ ಪರಿಸರ ಚಳವಳಿಗಳು

ಏಕೀಕರಣೋತ್ತರ ಕರ್ನಾಟಕದ ಪ್ರಮುಖ ಪರಿಸರ ಚಳವಳಿಗಳನ್ನು ಅವುಗಳು ನಡೆದ ಪ್ರದೇಶ, ಸಂದರ್ಭ, ಭೌಗೋಳಿಕತೆ ಮತ್ತು ಕಾಲಕ್ಕನುಗುಣವಾಗಿ ಈ ಭಾಗದಲ್ಲಿ ಚರ್ಚಿಸಲಾಗಿದೆ. ಕರ್ನಾಟಕ ಏಕೀಕರಣಗೊಂಡ ನಂತರದ ಎರಡು ದಶಕಗಳಲ್ಲಿ ಪರಿಸರ ಜಾಗತಿಕ ನೆಲೆಯಲ್ಲಿ ಚರ್ಚೆಯ ವಸ್ತುವಾಗಿ ರೂಪುಗೊಂಡಿರಲಿಲ್ಲ. ಪರಿಸರಕ್ಕೆ ಸಂಬಂಧಪಟ್ಟ ಚಳವಳಿಗಳೂ ಅಷ್ಟಾಗಿ ಕಂಡುಬರಲಿಲ್ಲ. ಇದ್ದರೂ ಅವು ಚಳವಳಿಯ ಸ್ವರೂಪವನ್ನು ಪಡೆದುಕೊಂಡಿರಲಿಲ್ಲ. ಎಲ್ಲಾ ಹೋರಾಟಗಳನ್ನೂ ಚಳವಳಿಗಳೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಸುಮಾರು ಎಪ್ಪತ್ತರ ದಶಕದಿಂದೀಚೆಗೆ ಪರಿಸರ ಜಾಗತಿಕ ನೆಲೆಯಲ್ಲಿ ಚರ್ಚೆಯ ವಸ್ತುವಾಗಿ ರೂಪುಗೊಂಡು ವಿಭಿನ್ನ ಸ್ವರೂಪದ ಪರಿಸರ ಚಳವಳಿಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿದವು. ಅವುಗಳಿಗೆ ಇಲ್ಲಿನ ನದಿ, ಉದ್ದಿಮೆ, ಬೆಟ್ಟಗುಡ್ಡಗಳು, ಕೃಷಿ, ನಗರಕೇಂದ್ರಗಳು, ಉದ್ಯಾನಗಳು, ಕೆರೆಗಳು ಹಾಗೂ ಸಮುದ್ರ ವಸ್ತುಗಳಾದವು. ಅವುಗಳ ಹಿನ್ನೆಲೆ, ಸ್ವರೂಪ ಮತ್ತು ಸೈದ್ಧಾಂತಿಕ ನೆಲೆಗಳ ವಿಶ್ಲೇಷಣೆಯನ್ನು ಅಧ್ಯಯನದ ಮೊದಲ ಭಾಗದಲ್ಲಿ ಈಗಾಗಲೇ ನಡೆಸಲಾಗಿದೆ. ಪ್ರಸ್ತುತ ಈ ಭಾಗದಲ್ಲಿ ೧೯೫೬ ರಿಂದ ೧೯೯೯ ರವರೆಗೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನಡೆದ ಪ್ರಮುಖ ಪರಿಸರ ಸಂಬಂಧಿತ ಚಳವಳಿಗಳನ್ನು ದಾಖಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಕರ್ನಾಟಕ ವಾದ್ಯಂತ ಏಕರೂಪದ ಪರಿಸರ ಚಳವಳಿ ನಡೆದಿಲ್ಲ. ಪ್ರತಿಯೊಂದು ಜಿಲ್ಲೆಯೂ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಉತ್ತರ ಕರ್ನಾಟಕದಲ್ಲಿ ನಡೆದ ಪರಿಸರ ಚಳವಳಿಯು ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕದ ಪರಿಸರ ಚಳವಳಿಗಳಿಗಿಂತ ಭಿನ್ನವಾಗಿದೆ. ಇದಕ್ಕೆ ಆಯಾ ಪ್ರದೇಶದ ಉತ್ಪಾದನಾ ವಿಧಾನ ಮತ್ತು ಹಂಚಿಕೆಯ ಪ್ರಶ್ನೆಯೇ ಪ್ರಮುಖ ಕಾರಣ.

ಉತ್ತರ ಕರ್ನಾಟಕದಲ್ಲಿ ಸಂಪತ್ತಿನ ಹಂಚಿಕೆ ಸಮನಾಗಿಲ್ಲ ಎನ್ನುವುದು ವಾಸ್ತವ ಸ್ಥಿತಿ. ಆಧುನಿಕತೆಯ ಎಲ್ಲಾ ಸೌಲಭ್ಯ, ಸವಲತ್ತುಗಳನ್ನು ಪಡೆದುಕೊಂಡ ಶ್ರೀಮಂತವರ್ಗ ಸಮಾಜದ ಮೇಲ್ತುದಿಯಲ್ಲಿದ್ದರೆ, ಎಲ್ಲಾ ಸೌಲಭ್ಯಗಳಿಂದಲೂ ವಂಚಿತರಾಗಿರುವ ಬಡವರ್ಗ ಸಮಾಜದ ಕೆಳತುದಿಯಲ್ಲಿದೆ. ಯಾವುದೇ ಹೊಸ ಯೋಜನೆ ಬಂದರೂ ತನ್ನ ಸ್ವಂತ ಲಾಭಕ್ಕಾಗಿ ಶ್ರೀಮಂತವರ್ಗ ಅದರೊಳಗೆ ನುಸುಳಿಕೊಂಡರೆ, ಉದ್ಯೋಗ ಮತ್ತು ಬಡತನದ ನಿವಾರಣೆಗಾಗಿ ಉದ್ದಿಮೆಗಳನ್ನು ಬಡವರ್ಗ ದಾರಿಕಾಯುತ್ತಿರುತ್ತದೆ. ಇಂಥ ಸಂದರ್ಭದಲ್ಲಿ ಯಾವ ಚಳವಳಿಯೂ ನಡೆಯುವ ಸಾಧ್ಯತೆ ತುಂಬಾ ಕಡಿಮೆ. ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಪ್ರಶ್ನಿಸುವ ಮಧ್ಯಮವರ್ಗದ ಗೈರುಹಾಜರಿ ಸಮಾಜದಲ್ಲಿ ನಿರ್ಮಾಣಗೊಂಡ ಅಂತರದ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿದೆ. ಕರಾವಳಿ

ಜಿಲ್ಲೆಗಳಲ್ಲಿ ಮಧ್ಯಮವರ್ಗ ಚುರುಕಾಗಿದ್ದರೂ ಬಂಡವಾಳಶಾಹಿ ಮತ್ತು ಅಧಿಕಾರಶಾಹಿ ಅಷ್ಟೇ ಚುರುಕಾಗಿ ಕಾರ್ಯನಿರ್ವಹಿಸುತ್ತಿದೆ. ಜಾತಿರಾಜಕೀಯ ಹಾಗೂ ಸಾಮಾಜಿಕ ಪ್ರತಿಷ್ಠೆಗಳು ಚಳವಳಿಗಳಲ್ಲಿ ನುಸುಳಿಕೊಂಡಿವೆ. ಇದರಿಂದಾಗಿ ಸಂಘಟಿತ ರೂಪದ ಚಳವಳಿಯ ಕೊರತೆ ಎದ್ದು ಕಾಣಿಸುತ್ತಿದೆ. ಚಳವಳಿಗಳು ಆರಂಭಿಕ ಯಶಸ್ಸನ್ನು ಗಳಿಸಿದರೂ ಅಂತಿಮವಾಗಿ ಸೋಲನ್ನು ಒಪ್ಪಿಕೊಳ್ಳಲೇಬೇಕಾದ ಸಂದರ್ಭ ಸೃಷ್ಟಿಗೊಂಡಿದೆ. ಇದರಲ್ಲಿ ಸ್ಥಳೀಯ ಶ್ರೀಮಂತವರ್ಗ ಮತ್ತು ಬಂಡವಾಳಶಾಹಿಯ ನೇರ ಹಸ್ತಕ್ಷೇಪವಿದ್ದು ಒಟ್ಟು ವ್ಯವಸ್ಥೆಯನ್ನು ಸಂಕೀರ್ಣಗೊಳಿಸಿವೆ. ದಕ್ಷಿಣ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಮತ್ತು ಪಶ್ಚಿಮ ಘಟ್ಟಗಳ ಸಂಬಂಧವಾಗಿ ನಡೆದ ಚಳವಳಿಗಳು ಇದಕ್ಕಿಂತ ಹೊರತಾಗಿಲ್ಲ. ಈ ಕಾರಣಗಳಿಂದಾಗಿ ಏಕೀಕರಣೋತ್ತರ ಕರ್ನಾಟಕದಲ್ಲಿ ಪರಿಸರ ಸಂಬಂಧವಾಗಿ ನಡೆದ ಚಳವಳಿಗಳಿಗೆ ಏಕರೂಪದ ವ್ಯಾಖ್ಯಾನವನ್ನು ನೀಡಲು ಸಾಧ್ಯವಾಗುವುದಿಲ್ಲ. ಪ್ರತಿಯೊಂದು ಚಳವಳಿಯೂ ಆಯಾ ಸಂದರ್ಭದ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಪ್ರತಿಬಿಂಬವೇ ಆಗಿದ್ದು ಅಲ್ಲಿನ ಉತ್ಪಾದನಾ ವಿಧಾನಗಳ ಪ್ರಮುಖ ಲಕ್ಷಣಗಳನ್ನು ಸೂಚಿಸುತ್ತಿರುವುದು ಕಂಡುಬರುತ್ತದೆ. ಈ ಅಧ್ಯಾಯದಲ್ಲಿ ವಿವಿಧ ಯೋಜನೆಗಳಿಂದಾಗಿ ನಿಜವಾಗಿಯೂ ತೊಂದರೆಗೊಳಗಾಗಿರುವ ಜನರ ಸಮಸ್ಯೆಗಳ ಕುರಿತು ಚರ್ಚೆ ನಡೆಸಲಾಗಿದೆ. ಚಳವಳಿಗಳನ್ನು ವಿವರಿಸುವ ಸಂದರ್ಭದಲ್ಲಿ ಈ ಚರ್ಚೆ ಅಗತ್ಯವೆನಿಸುತ್ತದೆ. ಏಕೆಂದರೆ ಹೊಸ ಹೊಸ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಚಳವಳಿಯನ್ನು ವ್ಯಾಖ್ಯಾನಿಸುವಾಗ ವಾಸ್ತವಾಂಶಗಳು ಮೌನವಹಿಸುವ ಸಾಧ್ಯತೆಯೇ ಹೆಚ್ಚು. ಜಾತಿ/ವರ್ಗ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಈ ರೀತಿಯ ಪ್ರಯತ್ನಗಳು ವ್ಯವಸ್ಥಿತವಾಗಿ ನಡೆಯುತ್ತಿರುತ್ತವೆ. ಈ ಹಿನ್ನೆಲೆಯನ್ನು ಇಟ್ಟುಕೊಂಡು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿನ ಪರಿಸರ ಚಳವಳಿಗಳ ವಿಶ್ಲೇಷಣಾತ್ಮಕ ಮತ್ತು ವಿವರಣಾತ್ಮಕ ಅಧ್ಯಯನವನ್ನು ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೩.೧. ಗಣಿಗಾರಿಕೆ

ಏಕೀಕರಣೋತ್ತರ ಕರ್ನಾಟಕದ ಪರಿಸರ ಸಂಬಂಧಿ ಚಳವಳಿಗಳ ಅಧ್ಯಯನ ನಡೆಸುವಾಗ ಗಣಿಗಾರಿಕೆಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಚಳವಳಿಗಳು ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ತುಮಕೂರು, ಬಳ್ಳಾರಿ ಈ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮತ್ತು ಇನ್ನೂ ಅನೇಕ ಪ್ರದೇಶಗಳಲ್ಲಿ ಗಣಿಗಾರಿಕೆ ವ್ಯಾಪಕವಾಗಿ ಹರಡಿಕೊಂಡಿದೆ. ಕರ್ನಾಟಕದ ಬೆಟ್ಟಗಳಲ್ಲಿ ಸಿಗುವ ಚಿನ್ನ, ಬೆಳ್ಳಿ, ಕಬ್ಬಿಣ, ಗ್ರಾನೈಟ್, ಮ್ಯಾಂಗನೀಸ್, ಸುಣ್ಣ, ಬಾಕ್ಸೈಟ್, ತಾಮ್ರ ಮುಂತಾದ ಖನಿಜ ಸಂಪತ್ತುಗಳೇ ಗಣಿಗಾರಿಕೆಗೆ ಆಸ್ತಿಗಳಾಗಿವೆ. ಕರ್ನಾಟಕದಲ್ಲಿ ಗಣಿಗಾರಿಕೆ ಎರಡು ರೀತಿಯಲ್ಲಿ ನಡೆಯುತ್ತಿದೆ. ಅವುಗಳೆಂದರೆ ಸರಕಾರಿ ಸ್ವಾಮ್ಯದ ಸಂಸ್ಥೆಗಳು ನಡೆಸುವ ಗಣಿಗಾರಿಕೆ ಮತ್ತು ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ಗಣಿಗಾರಿಕೆ. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಗಣಿಗಾರಿಕೆ ಅನಿವಾರ್ಯವಾದರೂ ಅದು ನಡೆಯುತ್ತಿರುವ ರೀತಿ ಅಭಿವೃದ್ಧಿಗೆ ಪೂರಕವಾಗಿಲ್ಲ. ಅಂದರೆ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶದ ಅಭಿವೃದ್ಧಿಗೆ ಪೂರಕವಾಗಿಲ್ಲ ಎಂದೇ ಅರ್ಥ. ಗಣಿಗಾರಿಕೆಯಲ್ಲಿ ತೊಡಗಿರುವ ಸಂಸ್ಥೆಗಳ ದೃಷ್ಟಿ ಮುಖ್ಯವಾಗಿ ಕೇಂದ್ರೀಕೃತವಾಗಿರುವುದು ಕೆಳಕಂಡ ಮೂರು ವಿಷಯಗಳ ಮೇಲೆ.

೧. ಸಂಬಂಧಪಟ್ಟ ಇಲಾಖೆಗಳಿಂದ ಹೇಗಾದರೂ ಮಾಡಿ ಲೈಸೆನ್ಸ್ ಪಡೆಯುವುದು

೨. ಆದಷ್ಟು ಬೇಗ ಅದಿರನ್ನು ಸಂಗ್ರಹಿಸುವುದು

೩. ಕಳಪೆ ಅದಿರನ್ನು ಅಲ್ಲಲ್ಲೇ ಎಸೆದು ಸಮೃದ್ಧ ಅದಿರನ್ನು ಮಾತ್ರ ಸಾಗಿಸಿ ಹೆಚ್ಚಿನ ಲಾಭ ಗಳಿಸುವುದು.

ಈ ಮೂರು ವಿಷಯಗಳನ್ನು ಬಿಟ್ಟರೆ ಲೈಸೆನ್ಸ್ ನೀಡುವ ಮೊದಲು ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಹಾಕಿದ ಷರತ್ತುಗಳಾಗಲಿ, ಪರಿಸರ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ನಿಯಮಗಳಾಗಲಿ ಪ್ರಾಮುಖ್ಯತೆಯನ್ನೇ ಪಡೆಯುವುದಿಲ್ಲ. ಗಣಿಗಾರಿಕೆಯಿಂದಾಗಿ ಪರಿಸರದ ಮೇಲಾಗಬಹುದಾದ ಹಾನಿಯ ಬಗ್ಗೆ ಈ ಸಂಸ್ಥೆಗಳಿಗೆ ಸ್ವಯಂ ದೃಷ್ಟಿಯಂತೂ ಮೊದಲೇ ಇಲ್ಲ. ಇದರಿಂದಾಗಿ ಕೇವಲ ಲೋಹಗಳಷ್ಟೇ ಬರಿದಾಗುವುದಲ್ಲದೆ ಬೆಟ್ಟಗುಡ್ಡಗಳಲ್ಲಿರುವ ಅಪರೂಪದ ಅನೇಕ ಸಸ್ಯ, ಪ್ರಾಣಿಗಳೂ ವಿನಾಶದ ಅಂಚಿಗೆ ದೂಡಲ್ಪಡುತ್ತವೆ. ಗಣಿಗಾರಿಕೆಗೆ ಪರಿಸರ ಇಲಾಖೆಯ ಅನುಮತಿಯೂ ಬೇಕು ಎನ್ನುವುದು ಇತ್ತೀಚಿನ ಹೊಸ ಕಾನೂನು. ಆದರೆ ಈ ಅರಿವು ಬರುವ ಹೊತ್ತಿಗೆ ಗಣಿ ಉದ್ಯಮ ಬೃಹತ್ ಉದ್ದಿಮೆಯಾಗಿ ಮಾರ್ಪಾಡಾಗಿಬಿಟ್ಟಿದೆ. ಸಾಯುವ ಸ್ಥಿತಿಯಲ್ಲಿರುವ ವ್ಯಕ್ತಿಗೆ ಕೊನೆಯ ಗುಟುಕು ನೀರನ್ನು ಕೊಡುವ ಕೆಲಸವನ್ನಷ್ಟೇ ಇದು ಮಾಡಬಲ್ಲುದು. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಗಣಿಗಾರಿಕೆಯಿಂದಾಗಿ ಮರೆಯಾಗಿರುವ ಜೀವಲೋಕದ ಬಗ್ಗೆ ಉತ್ತರಿಸಲಾಗದ ಪ್ರಶ್ನೆಗಳು ನಮ್ಮ ಮುಂದಿವೆ. ಸಾವಿರಾರು ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶ ಮಾನವನ ಖನಿಜದಾಹಕ್ಕೆ ಬಲಿಯಾಗಿದೆ. ಹಸಿರಾಗಿದ್ದ ಪ್ರದೇಶಗಳಲ್ಲಿ ಅನುಪಯುಕ್ತ ಅದಿರಿನ ರಾಶಿ ಬಿದ್ದಿದೆ. ಆಳವಾದ ಕಂದಕಗಳು, ಕೊಚ್ಚಿ ಹೋಗುತ್ತಿರುವ ಕಣಿವೆಗಳ ನೋಟ ಸರ್ವೇಸಾಮಾನ್ಯವಾಗಿಬಿಟ್ಟಿದೆ.

ಗಣಿಗಾರಿಕೆ ನಡೆಯುತ್ತಿರುವ ಪ್ರತಿಯೊಂದು ಜಿಲ್ಲೆಯಲ್ಲೂ ಪ್ರತಿಭಟನೆಗಳೂ ನಡೆಯುತ್ತಲೇ ಇವೆ. ಇದರಲ್ಲಿ ಸಹ್ಯಾದ್ರಿ ಗಣಿ ವಿರೋಧಿ ವೇದಿಕೆ ಪ್ರಮುಖವಾದದ್ದು. ಈ ವೇದಿಕೆ ಸಾಗರದಲ್ಲಿದ್ದು ಮಲೆನಾಡಿನಲ್ಲಿ ಗಣಿಗಾರಿಕೆಯನ್ನು ನಿಲ್ಲಿಸುವುದೇ ಇದರ ಉದ್ದೇಶ. ಈ ವೇದಿಕೆ ಅಸ್ತಿತ್ವಕ್ಕೆ ಬರಲು ಪ್ರಮುಖ ಕಾರಣವೆಂದರೆ, ಶಿವಮೊಗ್ಗ, ಭದ್ರಾವತಿ, ಸಾಗರ, ಶೃಂಗೇರಿ, ಹೊಸನಗರ, ಶಿರಸಿ, ಸಿದ್ಧಾಪುರ, ಹೊನ್ನಾಳಿ, ಸೊರಬ, ಹೊನ್ನಾವರ, ಚೆನ್ನಗಿರಿ ತಾಲೂಕಿನುದ್ದಕ್ಕೂ ಮಲೆನಾಡಿನ ಸುಮಾರು ಇಪ್ಪತ್ತು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ಕೋರಿ ಸುಮಾರು ಮೂವತ್ತೈದು ದೇಶಿ ಹಾಗೂ ವಿದೇಶಿ ಗಣಿಕಂಪೆನಿಗಳು ಅರ್ಜಿ ಹಾಕಿರುವುದು. ಇದು ಆತಂಕಕ್ಕೆ ಎಡೆಮಾಡಿಕೊಟ್ಟು ವೇದಿಕೆಯ ಹುಟ್ಟಿಗೆ ಕಾರಣವಾಯಿತು. ಸರಕಾರವೂ ಸ್ಪಷ್ಟವಾದ ಮಾಹಿತಿಯನ್ನು ನೀಡಲಿಲ್ಲ. ಸಹ್ಯಾದ್ರಿಯ ಹಸಿರು ತಪ್ಪಲಿನಲ್ಲಿ ಪ್ಲಾಟಿನಂ, ಚಿನ್ನ, ಬೆಳ್ಳಿ, ನಿಕ್ಕಲ್ ಹಾಗೂ ವಜ್ರದ ನಿಕ್ಷೇಪಗಳು ಇವೆಯೆಂಬ ಕಾರಣಕ್ಕಾಗಿ ಈ ಕಂಪೆನಿಗಳು ಆಸಕ್ತಿ ತೋರಿಸಿವೆ. ಆದರೆ ಇಲ್ಲಿ ಈ ನಿಕ್ಷೇಪಗಳು ಇವೆಯೇ ಅಥವಾ ಇಲ್ಲವೇ ಎನ್ನುವುದು ಇನ್ನೂ ತೀರ್ಮಾನವಾಗಿಲ್ಲ. ಆದ್ದರಿಂದಲೇ ಈ ಎಲ್ಲಾ ಕಂಪೆನಿಗಳು ಪರಿಶೋಧನಾ ಗಣಿಗಾರಿಕೆಗೆ ಮುಂದಾಗಿವೆ. ಸಹ್ಯಾದ್ರಿ ಗಣಿ ವಿರೋಧಿ ವೇದಿಕೆಯ ಮುಂದಿರುವ ಪ್ರಶ್ನೆಗಳೆಂದರೆ; ಪರಿಶೋಧನಾ

ಗಣಿಗಾರಿಕೆಯ ಮುಂದಿನ ಹಂತವೇನು? ಮತ್ತು ಸರಕಾರಕ್ಕೆ ಮಾಹಿತಿ ಸಂಗ್ರಹಿಸಿಕೊಡಲು ಈ ಕಂಪೆನಿಗಳು ತಮ್ಮ ಹಣವನ್ನೇಕೆ ಖರ್ಚು ಮಾಡುತ್ತಿವೆ? ಎನ್ನುವುದು. ಈ ಗಣಿಗಾರಿಕೆಗೆ ವ್ಯಾಪಕ ವಿರೋಧ ವ್ಯಕ್ತವಾಗಲು ಕಾರಣವೆಂದರೆ ಸಹ್ಯಾದ್ರಿಯ ತಪ್ಪಲಿನಲ್ಲಿರುವ ಫಲವತ್ತಾದ ಭತ್ತದಗದ್ದೆ, ಅಡಿಕೆ ತೋಟ, ತೆಂಗಿನ ತೋಟಗಳು. ಕರ್ನಾಟಕದ ಯಾವುದೇ ಗಣಿ ಯೋಜನಾ ಪ್ರದೇಶದಲ್ಲಿ ನಿಸರ್ಗದ ಇತರ ಆಸ್ತಿಗಳನ್ನು ರಕ್ಷಿಸುವ ಪ್ರಯತ್ನ ಯಶಸ್ವಿಯಾಗದಿರುವುದೇ ಈ ಆತಂಕಕ್ಕೆ ಕಾರಣ. ಏಕೆಂದರೆ ಕುದುರೆಮುಖ, ಬಿಸಗೋಡು, ದಾಂಡೇಲಿ ಮತ್ತು ಸಂಡೂರು ಗಣಿಗಳ ಚಿತ್ರಗಳು ಇನ್ನೂ ಹಸಿಯಾಗಿಯೇ ಇವೆ. ಚಳವಳಿಗಾರರ ದಿಟ್ಟ ನಿಲುವು ಏನೆಂದರೆ, 'ಚಿನ್ನವಲ್ಲ ಅದಕ್ಕಿಂತ ಹೆಚ್ಚಿನ ಯಾವುದೇ ಅಮೂಲ್ಯ ಅದಿರು ಸಿಗುತ್ತದೆಯೆಂದಾದರೂ ಸಹ್ಯಾದ್ರಿಯ ತಪ್ಪಲಿನಲ್ಲಿ ಗಣಿಗಾರಿಕೆ ಮಾತ್ರವಲ್ಲ ಪರಿಶೋಧನ ಗಣಿಗಾರಿಕೆಗೆ ಕೂಡಾ ಅವಕಾಶ ನೀಡಬಾರದು' ಎನ್ನುವುದೇ ಆಗಿದೆ. ಆದರೆ ಈ ಬೇಡಿಕೆಗೆ ಸರಕಾರದಿಂದ ಸಮರ್ಪಕವಾದ ಉತ್ತರ ಬಂದಿಲ್ಲ. ಅದೇ ರೀತಿ ಬಂಡವಾಳಶಾಹಿಯೊಡನೆ ಕೈಜೋಡಿಸಿರುವ ಶ್ರೀಮಂತವರ್ಗದ ನೀತಿಯೂ ಅನುಮಾನಾಸ್ಪದವಾಗಿದೆ. ಏನೇ ಕ್ರಮ ಕೈಗೊಂಡರೂ ಅದನ್ನು ಪಟ್ಟಭದ್ರರು ಹೈಜಾಕ್ ಮಾಡುವ ಸಾಧ್ಯತೆಗಳೇ ಹೆಚ್ಚು.

ಗಣಿಗಾರಿಕೆಯಲ್ಲಿ ಬಳ್ಳಾರಿ ಜಿಲ್ಲೆ ಅಗ್ರಸ್ಥಾನವನ್ನು ಪಡೆದುಕೊಂಡಿದ್ದರೂ ಚಳವಳಿಯ ದೃಷ್ಟಿಯಿಂದ ಅಷ್ಟೇ ಕೆಳಸ್ಥಾನವನ್ನು ಪಡೆದುಕೊಂಡಿದೆ. ಇಲ್ಲಿ ದುಡಿಯುವ ವರ್ಗ ಮತ್ತು ದುಡಿಸುವ ವರ್ಗಗಳು ಮಾತ್ರ ಇದ್ದು ಪ್ರಶ್ನಿಸುವ ಮಧ್ಯಮವರ್ಗ ಗೈರುಹಾಜರಾಗಿದೆ. ಹೊಸ ಆರ್ಥಿಕ ನೀತಿ ಜಾರಿಗೆ ಬಂದನಂತರ ಬೃಹತ್ ಖಾಸಗಿ ಕಂಪೆನಿಗಳು ಬಳ್ಳಾರಿ ಜಿಲ್ಲೆಗೆ ಪ್ರವೇಶಿಸಿ ಕೈಗಾರಿಕೀಕರಣ ಪ್ರಕ್ರಿಯೆ ಚುರುಕುಗೊಳ್ಳುವಂತೆ ಮಾಡಿದವು. ಊಳಿಗಮಾನ್ಯ ವ್ಯವಸ್ಥೆಯೂ ಅಸ್ತಿತ್ವದಲ್ಲಿರುವ ಈ ಜಿಲ್ಲೆ ಕೈಗಾರಿಕೀಕರಣದ ಪ್ರವೇಶದಿಂದಾಗಿ ಅತಂತ್ರ ಸ್ಥಿತಿಯನ್ನು ಎದುರಿಸುತ್ತಿದೆ. ಗಣಿಗಾರಿಕೆಯಿಂದಾಗಿ ಈಗಾಗಲೇ ಅರಣ್ಯಪ್ರದೇಶಗಳು ನಾಶಗೊಂಡಿವೆ. ಆದರೆ ವ್ಯವಸ್ಥಿತ ಹೋರಾಟ ಇನ್ನೂ ರೂಪುಗೊಂಡಿಲ್ಲ. ಸ್ಥಳೀಯ ಶ್ರೀಮಂತವರ್ಗ ಮತ್ತು ಬಂಡವಾಳಶಾಹಿ ಮಾತ್ರ ಈ ಜಿಲ್ಲೆಯಲ್ಲಿ ನಿರ್ಧಾರಕ ಶಕ್ತಿಗಳಾಗಿದ್ದು, ಪರಿಸರ ಸಂಬಂಧಿ ಚಳವಳಿಗಳು ಇನ್ನೂ ಸ್ಪಷ್ಟವಾಗಿ ಕಾಣಿಸಿಕೊಂಡಿಲ್ಲ.

ದೆಹಲಿಯ ವಿಜ್ಞಾನ ಮತ್ತು ಪರಿಸರ ಕೇಂದ್ರದವರು ಭಾರತದ ಪರಿಸರದ ಪರಿಸ್ಥಿತಿಯ ಕುರಿತಾಗಿ ಸಲ್ಲಿಸಿದ ಎರಡನೆಯ ವರದಿಯಲ್ಲಿ ಗಣಿಗಾರಿಕೆಯಲ್ಲಿನ ರಾಜಕೀಯದ ಕುರಿತು ಈ ರೀತಿ ಹೇಳಲಾಗಿದೆ (ಶಿವರಾಮ ಕಾರಂತ, ೧೯೮೬).

"ನಮ್ಮ ದೇಶದಲ್ಲಿ ವಿವಿಧ ಉದ್ದೇಶಗಳಿಗಾಗಿ ಗಣಿಗಾರಿಕೆ ನಡೆಸುತ್ತಾರೆ. ಅಂಥ ಉದ್ದೇಶಗಳಲ್ಲಿ ಕೆಲವು ಸ್ಪಷ್ಟವಾಗಿದ್ದರೆ, ಇನ್ನು ಕೆಲವು ಅಸ್ಪಷ್ಟವಾಗಿವೆ. ನಮ್ಮ ಪಾಲಿಗೆ ಗಣಿಗಳು ವಿದೇಶಿ ವಿನಿಮಯವನ್ನು ಧಾರಾಳವಾಗಿ ಒದಗಿಸುವ ಒಂದು ಮುಖ್ಯ ಸಾಧನ. ಆ ಅದುರಿನ ಬಗ್ಗೆ ಇನ್ನೂ ಒಂದು ನೆಪವಿದೆ- ಅದು ಹಿಂದುಳಿದ ಪ್ರದೇಶಗಳಲ್ಲಿ ಗಣಿಗಾರಿಕೆ ಉದ್ಯೋಗವನ್ನು ಒದಗಿಸುತ್ತದೆ- ಎಂಬ ದೃಷ್ಟಿ. ಇವುಗಳ ಜೊತೆಗೆ ಬಾಯಿಬಿಟ್ಟು ಹೇಳದಿರುವ ಉದ್ದೇಶಗಳೆಂದರೆ- ಇಂಥ ಗಣಿಗಾರಿಕೆಯಿಂದ ಲಾಭ ಬಡುಕುತನ, ಲಂಚ ಮೊದಲಾದ ಅಡ್ಡ ದಾರಿಗಳಿಂದ ಖಾಸಗಿ ಸಂಪತ್ತನ್ನು ಕೂಡಿಸಿ ಕುಬೇರರಾಗಬಹುದಾದ

ಆಕರ್ಷಣೆ! ಚುನಾವಣೆಯ ಸಂದರ್ಭಗಳಲ್ಲಿ ಕುಣಿದಾಡುವ ಕಪ್ಪುಹಣ ಇಂಥವರಿಂದ ಬರುತ್ತದೆ. ಇಂಥ ಅಡ್ಡದಾರಿಗಳು ಕಾಯಿದೆಗೆ ವಿರೋಧವಾದ ದಾರಿಗಳಿಂದ ಸಾಧ್ಯವಾಗಿವೆ. ಅವುಗಳೇನೇ ನಮ್ಮ ಅರಣ್ಯಗಳಿಗೂ, ಕೃಷಿಗೂ ಹಾನಿ ತರುತ್ತಿವೆ. ನಾಡಿನ ಅರಣ್ಯಗಳಿಂದ ನಾಟಗಳನ್ನು ಕದ್ದು ಮಾರುವ ರೀತಿಯಂತೆ, ಗಣಿಗಾರಿಕೆಯೂ ಅನೈತಿಕ ಹಣ ಸಂಪಾದನೆಗೆ ಅವಕಾಶ ಒಗಿಸುತ್ತಲಿದೆ. ಇಂಥ ಇಲ್ಲ ವಿಧಾನಗಳಲ್ಲೂ ಜೀವಾಪಾಯ ತಡೆಗಟ್ಟುವ ಕಾಯಿದೆಗಳೂ, ಶಾಸನಗಳೂ ಮೂಲೆ ಪಾಲಾಗುತ್ತಿವೆ."

"ಗಣಿಗಾರಿಕೆಯಿಂದ ಶ್ರಮಗಾರರ ಬದುಕು ಅಪಾಯಕ್ಕೆ ಗುರಿಯಾಗಿದೆ. ಆಕಸ್ಮಿಕ ಮತ್ತು ಬೇನೆಗಳಿಗೆ ಗುರಿಯಾಗುವ ದುಷ್ಟ ಪರಿಸರದಲ್ಲಿ ಬಾಳುವ ಪರಿಸ್ಥಿತಿ ಕಾಣಿಸಿಕೊಂಡಿದೆ. ಸಾವಿರಾರು ಆದಿವಾಸಿಗಳು, ರೈತರು, ಹೆಂಗಸರು, ಮಕ್ಕಳು ಧೂಳಿನ ಆವರಣದಲ್ಲಿ, ಬಿಸಿಲಲ್ಲಿ ಶ್ರಮಿಸಬೇಕಾಗಿದೆ. ಗಣಿಗಾರಿಕೆಯಿಂದಾಗುವ ಲಾಭವನ್ನು ಎಣಿಸಿಕೊಂಡರೂ ಅದರಿಂದಾಗುವ ಪರಿಸರ ನಷ್ಟ ಮತ್ತು ಜನಗಳ ಸ್ಥಳಾಂತರ ಎಷ್ಟು, ಏನು- ಎಂಬುದನ್ನು ಎಣಿಸಬೇಕು. ಆ ದೃಷ್ಟಿಯಿಂದ ಗಣಿಗಾರಿಕೆಯಿಂದ ಎಂದೂ ಹೆಚ್ಚಿನ ಲಾಭ ಸಿಗದು. ಅದರ ಪ್ರಯೋಜನ ಏನೇ ಇದ್ದರೂ, ಅದು ಸಮಾಜದ ಬಲಿಷ್ಠರ ಪಾಲಿಗೆ ಸಿಗುವಂಥದು. ಗಣಿಗಾರಿಕೆಯನ್ನು ಹಿಂದುಳಿದ ಪ್ರದೇಶದ ಅಭಿವೃದ್ಧಿ ಕಾರ್ಯ ಎನ್ನುವುದಾದರೆ, ಅದು ಅಪಹಾಸ್ಯದ ನುಡಿ ಎನಿಸೀತು." ಈ ವರದಿಗಳಲ್ಲಿ ಗಣಿಗಾರಿಕೆಯ ಸ್ವರೂಪದ ವಾಸ್ತವ ಚಿತ್ರಣ ಸಿಗುತ್ತದೆ.

೩.೨. ತುಂಗಾ ಮೂಲ ಉಳಿಸಿ ಚಳವಳಿ

ಈ ಚಳವಳಿಯೂ ಗಣಿಗಾರಿಕೆಗೆ ಸಂಬಂಧಿಸಿದ್ದೇ ಆಗಿದೆ. ಗಂಗಡಿಕಲ್ಲು-ನೆಲ್ಲಿಬೀಡುಗಳಲ್ಲಿನ ಗಣಿಗಾರಿಕೆಯೇ ಈ ಸಮಸ್ಯೆಯನ್ನು ಹುಟ್ಟುಹಾಕಿದೆ. ಇದು ತುಂಗಾ ಮತ್ತು ಭದ್ರಗಳೆರಡರದ್ದೂ ಅಸ್ತಿತ್ವದ ಪ್ರಶ್ನೆಯಾಗಿದೆ. ನೆಲ್ಲಿಬೀಡು ಭದ್ರೆಯ ಪ್ರಶ್ನೆಯಾದರೆ, ಗಂಗಡಿಕಲ್ಲು ತುಂಗೆಯ ಪ್ರಶ್ನೆಯಾಗಿದೆ. ಗಂಗಡಿಕಲ್ಲು ಕುದುರೆಮುಖ ಅಭಯಾರಣ್ಯಕ್ಕೆ ಸೇರಿದ ಒಂದು ಪ್ರದೇಶ. ಇಲ್ಲಿ ಕುದುರೆಮುಖ ಕಂಪೆನಿಯ ಯತ್ನದಿಂದಾಗಿ ಗಣಿಗಾರಿಕೆ ಆರಂಭಿಸಲು ಕೇಂದ್ರ ಪರಿಸರ ಇಲಾಖೆ ಅನುಮತಿ ನೀಡಿದೆ. ಶಿವಮೊಗ್ಗ, ಕಳಸ, ಶೃಂಗೇರಿಯ ನಾಗರೀಕರು ಕುದುರೆಮುಖ ಕಬ್ಬಿಣದ ಅದಿರಿನ ಕಂಪೆನಿಯ ವಿಸ್ತರಣಾ ಯೋಜನೆಯನ್ನು ವಿರೋಧಿಸಿದರು. ತುಂಗಾ ಮೂಲ ಉಳಿಸಿ ಎಂಬ ಫಲಕ ಹೊತ್ತು ಹಳ್ಳಿಗಳಲ್ಲಿ ಸೈಕಲ್ ಜಾಥಾ ನಡೆಸಿದರು. ತುಂಗಾನದಿಯು ಗಂಗಡಿಕಲ್ಲಿನ ಎರಡು ಪಕ್ಕೆಗಳಿಂದ ಹುಟ್ಟುತ್ತದೆ. ಒಂದು ಗಂಗೆಹೊಳೆಯೆಂತಲೂ ಇನ್ನೊಂದು ಕೊರಕನಹಳ್ಳವೆಂಬ ಹೆಸರಿನಿಂದಲೂ ಹರಿಯುತ್ತವೆ. ಇಲ್ಲಿ ಗಣಿಗಾರಿಕೆ ಪ್ರಾರಂಭಗೊಂಡರೆ ತುಂಗಾನದಿ ಹರಿಯದೇ ಅಂತರ್ಗಾಮಿಯಾಗಿ ನದಿಯ ತಳದಲ್ಲೇ ಹರಿಯುವ ಅಪಾಯವೂ ಇದೆ. ಈ ರೀತಿಯಾದಲ್ಲಿ ಮಧ್ಯ ಕರ್ನಾಟಕದ ಸಮೃದ್ಧ ಪ್ರದೇಶ ತೀವ್ರ ಆರ್ಥಿಕ - ಸಾಮಾಜಿಕ ಸಂಕಷ್ಟಗಳಿಗೆ ಒಳಗಾಗಬೇಕಾಗುತ್ತದೆ. ಇಷ್ಟೊಂದು ಪರಿಸರ ಸಮಸ್ಯೆಗಳನ್ನು ಹುಟ್ಟುಹಾಕುವ ನೆಲ್ಲಿಬೀಡು - ಗಂಗಡಿಕಲ್ಲಿನ ಗಣಿಗಾರಿಕೆಯನ್ನು ನಡೆಸಲೇಬೇಕೆನ್ನುವ ಸಂಚನ್ನು ಸರಕಾರ ನಡೆಸಿದೆ. ಇದರ ಹಿಂದೆ ಬಹುರಾಷ್ಟ್ರೀಯ ಜಯಪ್ರಕಾಶ ಕಂಪೆನಿಯ ಹಿತಾಸಕ್ತಿ ಇರುವುದು ಕಂಡುಬಂದಿದೆ. ಏಕೆಂದರೆ ಬಹುರಾಷ್ಟ್ರೀಯ ಜಯಪ್ರಕಾಶ ಕಂಪೆನಿ ಮಂಗಳೂರಿನಲ್ಲಿ

ಸ್ಥಾಪಿಸುತ್ತಿರುವ ಉಕ್ಕು ಕಾರ್ಖಾನೆಗೆ ಅದಿರಿನ ಮೂಲ ಗಂಗಡಿಕಲ್ಲು. ಅದಕ್ಕಾಗಿ ೩.೫೦ ಮೆಗವ್ಯಾಟ್ ಸಾಮರ್ಥ್ಯದ ಅಣುಸ್ಥಾವರವನ್ನು ಸ್ಥಾಪಿಸಲು ಸರಕಾರ ಮಂಜೂರಾತಿ ನೀಡಿದೆ. ಇದರಲ್ಲಿ ಕುದುರೆಮುಖ ಸರಕಾರಿ ಸ್ವಾಮ್ಯದ ಕಂಪೆನಿಯು ಗಂಗಡಿಕಲ್ಲಿನಲ್ಲಿ ಅದಿರು ತೆಗೆದು ಜಯಪ್ರಕಾಶ್ ಕಂಪೆನಿಗೆ ಪೂರೈಸುವ ಒಡಂಬಡಿಕೆ ನಡೆದಿದೆ. ತುಂಗಾ ಮೂಲ ಉಳಿಸಿ ಹೋರಾಟ ಈ ಒಡಂಬಡಿಕೆಯನ್ನು ತೀವ್ರವಾಗಿ ವಿರೋಧಿಸುತ್ತಿದೆ.

ಶಿವಮೊಗ್ಗಾದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಿಮೋಚನಾರಂಗವು ತುಂಗಾಮೂಲ ಉಳಿಸಿ ಚಳವಳಿಯನ್ನು ಕೈಗೆತ್ತಿಕೊಂಡಿದೆ. ಇದು ಈ ಯೋಜನೆಯಿಂದಾಗುವ ಭೌಗೋಳಿಕ ಪತನ, ಜಲಮೂಲ ನಾಶ, ಬರಗಾಲ ಮುಂತಾದ ಅನಿಷ್ಟಗಳ ಅಧ್ಯಯನ ಕೈಗೊಂಡು ಈ ನಿರ್ಧಾರಕ್ಕೆ ಬಂದಿದೆ. ಅದೇ ರೀತಿ ಬಂಡವಾಳಶಾಹಿಗಳ ಪಿತೂರಿ, ಸರಕಾರದ ಮಧ್ಯವರ್ತಿ ನೀತಿ ಮತ್ತು ಯೋಜನೆಯ ಲಾಭ ನಷ್ಟಗಳ ಅಧ್ಯಯನವನ್ನು ನಡೆಸಿದೆ. ಈ ಚಳವಳಿ ರಾಷ್ಟ್ರಮಟ್ಟದ ಪರಿಸರ ಚಳವಳಿಯಾಗಿ ಪ್ರಚಾರ ಪಡೆದುಕೊಂಡಿದೆ. ಅನೇಕ ರಾಷ್ಟ್ರೀಯ ಪರಿಸರವಾದಿಗಳೂ ಈ ಚಳವಳಿಯಲ್ಲಿ ಭಾಗವಹಿಸಿದ್ದಾರೆ. ಕರ್ನಾಟಕ ವಿಮೋಚನಾ ರಂಗ ಏನೇ ಸಮಸ್ಯೆಗಳು ಎದುರಾದರೂ ಈ ಯೋಜನೆಯನ್ನು ವಿರೋಧಿಸುವುದು ಖಂಡಿತ ಎನ್ನುವ ಹೇಳಿಕೆಯನ್ನು ನೀಡಿದೆ. ಅದೇ ರೀತಿ ಕುದುರೆಮುಖ ಅದಿರು ಕಂಪೆನಿ, ಜಯಪ್ರಕಾಶ್ ಕಂಪೆನಿ ಮತ್ತು ಸರಕಾರದ ನಡುವಿನ ಒಪ್ಪಂದವೂ ಮುಂದುವರಿದುಕೊಂಡೇ ಬಂದಿದೆ. ತುಂಗಾ ಮೂಲ ಉಳಿಸಿ ಚಳವಳಿ ಸರಕಾರ ಮತ್ತು ಬಂಡವಾಳಶಾಹಿಯ ವಿರುದ್ಧ ಜಯಗಳಿಸುತ್ತದೋ ಅಥವಾ ಇನ್ನಿತರ ಯೋಜನೆಗಳಂತೆ ಬಲಾತ್ಕಾರವಾಗಿ ಹಿಮೆಟ್ಟಿಸಲ್ಪಡುತ್ತದೋ ಎನ್ನುವುದನ್ನು ಭವಿಷ್ಯದಲ್ಲಿ ಕಾದು ನೋಡಬೇಕಾಗಿದೆ.

೩.೩. ಪಶ್ಚಿಮಘಟ್ಟ ಉಳಿಸಿ ಚಳವಳಿ

ಇಡೀ ದಕ್ಷಿಣ ಭಾರತದ ಜನಜೀವನದ ಮೇಲೆ ಪಶ್ಚಿಮ ಘಟ್ಟಗಳು ಬೀರಿರುವ ಮಹತ್ತರ ಪ್ರಭಾವವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇವು ಸುಮಾರು ಐವತ್ತು ಮಿಲಿಯ ವರ್ಷಗಳ ಚರಿತ್ರೆಯನ್ನು ಹೊಂದಿವೆ. ಪಶ್ಚಿಮಘಟ್ಟಗಳ ಹೆಚ್ಚಿನ ಭಾಗ ಅಂದರೆ ಸುಮಾರು ೧,೦೦೦ ಕಿ.ಮೀ. ಕರ್ನಾಟಕವೊಂದರಲ್ಲೇ ಹರಡಿದೆ. ಪಶ್ಚಿಮಘಟ್ಟ ಉಳಿಸಿ ಎನ್ನುವ ಚಳವಳಿ ಪ್ರಾರಂಭಗೊಳ್ಳುವುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಗಣಿಗಾರಿಕೆ, ನದಿಮೂಲದ ಸಮಸ್ಯೆ, ವಾಣಿಜ್ಯ ಬೆಳೆ, ಏಕೀಕರಣೋತ್ತರ ಕರ್ನಾಟಕದ ಆಡಳಿತ ಮತ್ತು ಪರಿಸರ ನೀತಿ ಹಾಗೂ ಹೊಸ ಆರ್ಥಿಕ ನೀತಿ ಮತ್ತು ಇದರೊಡನೆ ಬಂದ ಬಹುರಾಷ್ಟ್ರೀಯ ಕಂಪೆನಿಗಳ ಧೋರಣೆಗಳು. ಇವುಗಳ ಜೊತೆಗೆ ಸ್ಥಳೀಯ ಜಾತಿ/ವರ್ಗದ ಹಿನ್ನೆಲೆಯಿಂದ ನಡೆಯುತ್ತಿರುವ ರಾಜಕೀಯವೂ ಈ ಸಮಸ್ಯೆ ಇನ್ನಷ್ಟೂ ತೀವ್ರಗೊಳ್ಳುವಂತೆ ಮಾಡಿತು. ಏಕೀಕರಣಪೂರ್ವ ಮತ್ತು ಏಕೀಕರಣೋತ್ತರ ಘಟ್ಟಗಳಲ್ಲಿ ಪಶ್ಚಿಮಘಟ್ಟಗಳು ಕಾಫಿ, ಟೀ, ಏಲಕ್ಕಿ ತೋಟಗಳಾಗಿ, ರೈಲ್ವೇ ಹಳಿಯ ಅಡಿಪಟ್ಟಿಗಳಾಗಿ, ಅಣೆಕಟ್ಟುಗಳ ಅಡಿಯಲ್ಲಿ ಮುಳುಗಿ, ಗಣಿಗಾರಿಕೆಗೆ ಸಿಲುಕಿ, ಕೈಗಾರಿಕಾ ಕ್ರಾಂತಿಯ ಬೆನ್ನೆಲುಬಾಗಿ, ಮಾನವನ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡವು. ಅಭಿವೃದ್ಧಿ ನಡೆಯಬೇಕಾದರೆ ಇದು ಅನಿವಾರ್ಯ

ಎನ್ನುವುದು ಎಲ್ಲರೂ ಒಪ್ಪತಕ್ಕ ಅಂಶ. ಆದರೆ ಅಭಿವೃದ್ಧಿಗೆ ಬಳಸಿದ ಹಾದಿ ಮಾತ್ರ ಚರ್ಚೆಯ ವಸ್ತುವಾಗಿದೆ. ಕರ್ನಾಟಕ ಏಕೀಕರಣಗೊಂಡ ನಂತರ ಇಲ್ಲಿಯವರೆಗೆ ಸುಮಾರು ಮೂರೂವರೆ ಲಕ್ಷ ಹೆಕ್ಟೇರಿನಷ್ಟು ಪ್ರದೇಶ ವಿವಿಧ ಯೋಜನೆಗಳ ಹೆಸರಿನಲ್ಲಿ ಬಳಕೆಯಾಗಿದೆ. ಇದರಲ್ಲಿ ಜಲವಿದ್ಯುತ್ ಯೋಜನೆಗಳಿಗೆ ಸುಮಾರು ಒಂದು ಲಕ್ಷದ ಮೂವತ್ತು ಸಾವಿರ ಹೆಕ್ಟೇರ್ ಪ್ರದೇಶ ಬಳಕೆಯಾಗಿದೆ. ಸುಮಾರು ಅರವತ್ತು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆ ನಡೆದಿದೆ. ಪಶ್ಚಿಮ ಘಟ್ಟದಲ್ಲಿ ಹುಟ್ಟಿದ ಪ್ರತಿಯೊಂದು ನದಿಯೂ ಒಂದಲ್ಲ ಒಂದು ಕಾರಣಕ್ಕಾಗಿ ಚರ್ಚೆಯಲ್ಲಿದೆ. ಚಕ್ರಾ, ಕಾಳಿ, ಶರಾವತಿ, ಬೇಡ್ತಿ, ಮಹದಾಯಿ, ಅಘನಾಶಿನಿ, ಕಪಿಲೆ ಮುಂತಾದ ನದಿಗಳು ಪಶ್ಚಿಮ ಘಟ್ಟಗಳ ಸಮಸ್ಯೆಯನ್ನೇ ಹೊತ್ತು ಹರಿಯುತ್ತಿವೆ. ಇವುಗಳ ಕುರಿತಾಗಿ ಅಧ್ಯಯನದ ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

ಪಶ್ಚಿಮಘಟ್ಟ ಉಳಿಸಿ ಚಳವಳಿಯ ಸಂದರ್ಭದಲ್ಲಿ ಚರ್ಚೆಗೊಳಗಾದ ಇನ್ನೊಂದು ವಸ್ತು ಪಶ್ಚಿಮಘಟ್ಟದ ಅಭಿವೃದ್ಧಿಯ ಕುರಿತಾದದ್ದು. ಪಶ್ಚಿಮ ಘಟ್ಟದ ಅಭಿವೃದ್ಧಿಗೆಂದು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳಿಂದ ಹಣ ಸಂಗ್ರಹಿಸಲಾಯಿತು. ಕರ್ನಾಟಕ ಸರಕಾರವು ಪಶ್ಚಿಮಘಟ್ಟ ಉಳಿವಿಗಾಗಿ ಬ್ರಿಟನ್‌ಗೆ ಹೊಸ ಯೋಜನೆಯನ್ನು ನೀಡಿತು. ಈ ಕಾರಣಕ್ಕಾಗಿ ಜಂಟಿ ಅರಣ್ಯ ಯೋಜನೆ ರೂಪುಗೊಂಡಿತು. ಬ್ರಿಟನ್ ೨೬೦ ಕೋಟಿ ರೂಪಾಯಿಯನ್ನು ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಗಾಗಿ ನೀಡಿತು. ಇದು ಸರಕಾರ ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ನಡುವಿನ ಒಡಂಬಡಿಕೆ. ಇಲ್ಲಿ ಜನಸಾಮಾನ್ಯರ ಸಹಭಾಗಿತ್ವದ ಪ್ರಶ್ನೆ ಪ್ರಾಮುಖ್ಯತೆಯನ್ನು ಪಡೆದುಕೊಳ್ಳಲೇ ಇಲ್ಲ. ಅರಣ್ಯಾಭಿವೃದ್ಧಿಯ ಕೆಲಸ ಕಾರ್ಯಗಳು ಕೇವಲ ಕಡತಗಳಲ್ಲಿ ಮಾತ್ರ ದಾಖಲಾದವು. ಅರಣ್ಯ ಇಲಾಖೆಯ ಅಧಿಕಾರಿಗಳೇ ರಾಜಾರೋಷವಾಗಿ ಪಶ್ಚಿಮ ಘಟ್ಟಗಳನ್ನು ನಾಶಪಡಿಸುವ ಶಕ್ತಿಗಳೊಡನೆ ಕೈಜೋಡಿಸಿ ಕೊಂಡರು. ಸ್ಥಳೀಯ ಶ್ರೀಮಂತವರ್ಗದ ರಾಜಕೀಯದಿಂದಾಗಿ ಸಾಮಾನ್ಯ ಜನಸಮುದಾಯ ಈ ಬೆಳವಣಿಗೆಗಳತ್ತ ಉದಾಸೀನ ತೋರಲಾರಂಭಿಸಿದರು. ಬಂಡವಾಳಶಾಹಿಯೂ ಇದನ್ನೇ ನಿರೀಕ್ಷಿಸುತ್ತಿತ್ತು. ೧೯೮೨ರಲ್ಲಿ ವಿಶ್ವಬ್ಯಾಂಕ್ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ೨೫ ಕೋಟಿ ರೂಪಾಯಿಗಳನ್ನು ನೀಡಿತ್ತು. ಇವುಗಳಲ್ಲಿ ೭೫ ಲಕ್ಷ ಮಲ್ಪೆ, ಮುರಕಲ್ ಹಾಗೂ ಮಡಿಕೇರಿಗಳಲ್ಲಿ ಮೂರು ಟೂರಿಸ್ಟ್ ಹೊಟೇಲ್‌ಗಳ ನಿರ್ಮಾಣಕ್ಕೆ ವೆಚ್ಚವಾಯಿತು. ೭೪ ಲಕ್ಷ ರೂಪಾಯಿಗಳನ್ನು ೩೭೧ ಕಡೆ ಹಳ್ಳ ನದಿಗಳಿಗೆ ಸೇತುವೆ, ರಸ್ತೆನಿರ್ಮಾಣ ಮುಂತಾದವುಗಳಿಗೆ ಖರ್ಚು ಮಾಡಲಾಯಿತು ಎನ್ನುವ ವಿವರಗಳು ಸಿಗುತ್ತವೆ. ಈ ವಿವರಗಳನ್ನು ಯಲ್ಲಪ್ಪರೆಡ್ಡಿ ಮತ್ತು ಸತೀಶ್ ಚಪ್ಪರಿಕೆಯವರು ತಮ್ಮ ಗ್ರಂಥದಲ್ಲಿ ನೀಡಿದ್ದಾರೆ (ಯಲ್ಲಪ್ಪ ರೆಡ್ಡಿ, ಸತೀಶ್ ಚಪ್ಪರಿಕೆ, ೧೯೯೭).

ಪಶ್ಚಿಮ ಘಟ್ಟದ ಅಭಿವೃದ್ಧಿ ಯೋಜನೆಯಡಿಯಲ್ಲಿ ಹರಿದು ಬರುತ್ತಿರುವ ವಿದೇಶಿ ಹಣ ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ ಎನ್ನುವ ಮಾತು ಎಲ್ಲೆಡೆ ಕೇಳಿ ಬರುತ್ತಿದೆ. ಪರಿಸರವನ್ನು ವಸ್ತುವನ್ನಾಗಿಟ್ಟುಕೊಂಡು ಕೆಲಸಮಾಡುತ್ತಿರುವ ನಾಗೇಶ ಹೆಗಡೆಯವರು ತಮ್ಮ 'ಪಶ್ಚಿಮ ಘಟ್ಟಗಳ ಅಳಿವು - ಉಳಿವು' ಎನ್ನುವ ಗ್ರಂಥದಲ್ಲಿ ಈ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಸುಮಾರು ೧೯೮೦ರಿಂದ ಈಚೆಗೆ ಪಶ್ಚಿಮ ಘಟ್ಟಗಳನ್ನು ಉಳಿಸಿ ಎನ್ನುವ ಹೆಸರಿನಲ್ಲಿ ಚಳವಳಿಗಳು ನಡೆದಿವೆ. ಸಾವಿರಾರು ಸಭೆಗಳು, ವಿಚಾರ ಸಂಕಿರಣಗಳು ನಡೆದಿವೆ ಹಾಗೂ ಲೇಖನಗಳು, ಗ್ರಂಥಗಳು ಬರುತ್ತಲೇ ಇವೆ. ಪರಿಸರ ಹಾಗೂ ಇನ್ನಿತರ

ಇಲಾಖೆಗಳು ಪರಿಸರ ನೀತಿಯ ಕುರಿತಾಗಿ ಹೊಸ ಕಾನೂನು-ಕಾಯಿದೆಗಳನ್ನು ಜಾರಿಗೆ ತಂದು ತಮ್ಮ ಕಡತಗಳಲ್ಲಿ ಪುಟಗಳ ಸಂಖ್ಯೆಯನ್ನಷ್ಟೇ ಹೆಚ್ಚುಗೊಳಿಸುತ್ತಿವೆ. ಇದರಿಂದ ಪಶ್ಚಿಮ ಘಟ್ಟವನ್ನು ಉಳಿಸಲು ಸಾಧ್ಯವಿಲ್ಲ. ಪ್ರಾಮಾಣಿಕವಾಗಿ ಕೆಲಸಮಾಡುತ್ತಿರುವ ಅಧಿಕಾರಿಗಳು ತಮ್ಮ ಅಧಿಕಾರವನ್ನು ಕಳೆದುಕೊಂಡಿದ್ದಕ್ಕೂ ನಿದರ್ಶನಗಳಿವೆ. ಇಲ್ಲಿ ಒಟ್ಟಾರೆಯಾಗಿ ನಿಯಂತ್ರಣ ವ್ಯವಸ್ಥೆ ಸರಕಾರದ ಹಿಡಿತದಲ್ಲಿಲ್ಲ ಎಂದಷ್ಟೇ ಹೇಳಬಹುದು.

ಈ ಸ್ಥಿತಿ ನಿರ್ಮಾಣಗೊಂಡಿದ್ದರಿಂದಾಗಿ ಪಶ್ಚಿಮ ಘಟ್ಟದ ಪಟ್ಟಿಯ ಜನರು ಪರಸ್ಪರ ಮಾತುಕತೆ ನಡೆಸಲು ಪ್ರಾರಂಭಿಸಿದರು. ಕೇರಳ, ಕರ್ನಾಟಕ, ಗೋವಾ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ಪರಿಸರಪ್ರೇಮಿಯ ಸಂಘಟನೆಗಳು ಪಶ್ಚಿಮಘಟ್ಟ ಉಳಿಸಿ ಹೆಸರಿನಲ್ಲಿ ನೂರು ದಿನಗಳ ಬೃಹತ್ ಜಾಥಾವನ್ನು ಸಂಘಟಿಸಿದವು. ಈ ಜಾಥಾದಲ್ಲಿ ಹೊನ್ನಾವರ ಪರಿಸರ ಕೂಟ, ಶಿರಸಿಯ ಅಪ್ಪಿಕೊ ತಂಡ, ಬೆಂಗಳೂರಿನ ಅಣುಶಕ್ತಿ ವಿರೋಧಿ ನಾಗರಿಕ ಶಕ್ತಿ ಮುಂತಾದ ಸಂಘ-ಸಂಸ್ಥೆಗಳ ಸದಸ್ಯರು ಪಾಲ್ಗೊಂಡರು. ಕೇರಳದಿಂದ ಆರಂಭಗೊಂಡ ಈ ಜಾಥಾ ಪೂರ್ತಿ ನೂರು ದಿನಗಳನ್ನು ಪೂರೈಸಿತು. ನೂರು ದಿನಗಳ ಜಾಥಾವನ್ನು ಪೂರೈಸಿರುವುದಷ್ಟೇ ಇದರ ಸಾಧನೆಯಾಯಿತು. ಏಕೆಂದರೆ ಚಳವಳಿಗಾರರ ಯಾವ ಬೇಡಿಕೆಗಳೂ ಈಡೇರಲಿಲ್ಲ. ಪಶ್ಚಿಮಘಟ್ಟಗಳಿಗೆ ಸಂಬಂಧಿಸಿದ ಹಾಗೂ ಗೋವಾ, ಮಹಾರಾಷ್ಟ್ರ ಮತ್ತು ಕರ್ನಾಟಕಗಳ ಸುಮಾರು ೨೦೦೦ ಚದರ ಕಿ. ಮೀ. ಪ್ರದೇಶವನ್ನು 'ನೈಸರ್ಗಿಕ ಸೂಕ್ಷ್ಮ ಪ್ರದೇಶ'ವೆಂದು ಘೋಷಿಸಬೇಕು ಎಂದು ರಾಷ್ಟ್ರೀಯ ಸಂಪನ್ಮೂಲಗಳ ಸಂರಕ್ಷಣಾ ಸಮಿತಿ ಸರಕಾರವನ್ನು ಒತ್ತಾಯಿಸಿತು. ರಾಷ್ಟ್ರೀಯ ಸಂಪನ್ಮೂಲಗಳ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಎಸ್. ಆರ್. ಹಿರೇಮಠ ಅವರು ಇದರ ನೇತೃತ್ವವನ್ನು ವಹಿಸಿದ್ದರು. ಬೆಳಗಾವಿಯ ಪರಿಸರ ಪ್ರೇಮಿಗಳ ಸಂಘ ಮತ್ತು ಧಾರವಾಡದ ಸಮಾಜ ಪರಿವರ್ತನ ಸಮುದಾಯ ಈ ಕುರಿತು ಸರಕಾರದ ಗಮನವನ್ನು ಸೆಳೆಯುವ ಕೆಲಸವನ್ನು ಮಾಡಿವೆ. ರಾಷ್ಟ್ರೀಯ ಸಂಪನ್ಮೂಲಗಳ ಸಂರಕ್ಷಣಾ ಸಮಿತಿ ಮತ್ತು ಅದರ ಅಂಗಸಂಸ್ಥೆಗಳು ಜನರ ಬೆಂಬಲವನ್ನು ಪಡೆಯುವುದಕ್ಕೋಸ್ಕರ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಸಭೆಗಳನ್ನು ಏರ್ಪಡಿಸಿದವು. ಸಭೆಗಳಲ್ಲಿ ಹೊರಬಂದ ಅಂಶಗಳನ್ನು ಒಟ್ಟುಗೂಡಿಸಿ ಕೇಂದ್ರ ಸರಕಾರಕ್ಕೆ ವರದಿಯನ್ನು ಕಳುಹಿಸಿಕೊಡಲಾಯಿತು. ಆದರೆ ಪಶ್ಚಿಮ ಘಟ್ಟಗಳ ಸಾಲನ್ನು 'ಸೂಕ್ಷ್ಮ ನೈಸರ್ಗಿಕವಲಯ'ವೆಂದು ಘೋಷಿಸಬೇಕೆನ್ನುವ ಪರಿಸರ ಪ್ರೇಮಿಗಳ ಒತ್ತಾಯ ಸರಕಾರಕ್ಕೆ ಹೊಸತೇನಲ್ಲ. ಪರಿಸರ ಮತ್ತು ಅರಣ್ಯ ಇಲಾಖೆಗಳ ಹಾಗೂ ಸಚಿವಾಲಯದ ಅಧಿಕಾರಿಗಳು ಈ ವರದಿಗಳನ್ನು ಗಂಭೀರವಾಗಿ ಪರಿಗಣಿಸಿದಂತೆ ಕಂಡುಬರುವುದಿಲ್ಲ.

ಈ ಎಲ್ಲ ಕಾರಣಗಳಿಂದಾಗಿ ಪಶ್ಚಿಮ ಘಟ್ಟಗಳ ಅಳಿವು-ಉಳಿವು ಪ್ರಶ್ನೆಯಾಗಿಯೇ ಉಳಿಯಬೇಕಾಯಿತು. ಅಧಿಕಾರಶಾಹಿಗಳ ಮಟ್ಟದಲ್ಲಿ ಧೋರಣೆ ಬದಲಾಗಲೇ ಇಲ್ಲ. ಅಭಿವೃದ್ಧಿ ಮತ್ತು ಪರಿಸರದ ನಡುವೆ ದೊಡ್ಡ ಕಂದಕವೇ ನಿರ್ಮಾಣಗೊಂಡು ಅವೆರಡೂ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ ಎನ್ನುವ ತಪ್ಪು ಭಾವನೆ ಮೂಡಲಾರಂಭಿಸಿತು. ಅಭಿವೃದ್ಧಿ ಮತ್ತು ಪರಿಸರ ಒಂದಕ್ಕೊಂದು ಪೂರಕವಾಗಿದ್ದರೆ

ಮಾತ್ರ ದೇಶದ ಪ್ರಗತಿ ಸಾಧ್ಯ ಎನ್ನುವ ವಾಸ್ತವ ವಿಚಾರ ದೂರವೇ ಉಳಿಯಿತು. ಬಲಾತ್ಕಾರದ ಅಭಿವೃದ್ಧಿ ಸೀಮಿತವರ್ಗದ ಅಭಿವೃದ್ಧಿಯಾಗಬಹುದೇ ವಿನಹ ದೇಶದ ಅಭಿವೃದ್ಧಿಯಲ್ಲ. ಸ್ವಾರ್ಥಪೂರಿತ ಪರಿಸರ ಚಳವಳಿಗಳೂ ಇದರಿಂದ ಹೊರತಾಗಿಲ್ಲ. ಪಶ್ಚಿಮಘಟ್ಟಗಳು ಈ ರೀತಿಯ ಮಾನವ ನಿರ್ಮಿತ ವರ್ತುಲದಲ್ಲಿ ಸಿಕ್ಕಿ ಹಾಕಿಕೊಂಡಿವೆ. ಇದರಿಂದಾಗಿ ಅಭಿವೃದ್ಧಿಯೂ ವ್ಯವಸ್ಥಿತವಾಗಿ ನಡೆಯಲು ಸಾಧ್ಯವಿಲ್ಲ. ಅದೇ ರೀತಿ ಪರಿಸರ ಸಂರಕ್ಷಣೆಯೂ ಚರ್ಚೆಯ ವಸ್ತುವಾಗಿಯೇ ಉಳಿದಿದೆ. ಈ ಎರಡು ಅತಿರೇಕಗಳ ನಡುವೆ ಪ್ರಾರಂಭಗೊಂಡ ಪಶ್ಚಿಮಘಟ್ಟ ಉಳಿಸಿ ಚಳಿವಳಿಯಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಪಶ್ಚಿಮ ಘಟ್ಟಗಳು ನಿಧಾನವಾಗಿ ಕರಗುತ್ತಲೇ ಇವೆ. ಅದೇ ರೀತಿ ಜಾತ್ಯಾಧಾರಿತ ಶ್ರೇಣೀಕೃತ ಸಮಾಜ ವ್ಯವಸ್ಥೆ ಇನ್ನಷ್ಟು ಬಿಗಿಗೊಳ್ಳಲಾರಂಭಿಸಿದ್ದು, ಮೇಲು-ಕೀಳು ಮತ್ತು ಬಡವ-ಧನಿಕರ ನಡುವಿನ ಅಂತರ ಇನ್ನಷ್ಟು ಹೆಚ್ಚಿದೆ. ಇಂಥ ಸಂದರ್ಭಗಳಲ್ಲಿ ನಡೆಯುವ ಚಳವಳಿಗಳ ಸ್ವರೂಪ ಪ್ರಶ್ನಾರ್ಹವಾಗಿದ್ದು, ಆಯಾ ಸಂದರ್ಭದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯ ಒಟ್ಟು ಫಲಿತಾಂಶವಾಗಿರುತ್ತದೆ.

೩.೪. ನೀಲಗಿರಿ ವಿರೋಧಿ ಚಳವಳಿ

ಏಕೀಕರಣೋತ್ತರ ಕರ್ನಾಟಕದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಸಹಯೋಗದೊಂದಿಗೆ ಅನೇಕ ಯೋಜನೆಗಳನ್ನು ಜಾರಿಗೆ ತರಲಾಯಿತು. ಅವುಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯೂ ಒಂದು. ಈ ಯೋಜನೆ ಪ್ರಾರಂಭಗೊಂಡಿರುವುದು ಬಡಜನರ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶದಿಂದ. ಈ ಯೋಜನೆಗೆ ವಿಶ್ವ ಬ್ಯಾಂಕ್ ಮತ್ತು ಬ್ರಿಟನ್ ದೇಶದ ಆರ್ಥಿಕ ಸಹಕಾರ ಸಿಕ್ಕಿದೆ. ಸಾಮಾಜಿಕ ಅರಣ್ಯ ಯೋಜನೆ ಸುಮಾರು ಎಪ್ಪತ್ತರ ದಶಕದಿಂದಲೇ ಕರ್ನಾಟಕದಲ್ಲಿ ಪ್ರಾರಂಭಗೊಂಡಿತು. ಹಲವಾರು ಕೋಟಿ ರೂಪಾಯಿಗಳನ್ನೂ ಈ ಯೋಜನೆಗಾಗಿ ಖರ್ಚು ಮಾಡಲಾಗಿದೆ. ಅರಣ್ಯ ಸೃಷ್ಟಿಯ ಪ್ರಯತ್ನ ಮಾಡುವುದರ ಜೊತೆಯಲ್ಲಿ ಎಷ್ಟೋ ಬೀಳು ನೆಲಗಳನ್ನು ಅಥವಾ ಒಣ ಪ್ರದೇಶಗಳನ್ನು ಅರಣ್ಯಾಭಿವೃದ್ಧಿಯ ಸಲುವಾಗಿ ಸದ್ದುಗದ್ದಲ ಎಬ್ಬಿಸದೆಯೇ ವಿವಿಧ ಔದ್ಯಮಿಕ ಸಂಸ್ಥೆಗಳಿಗೆ ನೀಡುವ ಕೆಲಸವೂ ನಡೆದಿದೆ. ಆದರೆ ಯೋಜನೆಯ ಮುಖ್ಯ ಉದ್ದೇಶವಾದ ಜನಸಾಮಾನ್ಯರ ಪಾಲಿನ ಉರುವಲು ಮತ್ತು ಜಾನುವಾರುಗಳ ಮೇವಿನ ಸಮಸ್ಯೆ ಪರಿಹಾರ ಕಂಡಿಲ್ಲ. ಅರಣ್ಯಾಭಿವೃದ್ಧಿಯ ಹೆಸರಿನಲ್ಲಿ ಪಶ್ಚಿಮ ಘಟ್ಟಗಳಲ್ಲಿ ಈ ಯೋಜನೆಯ ಪ್ರಯೋಗವನ್ನು ನಡೆಸಲಾಯಿತು. ನೀಲಗಿರಿ, ಯೂಕಲಿಪ್ಟಸ್, ಅಕೇಸಿಯಾ, ಅರಿಕ್ಯುಲಿಪಾರ್ಮಿಸ್ ಮುಂತಾದ ವಿದೇಶಿ ಸಸ್ಯಗಳ ಅಭಯಾರಣ್ಯವನ್ನು ಪಶ್ಚಿಮಘಟ್ಟಗಳಲ್ಲಿ ಬೆಳೆಸುವ ಕೆಲಸ ಪ್ರಾರಂಭಗೊಂಡಿತು.

ಸಾಮಾಜಿಕ ಅರಣ್ಯಯೋಜನೆಯಡಿಯಲ್ಲಿ ಹಳ್ಳಿಗರು ಉಪಯೋಗಿಸುತ್ತಿದ್ದ ಗೋಮಾಳ ಮತ್ತು ಇತರ ಸ್ಥಳಗಳಲ್ಲಿ ನೀಲಗಿರಿ ನೆಡುತೋಪನ್ನು ನಿರ್ಮಾಣಮಾಡುವ ತೀರ್ಮಾನವನ್ನು ಸರಕಾರ ಕೈಗೊಂಡಿತು. ಆದರೆ ಈ ತೀರ್ಮಾನ ಕೇವಲ ಸರಕಾರದ್ದು ಮಾತ್ರ ಆಗಿರಲಿಲ್ಲ. ಇದರಲ್ಲಿ ಅನೇಕ ಶಕ್ತಿಗಳು ಸಮ್ಮಿಲನಗೊಂಡಿದ್ದವು. ಟಾಟಾ ಬಿರ್ಲಾಗಳ ಉದ್ಧಾರವೂ ಈ ಯೋಜನೆಯಲ್ಲಿ ಸೇರಿತ್ತು. ಬಡಜನರ ಗೋಮಾಳ ಇವರ ಪ್ರಯೋಗಕ್ಕೆ

ಕಾರ್ಯಕ್ಷೇತ್ರವಾಯಿತು. ರೈತರು ರಾಗಿ, ಭತ್ತ ಬೆಳೆಯುವ ಬದಲಾಗಿ ನೀಲಗಿರಿ ನೆಡುವಂತೆ ಪ್ರಚೋದಿಸಲಾಯಿತು. ನೀಲಗಿರಿ ಬೆಳೆ ಲಾಭದಾಯಕ ಎನ್ನುವ ಆಮಿಷವನ್ನು ರೈತರಿಗೆ ಮೊದಲೇ ಒಡ್ಡಲಾಗಿತ್ತು. ನೀಲಗಿರಿ ನೆಡುತೋಪುಗಳು ಮರವಾದ ಹಾಗೆ ಭೂಮಿಯ ಅಂತರಾಳದಲ್ಲಿ ನೀರಿನ ಸೆಲೆಗಳು ಬತ್ತಿ ಬರಡಾಗತೊಡಗಿದವು. ಇದರಿಂದ ಚಿಂತೆಗೀಡಾದ ರೈತರು ತಮ್ಮ ಕೃಷಿ ಭೂಮಿಯಲ್ಲಿನ ಕೊಳವೆ ಬಾವಿಗಳನ್ನು ಆಳವಾಗಿಸುವುದು ಅನಿವಾರ್ಯವಾಯಿತು. ಇದರಿಂದಾಗಿ ಅಂತರ್ಜಲದ ಸಮಸ್ಯೆ ಇನ್ನೂ ಹೆಚ್ಚಾಗತೊಡಗಿತು. ನೀಲಗಿರಿ ಸಸಿಗಳು ಪರಿಸರ ಸಂರಕ್ಷಣೆಗಿಂತ ಹೆಚ್ಚಾಗಿ ಪರಿಸರ ಮಾಲಿನ್ಯವನ್ನು ಉಂಟುಮಾಡುವ ಸಾಧ್ಯತೆಯೇ ಹೆಚ್ಚಾಗಿರುವುದು ಕಂಡುಬಂತು. ರೇಯಾನ್ ಕಾರ್ಖಾನೆ ನೀಲಗಿರಿಯನ್ನು ಉಪಯೋಗ ಮಾಡುತ್ತಿದ್ದು, ಬೆಳೆಗಾರರಿಗೆ ಪ್ರೋತ್ಸಾಹ ನೀಡಿತು. ಬಡಜನರಿಗೆ ಉರುವಲು ಕಟ್ಟಿಗೆಯನ್ನು ಪೂರೈಸುವ ಬದಲಾಗಿ ಉದ್ದಿಮೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವ ಕೆಲಸದಲ್ಲಿ ಈ ಯೋಜನೆ ಯಶಸ್ವಿಯಾಯಿತೆಂದೇ ಹೇಳಬೇಕು. ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ನೀಲಗಿರಿ ಮರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲಾಗಿದೆ.

ನೀಲಗಿರಿ ಮರಗಳಿಂದಾಗುವ ಕೆಟ್ಟ ಪರಿಣಾಮಗಳನ್ನು ವಿರೋಧಿಸಿ ಹಲವಾರು ಪ್ರದೇಶಗಳಲ್ಲಿ ಚಳವಳಿಗಳು ನಡೆದವು. ೧೯೮೨ರಲ್ಲಿ ಹಾಸನದ ಎಳಗುಂದ ಗ್ರಾಮದಲ್ಲಿ ನೀಲಗಿರಿ ವಿರೋಧಿ ಚಳವಳಿ ಕಾಣಿಸಿಕೊಂಡಿತು. ಅಲ್ಲಿ ಸುಮಾರು ೬೦೦ ಎಕರೆ ಅರಣ್ಯ ಭಾಗವನ್ನು ನೀಲಗಿರಿ ಮರಗಳಿಗಾಗಿ ಬಳಸುವ ಪ್ರಯತ್ನ ಮಾಡಲಾಗಿತ್ತು. ಇದರಿಂದ ಸಿಟ್ಟುಗೊಂಡ ರೈತರು ಮತ್ತು ಪರಿಸರಾಸಕ್ತರು ಅರಣ್ಯ ಇಲಾಖೆ ನೆಟ್ಟ ಗಿಡಗಳನ್ನು ಕಿತ್ತು ತಮ್ಮ ಪ್ರತಿಭಟನೆಯನ್ನು ಸೂಚಿಸಿದರು. ೧೯೮೩ರಲ್ಲಿ ತುಮಕೂರು ಜಿಲ್ಲೆಯಲ್ಲಿ ರೈತರು ನೀಲಗಿರಿ ಸಸಿಗಳನ್ನು ಕಿತ್ತು ನೀಲಗಿರಿ ವಿರೋಧಿ ಚಳವಳಿ ನಡೆಸಿದರು. ಇದೇ ಮಾದರಿಯ ಚಳವಳಿಗಳು ರಾಜ್ಯಾದ್ಯಂತ ಕಾಣಿಸಿಕೊಂಡವು. ಬಡಜನರನ್ನು ನಂಬಿಸಿ ಮೋಸಗೊಳಿಸಿದ ನಂಬಿಕೆ ದ್ರೋಹಿ ಉದ್ದಿಮೆಗಾರರನ್ನು ಮತ್ತು ಸರಕಾರವನ್ನು ವಿರೋಧಿಸಿ ಹರತಾಳಗಳು ನಡೆದವು. ಆದರೂ ಕೋಟ್ಯಾಂತರ ರೂಪಾಯಿಗಳನ್ನು ಆಗಲೇ ಈ ಯೋಜನೆಗಾಗಿ ವ್ಯಯಿಸಲಾಗಿತ್ತು. ಹೊಸ ವಾಹನಗಳು, ಕಾರ್ಯಾಲಯ, ಸಿಬ್ಬಂದಿ ವರ್ಗ, ಹೊಸ ವಿಭಾಗದ ಯೋಜನೆ ಮುಂತಾದ ಕೆಲಸಗಳು ವ್ಯವಸ್ಥಿತವಾಗಿ ನಡೆದವು. ಸಾಮಾಜಿಕ ಅರಣ್ಯ ಯೋಜನೆಯ ಸಾಧನೆಯ ಪಟ್ಟಿಯಲ್ಲಿ ಇದನ್ನೂ ಸೇರಿಸಲಾಯಿತು. ಈ ಯೋಜನೆಯಲ್ಲಿ ತೊಡಗಿಕೊಂಡವರು ಸಾಮಾಜಿಕ ಅರಣ್ಯ ಯೋಜನೆ ಸಫಲವಾಗಿದೆ ಎಂದು ಹೇಳಿಕೊಂಡು ನ್ಯೂನ್ಯತೆಗಳನ್ನು ಬದಿಗಿಟ್ಟು ಮಾನ್ಯತೆಯನ್ನು ಗಿಟ್ಟಿಸಿಕೊಂಡರು ಎನ್ನುವುದು ನೀಲಗಿರಿ ವಿರೋಧಿಗಳ ಅಭಿಪ್ರಾಯ.

ನೀಲಗಿರಿ ಮರಗಳನ್ನು ಬೆಳೆಸುವ ಯೋಜನೆಯ ಪರವಾಗಿಯೂ ವಾದಗಳು ನಡೆದಿವೆ. ಯೋಜನೆಯ ಟೀಕಾಕಾರರು ನೀಲಗಿರಿ ಗಿಡವನ್ನು ಪರಿಸರದ ಪಾಲಿಗೆ ಮೃತ್ಯು ಎಂಬುದಾಗಿ ಕರೆದರೆ, ಅದೊಂದು ಪರಿಸರಕ್ಕೆ ದೈವದತ್ತ ವರ ಎನ್ನುವುದು ನೀಲಗಿರಿ ಮರಗಳ ಪರವಾಗಿ ವಾದಿಸುವವರ ಅಭಿಪ್ರಾಯ. ಈ ಸಾಲಿಗೆ ಕೆ. ಉಲ್ಲಾಸ ಕಾರಂತ ಅವರನ್ನು ಸೇರಿಸಬಹುದು. ಭೂಗತ ನೀರು ತಗ್ಗುವುದಕ್ಕೆ ಆ ಪ್ರದೇಶದಲ್ಲಿ ಸುತ್ತಿರುವ

ಕೊಳವೆ ಬಾವಿಗಳು ಕಾರಣವೇ ಹೊರತು ನೀಲಗಿರಿ ಮರಗಳಲ್ಲ ಎನ್ನುವುದು ಇವರ ಅಭಿಪ್ರಾಯ. ಇಂಥ ವಾದ-ವಿವಾದಗಳು ನಿರಂತರವಾಗಿ ನಡೆದುಕೊಂಡೇ ಬಂದಿವೆ. ಇವು ಪರಿಸರ ದೃಷ್ಟಿಯಿಂದ ಕೂಡಿರದೆ ರಾಜಕೀಯ ದೃಷ್ಟಿಯದ್ದಾಗಿ ಕಂಡುಬರುತ್ತವೆ. ಸಾಮಾಜಿಕ ಅರಣ್ಯ ಯೋಜನೆ ಈ ಕಾರಣಗಳಿಂದಾಗಿ ರಾಜಕೀಯ ಅರಣ್ಯ ಯೋಜನೆಯಾಗಿ ಪರಿವರ್ತನೆಗೊಂಡಿದೆ ಎನ್ನುವ ಅಭಿಪ್ರಾಯವೂ ಸಾರ್ವಜನಿಕರಲ್ಲಿ ಇದೆ. ೧೯೭೬ರ ರಾಷ್ಟ್ರೀಯ ಕಮೀಷನಿನವರು ಸಾಮಾಜಿಕ ಅರಣ್ಯ ಯೋಜನೆಗಳ ಉದ್ದೇಶವೇ ಮೇವಿಗಾಗಿ ಎಂದಿದ್ದರು. ಆದರೆ ಅರಣ್ಯಾಧಿಕಾರಿಗಳು ನೀಲಗಿರಿ ಗಿಡಗಳನ್ನು ದನಕರುಗಳು ಮೆಂದು ಮುಗಿಸುವುದಿಲ್ಲ ಎನ್ನುವ ಕಾರಣದಿಂದಾಗಿ ಆರಿಸಲಾಗಿದೆ ಎಂದಿದ್ದಾರೆ. ಅದೇರೀತಿ ಪರಿಸರ ಇಲಾಖೆಯವರು, "ಯಾವುದೇ ನೈಸರ್ಗಿಕ ಅರಣ್ಯದ ಭಾಗವನ್ನು ಸವರಿ, ಹೊಸ ಅರಣ್ಯಗಳನ್ನು ಬೆಳೆಯಲೇ ಕೂಡದು" ಎಂಬುದಾಗಿ ಶಿಫಾರಸ್ಸು ಮಾಡಿದರೆ, ಅರಣ್ಯ ಇಲಾಖೆಯವರು, "ಇದ್ದ ಅರಣ್ಯಗಳನ್ನು ಸವರಿ, ಅಲ್ಲಿ ಬೇಗನೆ ಬೆಳೆಯುವ ಮರಗಳನ್ನು ನೆಡಸಬೇಕು" ಎನ್ನುತ್ತಾರೆ. ಇಂಥ ದ್ವಂದ್ವಗಳಿಂದ ಕೂಡಿರುವ ಅನೇಕ ಹೇಳಿಕೆಗಳು ಸಾಮಾಜಿಕ ಅರಣ್ಯ ಯೋಜನೆಯುದ್ದಕ್ಕೂ ಕಂಡುಬರುತ್ತವೆ. ಈ ಧೋರಣೆಗಳನ್ನು ಪರಿಸರ ಚಳವಳಿಗಾರರು ಪ್ರಶ್ನಿಸುತ್ತಲೇ ಬಂದಿದ್ದಾರೆ.

ಸಾಮಾಜಿಕ ಅರಣ್ಯ ಯೋಜನೆ ಕರ್ನಾಟಕವೊಂದಕ್ಕೇ ಸೀಮಿತವಾಗಿಲ್ಲ. ಅನೇಕ ರಾಜ್ಯಗಳು ಸಾಮಾಜಿಕ ಅರಣ್ಯ ನಿರ್ಮಾಣದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿವೆ. ಈ ಯೋಜನೆಯಿಂದ ಇನ್ನೊಂದು ಹಸಿರುಕ್ರಾಂತಿಯೇ ಬರುತ್ತದೆ ಎನ್ನುವುದು ಸರಕಾರ ಸಾರುತ್ತಿರುವ ಘೋಷಣೆ. ಆದರೆ ಇದೊಂದು ಜನಹಿತ ವಿರೋಧಿ ಯೋಜನೆ ಎಂಬುದಾಗಿಯೂ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಸಾಮಾಜಿಕ ಅರಣ್ಯ ಕಾರ್ಯಕ್ರಮಗಳಿಂದ ಉತ್ಪಾದನೆಗೊಳ್ಳುವ ಮರಮಟ್ಟು ನಗರಗಳಿಗೋ, ಉದ್ಯಮಗಳಿಗೋ ಹೋಗುತ್ತದೆಯೇ ಹೊರತು ರಾಜ್ಯದ ಗ್ರಾಮೀಣ ಬಡವರಿಗಲ್ಲ. ಉದ್ಯೋಗ ಇಲ್ಲವೇ ಆಹಾರ ಉತ್ಪನ್ನ ಹೆಚ್ಚಿಸುವ ಬದಲು ದೂರದಲ್ಲಿದ್ದು ಬೇಸಾಯದ ಲಾಭವನ್ನು ಪಡೆಯುವ ಜನರಿಗಷ್ಟೇ ಈ ಯೋಜನೆಯಿಂದ ಪ್ರಯೋಜನವಾಗುತ್ತಿದೆ. ಇಡೀ ಯೋಜನೆಯೇ ವ್ಯಾಪಾರಿ ಉದ್ದೇಶದಿಂದ ಕೂಡಿದೆ ಎನ್ನುವ ಅಭಿಪ್ರಾಯ ವ್ಯಾಪಕವಾಗಿ ಕೇಳಿಬಂದಿದೆ. ಯೋಜನಾ ಆಯೋಗದ ಕಾರ್ಯಕ್ರಮ ಕಮಿಟಿಯ ಸದಸ್ಯ ಕಾರ್ಯದರ್ಶಿಯಾಗಿದ್ದ ಟಿ. ಎಲ್. ಶಂಕರರವರ ಪ್ರಕಾರ, "ಬಡಜನರ ಸಲುವಾಗಿ ಸರಕಾರ ಕೈಗೊಂಡ ಹಲವಾರು ಕಾರ್ಯಕ್ರಮಗಳನ್ನು ನೋಡಿದ್ದೇನೆ. ಅವು ಕಟ್ಟ ಕೊನೆಗೆ ಮೇಲ್ತರಗತಿಯ ಜನಗಳ ಲಾಭಕ್ಕಾಗಿ ಸಂದದನ್ನು ಕಂಡಿದ್ದೇನೆ. ಅಂಥ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯೂ ಒಂದು. ಅದು ಮೂಲ ಉದ್ದೇಶಕ್ಕೆ ವ್ಯತಿರಿಕ್ತವಾಗಿ ಸಾಗುತ್ತಿದೆ. ನಮ್ಮ ಅರಣ್ಯ ಇಲಾಖೆಯವರು ಮರಗಳನ್ನು ಬೆಳೆಯುವುದು ಯಾರಿಗಾಗಿ ಮತ್ತು ಯಾತಕ್ಕಾಗಿ - ಎಂಬ ವಿಷಯವನ್ನೇ ನೆನಪಿಗೆ ತಂದುಕೊಳ್ಳುತ್ತಿಲ್ಲ." ಇಲ್ಲಿನ ಒಟ್ಟು ತೀರ್ಮಾನವೆಂದರೆ ಈ ಯೋಜನೆ ಶ್ರೀಮಂತರ ಪರ ಇರುವ ಯೋಜನೆ ಎನ್ನುವುದೇ ಆಗಿದೆ. ಅದೇರೀತಿ ಈ ಯೋಜನೆ ಬಡವರ ಅವಶ್ಯಕತೆ ಪೂರೈಸಲು ವಿಫಲವಾಗಿದ್ದಕ್ಕೆ ಇನ್ನೊಂದು ವಾದವೂ ಇದೆ. ಅದೆಂದರೆ, ಅರಣ್ಯಗಳ ಉಪಯೋಗವನ್ನು ಪಡೆಯಬೇಕಾದ ಗ್ರಾಮಸ್ಥರಿಗೂ,

ಅವನ್ನು ರಕ್ಷಿಸುವ ಅರಣ್ಯ ಇಲಾಖೆಯವರಿಗೂ ಹಿತಕರವಾದ ಸಂಬಂಧ ಬೆಳೆಯದೇ ಹೋದುದು ಎನ್ನುವುದಾಗಿದೆ. ಸಾಮಾಜಿಕ ಸಂಬಂಧಗಳು ಶೋಷಣೆಯ ಸ್ವರೂಪದ್ದಾಗಿರುವಾಗ ಹಿತಕರವಾದ ಸಂಬಂಧಗಳು ಬೆಳೆಯಲು ಸಾಧ್ಯವೇ ಇಲ್ಲ.

೩.೫. ಕುದುರೆಮುಖ ಯೋಜನೆ ಮತ್ತು ರಾಷ್ಟ್ರೀಯ ಉದ್ಯಾನ ನಿರ್ಮಾಣದ ವಿರುದ್ಧ ನಡೆದ ಚಳವಳಿಗಳು

ಪಶ್ಚಿಮಘಟ್ಟಗಳಲ್ಲಿ ನಡೆಯುತ್ತಿರುವ ಯೋಜನೆಗಳಲ್ಲಿ ಅತಿ ದೊಡ್ಡ ಯೋಜನೆಯೆಂದರೆ ಕುದುರೆಮುಖ ಕಬ್ಬಿಣದ ಅದಿರು ಯೋಜನೆ. ಕುದುರೆಮುಖದಲ್ಲಿನ ಶೋಲಾ ಕಾಡುಗಳು ಮತ್ತು ಹುಲ್ಲುಗಾವಲಿನಿಂದಾವೃತವಾದ ಬೆಟ್ಟಗಳು ಈ ಯೋಜನೆಗಾಗಿ ಬಳಕೆಯಾಗಿವೆ. ಸ್ಥಳೀಯರ ಹಾಗೂ ಪರಿಸರವಾದಿಗಳ ಪ್ರತಿಭಟನೆಯ ನಡುವೆಯೂ ಈ ಯೋಜನೆ ನಿರಾತಂಕವಾಗಿ ಪ್ರಾರಂಭಗೊಂಡಿತ್ತು. ಯೋಜನೆ ಪ್ರಾರಂಭಗೊಳ್ಳುವ ಸಂದರ್ಭದಲ್ಲಿ ಎಲ್ಲಾ ರೀತಿಯಿಂದಲೂ ಪರಿಸರ ಸಂರಕ್ಷಣೆ ಕಾರ್ಯಕ್ರಮಗಳನ್ನು ಅನುಸರಿಸಲಾಗುವುದು ಎಂಬ ಪ್ರಚಾರ ನೀಡಲಾಗಿತ್ತು. ಆದರೆ ಈಗ ಈ ನಂಬಿಕೆ ಸಂಪೂರ್ಣ ಬದಲಾಗಿದೆ ಎನ್ನುವುದಾಗಿ ಪರಿಸರ ಸಂಘಟನೆಗಳು ಅಧಿಕಾರಿಗಳನ್ನು ದೂರುತ್ತಿದ್ದಾವೆ. ಗಣಿಗಾರಿಕೆಯಿಂದ ವ್ಯಾಪಕ ಹಾನಿಗೊಳಗಾಗಿರುವ ಪ್ರದೇಶಗಳನ್ನು ಮತ್ತೆ ಅಭಿವೃದ್ಧಿಪಡಿಸುವುದು ಕಷ್ಟದ ಕೆಲಸ. ಅದು ಒಟ್ಟೊಟ್ಟಿಗೇ ಆಗಬೇಕು. ಯೋಜನೆಯ ನಿರ್ಮಾಣಕ್ಕೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ಪರಿಸರ ರಕ್ಷಣೆಗೂ ಕೊಟ್ಟರೆ ಆಗಬಹುದಾದಂತ ಹಾನಿಯ ಪ್ರಮಾಣವನ್ನು ಕಡಿಮೆ ಸಲು ಸಾಧ್ಯ. ಜೀವಿ ಪರಿಸ್ಥಿತಿಯ ಕುರಿತು ಅಧ್ಯಯನ ನಡೆಸಿರುವವರ ಪ್ರಕಾರ ಕುದುರೆಮುಖ ಯೋಜನೆಗಾಗಿ ಆಯ್ಕೆಮಾಡಿದ ಹುಲ್ಲುಗಾವಲು ಹಾಗೂ ಶೋಲಾಕಾಡು ಪರಿಸರ ದೃಷ್ಟಿಯಿಂದ ತುಂಬಾ ಮಹತ್ವವನ್ನು ಹೊಂದಿವೆ. ಆದರೆ ಗಣಿಗಾರಿಕೆಯಿಂದಾಗಿ ಇಲ್ಲಿರುವ ಜೀವಲೋಕ ಮಾಯವಾಗುವ ಸ್ಥಿತಿಯಲ್ಲಿದೆ.

ಪರಿಸರ ಸಂಘಟನೆಗಳು ಇಂಥ ಅನೇಕ ವಿಚಾರಗಳನ್ನು ತಮ್ಮ ಚಳವಳಿಯ ವಸ್ತುವನ್ನಾಗಿಸಿಕೊಂಡಿವೆ. ಭದ್ರಾನದಿ ಈ ಯೋಜನೆಯಿಂದಾಗಿ ಕಲುಷಿತಗೊಂಡು ಪಕ್ಕದ ಹಳ್ಳಿಯ ಜನರಿಗೆ ಕುಡಿಯಲು ಮತ್ತು ಕೃಷಿಗೆ ಬಳಸಲು ಯೋಗ್ಯವಲ್ಲದಂತಾಗಿದೆ. ಗಣಿಗಾರಿಕೆಯ ದೂಳು ಮತ್ತು ಕಬ್ಬಿಣದ ವಾಸನೆ ಸ್ಥಳೀಯ ಜನರ ಆರೋಗ್ಯ ಕೆಡುವಂತೆ ಮಾಡಿದೆ ಎನ್ನುವುದು ಸ್ಥಳೀಯ ಜನರ ಕೊರಗು. ಅಲ್ಲಿನ ಮುಖಂಡರ ಪ್ರಕಾರ, "ಕಬ್ಬಿಣದ ಅದಿರು ಭೂಮಿಯ ಒಳಗೇ ಇದ್ದರೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಗಣಿಗಾರಿಕೆ ಅನಿವಾರ್ಯ. ಆದರೆ ಸರಕಾರ ಗಣಿಗಾರಿಕೆಗೆ ತಲೆಕಡಿಸಿಕೊಂಡಷ್ಟೇ ಸ್ಥಳೀಯ ಜನರ ಸಮಸ್ಯೆಗಳಿಗೂ ತಲೆಕೆಡಿಸಿಕೊಳ್ಳಬೇಕು." ಈ ಮಾತಿನಲ್ಲಿ ಸತ್ಯಾಂಶವಿದೆ. ಆದರೆ ಇಂದಿನ ಸಾಮಾಜಿಕ ನೀತಿ, ರಾಜಕೀಯ ವ್ಯವಸ್ಥೆ ಹಾಗೂ ಹೊಸ ಆರ್ಥಿಕ ನೀತಿ ಸ್ಥಳೀಯರು ರೂಪಿಸಿದ ಈ ಪ್ರಮೇಯವನ್ನು ಅಸ್ತವ್ಯಸ್ತಗೊಳಿಸಿವೆ. ಕುದುರೆಮುಖ ಕಂಪೆನಿಯವರ ಪ್ರಕಾರ ಇದುವರೆಗೆ ಗಣಿಗಾರಿಕೆ ನಡೆಸಿದ ೨೪೭೫ ಎಕರೆ ಪ್ರದೇಶದಲ್ಲಿ ೭೩ ಲಕ್ಷ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆ ಮಾಡಲಾಗಿದೆ. ಆದರೆ ಗಣಿಗಾರಿಕೆ ನಡೆಸಿ ಬೋಳಾಗಿ ಬಿದ್ದಿರುವ ಗುಡ್ಡಗಳನ್ನು ನೋಡಿದರೆ ಈ ಲೆಕ್ಕ ತಪ್ಪಾಗಿದೆ ಎಂದೆನಿಸುತ್ತದೆ. ೧೯೯೨-೯೩ನೇ

ಸಾಲಿನ ಪರಿಸರ ಸಂರಕ್ಷಣಾ ಪ್ರಶಸ್ತಿಯೂ ಈ ಯೋಜನೆಗೆ ಲಭಿಸಿದೆ. ಇದರ ಹಿಂದೆ ಮುಂದೆ ನಡೆದ ಬೆಳವಣಿಗೆಗಳನ್ನು ಹಾಗೂ ಶಕ್ತಿಗಳನ್ನು ಹೆಸರಿಸುವುದು ಮತ್ತು ಚರ್ಚಿಸುವುದು ಅನಗತ್ಯ ಮತ್ತು ಸಮಯ ವ್ಯರ್ಥ ಎನ್ನುವುದು ನನ್ನ ಅಭಿಪ್ರಾಯ. ಅಭಿವೃದ್ಧಿ ನಡೆಯಲಿ, ಆದರೆ ಜನರನ್ನು ಮೋಸಗೊಳಿಸುವ ಮತ್ತು ಸುಳ್ಳು ಹೇಳುವ, ವಂಚಿಸುವ ಪ್ರಯತ್ನಗಳು ಕಡಿಮೆಯಾಗಬೇಕು.

ಕುದುರೆಮುಖ ಇತ್ತೀಚೆಗೆ ಇನ್ನೊಂದು ಸಮಸ್ಯೆಯನ್ನು ಹುಟ್ಟುಹಾಕಿದೆ. ಅದು ಕುದುರೆಮುಖ ರಾಷ್ಟ್ರೀಯ ಉದ್ಯಾನದ ನಿರ್ಮಾಣದ ಪ್ರಶ್ನೆ. ಪರಿಸರ ಚಳವಳಿ ಈ ಸಂಬಂಧವಾಗಿ ಮತ್ತೊಮ್ಮೆ ಕಾಣಿಸಿಕೊಂಡಿದೆ. ರಾಷ್ಟ್ರೀಯ ಉದ್ಯಾನದಲ್ಲಿ ಅನೇಕ ವರ್ಷಗಳಿಂದ ವಾಸಿಸುತ್ತಿರುವ ಮೂಲನಿವಾಸಿಗಳನ್ನು ಹಾಗೂ ಇತರರನ್ನು ಒಕ್ಕಲೆಬ್ಬಿಸುವ ಪ್ರಯತ್ನದ ವಿರುದ್ಧ ಈ ಚಳವಳಿಗಳು ನಡೆಯುತ್ತಿವೆ. ಸರಕಾರ ಈಗಾಗಲೇ (ಸಪ್ಟೆಂಬರ್ ೨, ೧೯೯೭) ಈ ಕುರಿತು ಅಧಿಸೂಚನೆಯನ್ನು ಹೊರಡಿಸಿ ಸುಮಾರು ೬೦ ಸಾವಿರ ಹೆಕ್ಟೇರ್ ಪ್ರದೇಶವನ್ನು ವಶಪಡಿಸಿಕೊಳ್ಳಲು ತೀರ್ಮಾನಿಸಿದೆ. ಇಲ್ಲಿ ಸುಮಾರು ೪,೦೦೦ಕ್ಕೂ ಹೆಚ್ಚು ಕುಟುಂಬಗಳು ನೂರಾರು ವರ್ಷಗಳಿಂದ ವಾಸಮಾಡುತ್ತಿವೆ ಎನ್ನುವ ವಿವರಣೆ ಸಂಬಂಧಿಸಿದ ವರದಿಗಳಿಂದ ತಿಳಿದುಬಂದಿದೆ. ಈ ಯೋಜನೆ ಚಿಕ್ಕಮಗಳೂರು, ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಯ ಅನೇಕ ತಾಲೂಕುಗಳನ್ನು ಒಳಗೊಂಡಿದೆ. ಈ ಸಮಸ್ಯೆಯ ಕುರಿತು ಚರ್ಚಿಸುವಾಗ ಮುಖ್ಯವಾಗಿ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ.

೧. ಕಾಡಿನಲ್ಲಿ ವಾಸಿಸುತ್ತಿರುವ ಜನರು ಕಾಡಿನಲ್ಲಿಯೇ ಇರಬೇಕು, ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನವನ್ನು ಸರಕಾರ ಮಾಡಬಾರದು ಎನ್ನುವುದು ಒಂದು ವಾದ. ದಕ್ಷಿಣ ಕನ್ನಡ ಜಿಲ್ಲಾ ಪರಿಸರಾಸಕ್ತ ಒಕ್ಕೂಟದ ಅಧ್ಯಕ್ಷರಾದ ಶಂಪಾ ದೈತೋಟರವರು ಈ ಸಂಬಂಧವಾಗಿ ನೀಡಿದ ಹೇಳಿಕೆ ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾಗಿದೆ. ಅದೇನೆಂದರೆ, "ಕುದುರೆಮುಖ ರಾಷ್ಟ್ರೀಯ ಉದ್ಯಾನ ಆಗಬೇಕಾದಂತೆ ಆಗುತ್ತಿಲ್ಲ. ಗೊಂದಲದ ವಾತಾವರಣ ಸೃಷ್ಟಿಯಾಗಿದೆ. ಕಾಡು ಯಾವುದು? ನಾಡು ಯಾವುದು? ಎಂಬ ವ್ಯತ್ಯಾಸವೇ ತಿಳಿಯದಂತಾಗಿದೆ. ಅರಣ್ಯ ಮತ್ತು ಕಂದಾಯ ಇಲಾಖೆಗಳ ದಾಖಲಾತಿ ಗಳಲ್ಲಿ ಹೊಂದಾಣಿಕೆ ಇಲ್ಲ. ರಾಷ್ಟ್ರೀಯ ಉದ್ಯಾನವನ್ನಾಗಿ ಪರಿವರ್ತಿಸ ಬೇಕಾದ್ದು ಕಾಡನ್ನೇ ಹೊರತು ಜನವಸತಿಯನ್ನಲ್ಲ. ಉದ್ಯಾನದೊಳಗೆ ಜನವಸತಿ ಇರಬಾರದೆಂದಿದ್ದರೆ, ಅಂಥ ಸ್ಥಳಗಳನ್ನು ಹೊರತುಪಡಿಸಿ ಗಡಿಯನ್ನು ಗುರುತಿಸಿ. ಅಲ್ಲದೆ ಈ ಬುಡಕಟ್ಟಿನ ಜನರು ಕಾಡಿನ ವಿರೋಧಿಗಳಲ್ಲ. ಅವರಿಂದ ಕಾಡು ವರ್ಧಿಸಿದೆ. ಅವರನ್ನು ಇದ್ದಲ್ಲೇ ಉಳಿಸಿಕೊಂಡೂ ಉದ್ಯಾನ ನಿರ್ಮಿಸಬಹುದು." ಇದರೊಡನೆ ಇನ್ನೂ ಎರಡು ಬೇಡಿಕೆಗಳಿವೆ. ಅವುಗಳೆಂದರೆ ಈಗಾಗಲೇ ಭಯಪಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಕುಟುಂಬಕ್ಕೆ ತಕ್ಷಣ ಸೂಕ್ತ ಪರಿಹಾರ ಒದಗಿಸುವುದು ಮತ್ತು ಅರಣ್ಯ ಇಲಾಖೆ ಅರಣ್ಯದ ಸುತ್ತಲೂ ಹಾಕಿಸಿರುವ ಬೇಲಿಯನ್ನು ತೆಗಿಸುವುದು. ಸರಕಾರ ಮತ್ತು ಸಂಬಂಧಪಟ್ಟ ಇಲಾಖೆಗಳು ಈ ಕುರಿತು ಪರಸ್ಪರ ಚರ್ಚಿಸುವಂತೆ ಒಪ್ಪಿಕೊಂಡಿವೆ. ಅದೇ ರೀತಿ ಖಾಸಗಿ

ಜಮೀನಿನಿಂದ ಹೊರಬರುವ ಜನರಿಗೆ ಪರಿಹಾರ, ಪುನರ್‌ವಸತಿ ಮತ್ತಿತರ ಸೌಲಭ್ಯಗಳನ್ನು ಒದಗಿಸುವುದಾಗಿಯೂ ಆಶ್ವಾಸನೆ ನೀಡಲಾಗಿದೆ. ಆದರೆ ಈವರೆಗೆ ಕರ್ನಾಟಕದಲ್ಲಿ ನಡೆದ ಪುನರ್ವಸತಿ ಯೋಜನೆ ಯಶಸ್ವಿಯಾಗಿಲ್ಲ, ಇನ್ನು ಇದರದ್ದೂ ಅದೇ ಗತಿ ಎನ್ನುವುದು ಇವರ ವಾದ.

೨. ಕಾಡಿನಲ್ಲಿ ವಾಸಿಸುತ್ತಿರುವ ಜನರು ಕಾಡಿನಿಂದ ಹೊರಗೆ ಬರಬೇಕು ಎನ್ನುವುದು ಇನ್ನೊಂದು ವಾದ. ಕಾಡಿನಲ್ಲಿಯೇ ಇದ್ದರೆ ಆಧುನಿಕ ಸೌಕರ್ಯ, ಸವಲತ್ತುಗಳಿಂದ ವಂಚಿತರಾಗುತ್ತಾರೆ. ಸರಕಾರದ ಹೊಸ ನೀತಿಯ ಪ್ರಯೋಜನಗಳು ಕೇವಲ ಶ್ರೀಮಂತವರ್ಗಕ್ಕಷ್ಟೇ ಸೀಮಿತವಾಗುತ್ತವೆ. ಮೂಲನಿವಾಸಿಗಳು ಕಾಡಿನಲ್ಲಿಯೇ ಇರಬೇಕೆನ್ನುವ ವಾದಕ್ಕೆ ಬಲವಾದ ಹಿನ್ನೆಲೆಯೂ ಇದೆ. ಅದೇನೆದಂರೆ,

೨.೧. ಮೂಲನಿವಾಸಿಗಳು ಕಾಡಿನಿಂದ ಹೊರಗೆ ಬಂದು ಆಧುನಿಕತೆಯ ಪ್ರಯೋಜನ ಪಡೆದುಕೊಂಡರೆ ಈಗಿರುವ ಶ್ರೀಮಂತವರ್ಗದ ಸಾಂಸ್ಕೃತಿಕ ರಾಜಕೀಯ ಅಸಾಧ್ಯ.

೨.೨. ಜಮೀನಿನ ಕೆಲಸಕ್ಕೆ ಆಳುಗಳು ಸಿಗುವ ಸಂಭವವೂ ಕಡಿಮೆ.

೨.೩. 'ಗಿರಿಜನ ಅಭಿವೃದ್ಧಿ' ಎನ್ನುವ ಹೆಸರಿನಲ್ಲಿ ಹಣ ಸಂಗ್ರಹಿಸುವ ತಂತ್ರವೂ ನಡೆಯಲಾರದು.

೨.೪. ಕಾಡಿನಲ್ಲಿ ವಾಸಿಸುತ್ತಿರುವ ಜನರೊಡನೆ ಮೈತ್ರಿಯನ್ನು ಸಂಪಾದಿಸಿಕೊಂಡು ಕಳ್ಳಸಾಗಾಣಿಕೆ ನಡೆಸುವ, ಗಾಂಜಾ ಬೆಳೆಯುವ ಷಡ್ಯಂತ್ರವೂ ನಡೆಯಲಾರದು. ಈ ಕೆಟ್ಟ ಬೆಳವಣಿಗೆಯನ್ನು ತಪ್ಪಿಸಬೇಕಾದರೆ ಕಾಡಿನಲ್ಲಿ ವಾಸಿಸುತ್ತಿರುವ ಜನರಿಗೆ ಯೋಗ್ಯ ಬದಲೀ ವ್ಯವಸ್ಥೆಯಾಗಬೇಕು. ಈ ಎಲ್ಲಾ ಕಾರಣಗಳಿಂದಾಗಿ ಕುದುರೆಮುಖ ಉದ್ಯಾನ ನಿರ್ಮಾಣ ಯೋಜನೆಯೂ ಗೊಂದಲದಲ್ಲಿದೆ ಮತ್ತು ಅಲ್ಲಿನ ಮೂಲನಿವಾಸಿಗಳನ್ನೂ ಗೊಂದಲಕ್ಕೀಡುಮಾಡಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನ ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಖಾತೆಯೇ ಘೋಷಿಸಿರುವ ಪ್ರದೇಶದಲ್ಲಿಯೇ ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ ಒಂದು ವರ್ಷದ ಮಟ್ಟಿಗೆ ತಾತ್ಕಾಲಿಕ ಗಣಿಗಾರಿಕೆಗೆ ಅನುಮತಿ ನೀಡಿರುವುದು ಇನ್ನಷ್ಟು ಗೊಂದಲಗಳನ್ನು ಹುಟ್ಟುಹಾಕಿದೆ. ದಕ್ಷಿಣ ಕನ್ನಡ ಜಿಲ್ಲಾ ಪರಿಸರಾಸಕ್ತ ಒಕ್ಕೂಟ ಗಣಿಗಾರಿಕೆಗೆ ಅನುಮತಿ ನೀಡಿರುವುದನ್ನು ತೀವ್ರವಾಗಿ ಖಂಡಿಸಿದೆ. ವನ್ಯಜೀವಿ ರಕ್ಷಣಾ ಕಾಯ್ದೆ ೧೯೭೨ರ ಅನ್ವಯ ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ ಗಣಿಗಾರಿಕೆಗೆ ಅನುಮತಿ ನೀಡಬಾರದೆಂದು ಒಕ್ಕೂಟ ಒತ್ತಾಯಿಸಿದೆ. ಗಣಿಗಾರಿಕೆ ನಡೆಸಲು ನೀಡಿರುವ ಅನುಮತಿ ಕಾನೂನಿನ ಸ್ಪಷ್ಟ ಉಲ್ಲಂಘನೆ ಎಂದು ಪರಿಸರಾಸಕ್ತ ಒಕ್ಕೂಟ ವಾದಿಸಿದೆ. ರಾಷ್ಟ್ರೀಯ ಉದ್ಯಾನ ಯೋಜನೆಗೆ ಮೂಲ ನಿವಾಸಿಗಳು ಸಮಸ್ಯೆಯಾಗಿದ್ದಾರೆ ಎನ್ನುವ ಅಧಿಕಾರಿಗಳು ಗಣಿಗಾರಿಕೆಗೆ ಅನುಮತಿ ನೀಡಿದ್ದಾದರೂ ಹೇಗೆ ಎನ್ನುವ ಪ್ರಶ್ನೆ ವ್ಯಾಪಕವಾಗಿ ಕಾಣಿಸಿಕೊಂಡಿದೆ. ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಪರಿಸರ ವಿರೋಧಿ

ಕೆಲಸಗಳನ್ನು ಮಾಡುತ್ತಿದೆ ಎಂಬುದಾಗಿ ಆಪಾದಿಸಲಾಗಿದೆ. ಇದೇ ಸಂದರ್ಭದಲ್ಲಿ ಕುದುರೆಮುಖ ಕಂಪೆನಿಯು ಪರಿಸರ ಮಾಲಿನ್ಯ ರಕ್ಷಣೆಗೆ ಕ್ರಮಗಳನ್ನು ಕೈಗೊಂಡಿರುವುದಾಗಿ ಹೇಳುತ್ತಿದೆ. ಒಟ್ಟಾರೆಯಾಗಿ ಕುದುರೆಮುಖ ಇಂದು ಪರಿಸರವಾದಿಗಳ, ರಾಜಕಾರಣಿಗಳ ಹಾಗೂ ಅಧಿಕಾರಿಗಳ ವಿವಿಧ ಉದ್ದೇಶಗಳಿಗೆ ಬಳಕೆಯಾಗುತ್ತಿದೆ.

೩.೬. ನಾಗರಹೊಳೆ-ಬಂಡೀಪುರ ಅಭಯಾರಣ್ಯಕ್ಕೆ ಸಂಬಂಧಿಸಿದ ಚಳವಳಿಗಳು

ನಾಗರಹೊಳೆ ಮತ್ತು ಬಂಡೀಪುರ ಅರಣ್ಯ ಪ್ರದೇಶಗಳು ಅನೇಕ ಕಾರಣಗಳಿಂದಾಗಿ ಏಕೀಕರಣೋತ್ತರ ಕರ್ನಾಟಕದಲ್ಲಿ ಚರ್ಚೆಯ ವಸ್ತುಗಳಾಗಿವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಕಾಡಿಗೆ ಬಿದ್ದ ಬೆಂಕಿಯ ಪ್ರಕರಣ ಮತ್ತು ಗಿರಿಜನರ ಪುನರ್ವಸತಿ ಯೋಜನೆ. ನಾಗರಹೊಳೆ ಮತ್ತು ಬಂಡೀಪುರ ಅರಣ್ಯಗಳ ಅನೇಕ ಪ್ರದೇಶಗಳು ಹಲವು ಬಾರಿ ಬೆಂಕಿಗೆ ಆಹುತಿಯಾಗಿವೆ. ಅಪಾರ ಪ್ರಮಾಣದ ಪ್ರಾಣಿವರ್ಗ ಮತ್ತು ಸಸ್ಯವರ್ಗ ಈ ಬೆಂಕಿಗೆ ಸಿಲುಕಿ ಬೆಂದುಹೋಗಿದ್ದಾವೆ. ೧೯೯೨ರಲ್ಲಿ ಬೆಂಕಿ ಕಾಣಿಸಿಕೊಂಡಾಗ ರಾಜ್ಯಾದ್ಯಂತ ಚಳವಳಿಗಳು ಕಾಣಿಸಿಕೊಂಡವು. ನಂತರ ತನಿಖೆಗಳು ಮುಂದುವರಿದವು. ೧೯೯೨ರಲ್ಲಿ ಬೇಟೆಗಾರ ಚಿಪ್ಪನ ಕೊಲೆ ನಾಗರಹೊಳೆಯಲ್ಲಿ ನಡೆದಾಗ ರೊಚ್ಚಿಗೆದ್ದ ಗ್ರಾಮಸ್ಥರು ಅರಣ್ಯಾಧಿಕಾರಿಗಳ ಮೇಲಿನ ಸಿಟ್ಟಿಗೆ ಕಾಡಿಗೆ ಬೆಂಕಿ ಹಚ್ಚಿ ಸೇಡು ತೀರಿಸಿಕೊಂಡಿದ್ದರು. ೧೯೯೯ರಲ್ಲಿ ಮತ್ತೊಮ್ಮೆ ಬೆಂಕಿ ಬಿದ್ದಾಗ ಇದರ ಹಿಂದೆ ವ್ಯವಸ್ಥಿತ ಕೈವಾಡ ಇದೆಯೆಂಬ ಭಾವನೆ ಎಲ್ಲರಲ್ಲೂ ಮೂಡಿತು.

ರಾಜ್ಯ ಸರಕಾರ ನಾಗರಹೊಳೆಯಲ್ಲಿರುವ ವಿವಿಧ ಜಾತಿಯ ಮರಗಿಡಗಳನ್ನು ಕೆಡವಿ ಸಂಪತ್ತಿನ ಆಶೆಯಿಂದ ತೇಗದ ಸಸಿಗಳನ್ನು ನೆಟ್ಟಿತು. ತೇಗದ ಮರಗಳು ಬೇಸಿಗೆ ಕಾಲದಲ್ಲಿ ಎಲೆ ಉದುರಿಸಿಕೊಂಡು ಅರಣ್ಯವೇ ಬೋಳಾಗಿರುವಂತೆ ಮಾಡುವುದು ಸಹಜ. ಆದರೆ ಈ ಒಣ ಎಲೆಗಳಿಗೆ ಬೆಂಕಿಯ ಒಂದು ಕಿಡಿ ಬಿದ್ದರೂ ಅದು ಕಾಡ್ಗಿಚ್ಚಿನಂತೆ ವ್ಯಾಪಿಸುತ್ತದೆ. ಇದು ಅಲ್ಲಿನ ನಿವಾಸಿಗಳು ನೀಡುವ ವಿವರಣೆಯಾಗಿದೆ. ಇನ್ನೊಂದು ವಿವರಣೆಯೆಂದರೆ ಬೇಟೆಗಾರರ ಮತ್ತು ಮರಗಳ್ಳರ ನಿರಂತರ ಹಾವಳಿಯದ್ದು. ಇವರಿಂದಾಗಿ ಅಭಯಾರಣ್ಯ ವರ್ಷವರ್ಷವೂ ಹೊತ್ತಿ ಉರಿಯುತ್ತದೆ. ಕಾಲಿನಲ್ಲಿ ಬಲವಿದ್ದ ಪ್ರಾಣಿಗಳು ಓಡಿ ಪ್ರಾಣ ಉಳಿಸಿಕೊಂಡರೆ, ಮಲಗಿದ್ದ ಪ್ರಾಣಿಗಳು ಮತ್ತು ಚಿಕ್ಕ ಮರಿಗಳು ಬೆಂಕಿಗೆ ಆಹುತಿಯಾಗುತ್ತವೆ. ನಾಗರಹೊಳೆ ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ ಅವ್ಯವಸ್ಥಿತವಾಗಿ ಬೆಳೆಯುತ್ತಿದೆ. ಕಿಡಿಗೇಡಿಗಳಿಗೆ ಇದು ಆಶ್ರಯತಾಣವೂ ಆಗಿದೆ. ನಾಗರಹೊಳೆ ವನ್ಯಜೀವಿ ಸಂರಕ್ಷಣಾ ಶಿಕ್ಷಣ ಯೋಜನೆಯ ಸಂಚಾಲಕ ಕೆ.ಎಂ. ಚಿಣ್ಣಪ್ಪನವರ ಪ್ರಕಾರ ಎಂಟರಿಂದ ಹತ್ತು ಸಾವಿರ ಎಕರೆ ನಾಗರಹೊಳೆ ಅರಣ್ಯ ಬೆಂಕಿಗೆ ಆಹುತಿಯಾಗಿದೆ. ಆದರೆ ಅಧಿಕಾರಿಗಳ ಪ್ರಕಾರ ೫೦ ಎಕರೆ ಅರಣ್ಯ ಮಾತ್ರ ಬೆಂಕಿಗೆ ಆಹುತಿಯಾಗಿದೆ. ಸಂಬಂಧಪಟ್ಟ ಸಚಿವರ ಪ್ರಕಾರ ನಾಗರಹೊಳೆ ಬೆಂಕಿಯಿಂದ ಯಾವುದೇ ಪ್ರಾಣಿ ಪಕ್ಷಿಗಳಿಗೆ ತೊಂದರೆಯಾಗಿಲ್ಲ ಮತ್ತು ಅಪಾರ ನಷ್ಟವೂ ಆಗಿಲ್ಲ. ಬೆಂಕಿ ಬಿದ್ದ ಪ್ರದೇಶಗಳಿಗೆ ಭೇಟಿ ನೀಡಿದರೆ ಈ ಮಾತಿನಲ್ಲಿ ಯಾವ ಸತ್ಯಾಂಶವೂ ಇಲ್ಲದಿರುವುದು ತಿಳಿದು ಬರುತ್ತದೆ. ನಾಗರಹೊಳೆಗೆ ಬೆಂಕಿ ಬಿದ್ದ ಸಂದರ್ಭದಲ್ಲಿಯೇ ಇತರೆಡೆಗಳಲ್ಲೂ ಭಾರೀ ಬೆಂಕಿ ಅನಾಹುತಗಳಾಗಿವೆ. ಕುಶಾಲನಗರ ಸಮೀಪದ ಆನೆಕಾಡು ರಕ್ಷಿತಾರಣ್ಯ, ಸೋಮವಾರಪೇಟೆ ಸಮೀಪದ ಹುದುಗೂರು, ಬಾಣಾವರ, ಮಡಿಕೇರಿ ತಾಲೂಕಿನ

ನಾಪೋಕ್ಲು ವ್ಯಾಪ್ತಿಯಲ್ಲಿ ಬರುವ ಪೇರೂರು - ಬಲ್ಲಮಾವಟಿಯಲ್ಲಿ ಅಪಾರ ವೆಚ್ಚದ ಸಾಮಾಜಿಕ ಅರಣ್ಯಕ್ಕೆ ಬೆಂಕಿ ಬಿದ್ದಿದೆ. ಕೊಡಗಿನ ಸಂಪದ್ಭರಿತ ಅಭಯಾರಣ್ಯಗಳು ಹೊತ್ತಿ ಉರಿದಿವೆ. ೧೯೯೯ ಬಹುತೇಕ ಅಭಯಾರಣ್ಯಗಳಿಗೆ ವಿಪತ್ತಿನ ವರ್ಷವಾಗಿದೆ. ಅದೇರೀತಿ ಮರವ್ಯಾಪಾರಿಗಳಿಗೆ ಸಂಪತ್ತನ್ನು ವೃದ್ಧಿಸುವ ಸುಗ್ಗಿಯ ಕಾಲವೂ ಆಗಿದೆ. ಅನೇಕ ಪರಿಸರ ಸಂಘಟನೆಗಳ ಪ್ರಕಾರ ಅರಣ್ಯಾಧಿಕಾರಿಗಳ ಭ್ರಷ್ಟತನ ಮತ್ತು ಸರಕಾರದ ಬೇಜವಾಬ್ದಾರಿತನವೇ ಕಾಡಿಗೆ ಬೆಂಕಿ ಬೀಳುವಂತೆ ಮಾಡಿತು.

ನಾಗರಹೊಳೆಗೆ ಬೆಂಕಿ ಬಿದ್ದಿರುವುದು ಅನೇಕ ಬದಲಾವಣೆಗಳಿಗೆ ಕಾರಣವಾಯಿತು. ರಾಜಕೀಯ ಬದಲಾವಣೆಗಳಿಗೆ ಕಾರಣವಾಗಿರುವುದರಿಂದಾಗಿ ಇದು ಹೆಚ್ಚು ಚರ್ಚೆಗೆ ಒಳಗಾಯಿತು. ಅರಣ್ಯ ಸಚಿವರು ರಾಜೀನಾಮೆ ನೀಡಬೇಕೆಂದು ಕೊಡಗು ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಕೂಗು ಕೇಳಲಾರಂಭಿಸಿತು. ಅದೇ ರೀತಿ ಬೆಂಕಿ ನೀಡಿದವರನ್ನು ಪತ್ತೆ ಹಚ್ಚಲು ತನಿಖೆ ಆರಂಭಿಸುವಂತೆ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಕಾರವು ಸದನ ಸಮಿತಿಯನ್ನು ರಚಿಸಬೇಕೆಂದು ಆಗ್ರಹಪಡಿಸಲಾಯಿತು. ಈ ಒತ್ತಾಯಗಳನ್ನು ಪರಿಸರ ಪ್ರೇಮಿಗಳು, ಪರಿಸರ ಸಂಘಟನೆಗಳು ಸರಕಾರಕ್ಕೆ ಮಾಡಿದರು. ಗಿರಿಜನ ಕ್ರಿಯಾ ಕೂಟ ಇದರಲ್ಲಿ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುತ್ತಿದೆ. ಇದರಲ್ಲಿ ೧೪ ಸ್ವಯಂ ಸೇವಾ ಸಂಸ್ಥೆಗಳು ಸೇರಿಕೊಂಡಿವೆ. ಇವುಗಳು ಸರಕಾರದ ವಿರುದ್ಧ ಕಾರ್ಯಾಚರಣೆ ನಡೆಸುವುದಕ್ಕೆ ಕಾರಣಗಳಿವೆ. ನಾಗರಹೊಳೆ ಕಾಡಿಗೆ ಬೆಂಕಿ ಬೀಳುವುದಕ್ಕೆ ಸ್ವಯಂ ಸೇವಾ ಸಂಸ್ಥೆಗಳೇ ಕಾರಣ ಎಂಬುದಾಗಿ ಅರಣ್ಯ ಸಚಿವರು ಹೇಳಿಕೆ ನೀಡಿದ್ದರು. ಈ ಆರೋಪವನ್ನು ಖಂಡಿಸಿ ಸ್ವಯಂ ಸೇವಾ ಸಂಸ್ಥೆಗಳು ಸರಕಾರದ ವಿರುದ್ಧ ಧ್ವನಿ ಎತ್ತಿದವು. ಸರಕಾರದ ಬೇಜವಾಬ್ದಾರಿಯೇ ನಾಗರಹೊಳೆ, ಬಂಡೀಪುರ ಮತ್ತು ಇತರ ಪ್ರದೇಶಗಳಲ್ಲಿ ಬೆಂಕಿ ಹಬ್ಬಲು ಕಾರಣವಾಯಿತು ಎಂಬುದಾಗಿ ಗಿರಿಜನ ಕ್ರಿಯಾಕೂಟ ಆರೋಪಿಸಿದೆ. ಗಿರಿಜನರು ಅರಣ್ಯದಲ್ಲಿ ನೆಲೆಸಬಾರದೆನ್ನುವ ಉದ್ದೇಶವನ್ನೂ ಸರಕಾರ ಹೊಂದಿದೆ. ಈ ಕಾರಣಕ್ಕಾಗಿಯೇ ಕಾವಲುಗಾರರನ್ನಾಗಿಯೂ ಅವರನ್ನು ನೇಮಕ ಮಾಡಿಕೊಂಡಿಲ್ಲ. ನೇಮಕ ಮಾಡಿದ್ದರೆ ಅವರು ಬೆಂಕಿ ಹಬ್ಬಲು ಬಿಡುತ್ತಿರಲಿಲ್ಲ ಎನ್ನುವ ಆರೋಪವನ್ನೂ ಸರಕಾರದ ಮೇಲೆ ಮಾಡಲಾಗಿದೆ.

ಈ ಅಭಯಾರಣ್ಯಗಳಿಗೆ ಸಂಬಂಧಿಸಿದಂತೆ ಇರುವ ಇನ್ನೊಂದು ಸಮಸ್ಯೆಯೆಂದರೆ ಗಿರಿಜನರ ಪುನರ್ವಸತಿಗೆ ಸಂಬಂಧಿಸಿದ್ದು. ರಾಜ್ಯ ಮೂಲನಿವಾಸಿ ವೇದಿಕೆಯ ಸಹ ಸಂಚಾಲಕಿ ಜಾಜಿಯವರು ಗಿರಿಜನರ ಪುನರ್ವಸತಿಯ ಕುರಿತು ಕೆಲಸ ಮಾಡುತ್ತಿದ್ದಾರೆ. ಅರಣ್ಯ ಸಂರಕ್ಷಣೆಯ ಹೆಸರಿನಲ್ಲಿ ಗಿರಿಜನರನ್ನು ಕಾಡಿನಿಂದ ಹೊರಕ್ಕೆ ಹಾಕುವ ಯೋಜನೆ ಸರಕಾರಕ್ಕಿದೆ, ಇದಕ್ಕೆ ವಿದೇಶಿಯರು ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಹುಲಿ ಯೋಜನೆಯ ಬೆಳ್ಳಿಹಬ್ಬ ಆಚರಿಸುತ್ತಿರುವ ಸರಕಾರ ಕಾಡಿನಿಂದ ಸ್ಥಳಾಂತರಿಸಿದ ಗಿರಿಜನರಿಗೆ ಸೌಲಭ್ಯಗಳನ್ನು ಒದಗಿಸಿಲ್ಲ ಎನ್ನುವುದು ಇವರ ಕೊರಗು. ಕಾಡಿನಿಂದ ಹೊರಬಂದಿರುವ ಗಿರಿಜನರು ಸಾಂಪ್ರದಾಯಿಕ ಬದುಕು ಸಾಗಿಸಲು ಅರಣ್ಯ ಸಿಬ್ಬಂದಿ ಬಿಡುತ್ತಿಲ್ಲ, ಪರಿಸರಾಭಿವೃದ್ಧಿ ಯೋಜನೆಯ ಹೆಸರಿನಲ್ಲಿ ಕಿರುಕುಳ ನೀಡಲಾಗುತ್ತಿದೆ ಎನ್ನುವುದು ವೇದಿಕೆಯ ವಾದ. ಸರಕಾರ ಅಭಯಾರಣ್ಯಗಳ ಬಗ್ಗೆ ಖಾಸಗಿ, ವಿದೇಶಿ ವ್ಯಕ್ತಿಗಳಿಂದ ಸಂಶೋಧನೆ ಮಾಡಿಸುವ ಬದಲು ತನ್ನವೇ ಆದ ಸಂಸ್ಥೆಯನ್ನು

ಪ್ರಾರಂಭಿಸಬೇಕು. ಈ ಕುರಿತು ಸರಕಾರವು ಯೋಜನೆ ರೂಪಿಸುವಾಗ ಆದಿವಾಸಿಗಳನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು ಮತ್ತು ಅವರ ಸಹಾಯವನ್ನೂ ಪಡೆಯಬೇಕು ಎಂದು ಸರಕಾರಕ್ಕೆ ಸಲಹೆ ಮಾಡಿದ್ದಾರೆ.• ಗಿರಿಜನರ ಪುನರ್ವಸತಿಗೆ ಸಂಬಂಧಿಸಿದ ಇನ್ನೊಂದು ಅಭಿಪ್ರಾಯವೆಂದರೆ ಗಿರಿಜನರು ಕಾಡಿನಿಂದ ಹೊರಕ್ಕೆ ಬರಬೇಕು ಎನ್ನುವುದು. ಇಂದಿನ ಆಧುನಿಕ ಯುಗದಲ್ಲಿಯೂ ಇವರು ಕಾಡುಪ್ರಾಣಿಗಳಂತೆ ಕಾಡಿನಲ್ಲಿಯೇ ಜೀವಿಸುತ್ತಿರುವುದು ತಪ್ಪು, ಆಧುನಿಕತೆಯ ಸವಲತ್ತುಗಳನ್ನು ಇವರೂ ಪಡೆಯುವಂತಾಗಬೇಕು ಎನ್ನುವ ವಾದವೂ ಕೇಳಿಬರುತ್ತಿದೆ. ಈ ಕುರಿತು ವಾದ-ವಿವಾದಗಳು ನಡೆಯುತ್ತಿವೆ.

೩.೭. ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು

ಏಕೀಕರಣೋತ್ತರ ಕರ್ನಾಟಕದ ಪರಿಸರ ಸಂಬಂಧಿ ಚಳವಳಿಗಳ ಅಧ್ಯಯನ ನಡೆಸುವಾಗ ಉತ್ತರ ಕನ್ನಡ ಜಿಲ್ಲೆ ಮೊದಲ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಈ ಜಿಲ್ಲೆಯೊಂದರಲ್ಲೇ ಅನೇಕ ಯೋಜನೆಗಳು ಅಸ್ತಿತ್ವಕ್ಕೆ ಬಂದಿವೆ. ಇವುಗಳಿಗೆ ಸಂಬಂಧಿಸಿದಂತೆ ಪರಿಸರ ವೇದಿಕೆಗಳು, ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು ಹುಟ್ಟಿಕೊಂಡಿವೆ. ೧೯೭೯-೮೦ರಲ್ಲಿ ಪ್ರತಿಭಟನಾತ್ಮಕ ಜನ ಆಂದೋಲನ ಪ್ರಾರಂಭವಾಯಿತು. ಈ ಜನ ಆಂದೋಲನಗಳ ಸ್ವರೂಪದ ಬಗ್ಗೆ ಅಧ್ಯಯನದ ಮೊದಲನೆಯ ಭಾಗದಲ್ಲಿಯೇ ವಿವರಿಸಲಾಗಿದೆ. ಇಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಜಲ ಮತ್ತು ಅಣು ವಿದ್ಯುತ್ ಯೋಜನೆ, ಜಲಾಶಯ ನಿರ್ಮಾಣ ಹಾಗೂ ಇತರ ಉದ್ದಿಮೆಗಳ ನಿರ್ಮಾಣ ಸಂದರ್ಭದಲ್ಲಾದ ಬೆಳವಣಿಗೆಗಳನ್ನು ಕೆಲವು ಉದಾಹರಣೆಗಳನ್ನು ನೀಡುವ ಮೂಲಕ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಜಿಲ್ಲೆಯಲ್ಲಿ ಈಗಾಗಲೇ ಹೆಚ್ಚು ಪ್ರಚಾರವನ್ನು ಪಡೆದುಕೊಂಡಿರುವ ಯೋಜನೆಗಳೆಂದರೆ, ಸುಪಾ ಜಲಾಶಯ, ದಾಂಡೇಲಿ ಜಲಾಶಯ, ಬೊಮ್ಮನಳ್ಳಿ ಜಲಾಶಯ, ಕದ್ರಾ ಜಲಾಶಯ, ಮಾಗಡೋ ಜಲಾಶಯ, ಅಘನಾಶಿನಿ ಜಲಾಶಯ, ಶರಾವತಿ ಟೇಲ್‌ರೇಸ್, ಲಿಂಗನಮಕ್ಕಿ, ಸೀಬರ್ಡ್ ನೌಕಾನೆಲೆ, ಕಾರವಾರ ಬಂದರು, ಕಾಗೇರಿ ಜಲಾಶಯ, ತಟ್ಟಿಹಳ್ಳಿ ಜಲಾಶಯ, ಕೊಡಸಳ್ಳಿ ಜಲಾಶಯ, ವಾರಾಹಿ ವಿದ್ಯುತ್ ಸ್ಥಾವರ, ಕೈಗಾ ಅಣುಸ್ಥಾವರ, ಗಣಿಗಾರಿಕೆ, ಕೊಂಕಣ ರೈಲ್ವೆ ಇತ್ಯಾದಿ.

ಕಾಳಿನದಿಗೆ ಆರಂಭದಿಂದಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ನದಿಯಿಂದ ನಾಲ್ಕು ಹಂತಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಯನ್ನು ಸರಕಾರ ಹಾಕಿಕೊಂಡಿತು. ಇದರಲ್ಲಿ ಮೊದಲನೇ ಹಂತದ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದ್ದು, ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಎರಡನೆಯ ಹಂತದ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಮೂರನೆಯ ಹಂತದ ವಿದ್ಯುತ್ ಉತ್ಪಾದನೆ ಯೋಜನೆಯ ರೂಪುರೇಷೆಗಳು ಈಗಾಗಲೇ ಸಿದ್ಧವಾಗಿವೆ. ಈ ಎಲ್ಲಾ ಯೋಜನೆಗಳಿಗೂ ಅನುಮತಿ ಸಿಕ್ಕಿದ ಬಳಿಕ ಹೆಚ್ಚು ಚರ್ಚೆಗೊಳಗಾದ ವಿಷಯವೆಂದರೆ ಪುನರ್ವಸತಿಗೆ ಸಂಬಂಧಿಸಿದ್ದು, ಅಂದರೆ ನಿರಾಶ್ರಿತರ ಸಮಸ್ಯೆ. ಪರಿಸರ ಸಂಘಟನೆಗಳೂ ಇದನ್ನೇ ವಸ್ತುವನ್ನಾಗಿರಿಸಿ ಕೊಂಡಿವೆ. ಈ ಯೋಜನೆಗಳು ಅನುಷ್ಠಾನಕ್ಕೆ ಬರಲೇಬಾರದು ಎನ್ನುವ ಪ್ರಾರಂಭಿಕ ಹಂತದ ಹೋರಾಟ ಯಶಸ್ವಿಯಾಗಲಿಲ್ಲ. ಯೋಜನೆಗಳು ಪ್ರಾರಂಭಗೊಳ್ಳುವ ಹಂತದಲ್ಲಿ ಕಾಣಿಸಿಕೊಂಡ ನಿರಾಶ್ರಿತರ ಸಮಸ್ಯೆ ಮತ್ತೊಮ್ಮೆ ಪರಿಸರ ಚಳವಳಿಗಳಿಗೆ ವಸ್ತುವಾಗಿದೆ.

ಹೆಚ್ಚಿನ ಎಲ್ಲಾ ವಿದ್ಯುತ್ ಉತ್ಪಾದನಾ ಯೋಜನೆಗಳು ಉತ್ತರ ಕನ್ನಡ ಜಿಲ್ಲೆಯಲ್ಲೇ ಕೇಂದ್ರೀಕೃತವಾಗಿರುವುದರಿಂದ ನಿರಾಶ್ರಿತರ ಸಮಸ್ಯೆ ಗಂಭೀರ ಸ್ವರೂಪವನ್ನು ಪಡೆದುಕೊಂಡಿದೆ.

೩.೭.೧. ಕಾಳಿ ಜಲವಿದ್ಯುತ್ ಯೋಜನೆ (ಕೊಡಸಳ್ಳಿ ಅಣೆಕಟ್ಟು)

ಕಾಳಿ ನದಿಯ ಎರಡನೆಯ ಹಂತದ ಜಲವಿದ್ಯುತ್ ಯೋಜನೆಗಾಗಿ ಕೊಡಸಳ್ಳಿ ಅಣೆಕಟ್ಟನ್ನು ನಿರ್ಮಿಸಲಾಯಿತು. ಇದರ ನಿರ್ಮಾಣ ಸಂದರ್ಭದಲ್ಲಾದ ಘಟನೆಗಳು ರಾಜ್ಯಾದ್ಯಂತ ಪರಿಸರಪ್ರಿಯರ ಗಮನವನ್ನು ಸೆಳೆದಿವೆ. ಈ ಕುರಿತು ಪರಿಸರ ಪರ ಕಾಳಜಿ ಹೊಂದಿರುವ ಬಿ. ಗಣಪತಿಯವರು ಲೇಖನವೊಂದನ್ನು ಪ್ರಕಟಿಸಿದರು (ಗಣಪತಿ, ೧೯೯೮). ಇದು ಕೊಡಸಳ್ಳಿ ಯೋಜನೆಯ ನಿರ್ಮಾಣ ಸಂದರ್ಭದಲ್ಲಾದ ಹೆಚ್ಚಿನ ಎಲ್ಲಾ ಘಟನೆಗಳನ್ನು ಚಿತ್ರಿಸಿದೆ. ಕೊಡಸಳ್ಳಿ ಬೀರ್ಖೋಲ್ ಗುಡ್ಡಗಳ ನಡುವೆ ಹರಿಯುವ ಕಾಳಿ ನದಿಗೆ ಅಡ್ಡವಾಗಿ ೪೪ ಮೀಟರ್ ಎತ್ತರದ ೪೯೬ ಮೀಟರ್ ಉದ್ದದ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಹಂತದಲ್ಲಿ ೧೨೦ ಮೆಗಾವಾಟ್ ವಿದ್ಯುತ್ ಉತ್ಪಾದಿಸುವುದು ಕೆ.ಪಿ.ಸಿ.ಯ ಉದ್ದೇಶ. ೧೯೬೦ರಲ್ಲಿಯೇ ಈ ಯೋಜನೆಗೆ ಸರ್ವೆ ಕಾರ್ಯ ನಡೆದು ೧೯೭೮ರಲ್ಲಿ ಅಣೆಕಟ್ಟು ಕಟ್ಟುವ ಕೆಲಸವೂ ಆರಂಭಗೊಂಡಿತು. ಕೆ.ಪಿ.ಸಿ.ಯವರು ಪ್ರತೀ ಮಳೆಗಾಲ ಬರುತ್ತಿದ್ದಂತೆಯೇ ಅಣೆಕಟ್ಟಿನಲ್ಲಿ ನೀರು ನಿಲ್ಲಿಸುತ್ತೇವೆ ಎನ್ನುವ ನೋಟೀಸನ್ನು ಅಲ್ಲಿನ ಸ್ಥಳೀಯ ನಿವಾಸಿಗರಿಗೆ ಕಳುಹಿಸಿಕೊಡುತ್ತಿದ್ದರು. ಆದರೆ ಯಾರೂ ಈ ನೋಟೀಸುಗಳನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಎಲ್ಲರೂ ಮನೆ ಖಾಲಿ ಮಾಡಬೇಕು ಎನ್ನುವ ಒತ್ತಾಯ ಬಂದ ಬಳಿಕ ಗ್ರಾಮಸ್ಥರೆಲ್ಲರೂ ಮನಸ್ಸಿಲ್ಲದ ಮನಸ್ಸಿನಿಂದ ತಮ್ಮ ಮನೆ, ಜಮೀನುಗಳನ್ನು ತೆರವು ಮಾಡಲು ನಿರ್ಧರಿಸಿದರು. ಗ್ರಾಮಸ್ಥರು ನಿರೀಕ್ಷಿಸಿದಂತೆ ಯಾವುದೂ ನಡೆಯಲೇ ಇಲ್ಲ. ಕೆ.ಪಿ.ಸಿ.ಯವರು ಅಣೆಕಟ್ಟಿನಲ್ಲಿ ನೀರು ನಿಲ್ಲಿಸುತ್ತೇವೆಂದು ತಿಳಿಸಿದ ದಿನಾಂಕದಿಂದ ಮೊದಲೇ ನೀರು ನಿಲ್ಲಿಸಿದರು. ಸೂಪಾ ಡ್ಯಾಮ್‌ನಿಂದ ಬೃಹತ್ ಪ್ರಮಾಣದ ನೀರನ್ನು ಕೊಡಸಳ್ಳಿ ಅಣೆಕಟ್ಟಿಗೆ ಬಿಡಲಾಯಿತು. ಕೊಡಸಳ್ಳಿ ಅಣೆಕಟ್ಟಿನ ಆರು ಬಾಗಿಲುಗಳನ್ನೂ ಹಾಕಲಾಯಿತು. ಇದರಿಂದ ಗ್ರಾಮಸ್ಥರು ಸಹಜವಾಗಿಯೇ ತಬ್ಬಿಬ್ಬಾದರು. ಮನೆ ತೆರವುಗೊಳಿಸಲು ಸೂಚಿಸಿದ ದಿನಾಂಕದ ಮೊದಲೇ ಗ್ರಾಮಕ್ಕೆ ನೀರು ನುಗ್ಗಿತ್ತು. ಸುಮಾರು ೪೫೦ ಕುಟುಂಬಗಳು ತಮ್ಮ ಮನೆ, ಜಮೀನು ಕಳೆದುಕೊಂಡವು. ಒಂದು ಸಾವಿರಕ್ಕೂ ಹೆಚ್ಚು ಎಕರೆ ಫಲವತ್ತಾದ ತೋಟ, ಗದ್ದೆ ಜಲಾವೃತವಾಯಿತು. ಮೂರು ಸಾವಿರಕ್ಕೂ ಹೆಚ್ಚು ಎಕರೆ ದಟ್ಟಕಾಡು ನೀರುಪಾಲಾಯಿತು. ಕೊಡಸಳ್ಳಿ, ಸಾತೊಡ್ಡಿ, ಬೀರ್ಖೋಲ್, ಬರಬಳ್ಳಿ, ಕಳಚೆ, ಕಟ್ಟಿಗೆ, ಶಿವಪುರ, ಹೋಳಿಗದ್ದೆ, ಹೆಗ್ಗಾರು, ಕಲ್ಲೇಶ್ವರ, ಹಳವಳ್ಳಿ ಗ್ರಾಮಗಳು ನೋಡು ನೋಡುತ್ತಿದ್ದಂತೆಯೇ ಜಲಸಮಾಧಿಯಾದವು.

ಕೊಡಸಳ್ಳಿ ಅಣೆಕಟ್ಟು ವಿರೋಧಿ ಹೋರಾಟ ನಡೆಯುತ್ತಿದ್ದಂತೆಯೇ ಅಣೆಕಟ್ಟು ನಿರ್ಮಾಣ ಪೂರ್ಣಗೊಂಡಿತು. ಚಳವಳಿ ಸಂಪೂರ್ಣವಾಗಿ ವಿಫಲವಾಯಿತು. ನಂತರ ಕೊಡಸಳ್ಳಿ ಜಲವಿದ್ಯುತ್ ಯೋಜನೆಯ ನಿರಾಶ್ರಿತರ ಪುನರ್ವಸತಿ ಸಮಿತಿಯೊಂದನ್ನು ರಚಿಸಲಾಯಿತು. ಹೋರಾಟ ಸಮಿತಿಯ ಧುರೀಣ ಜಿ.ವಿ. ಗಾಂವ್ಕರ್‌ರವರು ಬಿಟ್ಟು

ಬೆಳವಣಿಗೆಯ ಕುರಿತು ಈ ರೀತಿ ಪ್ರತಿಕ್ರಯಿಸಿದ್ದಾರೆ, "ನಾವು ವಿರೋಧಿಸಿದೆವು. ಆದರೆ ಯಾವ ಪರಿಸರವಾದಿಗಳೂ ನಮಗೆ ಬೆಂಬಲ ನೀಡಿಲ್ಲ. ಹೀಗಾಗಿ ನಮ್ಮ ಹೋರಾಟ ಶಕ್ತಿಗುಂದಿತು. ಈಗ ಪುನರ್ವಸತಿಯನ್ನಾದರೂ ಸರಿಯಾಗಿ ಮಾಡಿ ಎಂದು ಹೋರಾಟ ಮಾಡುತ್ತಿದ್ದೇವೆ." ಇನ್ನೊಬ್ಬ ಹೋರಾಟಗಾರ ಡಿ.ಎನ್. ಗಾಂವ್ಕರ್‌ರವರು ತಮ್ಮ ನೋವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ, "ಒಮ್ಮೆಲೇ ನೀರು ನಿಲ್ಲಿಸಿದಾಗ ನಾವು ಜೀವನ್ಮರಣ ಹೋರಾಟ ಮಾಡಬೇಕಾಯಿತು. ಆದರೆ ಆ ಸಂದರ್ಭದಲ್ಲಿ ಯಾವ ಪರಿಸರವಾದಿಗಳೂ ನಮ್ಮನ್ನು ಕಣ್ಣೆತ್ತಿಯೂ ನೋಡಿಲ್ಲ." ಹೋರಾಟ ಸಮಿತಿಯ ಅಧ್ಯಕ್ಷರಾದ ಜಿ.ಆರ್. ಭಟ್‌ರವರು, "ನಮಗೆ ಸುಳ್ಳು ಹೇಳಿ ಮೋಸ ಮಾಡಿದರು" ಎಂದಿದ್ದಾರೆ. ಪುನರ್ವಸತಿಗಾಗಿ ೧,೦೫೦ ಎಕರೆ ಅರಣ್ಯವನ್ನು ಕಡಿದು ಕಾರವಾರ- ಬಳ್ಳಾರಿ ರಾಷ್ಟ್ರೀಯ ಹೆದ್ದಾರಿಯಿಂದ ೧೫ ಕಿ.ಮೀ. ಒಳಗೆ ರಾಮನಗುಳಿ ಎಂಬ ಪ್ರದೇಶವನ್ನು ವ್ಯವಸ್ಥೆಗೊಳಿಸಲಾಯಿತು. ಆದರೆ ವಿಪರ್ಯಾಸವೆಂದರೆ ಇದೂ ಮುಳುಗಡೆಯ ಭೀತಿಯಲ್ಲಿದೆ. ಪುನರ್ವಸತಿ ಪ್ರದೇಶವನ್ನು ಆಯ್ಕೆ ಮಾಡುವಾಗ ನಿರಾಶ್ರಿತರನ್ನು ಗಮನಕ್ಕೆ ತೆಗೆದುಕೊಳ್ಳಲೇ ಇಲ್ಲ, ಎಲ್ಲಾ ನಿರ್ಧಾರಗಳೂ ಏಕಪಕ್ಷೀಯವಾಗಿದ್ದವು. ಜಿಲ್ಲಾ ಆಡಳಿತದ ಪ್ರಕಾರ, ಅಣೆಕಟ್ಟು ಕಟ್ಟುವ ಕೆಲಸ ಪ್ರಾರಂಭವಾಗಿ ಸುಮಾರು ಇಪ್ಪತ್ತೊಂದು ವರ್ಷಗಳೇ ಕಳೆದಿವೆ. ಆದರೂ ಅಲ್ಲಿನ ನಿವಾಸಿಗರು ಬೇರೆ ಕಡೆ ಜಮೀನು ಖರೀದಿಸಿಕೊಂಡಿಲ್ಲ, ಅವರು ಉದಾಸೀನ ಪ್ರವೃತ್ತಿ ತಳೆದರು. ಆದರೆ ಅಲ್ಲಿನ ಗ್ರಾಮಸ್ಥರು ಅಣೆಕಟ್ಟು ನಿರ್ಮಾಣವೇ ಆಗಬಾರದು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಹೋರಾಟ ನಡೆಸಿದ್ದರು. ಒಟ್ಟಾರೆಯಾಗಿ ಕೊಡಸಳ್ಳಿ ಅಣೆಕಟ್ಟು ಯೋಜನೆ ಗೊಂದಲಮಯ ಚಿತ್ರಣವನ್ನು ನೀಡುತ್ತದೆ. ಅಲ್ಲಿನ ಜಿಲ್ಲಾ ಆಡಳಿತ, ಪರಿಸರ ವಾದಿಗಳು, ಸರಕಾರ ಮತ್ತು ವಿವಿಧ ಸಮಿತಿಗಳ ಕಾರ್ಯಚಟುವಟಿಕೆಗಳೂ ಪ್ರಶ್ನಾರ್ಹವಾಗಿವೆ. ಪರಿಸರ ಚಳವಳಿಯಂತೂ ಈ ಕಾರಣಗಳಿಂದಾಗಿ ಸಂಪೂರ್ಣ ವಿಫಲಗೊಂಡಿದೆ. ಉತ್ತರ ಕನ್ನಡ ಜಿಲ್ಲೆಯ ವಿವಿಧ ಯೋಜನೆಗಳ ಸಂದರ್ಭದಲ್ಲಿಯೂ ಇದೇ ರೀತಿಯ ಬೆಳವಣಿಗೆಗಳು ಕಂಡುಬರುತ್ತವೆ.

೩.೭.೨. ಬೇಡ್ತಿ ಚಳವಳಿ

ಪರಿಸರ ಚಳವಳಿಗಳ ಸಾಲಿಗೆ ಇನ್ನೊಂದು ಸೇರ್ಪಡೆ ಬೇಡ್ತಿ ಚಳವಳಿ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿಯುವ ಬೇಡ್ತಿ ನದಿಗೆ ಅಣೆಕಟ್ಟು ಕಟ್ಟಿ ವಿದ್ಯುತ್ ಉತ್ಪಾದಿಸುವುದೇ ಈ ಯೋಜನೆಯ ಗುರಿ. ಈ ಯೋಜನೆಯನ್ನು ಎಂ.ಪಿ.ಸಿ. ಮತ್ತು ರಾಜ್ಯ ಸರಕಾರ ಹಾಕಿಕೊಂಡವು. ಈ ಯೋಜನೆಯಂತೆ ಬೇಡ್ತಿ ನದಿಗೆ ಮೂರು ಹಂತಗಳಲ್ಲಿ ಅಣೆಕಟ್ಟು ಕಟ್ಟಲು ಯೋಜಿಸಲಾಯಿತು. ಪ್ರಥಮ ಹಂತವಾಗಿ ಮಾಗೋಡು ಬಳಿ, ಎರಡನೆಯ ಹಂತವಾಗಿ ಸೋಂದಾ-ಪಟ್ಟಣ ಹೊಳೆಗಳಿಗೆ ಅಣೆಕಟ್ಟುಗಳನ್ನು ಕಟ್ಟುವುದು, ಮೂರನೇ ಹಂತದಲ್ಲಿ ಬಿಳೀಹಳ್ಳಕ್ಕೆ ಅಣೆಕಟ್ಟು ಕಟ್ಟುವುದು. ೧೯೭೨ರಲ್ಲಿಯೇ ಬೇಡ್ತಿ ನದಿಯ ವಿಚಾರವಾಗಿ ಯೋಜನಾ ವರದಿಯನ್ನು ಮಂಡಿಸಲಾಗಿತ್ತು. ಆದರೆ ಇದರ ವಿರುದ್ಧ ಪ್ರತಿಭಟನೆಗಳು ನಡೆದವು. ಸಮಿತಿಯೊಂದನ್ನು ರಚಿಸಲಾಯಿತು. ಆ ಸಮಿತಿಯನ್ನು ಉತ್ತರ ಕನ್ನಡ ಜಿಲ್ಲಾ ಜಲ ವಿದ್ಯುತ್ ವಿರೋಧಿ ಸಮಿತಿ ಎಂಬುದಾಗಿ ಹೆಸರಿಸಲಾಯಿತು. ಕೈಗಾ ಅಣುಸ್ಥಾವರ, ಸೀಬರ್ಡ್ ನೌಕಾನೆಲೆ, ಕಾಳಿ ಮತ್ತು ಶರಾವತಿ ಜಲವಿದ್ಯುತ್,

ಕೊಂಕಣ ರೈಲ್ವೆ, ಚಕ್ರ ಯೋಜನೆ, ವಾರಾಹಿ ಯೋಜನೆ ಮುಂತಾದವುಗಳ ನಿರ್ಮಾಣ ಸಂದರ್ಭದಲ್ಲಾದ ಅನಾಹುತಗಳು ಈ ಸಮಿತಿ ಗಟ್ಟಿಯಾಗಿ ಕೆಲಸ ನಿರ್ವಹಿಸುವಂತೆ ಮಾಡಿದವು.

೧೯೭೯ರ ಜೂನ್‌ನಲ್ಲಿ ಕೇಂದ್ರದ ಯೋಜನಾ ಆಯೋಗ ಬೇಡ್ತಿ ಜಲ ವಿದ್ಯುತ್ ಯೋಜನೆಗೆ ಮಂಜೂರು ನೀಡಿರುವ ಸುದ್ದಿ ತಿಳಿದ ತಕ್ಷಣ ಸಮಿತಿ ಚುರುಕುಗೊಂಡಿತು. ಅದೇ ಹೊತ್ತಿನಲ್ಲಿ ಮಾಗೋಡಿನಲ್ಲಿ ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದ ಕೆಲಸಕಾರ್ಯಗಳು ಪ್ರಾರಂಭಗೊಂಡವು. ಆದರೆ ತಕ್ಷಣ ಬೆಂಗಳೂರು ಚಲೋ ಕಾರ್ಯಕ್ರಮವನ್ನು ಹಮ್ಮಿಕೊಂಡು ಸರಕಾರಕ್ಕೆ ಒತ್ತಡ ತಂದ ಕಾರಣ ತಾತ್ಕಾಲಿಕ ತಡೆಯಾಜ್ಞೆ ಸಿಕ್ಕಿತು. ಇದು ಚಳವಳಿಗಾರರಿಗೆ ಲಭಿಸಿದ ಮೊದಲ ಜಯ. ವಿಧಾನಸಭಾ ಸದಸ್ಯೆಯಾಗಿದ್ದ ಶ್ರೀಮತಿ ಅನಸೂಯಾ ಶರ್ಮ ಈ ಚಳವಳಿಯ ನೇತೃತ್ವ ವಹಿಸಿದ್ದರು. ಸೋಂದಾದ ಸ್ವರ್ಣವಲ್ಲಿ ಮಠದ ಮಠಾಧೀಶರು ಈ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸೋಂದಾದ ಸ್ವರ್ಣವಲ್ಲಿ ಮಠ ಮುಳುಗಡೆಯಾಗುವ ಭೀತಿ ಇದ್ದುದೇ ಸ್ವಾಮಿಗಳ ಭಾಗವಹಿಸುವಿಕೆಗೆ ಮುಖ್ಯ ಕಾರಣವಾಗಿತ್ತು. ಯೋಜನೆಗೆ ಖಾಯಂ ತಡೆಯಾಜ್ಞೆ ಸಿಗಬೇಕೆಂದು ಚಳವಳಿಯನ್ನು ತೀವ್ರಗೊಳಿಸಲಾಯಿತು. ಇದೇ ಸಂದರ್ಭದಲ್ಲಿ ಸಮಿತಿಯು ವಿಜ್ಞಾನಿಗಳನ್ನು ಕರೆಸಿ ಬೇಡ್ತಿ ಯೋಜನೆಯಿಂದಾಗುವ ಪರಿಸರ ನಾಶದ ಕುರಿತು ಅಧ್ಯಯನ ನಡೆಸಿತು. ಇವರು ಯೋಜನೆಯಿಂದಾಗುವ ಸಾಧಕ-ಬಾಧಕಗಳ ಬಗ್ಗೆ ಅಧ್ಯಯನ ಮಾಡಿ ಮಧ್ಯಕಾಲೀನ ವರದಿಯೊಂದನ್ನು ಸಿದ್ಧಗೊಳಿಸಿ ಸಮಿತಿಗೆ ಒಪ್ಪಿಸಿದರು. ಇದು ಪರಿಸರ ಅಸಮತೋಲನದ ಎಲ್ಲಾ ವಿವರಗಳನ್ನು ಹೊಂದಿದ್ದು ಬೇಡ್ತಿ ಯೋಜನೆ ಲಾಭದಾಯಕವಲ್ಲ ಎಂಬ ತೀರ್ಮಾನವನ್ನು ಕೈಗೊಂಡಿತು. ಪರಿಸರವಾದಿ ಸುಂದರ್‌ಲಾಲ್ ಬಹುಗುಣರವರು ಶಿರಸಿಗೆ ಭೇಟಿಕೊಟ್ಟು ಚಳವಳಿಗಾರರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಆದರೂ ಗುಂಡೂರಾವ್ ನೇತೃತ್ವದ ಸರಕಾರ ಬೇಡ್ತಿ ಯೋಜನೆಯ ಬಗ್ಗೆ ಸ್ಪಷ್ಟವಾದ ನಿಲುವನ್ನು ತಳೆಯದಿದ್ದುದು ಚಳವಳಿಗಾರರಲ್ಲಿ ಮತ್ತೊಮ್ಮೆ ಆತಂಕದ ಸ್ಥಿತಿಯನ್ನು ಹುಟ್ಟುಹಾಕಿತು. ಸರಕಾರಕ್ಕೆ ಇನ್ನೂ ಹೆಚ್ಚಿನ ಒತ್ತಡ ಹೇರಲು ೧೯೮೧ರ ಜನವರಿಯಲ್ಲಿ ಅವಿರತ ಸತ್ಯಾಗ್ರಹ ಪ್ರಾರಂಭಗೊಂಡಿತು. ಇದು ಬೇಡ್ತಿ ಯೋಜನೆಗೆ ಮಾತ್ರ ಸಂಬಂಧ ಪಡದೆ ಅಘನಾಶಿನಿ, ಸೋಂದಾ ಹಾಗೂ ಪಟ್ಟಣಹೊಳೆ ಮುಂತಾದ ಎಲ್ಲಾ ಯೋಜನೆಗಳನ್ನೂ ಸರಕಾರ ಕೈ ಬಿಡಬೇಕೆನ್ನುವ ಉದ್ದೇಶವನ್ನು ಹೊಂದಿತ್ತು. ಸತ್ಯಾಗ್ರಹವನ್ನು ಕೈಬಿಡಬೇಕೆಂದು ಸರಕಾರದಿಂದ ಆದೇಶ ಬಂದ ಕಾರಣ ಚಳವಳಿ ತಾತ್ಕಾಲಿಕವಾಗಿ ನಿಂತಿತು. ಆದರೆ ನಂತರ ಸಮಿತಿಯಲ್ಲಿ ಒಡಕು ಕಾಣಿಸಿಕೊಂಡು ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು. ಚಳವಳಿಗಾಗಿ ಎಲ್ಲರೂ ಹಣಸಂಗ್ರಹಿಸಲು ಪ್ರಾರಂಭಿಸಿ ಅದರ ಮೂಲ ಉದ್ದೇಶಕ್ಕೆ ಚ್ಯುತಿ ಬರುವ ರೀತಿಯಲ್ಲಿ ಕೆಲವರು ನಡೆದುಕೊಂಡರು. ಪ್ರತ್ಯೇಕತಾವಾದಿಗಳು ತಮಗೆ ಇಷ್ಟಬಂದಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಇದು ಚಳವಳಿಯೊಳಗಿನ ಆಂತರಿಕ ಬಿಕ್ಕಟ್ಟು.

ಬೇಡ್ತಿ ಯೋಜನೆ ೧೯೯೨ರಲ್ಲಿ ಮತ್ತೊಮ್ಮೆ ಸುದ್ದಿಗೆ ಬಂತು. ಅಂದಿನ ಮುಖ್ಯಮಂತ್ರಿಯವರಾದ ಬಂಗಾರಪ್ಪನವರು ನ್ಯೂಯಾರ್ಕಿನ ಮಾರವಾಡಿ ಒಡೆತನದ

ಅನಿವಾಸಿ ಭಾರತೀಯರ ಕಂಪೆನಿ ಕೈತ್‌ನೆಸ್ ಪವರ್ ಕಾರ್ಪೊರೇಷನ್‌ನೊಂದಿಗೆ ಎರಡು ಒಪ್ಪಂದ ಮಾಡಿಕೊಂಡರು. ಅವುಗಳೆಂದರೆ ೨೧೦ ಮೆ.ವಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ೩೫೦ ಕೋಟಿ ರೂಪಾಯಿ ಬಂಡವಾಳದ ಬೇಡ್ತಿ ಯೋಜನೆ ಹಾಗೂ ೧೨೫ ಕೋಟಿ ರೂಪಾಯಿ ಬಂಡವಾಳದ ೬೦ ಮೆ.ವಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಅಘನಾಶಿನಿ ಯೋಜನೆ. ಇದರಲ್ಲಿ ಓಡುವ ನದಿ ನೀರಿನ (Run off the river) ಯೋಜನೆಯನ್ನೂ ಜಾರಿಗೆ ತರುವ ಪ್ರಯತ್ನವನ್ನು ಮಾಡಲಾಯಿತು. ಇದರಿಂದ ಸಾವಿರಾರು ಎಕರೆ ಸಮೃದ್ಧ ಕೃಷಿ ಪ್ರದೇಶ ಮುಳುಗಡೆಯಾಗುವ ಸಂಭವವಿತ್ತು. ಚಳವಳಿ ಮತ್ತೊಮ್ಮೆ ತೀವ್ರಗೊಂಡಾಗ ಅಘನಾಶಿನಿ ಮಾಡುವುದಿಲ್ಲ, ಬೇಡ್ತಿ ಬಿಡುವುದಿಲ್ಲ ಎಂಬ ನಿರ್ಧಾರವನ್ನು ಸರಕಾರ ಚಳವಳಿಗಾರರಿಗೆ ತಿಳಿಸಿತು. ಸರಕಾರದ ಈ ಧೋರಣೆ ಚಳವಳಿಗಾರರನ್ನು ಸಮಾಧಾನಪಡಿಸಲಿಲ್ಲ. ಸರಕಾರ ಮತ್ತೊಮ್ಮೆ ಬೇಡ್ತಿ ಅಣೆಕಟ್ಟಿನ ಎತ್ತರವನ್ನು ತಗ್ಗಿಸುವ ಪ್ರಸ್ತಾವವನ್ನು ಮುಂದಿಟ್ಟಿತು. ಆದರೆ ಚಳವಳಿಗಾರರು ಸರಕಾರದ ಪ್ರಸ್ತಾವವನ್ನು ಒಪ್ಪಲಿಲ್ಲ. ಇದೇ ಸಂದರ್ಭದಲ್ಲಿ ಪರಿಸರ ಇಲಾಖೆ ಮತ್ತು ಯೋಜನಾ ಆಯೋಗಗಳು ಬೇಡ್ತಿ ಮತ್ತು ಅಘನಾಶಿನಿ ಯೋಜನೆಗಳಿಗೆ ಅನುಮತಿ ನೀಡಿಲ್ಲವೆಂದು ತಿಳಿಸಿತು. ಇದರಿಂದಾಗಿ ಯೋಜನೆಯ ನಿರ್ಮಾಣ ಕಾರ್ಯ ನಿಲ್ಲಬೇಕಾಯಿತು. ಬೇಡ್ತಿ ನದಿಗೆ ಸಣ್ಣ ಸಣ್ಣ ಅಣೆಕಟ್ಟುಗಳನ್ನು ನಿರ್ಮಿಸಿ ವಿದ್ಯುತ್ ಉತ್ಪಾದನೆ ಮಾಡುವುದು ಸೂಕ್ತ ಎಂಬ ಸಲಹೆಯೂ ಕೇಳಿ ಬರಲಾರಂಭಿಸಿತು. ಇದರ ಪರ ಹಾಗೂ ವಿರೋಧ ವಾದಗಳೂ ಹುಟ್ಟಿಕೊಂಡವು. ಈ ರೀತಿ ಬೇಡ್ತಿ ಚಳವಳಿ ಮೇಲ್ನೋಟಕ್ಕೆ ಕಂಡಂತೆ ನಡೆಯಲಿಲ್ಲ.

ಬೇಡ್ತಿ ಯೋಜನೆಯ ಸ್ವರೂಪ ಅನೇಕ ಬಾರಿ ಬದಲಾವಣೆಗೊಂಡಿತು. ಬೇಡ್ತಿ ಚಳವಳಿಯ ಸಂದರ್ಭದಲ್ಲಿ ಅನೇಕ ಪರ ಹಾಗೂ ವಿರೋಧ ಶಕ್ತಿಗಳು ನಿರ್ಣಾಯಕ ಪಾತ್ರವನ್ನು ವಹಿಸಿವೆ. ಸ್ಥಳೀಯ ರಾಜಕೀಯ ಮಾತ್ರವಲ್ಲದೆ ಬಹುರಾಷ್ಟ್ರೀಯ ಕಂಪೆನಿಗಳೂ ಅನೇಕ ಬಾರಿ ಬೇಡ್ತಿ ಚಳವಳಿ ದಾರಿ ತಪ್ಪುವಂತೆ ಮಾಡಿವೆ. ಈ ಕಾರಣಗಳಿಂದಾಗಿ ಬೇಡ್ತಿ ನದಿ ಮತ್ತೊಮ್ಮೆ ಚರ್ಚೆಯ ವಿಷಯವಾಗಿದ್ದು ೧೯೯೯ರಲ್ಲಿ. ಯಲ್ಲಾಪುರ ತಾಲೂಕಿನ ಕಿರವತ್ತಿಯ ಸಮೀಪದ ಕರಿಯವ್ವನಗುಂಡಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮದವರು ಬೇಡ್ತಿ ನದಿಗೆ ಅಣೆಕಟ್ಟು ನಿರ್ಮಿಸಿ ಅಲ್ಲಿನ ನೀರನ್ನು ತಟ್ಟಿಹಳ್ಳ ಜಲಾಶಯಕ್ಕೆ ಸೇರಿಸುವ ಯೋಜನೆಯನ್ನು ಕೈಗೆತ್ತಿ ಕೊಂಡಿರುವುದು ವ್ಯಾಪಕ ಟೀಕೆಗೆ ಕಾರಣವಾಯಿತು. ಕೆ.ಪಿ.ಸಿ.ಯವರು ಈ ಯೋಜನೆಯನ್ನು ತಟ್ಟಿಹಳ್ಳ ವರ್ಧನಾ ಯೋಜನೆ ಎಂಬುದಾಗಿ ಕರೆದರು. ಬೇಡ್ತಿ ನದಿಗೆ ೧೮ ಮೀಟರ್ ಎತ್ತರದ ಅಣೆಕಟ್ಟನ್ನು ನಿರ್ಮಿಸಿ ಅಲ್ಲಿ ಸಂಗ್ರಹವಾಗುವ ನೀರನ್ನು ನಾಲೆಯ ಮೂಲಕ ತಟ್ಟಿಹಳ್ಳ ಜಲಾಶಯಕ್ಕೆ ಸಾಗಿಸುವುದೇ ಇದರ ಮುಖ್ಯ ಉದ್ದೇಶ. ಕೆ.ಪಿ.ಸಿ.ಯವರ ಪ್ರಕಾರ ಈ ಯೋಜನೆಗೆ ೮೮ ಹೆಕ್ಟೇರ್ ಭೂಮಿಯ ಅಗತ್ಯವಿದೆ. ಆದರೆ ಕರ್ನಾಟಕ ವೃಕ್ಷ ಲಕ್ಷ ಆಂದೋಲನವು ಪ್ರೊ. ಕೇಶವ ಹೆಗಡೆಯವರ ನೇತೃತ್ವದಲ್ಲಿ ನಡೆಸಿದ ಅಧ್ಯಯನದ ಪ್ರಕಾರ, ಸಾವಿರಾರು ಎಕರೆ ಅರಣ್ಯ ಹಾಗೂ ಕೃಷಿ ಭೂಮಿ ಈ ಯೋಜನೆಯಿಂದಾಗಿ ತೊಂದರೆಗೆ ಸಿಲುಕಲಿದೆ ಎಂದು ತಿಳಿದುಬಂದಿದೆ.

ಕಿರವತ್ತಿ ಹತ್ತಿ ಬೆಳೆಯುವ ಪ್ರದೇಶವಾಗಿದ್ದು, ಬಿಳಿ ಬಂಗಾರದ ನಾಡು ಎಂದೇ ಹೆಸರುವಾಸಿಯಾಗಿದೆ. ಅದೇರೀತಿ ಮರಮುಟ್ಟು ಸಂಗ್ರಹಾಲಯವೂ ಇದ್ದು ಕಟ್ಟಿಗೆ ಕಣಜ ಎಂಬ ಹೆಸರನ್ನೂ ಪಡೆದಿದೆ. ಗೌಳಿಗರು, ಸಿದ್ದಿ, ಕುಣಬಿ, ಮರಾಠಿ ಮುಂತಾದ ಜನಾಂಗದವರು ಕಿರವತ್ತಿ ಸುತ್ತಲಿನ ಗ್ರಾಮಗಳಲ್ಲಿ ವಾಸಿಸುತ್ತಿದ್ದು ಈ ಯೋಜನೆಯಿಂದಾಗಿ ಆಪತ್ತಿಗೆ ಸಿಲುಕಿದ್ದಾರೆ. ವೃಕ್ಷಲಕ್ಷ ಆಂದೋಲನದ ಸದಸ್ಯರು, ಉತ್ತರಕನ್ನಡ ಜಿಲ್ಲಾ ಪರಿಸರ ಹೋರಾಟ ಸಮಿತಿ, ವಿವಿಧ ಪರಿಸರ ಸಂಘಟನೆಗಳು ಈ ಯೋಜನೆಯ ವಿರುದ್ಧ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿವೆ. ಕಿರವತ್ತಿ ಸುತ್ತಮುತ್ತಲಿನ ವನವಾಸಿಗಳೂ ಚಳವಳಿಯಲ್ಲಿ ಪಾಲ್ಗೊಂಡಿದ್ದು, ಅವರಿಗೆ ನ್ಯಾಯ ಸಿಗುತ್ತದೋ ಎನ್ನುವುದನ್ನು ಕಾದುನೋಡಬೇಕಾಗಿದೆ.

ಅಘನಾಶಿನಿ ನದಿಗೆ ಅಣೆಕಟ್ಟು ನಿರ್ಮಿಸುವ ವಿಚಾರ ೧೯೭೦ರಲ್ಲೇ ಇತ್ತು. ಇದು ೩೦೦ ಕೋಟಿ ರೂಪಾಯಿಯಲ್ಲಿ ೪೩೫ ಮೆ.ವಾ. ವಿದ್ಯುತ್ ಉತ್ಪಾದಿಸುವ ಉದ್ದೇಶ ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಸಿದ್ದಾಪುರ ತಾಲೂಕುಗಳಲ್ಲಿ ಈ ಯೋಜನೆಯ ವಿರುದ್ಧ ಹೋರಾಟ ನಡೆಯಿತು. ಶರಾವತಿ ನದಿಗೆ ಅಣೆಕಟ್ಟು ನಿರ್ಮಿಸುವ ವಿಚಾರದಲ್ಲೂ ಇದೇ ರೀತಿ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಲಿಂಗನಮಕ್ಕಿ ಅಣೆಕಟ್ಟು ೫೫ ಮೆ.ವಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ಶರಾವತಿಯ ಇನ್ನೊಂದು ಘಟಕ ೮೯೧-ಮೆ.ವಾ. ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ೧೯೮೧ರಲ್ಲಿಯೇ ೨೧೨ ಕೋಟಿ ರೂಪಾಯಿ ವೆಚ್ಚದಲ್ಲಿ ೨೪೦ ಮೆ.ವಾ. ವಿದ್ಯುತ್ ಉತ್ಪಾದಿಸುವ ಶರಾವತಿ ಟೇಲರೀಸ್ ಯೋಜನೆ ಸಿದ್ಧವಾಗಿತ್ತು. ಶರಾವತಿಯ ಕಾರ್ಗಲ್‌ನ ಗೇರುಸೊಪ್ಪ ಜಲವಿದ್ಯುತ್ ಯೋಜನೆಗೆ ೧೯೪೭-೪೮ರಲ್ಲಿಯೇ ರೂಪುರೇಷೆಗಳು ಸಿದ್ಧವಾಗಿತ್ತು. ೧೯೮೭-೮೮ರಲ್ಲಿ ಯೋಜನೆ ಪ್ರಾರಂಭಗೊಂಡಾಗ ಪರಿಸರವಾದಿಗಳು ನಡೆಸಿದ ಚಳವಳಿಯಿಂದಾಗಿ ನ್ಯಾಯಾಲಯದ ತಡೆಯಾಜ್ಞೆ ಬಂದು ಯೋಜನೆಯ ಕಾರ್ಯ ಸ್ಥಗಿತಗೊಂಡಿತ್ತು. ಆದರೆ ಈಗ ಈ ಯೋಜನೆಯ ನಿರ್ಮಾಣದ ಜವಾಬ್ದಾರಿಯನ್ನು ಆರ್.ಎನ್. ಶೆಟ್ಟಿ ಕನ್‌ಸ್ಟ್ರಕ್ಷನ್ ಕಂಪೆನಿ ಮತ್ತು ಪವರ್‌ಹೌಸ್ ನಿರ್ಮಾಣದ ಹೊಣೆಗಾರಿಕೆಯನ್ನು ನಾಚಿಮುತ್ತು ಕನ್‌ಸ್ಟ್ರಕ್ಷನ್ ಕಂಪೆನಿ ಹೊತ್ತಿದೆ. ಸುಮಾರು ೨೦೦೨ನೇ ಇಸವಿಗೆ ಘಟಕವು ಪೂರ್ಣವಾಗಿ ಕಾರ್ಯಾರಂಭ ಮಾಡುವುದಾಗಿ ತಿಳಿಸಿದೆ. ಕೇಂದ್ರದ ಪರಿಸರ ಇಲಾಖೆಯ ಅನುಮತಿಯೂ ಸಿಕ್ಕಿದೆ. ಪವರ್‌ಹೌಸ್ ಕೆಲಸವೂ ಆಗುತ್ತಿದೆ. ಇನ್ನೊಂದು ಕಡೆ ಗೊತ್ತುಗುರಿಯಿಲ್ಲದ ಪರಿಸರ ಚಳವಳಿಯೂ ನಡೆಯುತ್ತಿದೆ.

೩.೭.೩. ಕೈಗಾ ಅಣುಸ್ಥಾವರ

ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿರುವ ಯೋಜನೆಗಳಲ್ಲಿ ಕೈಗಾ ಅಣುಸ್ಥಾವರವೂ ಒಂದು. ಕೈಗಾ ಅಣುವಿದ್ಯುತ್ ಸ್ಥಾವರದ ಹೆಸರಿನಲ್ಲಿ ಕೈಗಾದ ಸುತ್ತ ಸುಮಾರು ೧೨೦೦ ಹೆಕ್ಟೇರ್ ಅರಣ್ಯ ಪ್ರದೇಶ ನಾಶವಾಗಿದೆ. ಅಣುಸ್ಥಾವರದ ವಿಕಿರಣದ ದುಷ್ಪರಿಣಾಮಕ್ಕೆ ನೆರೆಯ ಗ್ರಾಮಗಳು ತುತ್ತಾಗಿವೆ. ಕೈಗಾ ಅಣುಸ್ಥಾವರ ಆರಂಭವಾಗುವ ಸಂದರ್ಭದಲ್ಲಿ ಅದರ ವಿರುದ್ಧ ದೊಡ್ಡ ಚಳವಳಿಯೇ ನಡೆಯಿತು. ಏಕೆಂದರೆ ಹಿಂದೆ ನಡೆದ ಘಟನೆಗಳ ಅನುಭವ ಅಲ್ಲಿನವರಿಗೆ ಸಾಕಷ್ಟು ಆಗಿತ್ತು. ಲಿಂಗನಮಕ್ಕಿಯಲ್ಲಿ ನೂರಾರು

ಹಳ್ಳಿಗಳು ಮುಳುಗಡೆಯಾದರೆ, ಕಾಳಿ ಯೋಜನೆಯಲ್ಲಿ ಸುಪಾ ಪಟ್ಟಣವೇ ಮುಳುಗಡೆಯಾಯಿತು. ಬೇಡ್ತಿ ಯೋಜನೆ ಇನ್ನಷ್ಟು ಭಯವನ್ನು ಹುಟ್ಟಿಸಿರುವಾಗಲೇ ಕೈಗಾ ಅಣುಸ್ಥಾವರ ನಿರ್ಮಾಣದ ಸುದ್ದಿ ಹರಡಿತು. ಶಿರಸಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಪ್ರೊ. ಲಿಂಗೇಶ ಶರ್ಮಾ, ಡಾ. ಶಿವರಾಮ ಕಾರಂತ ಹಾಗೂ ಡಾ. ಕುಸುಮಾ ಸೊರಬ ಪರಮಾಣು ಸ್ಥಾವರದ ಈ ಯೋಜನೆಯನ್ನು ವಿರೋಧಿಸಿ ಚಳವಳಿ ಪ್ರಾರಂಭಿಸಿದರು. ಹೊನ್ನಾವರ ಪರಿಸರ ಕೂಟ ಮುಂದಾಳತ್ವ ವಹಿಸಿತು. ಉತ್ತರ ಕನ್ನಡ ಜಿಲ್ಲೆಯಾದ್ಯಂತ ಆಂದೋಲನಗಳು, ಜೈಲುಭರ್ತಿ ಚಳವಳಿಗಳು ಕಾಣಿಸಿಕೊಂಡವು. ೧೯೮೭ರಲ್ಲಿ ಚಳವಳಿಗಾರರು ಅಣುಸ್ಥಾವರ ನಿರ್ಮಾಣವಾಗುವ ಸ್ಥಳಕ್ಕೇ ಹೋಗಿ ಪ್ರತಿಭಟನೆ ನಡೆಸಿದರು. ಬಿಗಿ ಪೊಲೀಸ್ ಬಂದೋಬಸ್ತ್ ಇದ್ದರೂ ಕುಸುಮಾ ಸೊರಬರವರು ದಾರಿ ಬದಲಾಯಿಸಿಕೊಂಡು ಅಣುಸ್ಥಾವರದ ಗುಮ್ಮಟ ಕಟ್ಟುವ ಸ್ಥಳಕ್ಕೆ ತಲುಪಿದರು. ಗುಮ್ಮಟ ಕಟ್ಟಲೆಂದು ತೋಡಿದ್ದ ಗುಂಡಿಗೆ ಧುಮುಕಿ ಅಲ್ಲಿ ಗಿಡ ನೆಟ್ಟು ತಮ್ಮ ವಿರೋಧವನ್ನು ವ್ಯಕ್ತಪಡಿಸಿ ಪೊಲೀಸರ ಬಂದಿಯಾದರು. ಜಿಲ್ಲೆಯಾದ್ಯಂತ ಚಳವಳಿಗಳು ಕಾಣಿಸಿಕೊಂಡರೂ ಕೈಗಾದಲ್ಲಿ ಅಣು ಸ್ಥಾವರದ ನಿರ್ಮಾಣ ಕಾರ್ಯ ಭರದಿಂದ ನಡೆಯತೊಡಗಿತು.

ಕೈಗಾ ಅಣುಸ್ಥಾವರದ ವಿರುದ್ಧ ಮತ್ತೊಮ್ಮೆ ವ್ಯಾಪಕ ಚಳವಳಿ ಕಾಣಿಸಿಕೊಂಡಿರುವುದು ೧೯೯೪ರಲ್ಲಿ. ಇದಕ್ಕೆ ಕಾರಣ ಕೈಗಾ ಅಣುಸ್ಥಾವರದ ಗುಮ್ಮಟದ ಒಂದು ಭಾಗ ಕುಸಿದ ಘಟನೆ. ಇದು ವ್ಯಾಪಕ ಚರ್ಚೆಗೊಳಗಾಗಿ ಪರಮಾಣು ವಿರೋಧಿ ಆಂದೋಳನಗಳು ಕಾಣಿಸಿಕೊಂಡವು. ದುರಂತದಲ್ಲಾದ ಅನಾಹುತಗಳ ಕುರಿತಾಗಿ ಬೆಂಗಳೂರಿನಲ್ಲಿ ಪತ್ರಿಕಾ ಗೋಷ್ಠಿಯನ್ನು ಕರೆಯಲಾಯಿತು. ಇವುಗಳ ಮುಂದಾಳತ್ವವನ್ನು ಡಾ. ಕುಸುಮಾ ಸೊರಬರವರು ವಹಿಸಿದ್ದರು. ಡಾ. ಶಿವರಾಮ ಕಾರಂತರು ತಮ್ಮ ಜೀವಿತದ ಕೊನೆಯವರೆಗೂ ಕೈಗಾ ಅಣುಸ್ಥಾವರದ ವಿರುದ್ಧ ಧ್ವನಿ ಎತ್ತುತ್ತಲೇ ಇದ್ದರು. ಈ ಚಳವಳಿಯಲ್ಲಿ ಮಠಾಧೀಶರುಗಳೂ ಪಾಲ್ಗೊಂಡರು. ಶಿರಸಿಯ ಸ್ವರ್ಣವಲ್ಲಿ ಹಾಗೂ ಉಡುಪಿಯ ಪೇಜಾವರ ಮಠಾಧೀಶರು ಕೈಗಾ ಅಣುಸ್ಥಾವರದ ವಿರುದ್ಧ ಪ್ರತಿಭಟನೆ ನಡೆಸಿದರು. ಕುಸುಮಾ ಸೊರಬರವರು ಈ ಮಠಾಧೀಶರೊಂದಿಗೆ ಪರಿಸರ ಸಂಬಂಧವಾಗಿ ಹೊಂದಿದ್ದ ಸಂಬಂಧಗಳು ಚರ್ಚೆಯ ವಸ್ತುವಾಗಿದ್ದೂ ಉಂಟು. ಸೊರಬರವರು ಧರ್ಮಕ್ಕೆ ಪ್ರಾಮುಖ್ಯತೆ ಕೊಡದಿದ್ದರೂ, ಮಠಾಧೀಶರ ಸಮ್ಮುಖದಲ್ಲಿ ನಡೆಯುವ ಪರಿಸರ ಹೋರಾಟ ಧರ್ಮಾತೀತವಾದದ್ದು ಎನ್ನಲು ತುಸು ಕಷ್ಟವಾಗುತ್ತದೆ. ಮಠಾಧೀಶರು ಪರಿಸರವನ್ನಷ್ಟೇ ವಸ್ತುವನ್ನಾಗಿಟ್ಟುಕೊಂಡು ಚಳವಳಿ ನಡೆಸುತ್ತಾರೆನ್ನುವುದು ಸತ್ಯಕ್ಕೆ ದೂರವಾದ ಮಾತು. ಏನೇ ಇದ್ದರೂ ಕೈಗಾ ಇಂದಿಗೂ ಚರ್ಚೆಯ ವಸ್ತುವಾಗಿಯೇ ಉಳಿದಿದೆ.

೩.೭.೪. ಶರಾವತಿ ಟೇಲ್‌ರೇಸ್ ಯೋಜನೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಸುದ್ದಿ ಮಾಡುತ್ತಿರುವ ಇನ್ನೊಂದು ಯೋಜನೆ ಶರಾವತಿ ಟೇಲ್‌ರೇಸ್ ಯೋಜನೆ. ಶರಾವತಿ ನದಿಗೆ ೧೯೬೫ರಲ್ಲಿ ಲಿಂಗನಮಕ್ಕಿಯಲ್ಲಿ ಬೃಹತ್ ಅಣೆಕಟ್ಟನ್ನು ಕಟ್ಟಿ ೯೪೬ ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗಿದೆ. ಶರಾವತಿ ನದಿಗೆ ಶರಾವತಿಕೊಳ್ಳದಲ್ಲಿ ಮತ್ತೊಂದು ಅಣೆಕಟ್ಟನ್ನು ಕಟ್ಟುವುದೇ ಹೊಸ ಯೋಜನೆ. ೧೬ ಕಿಲೋಮೀಟರ್ ಉದ್ದದ ಶರಾವತಿ ಕಣಿವೆ ಸಮೃದ್ಧವಾದ ಅರಣ್ಯ ಪ್ರದೇಶವನ್ನು

ಹೊಂದಿರುವುದೇ ಚಳವಳಿ ಪ್ರಾರಂಭಗೊಳ್ಳಲು ಮೂಲ ಕಾರಣ. ಶರಾವತಿ ಕೊಳ್ಳ ಸುಮಾರು ೭೦೦ ಹೆಕ್ಟೇರ್ ಪ್ರದೇಶವನ್ನು ಹೊಂದಿತ್ತು. ಹೊನ್ನಾವರ ಪರಿಸರ ಕೂಟ ಈ ಯೋಜನೆಯ ವಿರುದ್ಧ ಚಳವಳಿ ನಡೆಸಲು ಪ್ರಾರಂಭಿಸಿತು. ೧೯೮೭ರಲ್ಲಿ ಈ ಚಳವಳಿ ಕಾಣಿಸಿಕೊಂಡಿತು. ಭಾಷಣ, ಬೀದಿ ನಾಟಕ, ಸ್ಲೈಡ್‌ಗಳ ಪ್ರದರ್ಶನ, ಜಾನಪದ ನೃತ್ಯ, ಲಾವಣಿ ಮುಂತಾದವುಗಳ ಮೂಲಕ ಜನರಲ್ಲಿ ಅರಿವು ಮೂಡಿಸುವ ಕೆಲಸವೂ ಪ್ರಾರಂಭಗೊಂಡಿತು. 'ಅಣೆಕಟ್ಟನ್ನು ಆಗಗೊಡೆವು, ಸಹ್ಯಾದ್ರಿಯನ್ನು ಉಳಿಸುವೆವು' ಎನ್ನುವ ಘೋಷಣೆಯನ್ನು ಕೂಗಲಾಯಿತು. ಅರಣ್ಯವನ್ನು ಗುತ್ತಿಗೆ ಪಡೆಯಲು ಟೆಂಡರ್ ಹಾಕುವ ಸಂದರ್ಭದಲ್ಲಿ 'ಟೆಂಡರ್ ಪೆಟ್ಟಿಗೆ ಅಪ್ಪಿಕೋ' ಪ್ರತಿಭಟನೆಯನ್ನು ನಡೆಸಲಾಯಿತು. ಆದರೂ ಕರ್ನಾಟಕ ಪವರ್ ಕಾರ್ಪೊರೇಷನ್ ಟೆಂಡರ್ ಕರೆದು ಅಣೆಕಟ್ಟಿನ ನಿರ್ಮಾಣಕ್ಕೆ ಸಿದ್ಧತೆ ನಡೆಸಿತು. ಇದೇ ಸಂದರ್ಭದಲ್ಲಿ ಶರಾವತಿ ಅಣೆಕಟ್ಟು ವಿರೋಧಿ ಸಮಿತಿ ಹುಟ್ಟಿಕೊಂಡಿತು (ಮುಂದೆ ಇದೇ ಸಮಿತಿ ಶರಾವತಿ ಅಣೆಕಟ್ಟು ವಿರೋಧಿ ಸಮಿತಿ ಮತ್ತು ಶರಾವತಿ ಅಣೆಕಟ್ಟು ಹೋರಾಟ ಸಮಿತಿ ಎಂಬುದಾಗಿ ಇಬ್ಭಾಗವಾಗಿ ರಾಜಕೀಯದ ಪ್ರವೇಶಕ್ಕೆ ವೇದಿಕೆಯಾಯಿತು). ಅಣೆಕಟ್ಟಿನ ಕೆಲಸ ನಿಲ್ಲಿಸುವಂತೆ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಲಾಯಿತು. ಪರಿಸರವಾದಿ ಕುಸುಮಾ ಸೊರಬರವರು ಅಲ್ಲಿನ ಪರಿಸರ ಸಂಘಟನೆಗಳೊಡನೆ ಸೇರಿಕೊಂಡು ಕೆಲಸಕ್ಕೆ ತಡೆಯಾಜ್ಞೆ ತರುವಲ್ಲಿ ಯಶಸ್ವಿಯಾದರು. ೧೯೮೯ರಲ್ಲಿ ಗುತ್ತಿಗೆದಾರರು ಮತ್ತೊಮ್ಮೆ ಶರಾವತಿ ಕೊಳ್ಳಕ್ಕೆ ಬಂದಾಗ ಚಳವಳಿ ತೀವ್ರ ಸ್ವರೂಪವನ್ನು ಪಡೆದುಕೊಂಡಿತು.

ವಿಶ್ವಬ್ಯಾಂಕ್‌ನ ತಜ್ಞರು, ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಸಂಸ್ಥೆಯ ನಿಸರ್ಗ ವಿಜ್ಞಾನಿಗಳು, ಡಾ. ಶಫಿಉಲ್ಲಾ ಸಮಿತಿ ಶರಾವತಿ ಕೊಳ್ಳದ ಅಧ್ಯಯನ ನಡೆಸಿ ಇದೊಂದು ಅಪರೂಪದ ಸಸ್ಯ-ಪ್ರಾಣಿಗಳನ್ನು ಹೊಂದಿರುವ ಭಾಗ ಎನ್ನುವ ವರದಿಯನ್ನು ನೀಡಿದರು. ಚಳವಳಿಗಾರರಿಗೆ ಈ ವರದಿ ಇನ್ನಷ್ಟು ವಿಶ್ವಾಸವನ್ನು ತಂದುಕೊಟ್ಟಿತು. ೧೯೮೯ರಲ್ಲಿ ಗುತ್ತಿಗೆದಾರರು ಮರ ಕಡಿಯುವುದನ್ನು ನಿಲ್ಲಿಸುವಂತೆ ನ್ಯಾಯಾಲಯದ ಆಜ್ಞೆ ಬಂತು. ತಡೆಯಾಜ್ಞೆಯ ಸಂದೇಶ ಬರುವಲ್ಲಿಯವರೆಗೂ ಹೋರಾಟ ಮುಂದುವರಿಯಿತು. ಆದರೂ ಚಳವಳಿಗಾರರು ಹಾಗೂ ಸರಕಾರದ ನಡುವಿನ ಮಾತುಕತೆ ವಿಫಲವಾದಾಗ ಮತ್ತೊಮ್ಮೆ ಚಳವಳಿ ಕಾಣಿಸಿಕೊಂಡು ಅದು ಹಿಂಸಾತ್ಮಕ ಮಟ್ಟಕ್ಕೂ ಹೋಯಿತು. ಈ ಸಂಬಂಧ ಹೈಕೋರ್ಟಿನಲ್ಲಿ ವಿಚಾರಣೆ ನಡೆದು ೧೯೯೧ರಲ್ಲಿ ತಡೆಯಾಜ್ಞೆ ಬಂತು. ಗುತ್ತಿಗೆದಾರರು ಮರಗಳನ್ನು ಕಡಿದುರುಳಿಸಿದ ಜಾಗದಲ್ಲೆಲ್ಲ ಡಾ. ಶಿವರಾಮ ಕಾರಂತ, ಡಾ. ಕುಸುಮಾ ಸೊರಬ ಹಾಗೂ ಇನ್ನೂ ಅನೇಕ ಪರಿಸರ ಪ್ರೇಮಿಯರ ನೇತೃತ್ವದಲ್ಲಿ ಗಿಡಗಳನ್ನು ನೆಡಲಾಯಿತು. ೧೯೯೭ರವರೆಗೆ ಯೋಜನೆ ಅಷ್ಟೇನೂ ಸುದ್ದಿಯಲ್ಲಿರಲಿಲ್ಲ. ಆದರೆ ಇದ್ದಕ್ಕಿದ್ದಂತೆ ೧೯೯೭ರಲ್ಲಿ ಕೋರ್ಟಿನಲ್ಲಿದ್ದ ಕೇಸು ವಜಾ ಆಗಿ ತಡೆಯಾಜ್ಞೆ ತೆರವಾಯಿತು. ಯೋಜನೆಯ ಕಾಮಗಾರಿಗೆ ಅನುಮತಿ ಸಿಕ್ಕಿತು. ಕೇಂದ್ರ ಪರಿಸರ ಇಲಾಖೆ ಶರಾವತಿ ಟೇಲ್‌ರೇಸ್ ಯೋಜನೆಗೆ ಒಪ್ಪಿಗೆ ನೀಡಿತು. ಗುತ್ತಿಗೆದಾರರು ಶರಾವತಿ ಕೊಳ್ಳಕ್ಕೆ ನುಗ್ಗಿ ಮರ ಕಡಿಯುವ ಕೆಲಸವನ್ನು ಪ್ರಾರಂಭಿಸಿದರು. ಯೋಜನೆ ಪ್ರಾರಂಭವಾಗುವ ಮೊದಲೇ ಕಾಡನ್ನು ಬೋಳಿಸುವ ಕೆಲಸ ಪ್ರಾರಂಭಗೊಂಡಿತು. ಇದನ್ನು ವಿರೋಧಿಸಿ ಚಳವಳಿಕಾರರು ಅಪ್ಪಿಕೋ ಚಳವಳಿ ನಡೆಸಿದರು. ಮಳೆ, ಚಳಿ, ಗಾಳಿಯನ್ನು ಲೆಕ್ಕಿಸದೆ ಚಳವಳಿಕಾರರು

ಗುತ್ತಿಗೆದಾರರನ್ನು ಹಿಮ್ಮೆಟ್ಟಿಸಿದರು. ಚಳವಳಿಯ ತೀವ್ರತೆಯನ್ನು ಅರ್ಥೈಸಿಕೊಂಡ ಅರಣ್ಯ ಇಲಾಖೆ ಮರ ಕಡಿಯುವುದನ್ನು ತಾತ್ಕಾಲಿಕವಾಗಿ ನಿಲ್ಲಿಸುವಂತೆ ಆಜ್ಞೆ ಹೊರಡಿಸಿತು. ಚಳವಳಿಗಾರರು ತಮ್ಮ ಉದ್ದೇಶ ಈಡೇರಿತೆಂದು ಚದುರಿಕೊಂಡರು. ಆದರೆ ಒಮ್ಮಿಂದೊಮ್ಮೆಗೆ ೧೯೯೮ರ ಜನವರಿಯಲ್ಲಿ ಯೋಜನೆಯ ಕಾಮಗಾರಿ ಬಿರುಸಿನಿಂದ ಪ್ರಾರಂಭಗೊಂಡಿತು. ಯೋಜನೆಯ ವಿರೋಧಿಗಳು ಒಂದೆಡೆ ಸೇರುವ ಮೊದಲೇ ಕೆ.ಪಿ.ಸಿ.ಯವರು ಶರಾವತಿಕೊಳ್ಳವನ್ನು ಸಂಪೂರ್ಣವಾಗಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಯೋಜನೆಯ ಕೆಲಸವನ್ನು ಪ್ರಾರಂಭಿಸಿಯೇ ಬಿಟ್ಟರು. ಶರಾವತಿ ಟೇಲ್‌ರೇಸ್ ಯೋಜನೆಯ ವಿರುದ್ಧ ಆರಂಭದಿಂದಲೇ ಕೆಲಸ ಮಾಡುತ್ತಿದ್ದ ಡಾ. ಕುಸುಮಾ ಸೊರಬರವರು ಇನ್ನೊಂದು ತಡೆಯಾಜ್ಞೆ ತರಲು ಬೆಂಗಳೂರಿಗೆ ಹೊರಟರು. ಆದರೆ ಮಾರ್ಗಮಧ್ಯದಲ್ಲಿ ರಸ್ತೆ ಅಪಘಾತವೊಂದರಲ್ಲಿ ಅನಿರೀಕ್ಷಿತವಾಗಿ ತೀರಿಕೊಂಡರು. ಸೊರಬರವರ ಸಾವು ಯೋಜನಕಾರರಿಗೆ ಮತ್ತು ಗುತ್ತಿಗೆದಾರರಿಗೆ ಖುಷಿಯುಂಟು ಮಾಡಿದರೆ ಪರಿಸರ ಪ್ರೇಮಿಗಳಿಗೆ ಸಹಿಸಲಾರದ ದುಃಖವನ್ನುಂಟುಮಾಡಿತು. ಇವರ ಸಾವು ಯೋಜನೆಯ ಕೆಲಸವನ್ನು ನಿರಾತಂಕಗೊಳಿಸಿತು. ಸೊರಬರವರು ಅಭಿವೃದ್ಧಿಯ ವಿರೋಧಿಯಾಗಿರಲಿಲ್ಲ. ಯೋಜನೆಯ ಹೆಸರಿನಲ್ಲಿ ಯಾರ ಅಭಿವೃದ್ಧಿ ನಡೆಯುತ್ತಿದೆ ಎನ್ನುವ ಪ್ರಶ್ನೆಗೆ ಉತ್ತರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಪ್ರತಿಯೊಂದು ಪರಿಸರ ಸಂಬಂಧಿ ಚಳವಳಿಯೂ ಸೊರಬರವರಂತಹ ಅನೇಕ ಪರಿಸರ ಪ್ರೇಮಿಗಳ ನಾಯಕತ್ವವನ್ನು ಕಂಡಿದೆ. ಆದರೆ ಸಂಘಟಿತ ರೂಪದ ಚಳವಳಿ ಪ್ರತಿಯೊಂದು ಸಂದರ್ಭದಲ್ಲಿಯೂ ನಡೆದಿದೆ ಎನ್ನಲಾಗುವುದಿಲ್ಲ. ಶರಾವತಿ ಟೇಲ್‌ರೇಸ್ ಯೋಜನೆಗೂ ಸಂಘಟಿತ ರೂಪದ ಚಳವಳಿ ಕಾಣಿಸಿಕೊಂಡಿಲ್ಲ. ಈ ಯೋಜನೆಯಿಂದ ಯಾವುದೇ ಹಳ್ಳಿಯೂ ಮುಳುಗಡೆ ಯಾಗುವುದಿಲ್ಲ, ಕೇವಲ ಕಾಡು ಮಾತ್ರ ಮುಳುಗಡೆಯಾಗುತ್ತದೆ ಎನ್ನುವ ಮಾತೂ ಕೇಳಿ ಬರುತ್ತಿತ್ತು. ಚಳವಳಿ ನಡೆಸುವಷ್ಟು ಉತ್ಸಾಹವೂ ಜನರಲ್ಲಿ ಇರಲಿಲ್ಲ. ಜನರಲ್ಲಿ ಉತ್ಸಾಹ ಇಲ್ಲದೇ ಇರುವುದಕ್ಕೆ ಅನೇಕ ಕಾರಣಗಳೂ ಇದ್ದಿರಬಹುದು. ಯೋಜನೆಗಳು ಜಿಲ್ಲೆಗೆ ಒಂದರ ಮೇಲೊಂದರಂತೆ ಬರುತ್ತಿವೆ. ಈಗಾಗಲೇ ಜಿಲ್ಲೆಯಾದ್ಯಂತ ಯೋಜನೆಗಳು ಹರಡಿಕೊಂಡಿವೆ. ಜಿಲ್ಲೆಯ ಉತ್ತರ ಮತ್ತು ದಕ್ಷಿಣ ತುದಿಯಲ್ಲಿ ಕಾಳಿ ಮತ್ತು ಶರಾವತಿ ಅಣೆಕಟ್ಟುಗಳು, ನಡುವಿನ ಸುಮಾರು ಎಪ್ಪತ್ತು ಮೈಲಿನ ಅಂತರದಲ್ಲಿ ಚಕ್ರ ಮತ್ತು ವಾರಾಹಿ ಯೋಜನೆಗಳು, ಮಧ್ಯದಲ್ಲಿ ಅಘನಾಶಿನಿ, ಬೇಡ್ತಿ, ಸೋಂದಾ ಹಾಗೂ ಪಟ್ಟಣಹೊಳೆ ಯೋಜನೆಗಳು ಇವೆ. ಇವುಗಳಲ್ಲದೆ ಅಣುಸ್ಥಾವರಗಳು, ರೈಲ್ವೆಯೋಜನೆಗಳು, ಸೀಬರ್ಡ್ ನೌಕಾನೆಲೆ ಯೋಜನೆ ಮುಂತಾದವು ಜಿಲ್ಲೆಯ ಒಟ್ಟು ಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಿವೆ. ಯೋಜನೆಗಳಿಂದಾಗಿ ನಿರಾಶ್ರಿತರಾದವರು ನಡೆಸುವ ಹೋರಾಟ, ಸಾಮಾಜಿಕ ಪ್ರತಿಷ್ಠೆ ಮತ್ತು ಶೋಕಿಗಾಗಿ ನಡೆಸುವ ಹೋರಾಟ, ರಾಜಕೀಯದ ಪ್ರವೇಶ ಇವೆಲ್ಲವೂ ಪರಸ್ಪರ ಹೊಂದಿರುವ ವಿರುದ್ಧ ಮತ್ತು ಪೂರಕ ಸಂಬಂಧಗಳು ಜಿಲ್ಲೆಯಲ್ಲಿ ಸಂಕೀರ್ಣ ಸ್ಥಿತಿಯನ್ನು ಹುಟ್ಟುಹಾಕಿವೆ.

೩.೭.೫. ಸೀಬರ್ಡ್ ನೌಕಾನೆಲೆ

ಸೀಬರ್ಡ್ ನೌಕಾನೆಲೆ ಯೋಜನೆಯು ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಕಡಲ ತಡಿಯಲ್ಲಿ ನೆಲೆಯೂರಿದೆ. ಈಗಾಗಲೇ ಮುಂಬಯಿಯಲ್ಲಿ ಇರುವ ನೌಕಾನೆಲೆಯನ್ನು ಶೇಕಡಾ ೯೦ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕಾರವಾರಕ್ಕೆ ಸ್ಥಳಾಂತರಿಸುವ ಕಾರ್ಯವೇ ಸೀಬರ್ಡ್ ಯೋಜನೆಯ ಮೂಲ ಉದ್ದೇಶ. ಮುಂಬಯಿಯಲ್ಲಿದ್ದ ಈ ಯೋಜನೆಯನ್ನು ಕಾರವಾರಕ್ಕೆ ಸ್ಥಳಾಂತರಿಸಿರುವ ಬಗ್ಗೆ ಅಧಿಕಾರಿಗಳು ತಮ್ಮದೇ ಆದ ದಾಟಿಯಲ್ಲಿ ವಿವರಣೆ ನೀಡುತ್ತಾರೆ. ಮುಖ್ಯವಾಗಿ ಭದ್ರತೆಯ ದೃಷ್ಟಿಯಿಂದ ಕಾರವಾರಕ್ಕೆ ಸ್ಥಳಾಂತರಿಸಲಾಯಿತು ಎನ್ನುವ ವಾದವನ್ನು ಸೀಬರ್ಡ್‌ನ ರೂವಾರಿ ಅಡ್ಮಿರಲ್ ಆಸ್ಕರ್ ಸ್ಟಾನ್ಲಿ ಡಾವ್‌ಸನ್ ಮುಂದಿಟ್ಟಿದ್ದಾರೆ. ಈ ಯೋಜನೆ ಇವತ್ತಿನ ಸಮಸ್ಯೆಯಲ್ಲ. ಇದಕ್ಕೊಂದು ಚಾರಿತ್ರಿಕ ಹಿನ್ನೆಲೆಯಿದೆ. ೧೯೫೧ರಲ್ಲಿಯೇ ಈ ಯೋಜನೆ ಚರ್ಚೆಗೆ ಬಂದಿತ್ತು. ೧೯೭೧ರಲ್ಲಿ ಮತ್ತೊಮ್ಮೆ ಇದಕ್ಕೆ ಚಾಲನೆ ಸಿಕ್ಕಿ ಯೋಜನೆ ಪ್ರಕ್ರಿಯೆ ಆರಂಭಗೊಂಡಿತು. ೧೯೮೪ರಲ್ಲಿ ನೌಕಾನೆಲೆಯ ರೂಪುರೇಷೆಗಳನ್ನು ಸಿದ್ಧಗೊಳಿಸಲಾಯಿತು. ಅಡ್ಮಿರಲ್ ಡಾವ್‌ಸನ್‌ರವರೇ ಇದರ ನೇತೃತ್ವವನ್ನು ವಹಿಸಿದರು. ೧೯೮೬, ಅಕ್ಟೋಬರ್ ೨೪ರಂದು ಆಗಿನ ಪ್ರಧಾನಿ ದಿ। ರಾಜೀವ್ ಗಾಂಧಿಯವರು ಸೀಬರ್ಡ್‌ಗೆ ಅಧಿಕೃತ ಅಡಿಗಲ್ಲು ಹಾಕಿದರು. ಆದರೆ ಮತ್ತೊಮ್ಮೆ ಯೋಜನೆ ನೆನೆಗುದಿಗೆ ಬಿತ್ತು. ೧೯೯೮ರ ಆಗಸ್ಟ್ ೬ ರಂದು ರಕ್ಷಣಾ ಸಚಿವ ಜಾರ್ಜ್ ಫೆರ್ನಾಂಡೀಸ್ ಈ ಯೋಜನೆಗೆ ಮತ್ತೆ ಚಾಲನೆ ಕೊಟ್ಟರು. ಇನ್ನು ಈ ಯೋಜನೆ ಮುಂದಿನ ಇಪ್ಪತ್ತು ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ಯೋಜನೆಗೆ ಅಂದಾಜು ಸುಮಾರು ೨೫,೦೦೦ ಕೋಟಿ ರೂಪಾಯಿ ಖರ್ಚಾಗಬಹುದು ಎಂದು ಛಾಪಿಸಲಾಗಿದೆ. ಇದು ಸೀಬರ್ಡ್ ನೌಕಾನೆಲೆ ನಡೆದುಬಂದ ದಾರಿ.

ಸೀಬರ್ಡ್ ನೌಕಾನೆಲೆಯ ಯೋಜನೆಯಡಿಯಲ್ಲಿ ಬರುವ ವಿವಿಧ ಗ್ರಾಮಗಳ ಜನರನ್ನು ಸ್ಥಳಾಂತರಿಸಲಾಯಿತು. ಈ ಯೋಜನೆಯಿಂದ ನಿರಾಶ್ರಿತರಾಗುವ ಒಟ್ಟು ಕುಟುಂಬಗಳು ೪,೪೪೪, ಇದರಲ್ಲಿ ೩,೩೧೫ ಕೃಷಿ ಕುಟುಂಬಗಳು, ೮೫೬ ಮೀನುಗಾರ ಕುಟುಂಬಗಳು, ೩೩೫ ಅವಿಭಕ್ತ ಕುಟುಂಬಗಳು ಎಂಬುದಾಗಿ ಸಂಬಂಧಪಟ್ಟ ವರದಿಯಿಂದ ತಿಳಿದುಬಂದಿದೆ. ಈ ಕುರಿತು ಬಿ. ಗಣಪತಿಯವರು ಸಾರ್ವಜನಿಕರ ಗಮನವನ್ನು ಸೆಳೆದಿದ್ದಾರೆ (ಗಣಪತಿ, ೧೯೯೯). ನಿರಾಶ್ರಿತರ ಪುನರ್ವಸತಿ ಸಮಸ್ಯೆಯ ಕುರಿತಂತೆ ವ್ಯಾಪಕ ವಿರೋಧ ವ್ಯಕ್ತವಾಗಿದೆ. ೧೯೮೫ರಲ್ಲಿಯೇ ರಾಜ್ಯ ಸರಕಾರ ಪರಿಹಾರ ಕಾರ್ಯಾಚರಣೆಯಲ್ಲಿ ತಾನು ಮೊದಲು ಹೇಳಿಕೊಂಡಂತೆ ನಂತರ ವ್ಯವಹರಿಸಲಿಲ್ಲ. ಈಗ ಮತ್ತೊಮ್ಮೆ ನಿರಾಶ್ರಿತರಿಗೆ ಪುನರ್ವಸತಿ ಕುರಿತು ಕೆಲವೊಂದು ಯೋಜನೆಗಳನ್ನು ರೂಪಿಸಿದೆ. ಯೋಜನೆಯ ವೆಚ್ಚದ ಶೇಕಡಾ ೧೦ರಷ್ಟನ್ನು ಪುನರ್ವಸತಿಗೆ ತೆಗೆದಿರಿಸುವುದು, ಉದ್ಯೋಗ, ವ್ಯವಸ್ಥಿತ ಕಾಲೋನಿ, ಕೃಷಿ ಭೂಮಿ ಮುಂತಾದವುಗಳು ಈ ಯೋಜನೆಯಲ್ಲಿ ಸೇರಿವೆ. ಆದರೆ ಸ್ಥಳೀಯರಿಗೆ ಈ ಭರವಸೆಗಳ ಮೇಲೆ ನಂಬಿಕೆಯಿಲ್ಲದಾಗಿದೆ. ಹನ್ನೆರಡು ವರ್ಷಗಳ ಹಿಂದೆ ನಿಗದಿಪಡಿಸಿದ ಭೂಮಿಯ ಕ್ರಯವನ್ನು ಇಂದು ವಿತರಿಸಲಾಗುತ್ತಿದೆ ಎಂಬುದಾಗಿ ನಿರಾಶ್ರಿತರು ದೂರಿಕೊಂಡಿದ್ದಾರೆ. ಕಾಮಗಾರಿಯನ್ನು ಪ್ರಾರಂಭಿಸುವ ಸಲುವಾಗಿ ಚೆಂಡಿಯಾ, ಅಲಿಗದ್ದಾ, ಅರ್ಗಾ, ಬಿಣಗಾ ಗ್ರಾಮದ ಗ್ರಾಮಸ್ಥರನ್ನು ಸ್ಥಳಾಂತರಿಸುವ ಕೆಲಸ ಬಿರುಸಿನಿಂದ ನಡೆಯಿತು. ಅಲಿಗದ್ದಾ ಗ್ರಾಮದ ಗ್ರಾಮಸ್ಥರು

ಗ್ರಾಮ ತೆರವಿಗೆ ನಿರಾಕರಿಸಿದಾಗ ಜಿಲ್ಲಾಡಳಿತವು ಪೊಲೀಸ್ ಬಲದಿಂದ ಬಲಾತ್ಕಾರವಾಗಿ ತೆರವುಗೊಳಿಸಿತ್ತು. ಜಿಲ್ಲಾಡಳಿತವು ಸುಳ್ಳು ಹೇಳಿಕೆಗಳನ್ನು ನೀಡುತ್ತಿದೆ. ಚೆಂಡಿಯಾ ಗ್ರಾಮದ ಗ್ರಾಮಸ್ಥರು ಸ್ವ ಇಚ್ಛೆಯಿಂದ ಗ್ರಾಮ ತೆರವು ಮಾಡಿದರು ಎನ್ನುವುದು ವಾಸ್ತವಕ್ಕೆ ದೂರವಾದ ಮಾತು. ಮೊದಲು ನಿಷೇಧಾಜ್ಞೆಯನ್ನು ಜಾರಿಗೊಳಿಸಿ ನಂತರ ಪೊಲೀಸ್ ಪಡೆಗಳ ನೆರವಿನಿಂದ ಸ್ಥಳಾಂತರಿಸಲಾಯಿತು. ಚೆಂಡಿಯಾದ ೩೮೫ ಕುಟುಂಬಗಳ ಪೈಕಿ ೧೮೦ ಕುಟುಂಬದವರಿಗೆ ಯಾವುದೇ ತರಹದ ಪರಿಹಾರವನ್ನೂ ನೀಡದೆ ಒಕ್ಕಲೆಬ್ಬಿಸಲಾಗಿದೆ ಎಂದು ನಿರಾಶ್ರಿತರು ಜಿಲ್ಲಾಡಳಿತವನ್ನು ಗಂಭೀರವಾಗಿ ಆರೋಪಿಸಿದ್ದಾರೆ. ಬಿಣಗಾದಲ್ಲಿ ಮೀನುಗಾರರೇ ಹೆಚ್ಚಾಗಿದ್ದು ಸುಮಾರು ೨೫೦ ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ. ಅರ್ಗಾದ ಸುಮಾರು ೪೬೦ ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ.

ಸೀಬರ್ಡ್ ಪುನರ್ವಸತಿ ಕೇಂದ್ರಗಳಲ್ಲಿ ಸಮರ್ಪಕ ಸೌಲಭ್ಯಗಳನ್ನು ಕಲ್ಪಿಸಿಲ್ಲ ಎಂದು ಸೀಬರ್ಡ್ ನಿರಾಶ್ರಿತರ ವೇದಿಕೆಯ ಪದಾಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಗಡುಗಳಿಂದ ನಿರ್ಮಿಸಿದ ತಾತ್ಕಾಲಿಕ ಶೆಡ್‌ಗಳಿಗೆ ನಿರಾಶ್ರಿತರನ್ನು ಕಳಿಸಲಾಗಿದೆ ಎಂದೂ ಇವರು ದೂರಿದ್ದಾರೆ. ಪರಿಹಾರವನ್ನು ಸ್ಥಳಾಂತರಿಸಿದ ಎಲ್ಲರಿಗೂ ನೀಡಲಿಲ್ಲ ಎನ್ನುವ ಕೂಗು ನಾಲ್ಕು ಗ್ರಾಮಸ್ಥರಿಂದಲೂ ಕೇಳಿ ಬರುತ್ತಿದೆ. ಜಿಲ್ಲಾಡಳಿತದ ಬೇಜವಾಬ್ದಾರಿಯೇ ಇದಕ್ಕೆಲ್ಲಾ ಕಾರಣವೆಂದು ನಿರಾಶ್ರಿತರು ಹೇಳುತ್ತಾರೆ. ಅದೇ ರೀತಿ ಪರಿಸರವಾದಿಗಳೆಂದು ಕರೆಯಿಸಿಕೊಳ್ಳುವ ಯಾರೂ ನಮ್ಮ ಸಹಾಯಕ್ಕೆ ಬಂದಿಲ್ಲ ಎನ್ನುವ ನೋವೂ ನಿರಾಶ್ರಿತರಲ್ಲಿದೆ. ಸೀಬರ್ಡ್ ನೌಕಾನೆಲೆಯ ನಿರಾಶ್ರಿತರ ವೇದಿಕೆಯ ಅಧ್ಯಕ್ಷ ಹೊನ್ನಪ್ಪ ನಾಯ್ಕ ಮತ್ತು ಕಾರ್ಯದರ್ಶಿ ಸದಾನಂದ ಪಡ್ತಿ ಹಾಗೂ ಉತ್ತರಕನ್ನಡ ಜಿಲ್ಲಾ ಪರಿಸರ ಆಂದೋಲನ ಸಮಿತಿಯ ಅಧ್ಯಕ್ಷ ಅಮ್ಮೆಂಬಳ ಆನಂದ ಇವರುಗಳು ಪುನರ್ವಸತಿ ಕುರಿತಾದ ಸರಕಾರದ ನೀತಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. ನಿರಾಶ್ರಿತರ ಪುನರ್ವಸತಿ ಸಮಸ್ಯೆಗಳ ಅಧ್ಯಯನಕ್ಕೆ ಹೈಕೋರ್ಟ್ ಕಮೀಶನರುಗಳನ್ನು ನೇಮಿಸಲಾಯಿತು. ಇದು ನಿರಾಶ್ರಿತರ ವೇದಿಕೆಯ ಹೋರಾಟದ ಅಂಶಗಳಲ್ಲಿ ಒಂದಾಗಿದ್ದು ಈಗ ತಕ್ಕ ಮಟ್ಟಿಗೆ ಫಲ ನೀಡಿದಂತಾಗಿದೆ. ವಿರೋಧಗಳ ನಡುವೆಯೂ ಸೀಬರ್ಡ್ ನೌಕಾನೆಲೆಯ ಕಾಮಗಾರಿಯ ಪ್ರಕ್ರಿಯೆಗಳು ಬಿರುಸಿನಿಂದ ನಡೆದಿವೆ. ಪರಿಸರವಾದಿಗಳೆಂದು ಕರೆಯಿಸಿಕೊಳ್ಳುವ ಅನೇಕರು ಸೀಬರ್ಡ್ ನೌಕಾನೆಲೆ ಮತ್ತು ಪುನರ್ವಸತಿ ಸಮಸ್ಯೆಯನ್ನು ತಮ್ಮ ಲೇಖನಗಳಿಗೆ ಮತ್ತು ಗ್ರಂಥಗಳಿಗೆ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡದೆ ದೂರದ ನಗರ ಕೇಂದ್ರಗಳಲ್ಲಿ ಇದ್ದುಕೊಂಡು ಭಾಷಣಗಳ ಮತ್ತು ಕೃತಿಗಳ ಮೂಲಕ ಈ ಯೋಜನೆಗೆ ವಿರೋಧವನ್ನು ವ್ಯಕ್ತಪಡಿಸುವವರ ಸಂಖ್ಯೆಯೇ ಹೆಚ್ಚಿನದು.

ಸೀಬರ್ಡ್ ನೌಕಾನೆಲೆ ಯೋಜನೆಯ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವಲ್ಲಿ ಜೆ.ಹೆಚ್. ಪಟೇಲ್ ನೇತೃತ್ವದ ಸರಕಾರ ನಿರ್ಲಕ್ಷ್ಯ ಧೋರಣೆಯನ್ನು ತಳೆದಿದೆ ಎಂದು ವಿರೋಧ ಪಕ್ಷದ ನಾಯಕರು ಪ್ರತಿಭಟನೆ ನಡೆಸಿದರು. ಸುಮಾರು ೨೫ ಸಾವಿರ ಕೋಟಿ ರೂಪಾಯಿಯ ವೆಚ್ಚದಲ್ಲಿ ಸ್ಥಾಪನೆಯಾಗಲಿರುವ ಈ ಮಹತ್ವದ ಯೋಜನೆಯಿಂದ ಕಾರವಾರ ಮತ್ತು ಅಂಕೋಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ೧೩ ಹಳ್ಳಿಗಳಿಗೆ ಸೇರಿದ ಸುಮಾರು ಐದು ಸಾವಿರ ಕುಟುಂಬಗಳನ್ನು ಬಲಾತ್ಕಾರವಾಗಿ ಸ್ಥಳಾಂತರ ಮಾಡಲಾಗಿದೆ; ಆದರೆ ಈ ಜನರಿಗೆ ಸೂಕ್ತ ರೀತಿಯಲ್ಲಿ ಪುನರ್ವಸತಿ ಕಾರ್ಯ ನಡೆದಿಲ್ಲ;

ನಿರಾಶ್ರಿತರಿಗಾಗಿ ಸ್ಥಾಪಿಸಲಾಗಿರುವ ಪುನರ್ವಸತಿ ಕೇಂದ್ರಗಳಲ್ಲಿ ಕನಿಷ್ಠ ಸೌಲಭ್ಯಗಳನ್ನೂ ಒದಗಿಸಿಲ್ಲ; ಎಲ್ಲ ಕಾಮಗಾರಿಗಳೂ ಕಳಪೆಮಟ್ಟದ್ದಾಗಿವೆ; ಸರಕಾರ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವಲ್ಲಿ ಸಂಪೂರ್ಣ ವಿಫಲವಾಗಿದೆ; ಇದರಿಂದಾಗಿ ಸುಮಾರು ಐದುಸಾವಿರ ಕುಟುಂಬಗಳು ಮಳೆಗಾಲದಲ್ಲಿ ಬೀದಿಪಾಲಾಗಿವೆ ಎಂಬುದಾಗಿ ವಿರೋಧ ಪಕ್ಷಗಳು ಆರೋಪಿಸಿವೆ. ಇದೇ ಸಂದರ್ಭದಲ್ಲಿ ಕಾರವಾರದ ಸೀಬರ್ಡ್ ನೌಕಾನೆಲೆ ನಿರಾಶ್ರಿತರ ವೇದಿಕೆಯು ಬೆಂಗಳೂರು ಚಲೋ, ವಿಧಾನಸೌಧ ಮುತ್ತಿಗೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ನೌಕಾನೆಲೆ ನಿರಾಶ್ರಿತರ ಸಮಸ್ಯೆಗಳ ಕುರಿತು ಸರಕಾರದ ಗಮನ ಸೆಳೆಯಲು ಮತ್ತು ನಿರಾಶ್ರಿತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಇದು ಅನಿವಾರ್ಯವಾಯಿತು ಎನ್ನವುದು ನಿರಾಶ್ರಿತರ ವೇದಿಕೆಯ ಗೌರವಾಧ್ಯಕ್ಷ ಪ್ರಭಾಕರ ರಾಣೆಯವರ ಅಭಿಪ್ರಾಯ. ನಿರಾಶ್ರಿತರ ಸಮಸ್ಯೆಗಳನ್ನು ರಾಜಕೀಯ ಪಕ್ಷಗಳು ತಮ್ಮ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿರುವುದು ನಿರಾಶ್ರಿತರಲ್ಲಿ ಇನ್ನೂ ಹೆಚ್ಚಿನ ಆತಂಕವನ್ನು ಮೂಡಿಸಿದೆ. ರಾಜಕೀಯ ಪಕ್ಷಗಳ ಕಾಳಜಿ ಕೇವಲ ಆರೋಪ, ಪ್ರತ್ಯಾರೋಪಗಳಿಗಷ್ಟೇ ಸೀಮಿತವಾಗಿದೆ. ಇದರಿಂದ ನಿರಾಶ್ರಿತರ ಸಮಸ್ಯೆಗಳು ಬಗೆಹರಿಯಲು ಸಾಧ್ಯವಿಲ್ಲ.

೩.೨.೬. ಕಾಸ್ಟಿಕ್ ಸೋಡಾ ಕಾರ್ಖಾನೆ

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಬಳಿಯಿರುವ ಬಿಣಗಾದಲ್ಲಿ ಸ್ಥಾಪನೆಗೊಂಡ ಕಾಸ್ಟಿಕ್ ಸೋಡಾ ತಯಾರು ಮಾಡುವ ಕಾರ್ಖಾನೆ ಆರಂಭದಿಂದಲೂ ವಿರೋಧಗಳನ್ನು ಎದುರಿಸುತ್ತಲೇ ಬಂದಿದೆ. ಸೋಡಾ ಕಾರ್ಖಾನೆಗೆ ಜಮೀನನ್ನು ತ್ಯಾಗಮಾಡಿದ್ದ ಹೀರೇಗುತ್ತಿಯ ರೈತರು ಪರಿಹಾರ ಪಡೆಯುವಲ್ಲಿ ವಿಫಲರಾದರು. ಈ ಕುರಿತು ಕಂಪೆನಿಯ ವಿರುದ್ಧ ವ್ಯಾಪಕ ಚಳವಳಿ ಕಾಣಿಸಿಕೊಂಡಿತು. ೧೯೭೦ರಲ್ಲಿ ಕಾಸ್ಟಿಕ್ ಸೋಡಾ ಕಂಪೆನಿಯವರು ಕುಮಟಾ ತಾಲೂಕಿನ ಮಾದನಗೇರಿಯಲ್ಲಿ ಸುಮಾರು ೧೮೪೦ ಎಕರೆಗಳಷ್ಟು ಜಾಗವನ್ನು ಪಡೆದಿದ್ದರು. ಮುಂದೆ ಆ ಭೂಮಿಯನ್ನು ಸಿಗಡಿ ಕೃಷಿಗಾಗಿ ಇನ್ನೊಂದು ಕಂಪೆನಿಗೆ ಮಾರಲಾಯಿತು. ಭೂಮಿಯನ್ನು ಮೊದಲು ಅನುಭವಿಸುತ್ತಿದ್ದ ರೈತರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಯಿತು. ಸಿಗಡಿ ಕೃಷಿ ಬೇರೆಯೇ ರೀತಿಯದ್ದಾದ ಸಮಸ್ಯೆಯನ್ನು ತಂದೊಡ್ಡಿತು. ೧೯೮೦ರಲ್ಲಿ ಕಾರ್ಖಾನೆಯು ಪಾದರಸವನ್ನು ಸಮುದ್ರಕ್ಕೆ ವಿಸರ್ಜಿಸುತ್ತಿದೆ ಎನ್ನುವ ಸುದ್ದಿ ಹರಡಿತು. ಇದರ ವಿರುದ್ಧ ಪ್ರತಿಭಟನೆ ನಡೆದಾಗ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಎಚ್ಚೆತ್ತುಕೊಂಡು ಕಂಪೆನಿಗೆ ಎಚ್ಚರಿಕೆಯನ್ನು ನೀಡಿತು. ಮಂಡಳಿಯ ನಿರ್ದೇಶನದ ಮೇರೆಗೆ ಕಂಪೆನಿಯು ಹೊಸ ತಂತ್ರಜ್ಞಾನವನ್ನು ಬಳಸಿ ಪಾದರಸಯುಕ್ತ ಕಲುಷಿತ ನೀರನ್ನು ಉತ್ಪಾದನೆಯಲ್ಲಿ ಮರುಬಳಸಿಕೊಳ್ಳಲಾರಂಭಿಸಿತು. ಇದರಿಂದಾಗಿ ವಿಷಯುಕ್ತ ಪಾದರಸದಿಂದ ಪರಿಸರವು ವಿಮುಕ್ತಿಗೊಂಡಂತಾಯಿತು.

೩.೨.೭. ಕಲ್ಲಿದ್ದಲು ಶುದ್ಧೀಕರಣ ಕಾರ್ಖಾನೆ

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ರಾಮನಗರದಲ್ಲಿ ಕಲ್ಯಾಣಿ ಇಂಡಸ್ಟ್ರೀಸ್‌ನವರು ಕಾರ್ಖಾನೆಯೊಂದನ್ನು ಸ್ಥಾಪಿಸಲು ತಯಾರಿ ನಡೆಸುತ್ತಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಇದೊಂದು ಮಾಲಿನ್ಯಯುಕ್ತ ಕಾರ್ಖಾನೆಯಾಗಿದ್ದು ಬೇರೆಡೆಯಿಂದ

ಕಲ್ಲಿದ್ದಲು ತಂದು ಶುದ್ಧೀಕರಿಸುವ ಉದ್ದೇಶವನ್ನು ಹೊಂದಿದೆ. ಕಾಳಿ ಯೋಜನೆಯಿಂದ ನಿರ್ವಸಿತರಾದವರಿಗೆ ನಿರ್ಮಾಣ ಮಾಡಿರುವ ಪ್ರದೇಶವೇ ರಾಮನಗರ. ಕಾರ್ಖಾನೆಯು ಸುಮಾರು ೧೨೦೦ಎಕರೆಗಳಷ್ಟು ಭೂಮಿಯನ್ನು ಹೊಂದಲಿದೆ. ಈ ಕುರಿತು ಉತ್ತರ ಕನ್ನಡ ಜಿಲ್ಲಾ ಪರಿಸರ ಸಂರಕ್ಷಣಾ ಸಮಿತಿ ಹಾಗೂ ವೃಕ್ಷ-ಲಕ್ಷ ಆಂದೋಲನ ತೀವ್ರ ಕಳವಳ ವ್ಯಕ್ತ ಪಡಿಸಿದೆ. ಕಲ್ಲಿದ್ದಲನ್ನು ಸುಡಲಾಗುವುದರಿಂದ ಇಡೀ ರಾಮನಗರ ಮಲಿನವಾಗಲಿದೆ ಎನ್ನುವ ಭೀತಿ ರಾಮನಗರದ ಸುತ್ತಲೂ ಹರಡಿದೆ. ಈಗಾಗಲೇ ಉತ್ತರಕನ್ನಡ ಜಿಲ್ಲೆ ಹಲವಾರು ಪ್ರಯೋಗಗಳಿಗೆ ಒಳಪಟ್ಟು ಮರೆಯಲಾರದ ಅನುಭವಗಳನ್ನು ಹೊಂದಿದೆ. ಕಲ್ಲದ್ದಲು ಶುದ್ಧೀಕರಣ ಕಾರ್ಖಾನೆ ಇನ್ನೊಂದು ಹೊಸ ಸೇರ್ಪಡೆ. ಸರಕಾರ ಕಲ್ಯಾಣಿ ಇಂಡಸ್ಟ್ರೀಸ್‌ನವರೊಡನೆ ಒಪ್ಪಂದ ಮಾಡಿಕೊಂಡಿದೆ ಎನ್ನುವುದು ಪರಿಸರ ಸಂಘಟನೆಗಳ ಅಭಿಪ್ರಾಯ. ಕರ್ನಾಟಕ ಪವರ್ ಕಾರ್ಪೋರೇಷನ್ ಕಾರ್ಖಾನೆಗೆ ನೀರು ಸರಬರಾಜು ಮಾಡಲು ಒಪ್ಪಿಕೊಂಡಿದೆ. ಈ ಎಲ್ಲಾ ಮಾತುಕತೆಗಳು ಸ್ಥಳೀಯ ಜನರ ಗೈರುಹಾಜರಿಯಲ್ಲಿಯೇ ನಡೆದಿದೆ. ದಾಂಡೇಲಿ, ಜೋಯಿಡಾ, ಹಳಿಯಾಳ, ರಾಮನಗರ ಮುಂತಾದ ಪ್ರದೇಶಗಳಲ್ಲಿ ಈ ಕಾರ್ಖಾನೆಯ ವಿರುದ್ಧ ವ್ಯಾಪಕ ಚಳವಳಿ ಕಾಣಿಸಿಕೊಂಡಿದೆ. ಜನ ಜಾಗೃತಿ ಮೂಡಿಸುವ ಮತ್ತು ಸರಕಾರದಿಂದ ಮಾಹಿತಿ ಕೇಳುವ ಕೆಲಸ ಬಿರುಸಿನಿಂದ ನಡೆದಿದೆ. ಆದರೆ ಬಂಡವಾಳದ ಎದುರು ಯಾವುದೇ ಪ್ರತಿಭಟನೆಯೂ ಪರದಾಡುವ ಸ್ಥಿತಿಯನ್ನು ತಲುಪುತ್ತದೆ. ಇದಕ್ಕೆ ಉತ್ತರಕನ್ನಡ ಜಿಲ್ಲೆಯೊಂದರಲ್ಲಿಯೇ ಅನೇಕ ನಿದರ್ಶನಗಳು ಸಿಗುತ್ತವೆ. ಈ ಸ್ಥಿತಿಗೆ ಸಂಘಟನೆಯೊಳಗಿನ ಭಿನ್ನ ಮನಸ್ಸುಗಳು ಮತ್ತು ಬಂಡವಾಳ ಇವೆರಡೂ ಸಮಾನ ಕಾರಣಗಳಾಗಿ ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆಯ ಉತ್ತರ ತುದಿಯಿಂದ ದಕ್ಷಿಣ ತುದಿಯವರೆಗೆ ನಿರ್ಮಾಣಗೊಂಡ ಜಲಾಶಯಗಳು, ವಿದ್ಯುತ್ ಯೋಜನೆಗಳು, ಅಣುಸ್ಥಾವರಗಳು ಎಲ್ಲವೂ ಇದರಿಂದ ಹೊರತಾಗಿಲ್ಲ. ಸ್ಥಳೀಯ ಆಡಳಿತ, ದೇಶಿ ಹಾಗೂ ವಿದೇಶಿ ಕಂಪೆನಿಗಳು, ಪರಿಸರವಾದಿಗಳೆಂದು ಕರೆಯಿಸಿಕೊಳ್ಳುವ ಜನವರ್ಗ, ಮೇಲ್ವರ್ಗದ ರಾಜಕೀಯ ಇವೆಲ್ಲವೂ ಒಟ್ಟು ಪರಿಸರ ಬಿಕ್ಕಟ್ಟು ತಲೆದೋರುವಂತೆ ಮಾಡಿವೆ. ಯಾವುದೇ ಅಂತಿಮ ತೀರ್ಮಾನವನ್ನು ಕೈಗೊಳ್ಳಲು ಸಾಧ್ಯವಾಗದ ಹಂತಕ್ಕೆ ಇದು ತಲುಪಿದೆ.

೩.೭.೮. ಸಿಗಡಿ ಕೃಷಿಯ ವಿರುದ್ಧ ನಡೆದ ಚಳವಳಿ

ಕರ್ನಾಟಕದ ಕರಾವಳಿ ತೀರದಲ್ಲಿ ಹಬ್ಬಲಾರಂಭಿಸಿದ ಸಿಗಡಿ ಕೃಷಿ ವ್ಯಾಪಕ ಪ್ರತಿಭಟನೆಗೆ ಒಳಗಾಗಿದೆ. ೧೯೯೪ರ ಮೇ ೨೮ರಂದು ಕುಮಟಾದಲ್ಲಿ ಸುಮಾರು ೩೦೦ ರೈತರು "ಸಿಗಡಿ ಕೃಷಿ ನಿಲ್ಲಿಸಿ ಪರಿಸರ ಉಳಿಸಿ" ಎಂಬ ಘೋಷಣೆಯೊಡನೆ ಈ ಯೋಜನೆಯನ್ನು ವಿರೋಧಿಸಿದರು. ಅಘನಾಶಿನಿ, ಕಾಳಿ, ಗಂಗಾವತಿ, ಶರಾವತಿ, ಚಕ್ರ, ಉದ್ಯಾವರ ಮುಂತಾದ ನದಿಗಳ ಹಿನ್ನೀರಿನ ದಡದಲ್ಲಿರುವ ಭತ್ತದ ಗದ್ದೆಗಳು ಇಂದು ಸಿಗಡಿಯ ಕೊಳಗಳಾಗಿ ಬದಲಾಗುತ್ತಿರುವುದೇ ಈ ಚಳವಳಿಗೆ ಮುಖ್ಯ ಕಾರಣ. ಸರಕಾರ ಹಾಗೂ ಖಾಸಗಿ ಆಡಳಿತಕ್ಕೆ ಸೇರಿದ ಒಟ್ಟು ೮,೦೦೦ ಹೆಕ್ಟೇರ್ ಪ್ರದೇಶ ಸಿಗಡಿ ಕೃಷಿಗೆ ಯೋಗ್ಯವೆಂದು ಕರ್ನಾಟಕದಲ್ಲಿ ಗುರುತಿಸಲಾಗಿದೆ. ಸಿಗಡಿ ಕೃಷಿಗಾಗಿ ಜಮೀನನ್ನು ಕೃತಕ ಕೊಳಗಳನ್ನಾಗಿ ಪರಿವರ್ತಿಸಲಾಗುತ್ತದೆ. ಈ ಕೃಷಿಗೆ ಸೂಕ್ತವಾಗಲು ಸೆಗಣಿ, ಕೋಳಿಗೊಬ್ಬರ,

ಯೂರಿಯಾ, ಸೂಪರ್ ಫಾಸ್ಫೇಟ್‌ಗಳನ್ನು ಬಳಸಲಾಗುತ್ತದೆ. ನಂತರ ಸಮುದ್ರಕ್ಕೆ ಉಬ್ಬರ ಬಂದಾಗ ನದಿಯಲ್ಲಿ ಹಿನ್ನುಗ್ಗುವ ಉಪ್ಪು ನೀರನ್ನು ಸಿಗಡಿಯ ಕೊಳಗಳಿಗೆ ತುಂಬಲಾಗುತ್ತದೆ. ಕೊಳಗಳಿಂದ ದಿನವೂ ನೀರನ್ನು ಬದಲಾಯಿಸಬೇಕು. ಆದರೆ ಈ ನೀರಿನಲ್ಲಿ ಸಿಗಡಿಯ ತ್ಯಾಜ್ಯ ವಸ್ತುಗಳಿರುತ್ತವೆ. ಈ ಕಾರಣಗಳಿಂದಾಗಿ ರೈತರು ಈ ಯೋಜನೆಯನ್ನು ಬಲವಾಗಿ ವಿರೋಧಿಸುತ್ತಿದ್ದಾರೆ. ಸ್ಥಳೀಯ ಪರಿಸರ ಸಂಘಟನೆಗಳೂ ತಮ್ಮ ಬೆಂಬಲ ಸೂಚಿಸಿವೆ. ಸಿಗಡಿ ಕೃಷಿಯನ್ನು ವಿರೋಧಿಸಲು ಪ್ರಮುಖ ಕಾರಣಗಳೆಂದರೆ,

೧. ತ್ಯಾಜ್ಯ ವಸ್ತುಗಳನ್ನು ನದಿ ಹಾಗೂ ಸಾಗರ ಸೇರುವ ಅಳಿವೆ ಪ್ರದೇಶಗಳಿಗೆ ಬಿಡಲಾಗುತ್ತದೆ. ಇದರಿಂದ ಸಾಗರ ಜೀವಿಗಳು ನಾಶವಾಗುವ ಸಂಭವವಿದೆ.

೨. ಕೊಳದ ಉಪ್ಪುನೀರು ಸುತ್ತಲಿನ ಮಣ್ಣಿನಲ್ಲಿ ಬಸಿದು ಅಂತರ್ಜಲ ಸೇರಿ ಭತ್ತದ ಕೃಷಿ ಹಾಳಾಗಿದೆ. ಅದೇ ರೀತಿ ಗದ್ದೆಯ ಅಂಚಿನಲ್ಲಿರುವ ಅಡಿಕೆ, ತೆಂಗು ಹಾಗೂ ಇನ್ನಿತರ ಮರಗಳು ಒಣಗಿ ಹೋಗಿವೆ. ಸಿಹಿನೀರಿನ ಬಾವಿಗಳಲ್ಲಿ ಉಪ್ಪುನೀರು ತುಂಬಿದೆ.

೩. ಸಿಗಡಿ ಕೃಷಿ ನಡೆಸುವಾಗ ಮಣ್ಣಿನ ಗುಣಮಟ್ಟ ಅಥವಾ ಸುತ್ತಲಿನ ಪರಿಸರವನ್ನು ಗಮನಕ್ಕೆ ತೆಗೆದುಕೊಂಡಿಲ್ಲ.

೪. ಬಂಡವಾಳ ಹಾಗೂ ಅಧಿಕಾರದ ಬಲದಿಂದ ಅನೇಕ ರೈತರ ಜಮೀನನ್ನು ಪಡೆದುಕೊಳ್ಳಲಾಗಿದೆ. ಸುತ್ತಲಿನ ಪ್ರದೇಶವೆಲ್ಲಾ ಸಿಗಡಿ ಕೃಷಿಗೆ ಬಳಸಲಾರಂಭಿಸಿದ ಮೇಲೆ ನಡುವೆ ಇರುವ ಬಡ ರೈತರು ಭತ್ತ ಬೆಳೆಯುವ ಹಾಗೂ ಇಲ್ಲ, ಸಿಗಡಿ ಕೃಷಿ ನಡೆಸುವ ಹಾಗೂ ಇಲ್ಲ. ಈ ಕಾರಣಗಳಿಂದಾಗಿ ಬಡ ರೈತರ ಆಸ್ತಿ ಶ್ರೀಮಂತ ರೈತರ ಕೈ ಸೇರಿದೆ. ಈ ಎಲ್ಲಾ ಕಾರಣಗಳನ್ನು ಇಟ್ಟುಕೊಂಡು ಪರಿಸರ ಉಳಿಸಿ ಎನ್ನುವ ಘೋಷಣೆಯೊಡನೆ ಚಳವಳಿ ಪ್ರಾರಂಭಗೊಂಡರೂ ನಿರೀಕ್ಷಿತ ಯಶಸ್ಸನ್ನು ಗಳಿಸಲಿಲ್ಲ. ಏಕೆಂದರೆ ಸಿಗಡಿ ಮರಿಗಳಿಗೆ ರೋಗ ಬಂದು ಕೋಟ್ಯಾಂತರ ರೂಪಾಯಿ ನಷ್ಟವಾಯಿತೆನ್ನುವ ಉದ್ಯಮಪತಿಗಳ ಹಾಹಾಕಾರದ ಎದುರು ಜನಸಾಮಾನ್ಯರ ಪ್ರತಿಭಟನೆ ಸದ್ದಿಲ್ಲದಾಯಿತು. ಸಿಗಡಿ ಕೃಷಿಯಿಂದ ಕಡಲತೀರದ ಮೀನುಗಾರರಿಗೆ ಆದ ಹಾನಿ, ಭತ್ತ, ಅಡಿಕೆ ಮತ್ತು ತೆಂಗಿನ ಕೃಷಿಗಾದ ಹಾನಿಗೆ ಪರಿಹಾರ ಸಿಗಲಿಲ್ಲ. ಆದರೂ ಸಿಗಡಿ ಕೃಷಿಯ ವಿರುದ್ಧ ಚಳವಳಿಗಳು ನಡೆಯುತ್ತಲೇ ಇವೆ.

ಸಿಗಡಿ ಕೃಷಿಯ ವಿರುದ್ಧ ನಡೆಯುತ್ತಿರುವ ಚಳವಳಿಯಲ್ಲಿ ಅರಣ್ಯನಾಶವೂ ಒಂದು ಮುಖ್ಯ ವಿಷಯವಾಗಿದೆ. ಇಲ್ಲಿ ಅರಣ್ಯ ನಾಶ ಎನ್ನುವುದನ್ನು ಕಾಂಡ್ಲಾಕಾಡಿನ ಕುರಿತು ಹೇಳಲಾಗಿದೆ. ಸಿಗಡಿ ಕೃಷಿಗೆ ಕಾಂಡ್ಲಾ ಸಸ್ಯಗಳು ಬೆಳೆಯುವ ಅಳಿವೆಯಂಚಿನ ಪ್ರದೇಶಗಳು ಬೇಕಾದ ಕಾರಣ ಕಾಂಡ್ಲಾ ಸಸ್ಯಗಳನ್ನು ಕಡಿದು ಸಿಗಡಿ ಕೊಳಗಳನ್ನು ನಿರ್ಮಾಣ ಮಾಡಲಾಗಿದೆ. ಅರಣ್ಯ ಇಲಾಖೆಯವರು ಈಗಾಗಲೇ ಬೆಳೆದು ನಿಂತಿದ್ದ ಕಾಂಡ್ಲಾಕಾಡುಗಳ ಸಂರಕ್ಷಣೆಯತ್ತ ಗಮನಹರಿಸದಿದ್ದ ಕಾರಣ ಅಭಿವೃದ್ಧಿ ಹೊಂದಿದ್ದ ಸುಮಾರು ೪೪೩ ಹೆಕ್ಟೇರ್ ಅರಣ್ಯ ಪ್ರದೇಶ ಸಂಕುಚಿತಗೊಳ್ಳುತ್ತಾ ಸಾಗಿದೆ. ಇಲ್ಲಿ ಕಾಂಡ್ಲಾ ಕಾಡುಗಳೆಂದರೇನು? ಅವುಗಳನ್ನು ಎಲ್ಲಿ ಬೆಳೆಯಲಾಗುತ್ತಿದೆ? ಹಾಗೂ ಅವುಗಳು ಪರಿಸರ ಸಂರಕ್ಷಣೆಗೆ

ಯಾವ ರೀತಿ ಸಹಕಾರಿಯಾಗುತ್ತವೆ? ಎನ್ನುವುದರ ಕುರಿತು ಚರ್ಚಿಸುವುದು ಅನಿವಾರ್ಯವಾಗುತ್ತದೆ.

ಉಷ್ಣವಲಯದ ಅಪರೂಪದ ಜೀವಲೋಕಗಳಲ್ಲಿ ಕಾಂಡ್ಲಾಕಾಡುಗಳು ಒಂದಾಗಿವೆ. ಈ ಕಾಂಡ್ಲಾ ಕಾಡುಗಳ ಅಭಿವೃದ್ಧಿಗೆ ಕೇಂದ್ರ ಸರಕಾರ ದೇಶದಾದ್ಯಂತ ಒಂದು ಬೃಹತ್ ಯೋಜನೆಯನ್ನು ಹಮ್ಮಿಕ್ಕೊಂಡಿತ್ತು. ಈ ಯೋಜನೆಯನ್ವಯ ಕರ್ನಾಟಕದ ಕಡಲ ತೀರದಲ್ಲಿ ಅವಸಾನದ ಅಂಚನ್ನು ಸಮೀಪಿಸಿದ್ದ ಕಾಂಡ್ಲಾಕಾಡುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ರಾಜ್ಯದ ಅರಣ್ಯ ಇಲಾಖೆ ಮತ್ತು ಪರಿಸರ ಇಲಾಖೆಗಳು ಯೋಜನೆಯೊಂದನ್ನು ರೂಪಿಸಿದವು. ಬೆಂಗಳೂರಿನ 'ಕರ್ನಾಟಕ ಅಸೋಸಿಯೇಷನ್ ಫಾರ್‌ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್'ನ ವಿಜ್ಞಾನಿಗಳು ಈ ಯೋಜನೆಯ ಅನುಷ್ಠಾನಕ್ಕೆ ನೆರವು ನೀಡಲು ಒಪ್ಪಿಕೊಂಡರು. ೧೯೮೮ರಿಂದ ಕಾಂಡ್ಲಾ ಕಾಡುಗಳ ಕುರಿತಾದ ಈ ಪ್ರಕ್ರಿಯೆ ಪ್ರಾರಂಭಗೊಳ್ಳಲಾರಂಭಿಸಿತು. ಕಾಂಡ್ಲಾ ಸಸಿಗಳ ಕುರಿತು ಅರಣ್ಯ ಇಲಾಖೆಯ ಸಿಬ್ಬಂದಿಗಳಿಗೆ ತರಬೇತಿ ನೀಡಲಾಯಿತು. ಸರಕಾರದಿಂದ ಸಕಾಲಕ್ಕೆ ಹಣವೂ ಬಂದಿದ್ದರಿಂದಾಗಿ ಕಾಂಡ್ಲಾ ಕಾಡಿನ ಅಭಿವೃದ್ಧಿ ಕಾರ್ಯ ಬಿರುಸಿನಿಂದ ನಡೆಯಲಾರಂಭಿಸಿತು. ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಕಾಂಡ್ಲಾಕಾಡಿನ ಕುರಿತಾದ ಈ ಕೆಲಸ ಕಾರ್ಯಗಳು ನಡೆದವು. ಹೆಚ್ಚಾಗಿ ನದಿಗಳು ಸಮುದ್ರಕ್ಕೆ ಸೇರುವ ಅಳಿವೆಯ ದಡದ ಆಚೀಚೆ ಈ ಸಸಿಗಳನ್ನು ಬೆಳೆಯಲಾಯಿತು. ಕಾಂಡ್ಲಾಕಾಡಿದ್ದ ಪ್ರದೇಶವನ್ನು 'ಮಂಗಳಬನ' ಎಂದು ಕರೆದು ಅದನ್ನು ಜೀವವಿವಿಧತೆಯ ಕೇಂದ್ರವನ್ನಾಗಿ ಮಾಡುವ ಉದ್ದೇಶವನ್ನು ರಾಜ್ಯ ಅರಣ್ಯ ಇಲಾಖೆ ಮತ್ತು ಪರಿಸರ ಇಲಾಖೆ ಹೊಂದಿತ್ತು.

೧೯೮೯-೯೦ರ ಅವಧಿಯಲ್ಲಿ ಕುಂದಾಪುರ ವಲಯಕ್ಕೆ ಸೇರಿದ ಕೊಲ್ಲೂರು - ಚಕ್ರ- ಹಾಲಾಡಿ ನದಿಯ ದಡದಲ್ಲಿ ೧೬೦ ಹೆಕ್ಟೇರ್, ಬೈಂದೂರು ವಲಯದ ಬೈಂದೂರು ಹೊಳೆಯ ದಡದಲ್ಲಿ ೬೫ ಹೆಕ್ಟೇರ್, ಉಡುಪಿ ವಲಯದ ಉದ್ಯಾವರ - ಸ್ವರ್ಣ - ಸೀತಾ ಹಾಗೂ ಕೋಡಿ ಹೊಳೆಗಳ ದಡದಲ್ಲಿ ೫೩ ಹೆಕ್ಟೇರ್ ಹಾಗೂ ಮೂಡುಬಿದರೆ ವಲಯದ ಮೂಲ್ಕಿ - ಪಾವಂಜೆ ಹೊಳೆಯ ದಡದಲ್ಲಿ ೫೦ ಹೆಕ್ಟೇರ್ ಪ್ರದೇಶದಲ್ಲಿ ಕಾಂಡ್ಲಾಕಾಡನ್ನು ಬೆಳೆಸಲಾಯಿತು. ೧೯೯೦ ರಿಂದ ೧೯೯೪ರ ವರೆಗೆ ದಕ್ಷಿಣಕನ್ನಡ ಜಿಲ್ಲೆಯ ಅಳಿವೆಗಳ ಸಮೀಪವಿರುವ ಹೊಳೆಯ ದಡಗಳು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಅರಣ್ಯ ಪ್ರದೇಶಗಳಾಗಿ ಮಾರ್ಪಟ್ಟವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಡ್ಲಾಕಾಡಿನ ಅಭಿವೃದ್ಧಿ ಕಾರ್ಯ ನಡೆಯುತ್ತಿರುವ ಸಂದರ್ಭದಲ್ಲಿಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಂಡ್ಲಾಕಾಡಿನ ಅಭಿವೃದ್ಧಿ ಮಾಡಲು ಅಗತ್ಯವಾದ ಸಮೀಕ್ಷೆ ಕೈಗೊಳ್ಳಲಾಯಿತು. ಶಿರೂರು, ಶರಾವತಿ, ಅಘನಾಶಿನಿ, ಕಾಳಿ ನದಿಗಳ ದಡಗಳಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲು ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಆದರೆ ಇದ್ದಕ್ಕಿದ್ದಂತೆ ಕೇಂದ್ರ ಸರಕಾರ ಈ ಯೋಜನೆಗೆ ತನ್ನ ನೆರವನ್ನು ನಿಲ್ಲಿಸಿತು. ಕರ್ನಾಟಕ ರಾಜ್ಯ ಅರಣ್ಯ ಮತ್ತು ಪರಿಸರ ಇಲಾಖೆಗಳೂ ಸುಮ್ಮನಾದವು. ಇದರಿಂದಾಗಿ ಬಿರುಸಿನಿಂದ ಪ್ರಾರಂಭಗೊಂಡ ಅಭಿವೃದ್ಧಿ ಯೋಜನೆ ಅರ್ಧದಾರಿಯಲ್ಲಿಯೇ ಸ್ಥಗಿತಗೊಂಡಿತು. ಇದೇ ಸಂದರ್ಭದಲ್ಲಿ ಕರಾವಳಿ ತೀರದಲ್ಲಿ ಸಿಗಡಿ ಕೃಷಿ ಎಂಬ ಹೊಸ ಯೋಜನೆ ವ್ಯಾಪಕವಾಗಿ ಹಬ್ಬಲಾರಂಭಿಸಿತು.

ಅಲ್ಲಿಯವರೆಗೆ ಕಾಂಡ್ಲಾಕಾಡಿನ ಕುರಿತಾಗಿ ಅತಿಯಾದ ಪ್ರೀತಿ ಮತ್ತು ಆಸಕ್ತಿಯನ್ನು ತೋರಿಸುತ್ತಿದ್ದ ಸಂಬಂಧಪಟ್ಟ ಅಧಿಕಾರಿಗಳು ತಮಗೂ ಕಾಂಡ್ಲಾಕಾಡಿಗೂ ಯಾವುದೇ ಸಂಬಂಧವಿಲ್ಲ ಎನ್ನುವ ರೀತಿಯಲ್ಲಿ ವ್ಯವಹರಿಸಲಾರಂಭಿಸಿದರು. ಹೆಚ್ಚು ಲಾಭದಾಯಕವಾದ ಸಿಗಡಿ ಕೃಷಿ ಇವರೆಲ್ಲರನ್ನು ತನ್ನತ್ತ ಆಕರ್ಷಿಸುವಲ್ಲಿ ಯಶಸ್ವಿಯಾಯಿತು.

ಕಾಂಡ್ಲಾಕಾಡಿನ ಅಭಿವೃದ್ಧಿಗಾಗಿ ದುಡಿದ ಕರ್ನಾಟಕ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್‌ನ ವಿಜ್ಞಾನಿ ಡಾ. ಟಿ. ಆನಂದರಾವ್, ಅವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ, "ಕಾಂಡ್ಲಾಕಾಡುಗಳನ್ನು ಅಭಿವೃದ್ಧಿಪಡಿಸಿ, ಸಂರಕ್ಷಿಸುವುದರಿಂದ ನೇರವಾಗಿ ಇಲಾಖೆಗೆ ಯಾವುದೇ ಆರ್ಥಿಕ ಲಾಭ ಇಲ್ಲದೇ ಇರಬಹುದು, ಜೀವ ವಿವಿಧತೆಯ ದೃಷ್ಟಿಯಿಂದ ಹಾಗೂ ಪರೋಕ್ಷವಾಗಿ ಕಾಂಡ್ಲಾಕಾಡುಗಳು ಮಹತ್ವದ್ದಾಗಿವೆ ಎನ್ನುವುದನ್ನು ಯಾರೂ ಮರೆಯಕೂಡದು. ಅದಲ್ಲದೆ ಇಂತಹ ಜೀವ ವಿವಿಧತೆಯ ತಾಣಗಳನ್ನು ಸಂರಕ್ಷಿಸಲು ಸಮಗ್ರವಾದ ಮತ್ತು ದೂರಾಲೋಚನೆಗಳಿರುವ ಯೋಜನೆಗಳನ್ನು ಜಾರಿಗೆ ತರಬೇಕೇ ಹೊರತು ಸಿಗಡಿ ಕೃಷಿಯಂತಹ ಅರೆಬರೆಯ ಯೋಜನೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ." ಈ ಮಾತಿನಲ್ಲಿ ಸತ್ಯಾಂಶವಿದೆ. ಏಕೆಂದರೆ ಜಗತ್ತಿನ ಜೀವ ವಿವಿಧತೆಯ ತಾಣಗಳ ಪೈಕಿ ಅತ್ಯಂತ ಮಹತ್ವದ ತಾಣವೆಂದು ಗುರುತಿಸಲಾದ ಕಾಂಡ್ಲಾಕಾಡುಗಳನ್ನು ಯಶಸ್ವಿಯಾಗಿ ಅಭಿವೃದ್ಧಿ ಪಡಿಸಿದ ನಮ್ಮ ರಾಜ್ಯ ಸರಕಾರದ ಅರಣ್ಯ ಮತ್ತು ಪರಿಸರ ಇಲಾಖೆಗಳೇ ಅದರ ಸಂರಕ್ಷಣೆಯ ಜವಾಬ್ದಾರಿಯನ್ನೂ ಹೊರುವುದು ಅನಿವಾರ್ಯವಾಗಿದೆ. ಅಳಿವೆ ಪ್ರದೇಶಗಳಲ್ಲಿ ನೀರು ಒಳ ನುಗ್ಗುವುದನ್ನು ತಡೆಗಟ್ಟುವುದಕ್ಕೂ ಈ ಕಾಡುಗಳು ನೆರವಾಗುತ್ತವೆ. ಅದೇರೀತಿ ನೀರು ನಿಂತು ಸಡಿಲಗೊಂಡಿರುವ ಮಣ್ಣಿಗೆ ಭದ್ರತೆಯನ್ನು ಒದಗಿಸುತ್ತವೆ. ಆದರೆ ಇಂತಹ ಯೋಜನೆಗಳ ಹೆಸರಿನಲ್ಲಿ ಹಣ ಸಂಗ್ರಹಿಸುವುದೇ ಮುಖ್ಯ ಉದ್ದೇಶವಾದಾಗ ಪರಿಸರ ಸಂರಕ್ಷಣೆಯಾಗಲೀ, ಅಭಿವೃದ್ಧಿಯಾಗಲೀ ಕನಸಿನ ಮಾತಾಗುತ್ತವೆ.

ಈಗ ನಡೆಯುತ್ತಿರುವ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ, ಪೂರ್ವದ ಬಯಲು ಪ್ರದೇಶದ ಅಭಿವೃದ್ಧಿ ಯೋಜನೆ ಹಾಗೂ ಇಂಥದೇ ಅನೇಕ ಯೋಜನೆಗಳ ಹಿಂದಿರುವ ಉದ್ದೇಶಗಳು ಕಾಂಡ್ಲಾಕಾಡು ಅಭಿವೃದ್ಧಿ ಯೋಜನೆಗಿಂತ ಭಿನ್ನವಾಗಿಲ್ಲ. ಬಂಡವಾಳ ಕ್ರೋಢೀಕರಣವೇ ಇಲ್ಲಿರುವ ಏಕೈಕ ಗುರಿ. ಅದಕ್ಕೆ ಬೇಕಾಗಿರುವ ವೇದಿಕೆಯನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ಯೋಜನೆಗಳನ್ನು ಆರಂಭಿಕ ಹಂತದಲ್ಲಿ ಆಕರ್ಷಣೀಯವಾಗಿ ಪ್ರಾರಂಭಿಸಲಾಗುತ್ತದೆ. ಸ್ಥಳೀಯ ವರ್ಗ ಹಿತಾಸಕ್ತಿಗಳು ಇದರಲ್ಲಿ ನೇರವಾಗಿ ಭಾಗಿಯಾಗಿರುತ್ತವೆ. ಸಿಗಡಿ ಕೃಷಿ ಲಾಭವನ್ನೇ ದೃಷ್ಟಿಯಲ್ಲಿರಿಸಿಕೊಂಡು ಪ್ರಾರಂಭವಾದ ಒಂದು ಯೋಜನೆ. ಇಲ್ಲಿ ಪರಿಸರ ಚರ್ಚೆಯ ವಸ್ತುವೇ ಆಗಲಿಲ್ಲ. ಇಲ್ಲಿನ ಅಭಿವೃದ್ಧಿಯ ಕಲ್ಪನೆಯೆಂದರೆ ಬಂಡವಾಳಶಾಹಿಯ ವಿಸ್ತರಣೆ ಎಂದಷ್ಟೇ ಆಗುತ್ತದೆ. ಸಿಗಡಿ ಕೃಷಿಯ ವಿರುದ್ಧ ಎಷ್ಟೇ ಚಳವಳಿಗಳು ನಡೆದರೂ ಸ್ಥಳೀಯ ಭೂಮಾಲೀಕ ವರ್ಗ, ಮಧ್ಯವರ್ತಿಗಳು ಹಾಗೂ ಬಂಡವಾಳಶಾಹಿಗಳು ಅವುಗಳನ್ನು ಹಿಮ್ಮೆಟ್ಟಿಸಲು ಬೇಕಾದ ಎಲ್ಲಾ ಪರಿಕರಗಳನ್ನೂ ಸೃಷ್ಟಿಮಾಡಿವೆ.

೩.೨.೯. ಅಪ್ಪಿಕೋ ಚಳವಳಿ

ಕರ್ನಾಟಕದ ಮಲೆನಾಡಿನ ಅರಣ್ಯಗಳಲ್ಲಿ ಅಪ್ಪಿಕೋ ಚಳವಳಿ ನಡೆದಿದೆ. ಶಿರಸಿ, ಸಿದ್ಧಾಪುರ, ಸಾಗರ ತಾಲೂಕುಗಳಲ್ಲಿನ ಹಳ್ಳಿಯ ಜನರು ಅರಣ್ಯನಾಶದ ವಿರುದ್ಧ ಈ ಚಳವಳಿ ನಡೆಸಿದರು. ೧೯೭೭ರಲ್ಲಿಯೇ ಈ ಚಳವಳಿ ಕಾಣಿಸಿಕೊಂಡರೂ ೧೯೮೩ರಲ್ಲಿ ಹೆಚ್ಚು ಪ್ರಚಾರಕ್ಕೆ ಬಂತು. ಇವರ ಮುಖ್ಯ ಉದ್ದೇಶವೆಂದರೆ ಮರಗಳನ್ನು ಕಡಿಯಲು ಗುತ್ತಿಗೆ ನೀಡುವುದನ್ನು ನಿಲ್ಲಿಸುವುದು, ಅರಣ್ಯದಲ್ಲಿ ಮರಗಳ ಕಳ್ಳಸಾಗಾಣಿಕೆಯನ್ನು ನಿಲ್ಲಿಸುವುದು, ಮರಗಿಡಗಳನ್ನು ಬೆಳೆಸುವುದು ಮತ್ತು ಗಿಡಮರಗಳ ಮಹತ್ವದ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುವುದು. ಅಪ್ಪಿಕೋ ಚಳವಳಿ ಪ್ರಾರಂಭವಾಗಲು ಪ್ರಮುಖ ಕಾರಣ ಉತ್ತರ ಭಾರತದಲ್ಲಾದ ಚಿಪ್ಕೋ ಚಳವಳಿ. ಮರ ಕಡಿಯಲು ಗುತ್ತಿಗೆದಾರರು ಬಂದಾಗ ಮರವನ್ನು ತಬ್ಬಿಕೊಂಡು ನಿಲ್ಲುವುದೇ ಅಪ್ಪಿಕೋ ಚಳವಳಿ. ಈ ಚಳವಳಿ ಸುಮಾರು ೩೫೦ ವರ್ಷಗಳ ಹಿಂದೆ ರಾಜಸ್ಥಾನದ ಅಮೃತಾದೇವಿ ಎಂಬ ಮಹಿಳೆಯಿಂದ ಪ್ರಾರಂಭಗೊಂಡಿತು ಎನ್ನಲಾಗಿದೆ. ಈ ಚಳವಳಿಯಲ್ಲಿ ಹೆಚ್ಚಾಗಿ ಮಹಿಳೆಯರೇ ಭಾಗವಹಿಸಿರುವುದಾಗಿ ದಾಖಲೆಗಳಿಂದ ತಿಳಿದು ಬರುತ್ತದೆ. ಉತ್ತರ ಕನ್ನಡ ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ಈ ಚಳವಳಿಯ ಕಾರ್ಯಕರ್ತರು ಇಂದಿಗೂ ತಿರುಗಾಡುತ್ತಾ, ಯಕ್ಷಗಾನ, ಬೀದಿನಾಟಕ, ಉಪನ್ಯಾಸಗಳ ಮೂಲಕ ಚಳವಳಿಯ ಸಂದೇಶವನ್ನು ತಲುಪಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಚಳವಳಿಯನ್ನು ಹತ್ತಿಕ್ಕುವ ಪ್ರವೃತ್ತಿಗಳೂ ಅದೇ ಪರಿಸರದಲ್ಲಿ ಇರುವುದರಿಂದಾಗಿ ಅಪ್ಪಿಕೋ ಚಳವಳಿ ನಿರೀಕ್ಷಿತ ಯಶಸ್ಸನ್ನು ಪಡೆಯಲಿಲ್ಲ.

ಇದಕ್ಕೆ ಉತ್ತಮ ಉದಾಹರಣೆಯೆಂದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿನ ಶರಾವತಿ ಟೇಲ್‌ರೇಸ್ ಯೋಜನೆಯ ಸಂದರ್ಭದಲ್ಲಾದ ಅಪ್ಪಿಕೋ ಚಳವಳಿ. ೧೯೮೯ರಲ್ಲಿ ಡಾ. ಕುಸುಮಾ ಸೊರಬರವರ ನೇತೃತ್ವದಲ್ಲಿ ನಡೆದ ಹೋರಾಟದಿಂದಾಗಿ ಟೇಲ್‌ರೇಸ್ ಯೋಜನೆಗೆ ತಡೆಯಾಜ್ಞೆ ಸಿಕ್ಕಿತು. ೧೯೯೭ರಲ್ಲಿ ಕೋರ್ಟಿನಲ್ಲಿ ಕೇಸು ವಜಾ ಆಗಿದ್ದರಿಂದಾಗಿ ಯೋಜನೆಯ ಕಾಮಗಾರಿ ಮತ್ತೊಮ್ಮೆ ಪ್ರಾರಂಭಗೊಂಡಿತು. ಅಣೆಕಟ್ಟು ಕಟ್ಟುವ ಪೂರ್ವ ತಯಾರಿಗಳು ಪ್ರಾರಂಭವಾಗುತ್ತಿದ್ದಂತೆ ಶರಾವತಿ ಕೊಳ್ಳದ ಸಮೃದ್ಧ ಅರಣ್ಯ ಪ್ರದೇಶವನ್ನು ಬೋಳಿಸುವ ಕೆಲಸವೂ ಪ್ರಾರಂಭಗೊಂಡಿತು. ಅರಣ್ಯ ಇಲಾಖೆಯ ಅನುಮತಿಯೂ ಸಿಕ್ಕಿತು. ಗುತ್ತಿಗೆದಾರರು ಗರಗಸಗಳು, ಕೊಡಲಿಗಳು ಹಾಗೂ ಕೂಲಿಗಳೊಂದಿಗೆ ಶರಾವತಿ ಕಾಡಿಗೆ ನುಗ್ಗಿದರು. ಮುಂದೆಂದೋ ಅಣೆಕಟ್ಟು ಕಟ್ಟುವುದು ಮುಗಿದು ನೀರು ತುಂಬಿದಾಗ ಮುಳುಗಬಹುದಾದ ಕಾಡನ್ನು ಈಗಲೇ ಬೋಳಿಸುವ ತವಕ ಗುತ್ತಿಗೆದಾರರದ್ದು. ಆದರೆ ಗುತ್ತಿಗೆದಾರರ ಹಿಂದೆಯೇ ಕುಸುಮಾ ಸೊರಬರವರ ತಂಡವೂ ಕಾಡಿಗೆ ನುಗ್ಗಿತು. ಅವರು ಒಂದೊಂದು ಮರವನ್ನು ತಬ್ಬಿಕೊಂಡು ಅಪ್ಪಿಕೋ ಚಳವಳಿ ನಡೆಸಿದರು. ಅನೇಕ ಪರಿಸರ ಕಾರ್ಯಕರ್ತರು, ಹಳ್ಳಿಯ ಜನರು ಇದರಲ್ಲಿ ಭಾಗವಹಿಸಿದರು. ಚಳವಳಿ ಸುಮಾರು ೪೨ ದಿನಗಳಷ್ಟು ಕಾಲ ನಡೆಯಿತು. ಮಳೆ, ಬಿರುಗಾಳಿಗಳನ್ನು ಲೆಕ್ಕಿಸದೆ ಚಳವಳಿಗಾರರು ಕಾಡನ್ನು ರಕ್ಷಿಸುವ ಕೆಲಸದಲ್ಲಿ ಮಗ್ನರಾದರು. ಮರ ಕಡಿಯುವುದಿಲ್ಲ ಎಂಬ ಆಶ್ವಾಸನೆ ಅರಣ್ಯ ಇಲಾಖೆಯಿಂದ ಬಂದ ನಂತರವೇ

ಚಳವಳಿ ಕೊನೆಗೊಂಡಿತು. ಆದರೆ ಇಲಾಖೆಯ ಆಶ್ವಾಸನೆ ತಾತ್ಕಾಲಿಕ ಸ್ವರೂಪದ್ದಾಗಿದ್ದು, ೧೯೯೮ರಲ್ಲಿ ಅಣೆಕಟ್ಟು ಯೋಜನೆ ಪ್ರಾರಂಭಗೊಂಡು ಶರಾವತಿ ಕೊಳ್ಳದ ಅರಣ್ಯ ಪ್ರದೇಶ ಹೊಸ ರಸ್ತೆಗಳಾಗಿ, ಹೊಸ ಜನವಸತಿಗಳಾಗಿ ಪರಿವರ್ತನೆ ಗೊಂಡಿತು. ಕುಸುಮಾ ಸೊರಬರವರು ಈ ಚಳವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದರೂ ಸಂಘಟಿತ ಹೋರಾಟ ನಡೆಸುವಲ್ಲಿ ಯಶಸ್ವಿಯಾಗಲಿಲ್ಲ. ಈ ವಿಫಲತೆಗೆ ಪರಿಸರವಾದಿಗಳೆಂದು ಕರೆಯಿಸಿಕೊಳ್ಳುವ ಜನವರ್ಗದ ರಾಜಕೀಯವೇ ಕಾರಣವಾಗಿ ಕಂಡುಬರುತ್ತದೆ.

೩.೮. ದಕ್ಷಿಣ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು

ಉತ್ತರ ಕನ್ನಡ ಜಿಲ್ಲೆಯಂತೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ (ಉಡುಪಿ ಜಿಲ್ಲೆಯನ್ನು ಸೇರಿಸಿಕೊಂಡಂತೆ) ಹಲವಾರು ಪರಿಸರ ಸಂಬಂಧಿ ಚಳವಳಿಗಳು ನಡೆದಿವೆ. ಆದರೆ ಇದು ಸಾರ್ವಜನಿಕ ಚರ್ಚೆಯ ವಿಷಯವಾಗಿರುವುದು ಇತ್ತೀಚಿನ ದಿನಗಳಲ್ಲಿ. ಈ ಕುರಿತು ಅನೇಕ ವಾದಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಗುರುತಿಸಬಹುದಾಗಿದೆ. ಈ ಭಿನ್ನಾಭಿಪ್ರಾಯಗಳು ಪರಿಸರ ಚಳವಳಿಯನ್ನು ಸಂಕೀರ್ಣಗೊಳಿಸಿವೆ ಹಾಗೂ ತಮ್ಮ ದಿಕ್ಕನ್ನು ಬದಲಿಸುವಂತೆ ಮಾಡಿವೆ. ಇಲ್ಲಿ ವಿವಿಧ ಯೋಜನೆಗಳು ಪರಿಸರದ ಮೇಲೆ ಒತ್ತಡವನ್ನು ಹೇರಿರುವುದಂತೂ ನಿಜ. ಆದರೆ ಇಲ್ಲಿನ ವಿಶೇಷತೆಯೆಂದರೆ, ಇವು ಯಾವುವೂ ಮೇಲ್ನೋಟಕ್ಕೆ ಕಂಡು ಬರದೇ ಇರುವುದು. ಇದಕ್ಕೆ ಸೂಕ್ಷ್ಮ ಅಧ್ಯಯನದ ಅಗತ್ಯವಿದೆ. ಹೀಗಾದಲ್ಲಿ ಮಾತ್ರ ಪರಿಸರ ಚಳವಳಿಯೊಳಗಿನ ವೈರುಧ್ಯಗಳು ಹಾಗೂ ಅವು ಜನಸಾಮಾನ್ಯರ ಬದುಕಿನ ಮೇಲೆ ಬೀರಿದ ಪರಿಣಾಮಗಳು ಅರ್ಥವಾಗಲು ಸಾಧ್ಯ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಹಲವಾರು ಯೋಜನೆಗಳ ವಿರುದ್ಧ ಚಳವಳಿಗಳು ನಡೆದಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಎಂ.ಆರ್.ಪಿ.ಎಲ್., ಕೊಜೆಂಟ್ರಿಕ್ಸ್, ನಾಗಾರ್ಜುನ, ಬಾರ್ಜ್ ಮೌಂಟೆಡ್ ವಿದ್ಯುತ್ ಸ್ಥಾವರ, ಸರಪಾಡಿ ಅಣೆಕಟ್ಟು ಯೋಜನೆ, ಬಲ್ಲೇರಿ ರಕ್ಷಿತಾರಣ್ಯ, ಹಡಗು ಒಡೆಯುವ ಉದ್ದಿಮೆ, ಕಡಂದಲೆ ರಸಾಯನಿಕ ಬಣ್ಣ ಉತ್ಪಾದಿಸುವ ಘಟಕ, ಕೊಳವೆ ಮಾರ್ಗ ನಿರ್ಮಾಣ, ಕಡಲಕೊರತ, ಕೊಂಕಣ ರೈಲು ಯೋಜನೆ ಮುಂತಾದವುಗಳ ವಿರುದ್ಧ ನಡೆದ ಚಳವಳಿಗಳು. ಈ ಉದ್ದೇಶಕ್ಕಾಗಿಯೇ ಹಲವಾರು ಪರಿಸರ ಸಂಘಟನೆಗಳು ಹುಟ್ಟಿಕೊಂಡವು. ಅವುಗಳೆಂದರೆ, ದಕ್ಷಿಣ ಕನ್ನಡ ಪರಿಸರಾಸಕ್ತ ಒಕ್ಕೂಟ, ದಕ್ಷಿಣ ಕನ್ನಡ ನಿಸರ್ಗ ಬಳಗ, ದಕ್ಷಿಣ ಕನ್ನಡ ಕೃಷಿಕರ ವೇದಿಕೆ, ಹಾಗೂ ದಕ್ಷಿಣ ಕನ್ನಡ ಜಿಲ್ಲಾ ನಾಗರಿಕ ಸೇವಾ ಟ್ರಸ್ಟ್. ಇವುಗಳ ಜೊತೆಗೆ ಹಲವಾರು ಸಂಘ-ಸಂಸ್ಥೆಗಳೂ ಪರಿಸರ ಕುರಿತಾಗಿ ಕೆಲಸನಿರ್ವಹಿಸುತ್ತಿವೆ. ಇವುಗಳ ಸ್ವರೂಪ ಹಾಗೂ ಉದ್ದೇಶಗಳ ಕುರಿತು ಈ ಭಾಗದಲ್ಲಿ ಉದಾಹರಣೆಗಳೊಂದಿಗೆ ಚರ್ಚಿಸಲಾಗಿದೆ.

೩.೮.೧. ಎಂ.ಆರ್.ಪಿ.ಎಲ್.ನ ವಿರುದ್ಧದ ಚಳವಳಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿರುವ ಪರಿಸರ ಚಳವಳಿಗಳಲ್ಲಿ ಎಂ.ಆರ್.ಪಿ.ಎಲ್ (ಮಂಗಳೂರ್ ರಿಫೈನರೀಸ್ ಎಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್)ನ ವಿರುದ್ಧದ ಚಳವಳಿಯೂ ಒಂದು. ಇದು ಬೆಸ್ತರು ನಡೆಸಿದ ಹೋರಾಟ.

ಮೀನುಗಾರಿಕೆಯನ್ನು ನಂಬಿ ಬದುಕುತ್ತಿರುವ ಬೆಸ್ತರು ಸಮುದ್ರವನ್ನು ಕಲ್ಮಶಗೊಳಿಸುವ ಯಾವುದೇ ಉದ್ದಿಮೆಯನ್ನಾದರೂ ವಿರೋಧಿಸುವುದು ಸಹಜ. ಈ ಚಳವಳಿ ಎಂ.ಆರ್.ಪಿ.ಎಲ್.ನ ವಿರುದ್ಧ ನಡೆಯುವುದಕ್ಕೂ ಇದೇ ಕಾರಣ. ಎಂ.ಆರ್.ಪಿಎಲ್.ನ ಅಧಿಕಾರಿಗಳು ಆರಂಭಿಕ ಹಂತದಲ್ಲಿ ಸ್ಥಳೀಯರೊಡನೆ ಮಾಡಿಕೊಂಡ ಒಪ್ಪಂದದಂತೆ ನಡೆದುಕೊಳ್ಳಲಿಲ್ಲ. ಕಾರ್ಖಾನೆ ಬಳಸಿದ ನೀರನ್ನು ಶುದ್ಧೀಕರಣಕ್ಕೊಳಪಡಿಸಿ ಸಮುದ್ರಕ್ಕೆ ಬಿಡಲಾಗುವುದು ಎಂದು ಮೊದಲು ತಿಳಿಸಲಾಗಿತ್ತು. ಆದರೆ ಕಲ್ಮಶ ನೀರನ್ನು ಕೊಳವೆಗಳ ಮೂಲಕ ನೇರವಾಗಿ ಸಮುದ್ರಕ್ಕೆ ಬಿಡಲಾಗುತ್ತದೆ ಎನ್ನುವ ಮಾಹಿತಿ ಸಿಕ್ಕಿದಾಕ್ಷಣ ಮೀನುಗಾರರೆಲ್ಲಾ ಒಂದಾಗಿ ಉದ್ದಿಮೆಯ ನೀತಿಯನ್ನು ಉಗ್ರವಾಗಿ ವಿರೋಧಿಸಿದರು. ಅಧಿಕಾರಿಗಳು ಹಾಕಿಸಿದ್ದ ಕೊಳವೆಗಳನ್ನು ಕಿತ್ತು ಎಸೆಯಲಾಯಿತು. ಚಳವಳಿ ತೀವ್ರ ಸ್ವರೂಪವನ್ನು ಪಡೆಯುತ್ತಿದ್ದಂತೆಯೇ ಎಂ.ಆರ್.ಪಿ.ಎಲ್.ನ ಅಧಿಕಾರಿಗಳು ಸ್ಥಳೀಯ ಮೀನುಗಾರ ಮುಖಂಡರೊಡನೆ ಒಡಂಬಡಿಕೆ ಏರ್ಪಡಿಸಿಕೊಂಡು ಕಲ್ಮಶ ನೀರನ್ನು ಶುದ್ಧೀಕರಿಸುವ ಪರ್ಯಾಯ ವ್ಯವಸ್ಥೆ ಮಾಡುತ್ತೇವೆಂಬ ಭರವಸೆಯನ್ನು ನೀಡಿದರು. ಇದರಿಂದಾಗಿ ಚಳವಳಿ ತಾತ್ಕಾಲಿಕವಾಗಿ ಕೊನೆಗೊಂಡಿತು. ಇದಕ್ಕೂ ಮೊದಲು ಅಂದರೆ ಯೋಜನೆಗೆ ಭೂಮಿಯನ್ನು ಪಡೆಯುವ ಸಂದರ್ಭದಲ್ಲಿಯೂ ಚಳವಳಿ ಕಾಣಿಸಿಕೊಂಡಿತ್ತು. ಯೋಜನೆಗಾಗಿ ಆಯ್ಕೆಮಾಡಿದ ಪ್ರದೇಶ ಫಲವತ್ತಾದ ಕೃಷಿ ಭೂಮಿಯಾಗಿತ್ತು. ಎಷ್ಟೋ ವರ್ಷಗಳಿಂದ ಅಲ್ಲಿ ಕೃಷಿ ಮಾಡಿಕೊಂಡು ಜೀವಿಸುತ್ತಿದ್ದ ರೈತರು ಮನಸ್ಸಿಲ್ಲದ ಮನಸ್ಸಿನಿಂದ ಭೂಮಿಯನ್ನು ತೆರವುಗೊಳಿಸಿದರು. ನಂತರ ಪುನರ್ವಸತಿ ಸಮಸ್ಯೆಯು ಕಾಣಿಸಿಕೊಂಡಿತು. ಗುಡ್ಡಗಾಡು ಪ್ರದೇಶದಲ್ಲಿ ಮನೆಕಟ್ಟಲು ಜಾಗ ನೀಡಲಾಯಿತು. ಅದೇ ಸಂದರ್ಭದಲ್ಲಿ ನಿರಾಶ್ರಿತರ ಕುಟುಂಬದ ಒಬ್ಬ ಸದಸ್ಯನಿಗೆ ಉದ್ಯೋಗ ನೀಡುವ ಭರವಸೆಯನ್ನೂ ನೀಡಲಾಯಿತು. ಆದರೆ ಇದು ಯಾವುದೂ ವ್ಯವಸ್ಥಿತವಾಗಿ ನಡೆದಿಲ್ಲ. ಸಮಸ್ಯೆಗಳು ಇಂದಿಗೂ ನಮ್ಮ ಕಣ್ಣ ಮುಂದೆಯೇ ಇವೆ. ಅದೇ ರೀತಿ ಚಳವಳಿಗಳೂ ನಡೆಯುತ್ತಿವೆ. ಇದು ಹೀಗೆಯೇ ಇರಬೇಕಾದ್ದೇನೋ ಎನ್ನುವ ಭಾವನೆಯನ್ನು ಇವು ಮೂಡಿಸುತ್ತವೆ.

ಎಂ.ಆರ್.ಪಿ.ಎಲ್.ನಿಂದಾಗುವ ಸಮಸ್ಯೆಗಳು ನೇರವಾಗಿ ಸಂಬಂಧಿಸಿರುವುದು ಮೀನುಗಾರರಿಗೆ, ಸ್ಥಳೀಯ ನಿವಾಸಿಗಳಿಗೆ ಮತ್ತು ಯೋಜನೆಯಿಂದಾಗಿ ಜಮೀನು ಕಳೆದುಕೊಂಡವರಿಗೆ. ಇವರು ಚಳವಳಿ ನಡೆಸುವುದರಲ್ಲಿ ಅರ್ಥವಿದೆ. ಆದರೆ ರಾಜಕಾರಣಿಗಳು ಮತ್ತು ಪರಿಸರವಾದಿಗಳೆಂದು ಕರೆಯಿಸಿಕೊಳ್ಳುವವರು ಮಧ್ಯಪ್ರವೇಶಿಸಿದ್ದರಿಂದಾಗಿ ನ್ಯಾಯಯುತವಾಗಿ ನಡೆಯುತ್ತಿದ್ದ ಚಳವಳಿ ದಾರಿ ತಪ್ಪಿತು.. ಯಾರಿಗೆ ಅನ್ಯಾಯವಾಗಿದೆ ಮತ್ತು ಯಾರಿಗೆ ಯಾವ ರೀತಿಯ ಪರಿಹಾರ ಸಿಗಬೇಕು ಎನ್ನುವ ಕುರಿತು ಇವರ್ಯಾರೂ ಚಿಂತಿಸಿಲ್ಲ. ಬದಲಾಗಿ ಪರಿಸರನಾಶ ಎಂಬ ದೊಡ್ಡ ಬ್ಯಾನರ್‌ನೊಂದಿಗೆ ಇಡೀ ದಕ್ಷಿಣಕನ್ನಡ ಜಿಲ್ಲೆಯನ್ನು ಸೇರಿಸಿಕೊಂಡು ಬೃಹತ್ ಚಳವಳಿ ನಡೆಸುವಂತೆ ಪ್ರಚೋದಿಸಿದರು. ಇದರಿಂದಾಗಿ ಸಮಸ್ಯೆ ಇನ್ನಷ್ಟು ಉಲ್ಬಣಗೊಂಡು ನಿಜವಾಗಿಯೂ ಯಾರಿಗೆ ಪರಿಹಾರ ಸಿಗಬೇಕಾಗಿತ್ತೋ ಆ ಜನವರ್ಗವೇ ನಿರ್ಲಕ್ಷ್ಯಕ್ಕೆ ಒಳಗಾಗಬೇಕಾಯಿತು.

೩.೮.೨. ಕೊಜೆಂಟ್ರಿಕ್ಸ್ ಉಷ್ಣ ವಿದ್ಯುತ್ ಸ್ಥಾವರ

ಅಮೆರಿಕ ಮೂಲದ ಕೊಜೆಂಟ್ರಿಕ್ಸ್ ಸಂಸ್ಥೆ ದಕ್ಷಿಣ ಕನ್ನಡದಲ್ಲಿ (ಈಗಿನ ಉಡುಪಿ

ಜಿಲ್ಲೆಯನ್ನು ಸೇರಿಸಿಕೊಂಡಂತೆ) ಪರಿಸರ ಚಳವಳಿಯ ಹೊಸ ಅಧ್ಯಾಯವೊಂದನ್ನು ಹುಟ್ಟುಹಾಕಿದೆ. ಇದು ಅಮೆರಿಕದ ಖಾಸಗಿ ಸಂಸ್ಥೆಯಾಗಿದ್ದು ಮಂಗಳೂರಿನ ಬಳಿಯಿರುವ ನಂದಿಕೂರಿನಲ್ಲಿ ಉಷ್ಣವಿದ್ಯುತ್ ಸ್ಥಾವರ ಸ್ಥಾಪಿಸುವ ಉದ್ದೇಶ ಹೊಂದಿದೆ. ಈ ಕಂಪನಿಗೆ ಎಲ್ಲ ಅನುಮತಿಗಳೂ ದೊರೆಯುವ ಭರವಸೆಯಿದೆ. ಇದು ಮಂಗಳೂರು ಪವರ್ ಕಾರ್ಪೊರೇಷನ್ ಹೆಸರಿನಲ್ಲಿ ೧೩೦೦ ಎಕರೆ ಪ್ರದೇಶದಲ್ಲಿ ೨೫೦ ಮೆಗಾವಾಟ್ ಸಾಮರ್ಥ್ಯದ ನಾಲ್ಕು ಉಷ್ಣವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವತ್ತ ಹೆಜ್ಜೆಹಾಕಿದೆ. ಇದರ ಪರ ಹಾಗೂ ವಿರುದ್ಧ ಮಾತುಕತೆಗಳು ನಡೆಯುತ್ತಲೇ ಇವೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲಾ ಪರಿಸರಾಸಕ್ತ ಒಕ್ಕೂಟ ಮತ್ತು ನಂದಿಕೂರು ಜನಜಾಗೃತಿ ಸಮಿತಿ ಈ ಯೋಜನೆಯ ವಿರುದ್ಧ ಕೆಲಸ ಮಾಡಿವೆ. ಇದೇ ಸಂದರ್ಭದಲ್ಲಿ ಕೊಜೆಂಟ್ರಿಕ್ಸ್ ಸ್ಥಾವರ ಸ್ಥಾಪನೆಗೊಂಡರೆ ಮಂಗಳೂರು ಬೃಹತ್ ನಗರಗಳ ಸಾಲಿಗೆ ಸೇರುತ್ತದೆ ಎಂದು ಅಭಿಮಾನದಿಂದ ಮಾತನಾಡುವ ನಗರಾಭಿಮಾನಿಗಳೂ ಇದ್ದಾರೆ.

ಈ ಯೋಜನೆಗಾಗಿ ಆಯ್ಕೆಮಾಡಿಕೊಂಡ ಭೂಪ್ರದೇಶದಲ್ಲಿ ಸುಮಾರು ಒಂದುಸಾವಿರ ಎಕರೆ ಪ್ರದೇಶ ಕೃಷಿ ಭೂಮಿಯಾಗಿದ್ದು, ಸುಮಾರು ೫೪೦ ಕುಟುಂಬಗಳು ತಮ್ಮ ಮನೆ ಹಾಗೂ ಜಮೀನನ್ನು ಕಳೆದುಕೊಳ್ಳಬೇಕಾಗಿದೆ. ಅದೇ ರೀತಿ ವಿದ್ಯುತ್ ಉತ್ಪಾದನೆಗೆ ಬೇಕಾದ ನೀರನ್ನು ಮೂಲ್ಕಿ ನದಿಯಿಂದ ಪಡೆಯಲು ಉದ್ದೇಶಿಸಲಾಗಿದೆ. ಈ ಉದ್ದೇಶಿತ ಅಣೆಕಟ್ಟಿನ ಕೆಳಹರಿವಿನಲ್ಲಿ ಸುಮಾರು ನಾಲ್ಕುಸಾವಿರ ಎಕರೆ ಕೃಷಿ ಭೂಮಿಯಿದ್ದು ಇದು ಮೂಲ್ಕಿ ನದಿಯನ್ನೇ ಅವಲಂಬಿಸಿಕೊಂಡಿದೆ. ಇನ್ನೊಂದು ಸಮಸ್ಯೆಯೆಂದರೆ ಮೂಲ್ಕಿ ನದಿಯಿಂದ ಕೊಳವೆಗಳ ಮೂಲಕ ತರುವ ನೀರನ್ನು ಬಳಸಿದ ನಂತರ ಅರಬ್ಬಿ ಸಮುದ್ರಕ್ಕೆ ಹರಿದುಬಿಡುವುದು. ಈ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಉತ್ಪತ್ತಿಯಾಗುವ ಹಾರುವ ಬೂದಿಯದ್ದು ಇನ್ನೊಂದು ಕತೆ. ಇದನ್ನು ಸಂಗ್ರಹಿಸುವುದೂ ಕಷ್ಟ ಅದೇ ರೀತಿ ನದಿಗೆ ಬಿಟ್ಟರೂ ಕಷ್ಟ. ಕೊಜೆಂಟ್ರಿಕ್ಸ್‌ನ ಅಧಿಕಾರಿಗಳ ಪ್ರಕಾರ ಈ ಬೂದಿಯನ್ನು ಭದ್ರಾವತಿಯ ಸಿಮೆಂಟ್ ಕಾರ್ಖಾನೆಯ ಸಹಭಾಗಿತ್ವದೊಂದಿಗೆ ಇಟ್ಟಿಗೆ ತಯಾರಿಸಲು ಉಪಯೋಗಿಸಲಾಗುವುದು. ಈ ಯೋಜನೆ ಪ್ರಾರಂಭಗೊಂಡರೆ ಸ್ಥಳೀಯ ಜನರಿಗೆ ಇನ್ನಷ್ಟು ಸಮಸ್ಯೆಗಳು ಎದುರಾಗಬಹುದು. ಪರಿಸರ ಸಂಘಟನೆಗಳ ಪ್ರಕಾರ ಈ ಎಲ್ಲಾ ಕಾರಣಗಳಿಂದಾಗಿ ಕೊಜೆಂಟ್ರಿಕ್ಸ್ ಅಸ್ತಿತ್ವಕ್ಕೆ ಬಂದರೆ ನಂದಿಕೂರಿನ ಸುತ್ತಲಿನ ಜನರಿಗೆ, ಸಾಗರ ಜೀವಿಗಳಿಗೆ ಮತ್ತು ಸುತ್ತಲಿನ ಸಸ್ಯಲೋಕದ ಮೇಲೆ ಬೀರಬಹುದಾದ ಕೆಟ್ಟ ಪರಿಣಾಮಗಳನ್ನು ಯೋಚಿಸಲೂ ಸಾಧ್ಯವಿಲ್ಲ.

೧೯೯೨ರಲ್ಲಿ ಈ ಯೋಜನೆ ಪ್ರಾರಂಭಗೊಂಡು, ಅಂದಿನಿಂದ ಇಂದಿನವರೆಗೂ (೧೯೯೯) ಪರಿಸರವಾದಿಗಳ ತೀವ್ರ ವಿರೋಧದ ಜೊತೆಯಲ್ಲಿ ಲಂಚ ಮತ್ತು ಕಮಿಷನ್ ನೀಡಿದ ಆರೋಪ ಮುಂತಾದ ಹಲವಾರು ತಡೆಗಳನ್ನು ಎದುರಿಸುತ್ತಲೇ ಬಂದಿದೆ. ಈಗಾಗಲೇ ವಿಳಂಬವಾಗಿರುವ ಈ ಯೋಜನೆಯ ಅನುಷ್ಠಾನದಲ್ಲಿ ಮತ್ತಷ್ಟು ಕಾಲ ಮತ್ತು ಹಣವನ್ನು ವೆಚ್ಚಮಾಡುವುದು ಸಮರ್ಥನೀಯವಲ್ಲ, ಲಾಭದಾಯಕವಲ್ಲ ಎನ್ನುವ ಕಾರಣದಿಂದ ಯೋಜನೆಯನ್ನು ಕೈಬಿಡುವ ನಿರ್ಧಾರವನ್ನು ಸಂಸ್ಥೆಯು ೧೯೯೯ರ ಡಿಸೆಂಬರ್‌ನಲ್ಲಿ ಪ್ರಕಟಿಸಿತು. ಕೊಜೆಂಟ್ರಿಕ್ಸ್ ಸಂಸ್ಥೆಯ ಮಂಗಳೂರು ವಿದ್ಯುತ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಾನ್ ಸೋಮರ್ಸ್ ಈ ವಿಷಯವನ್ನು ಪ್ರಕಟಿಸಿದರು. ಇದು

ಸರಕಾರ ಮತ್ತು ಉದ್ಯಮಿಗಳಿಗೆ ತೀವ್ರ ನಿರಾಸೆಯನ್ನುಂಟು ಮಾಡಿದರೆ ಪರಿಸರವಾದಿಗಳಿಗೆ ಸಂತೋಷವನ್ನುಂಟು ಮಾಡಿತು. ಸರಕಾರ ಮತ್ತು ವಾಣಿಜ್ಯೋದ್ಯಮಿಗಳು ಇದೊಂದು ದುರದೃಷ್ಟಕರ ಬೆಳವಣಿಗೆ ಎಂದು ಅಭಿಪ್ರಾಯಪಟ್ಟರೆ, ಪರಿಸರಾಸಕ್ತ ಸಂಘಟನೆಗಳು ಇದು ಜನತೆಯ ಹೋರಾಟಕ್ಕೆ ದೊರೆತ ಪ್ರತಿಫಲ ಎಂದಿದ್ದಾವೆ. ನಾಗರಿಕ ಸೇವಾ ಟ್ರಸ್ಟ್, ದಕ್ಷಿಣ ಕನ್ನಡ ಮೀನುಗಾರರ ಸಂರಕ್ಷಣಾ ಸಮಿತಿ, ದಕ್ಷಿಣ ಕನ್ನಡ ಜಿಲ್ಲಾ ಪರಿಸರಾಸಕ್ತ ಒಕ್ಕೂಟ, ನಂದಿಕೂರು ಜನಜಾಗೃತಿ ಸಮಿತಿ ಮುಂತಾದ ಪರಿಸರ ಸಂಘಟನೆಗಳು ತಮಗಾದ ಸಂತೋಷವನ್ನು ಪರಸ್ಪರ ಹಂಚಿಕೊಂಡವು.

ಕೊಜೆಂಟ್ರಿಕ್ಸ್ ಕುರಿತಾದ ಈ ವಾದ-ವಿವಾದಗಳು ಸಂಸತ್ತಿನ ಉಭಯ ಸದನಗಳಲ್ಲೂ ಗದ್ದಲ ಏರ್ಪಡಲು ಕಾರಣವಾಯಿತು. ಈ ಯೋಜನೆಗೆ ಕೌಂಟರ್ ಗ್ಯಾರಂಟಿ ನೀಡಬೇಕೆಂದು ರಾಜ್ಯದ ಸಂಸತ್ ಸದಸ್ಯರು ಸರಕಾರವನ್ನು ಒತ್ತಾಯಿಸಿದರು. ರಾಜ್ಯ ಸರಕಾರ ಕೊಜೆಂಟ್ರಿಕ್ಸ್ ಅಧಿಕಾರಿಗಳಿಗೆ ತಮ್ಮ ನಿಲುವನ್ನು ಪುನರ್ ಪರಿಶೀಲಿಸುವಂತೆ ಒತ್ತಾಯಿಸಿದರು. ಕೊಜೆಂಟ್ರಿಕ್ಸ್ ಕಂಪೆನಿಯ ಮೇಲಿದ್ದ ಲಂಚ ನೀಡಿಕೆ ಆರೋಪವನ್ನು ಸುಪ್ರೀಂಕೋರ್ಟ್ ರದ್ದುಪಡಿಸಿತು. ಇದರಿಂದಾಗಿ ಯೋಜನೆಯನ್ನು ಕೈಬಿಡುವ ನಿಲುವಿನಲ್ಲಿ ಸಂಸ್ಥೆಯು ಬದಲಾವಣೆಯನ್ನು ಪ್ರಕಟಿಸುವುದರ ಜೊತೆಗೆ ಸರಕಾರಕ್ಕೆ ಕೆಲವೊಂದು ಷರತ್ತುಗಳನ್ನು ವಿಧಿಸಿತು. ಅದೇನೆಂದರೆ, ರಾಜ್ಯ ಸರಕಾರ ೧೯೯೭ರಲ್ಲಿ ಮಾಡಿಕೊಂಡ ವಿದ್ಯುತ್ ಖರೀದಿ ಒಪ್ಪಂದಕ್ಕೆ ಬದ್ಧವಾಗಿರಬೇಕು ಹಾಗೂ ಈ ಒಪ್ಪಂದಕ್ಕೆ ಕೇಂದ್ರ ಸರಕಾರ ತಡಮಾಡದೆ ಲಿಖಿತ ಪ್ರತಿ ಖಾತರಿ ನೀಡಬೇಕು. ಸರಕಾರ ಮತ್ತು ಉದ್ಯಮಿಗಳು ಯೋಜನೆಯನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಉಪಾಯಗಳನ್ನು ಹುಡುಕಿದರೆ, ಪರಿಸರವಾದಿಗಳು ಕೇಂದ್ರ ಮತ್ತು ರಾಜ್ಯಗಳಲ್ಲಿ ನಡೆಯುತ್ತಿರುವ ಬೆಳೆವಣಿಗೆಗಳನ್ನು ಎಚ್ಚರಿಕೆಯಿಂದ ಗಮನಿಸಿದರು. ಪರಿಸರವಾದಿಗಳು ಎತ್ತಿರುವ ಅನೇಕ ಪಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕಂಡುಕೊಳ್ಳಲಾಗುವುದು ಎನ್ನುವ ಭರವಸೆಯನ್ನು ಸರಕಾರ ಪರಿಸರವಾದಿಗಳಿಗೆ ನೀಡಿತು. ಆದರೆ ವಿದ್ಯುತ್ ಸ್ಥಾವರದ ಕುರಿತಾಗಿ ಮರು ಮಾತುಕತೆ ಆರಂಭಗೊಂಡಿರುವುದು ಪರಿಸರಾಸಕ್ತ ಒಕ್ಕೂಟಗಳು ಸಂಘಟಿತವಾಗುವಂತೆ ಮಾಡಿತು.

ಆಧುನಿಕ ಸೌಕರ್ಯಗಳು ಬೇಡ ಎಂಬುದಾಗಿ ತಿರಸ್ಕರಿಸಲು ಸಾಧ್ಯವಿಲ್ಲ. ಏಕೆಂದರೆ ಆಧುನಿಕ ಸೌಕರ್ಯಗಳಿಂದ ವಂಚಿತರಾದ ಜನರ ಸಂಖ್ಯೆಯೇ ಹೆಚ್ಚಿದೆ. ಆಧುನಿಕ ಸೌಕರ್ಯಗಳನ್ನು ಪಡೆದುಕೊಂಡಿರುವ ಜನವರ್ಗ ಯಾವ ಒಡಂಬಡಿಕೆಗೂ ಸಿದ್ಧರಾಗಿರುತ್ತಾರೆ. ಆದರೆ ಇದರ ಪರಿಣಾಮ ಬೀರುವುದು ಬಡವರ್ಗದ ಜನರ ಮೇಲೆ. ಕೊಜೆಂಟ್ರಿಕ್ಸ್ ಇದಕ್ಕೆ ಉತ್ತಮ ಉದಾಹರಣೆ. ಕೊಜೆಂಟ್ರಿಕ್ಸ್‌ನೊಡನೆ ರಾಜ್ಯ ಸರಕಾರ ಕೆಲವೊಂದು ಒಪ್ಪಂದಗಳನ್ನು ಮಾಡಿಕೊಂಡಿತ್ತು. ಈ ಒಪ್ಪಂದಗಳು ಏಕಪಕ್ಷೀಯವಾಗಿದ್ದು ಸರಕಾರಕ್ಕಾಗಲಿ ಅಥವಾ ಕೆ.ಇ.ಬಿ.ಗಾಗಲಿ ಹೆಚ್ಚಿನ ಲಾಭವನ್ನು ತರುವಂತಿರಲಿಲ್ಲ. ಕೊಜೆಂಟ್ರಿಕ್ಸ್‌ಗೆ ಎಲ್ಲಾ ದೃಷ್ಟಿಯಿಂದಲೂ ತನ್ನ ಹಿತಾಸಕ್ತಿಗಳನ್ನು ಭದ್ರವಾಗಿ ಕಾಯ್ದಿರಿಸಿ ಕೊಳ್ಳಲು ಈ ಒಪ್ಪಂದಗಳು ಸಹಕಾರಿಯಾದವು. ನಂದಿಕೂರಿನಲ್ಲಿ ಪರಿಸರನಾಶವಾದರೆ ಕಂಪೆನಿಗೇನೂ ನಷ್ಟವಿಲ್ಲ. ನಂದಿಕೂರಿನ ನಿವಾಸಿಗಳು ಕೊಜೆಂಟ್ರಿಕ್ಸ್‌ನ ಅಧಿಕಾರಿಗಳೊಡನೆ ಮತ್ತು ತಾವೇ ಆಯ್ಕೆ ಮಾಡಿದ ಪ್ರತಿನಿಧಿಗಳೊಡನೆ ವಿರೋಧವನ್ನು ಕಟ್ಟಿಕೊಳ್ಳುವಂತಿಲ್ಲ.

ಇದು ಒಂದು ರೀತಿಯಲ್ಲಿ ಹಿಂದಿದ್ದ ಮತ್ತು ಈಗಲೂ ತೆರೆಮರೆಯಲ್ಲಿರುವ ಊಳಿಗಮಾನ್ಯ ಪದ್ಧತಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುವಂತೆ ಕಂಡುಬರುತ್ತದೆ. ಅಧಿಕಾರಿಗಳ ಅಧಿಕಾರಶಾಹಿ ಧೋರಣೆ, ಉದ್ಯಮಪತಿಗಳ ಬಂಡವಾಳಶಾಹಿ ಧೋರಣೆ, ಜನಪ್ರತಿನಿಧಿಗಳ ದಲ್ಲಾಳಿ ಪ್ರವೃತ್ತಿಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ಊಳಿಗಮಾನ್ಯ ವ್ಯವಸ್ಥೆಯ ಮುಂದುವರಿದ ಘಟ್ಟವನ್ನಾಗಿ ಮಾಡಿವೆ. ಇಲ್ಲಿ ಉದ್ದಿಮೆಗಳು ಇವೆಲ್ಲವುದರ ಕೇಂದ್ರ ಸ್ಥಾನವಾಗಿ ಕಾರ್ಯನಿರ್ವಹಿಸುತ್ತಿರುತ್ತವೆ. ಇಂಥ ಸಂದರ್ಭದಲ್ಲಿ ಹುಟ್ಟಿಕೊಳ್ಳುವ ಚಳವಳಿಗಳ ಸ್ವರೂಪವೂ ಚರ್ಚಾಸ್ಪದವಾಗಿದೆ. ಆದರೆ ಸೂಕ್ಷ್ಮ ಅಧ್ಯಯನದಿಂದ ಮಾತ್ರ ಇದು ತಿಳಿಯಲು ಸಾಧ್ಯ. ಯೋಜನೆಯಿಂದಾಗಿ ಜಮೀನು ಕಳೆದುಕೊಳ್ಳುವ ಜನವರ್ಗ ಪುನರ್ವಸತಿಯ ಬಗ್ಗೆ ಹೆಚ್ಚು ಚಿಂತಿತವಾಗಿರುತ್ತದೆ. ಇದು ಕೊಜೆಂಟ್ರಿಕ್ಸ್ ಬೇಡ ಎನ್ನುವುದಕ್ಕಿಂತ ಹೆಚ್ಚಾಗಿ ತನ್ನ ಬದುಕಿನ ಕಡೆಗೆ ಹೆಚ್ಚಿನ ಗಮನ ಕೊಡುವುದು ಸಹಜ ಎಂದೆನಿಸುತ್ತದೆ. ಸ್ಥಳೀಯ ರಾಜಕೀಯ ಧುರೀಣರು ಈ ಸಮಸ್ಯೆಯನ್ನು ಜನರ ಬೆಂಬಲ ಪಡೆದು ಅಧಿಕಾರ ಗಿಟ್ಟಿಸಿಕೊಳ್ಳುವುದಕ್ಕ ಮಾತ್ರ ಉಪಯೋಗಿಸಿಕೊಳ್ಳುತ್ತಾರೆ. ಇವರಿಗೆ ಪ್ರಚಾರ ಮುಖ್ಯ, ಪತ್ರಿಕೆಗಳಲ್ಲಿ ಭಾವಚಿತ್ರದೊಂದಿಗೆ ಅವರ ಹೇಳಿಕೆಗಳು ಪ್ರಕಟಗೊಳ್ಳಬೇಕು. ಇನ್ನು ವಿದ್ಯಾವಂತ ಜನವರ್ಗದ ಚಳವಳಿಗಳು ವಿಚಾರಸಂಕಿರಣ, ಸಮ್ಮೇಳನ, ಬರೆಹದ ರೂಪದಲ್ಲಿರುತ್ತದೆ. ಇಲ್ಲಿ ಅನೇಕ ಬಾರಿ ಸಮಸ್ಯೆಯ ಮೂಲ ಚರ್ಚೆಗೊಳಗಾಗದೆ ಉಳಿಯುವ ಸಾಧ್ಯತೆಯೂ ಹೆಚ್ಚು. ಈ ಕಾರಣಗಳಿಂದಾಗಿ ಇವರೆಲ್ಲರೂ ಹುಟ್ಟುಹಾಕುವ ಪರಿಸರ ಪ್ರಜ್ಞೆಯ ವ್ಯಾಪ್ತಿಯೂ ಚರ್ಚೆಯ ವಸ್ತುವೇ ಆಗಿದೆ.

೩.೮.೩. ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರ

ಕೊಜೆಂಟ್ರಿಕ್ಸ್ ಯೋಜನೆಯಂತೆಯೇ ಸ್ಥಾಪಿಸಲು ಉದ್ದೇಶಿಸಿರುವ ನಾಗಾರ್ಜುನ ಯೋಜನೆ ಬೇಕಾದ ಎಲ್ಲಾ ಪೂರ್ವಭಾವಿ ಸಿದ್ಧತೆಗಳನ್ನು ಮಾಡುವಲ್ಲಿ ನಿರತವಾಗಿದೆ. ಇದಕ್ಕೆ ಸೂಕ್ತ ಪ್ರದೇಶದ ಆಯ್ಕೆಯಾಗಿದ್ದು ಅದು ಕೊಜೆಂಟ್ರಿಕ್ಸ್‌ಗೆ ಆಯ್ಕೆ ಮಾಡಿದ ಸ್ಥಳದ ಹತ್ತಿರದಲ್ಲಿಯೇ ಇದೆ. ನಾಗಾರ್ಜುನ ಯೋಜನೆಯು ಹೈದರಾಬಾದ್ ನೆಲೆಯ ನಾಗಾರ್ಜುನ ಪವರ್ ಕಂಪೆನಿ ಯೋಜಿಸಿರುವ ಹೊಸ ಯೋಜನೆಯಾಗಿದೆ. ಇದರಲ್ಲಿ ೧೦೦ ಮೆ.ವಾ. ವಿದ್ಯುತ್ ಉತ್ಪಾದಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ನಾಗಾರ್ಜುನ ಕಂಪೆನಿಯು ಕರ್ನಾಟಕ ವಿದ್ಯುತ್ ಮಂಡಲಿಯೊಡನೆ ಮಾತುಕತೆ ನಡೆಸಿದೆ. ಎರಡೂ ಯೋಜನೆಗಳು ಒಟ್ಟೊಟ್ಟಿಗೆ ಪ್ರಾರಂಭಗೊಳ್ಳಬೇಕೆನ್ನುವ ಉದ್ದೇಶವನ್ನು ಹೊಂದಿವೆ. ಆದರೆ ಎರಡೂ ಯೋಜನೆಗಳು ಒಂದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ.

ಕೊಜೆಂಟ್ರಿಕ್ಸ್ ಕಂಪೆನಿಗೆ ಅನುಮತಿ ದೊರೆಯುತ್ತಿದ್ದಂತೆ ನಾಗಾರ್ಜುನ ಪವರ್ ಕಂಪೆನಿ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕೆಲಸದಲ್ಲಿ ತೊಡಗಿತು. ಈ ಉದ್ದೇಶಕ್ಕಾಗಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಲಿ ಭಾರಿ ಪೊಲೀಸ್ ಬಂದೋಬಸ್ತ್‌ನ ವ್ಯವಸ್ಥೆ ಮಾಡಿತ್ತು. ಇದರ ಸಹಾಯದಿಂದ ಭೂ ಸರ್ವೇಕ್ಷಣಾ ಕಾರ್ಯ ನಡೆಯಿತು. ಅದೇ ಸಂದರ್ಭದಲ್ಲಿ ಸ್ಥಳೀಯ ಜನರು ಭೂ ಸರ್ವೇಕ್ಷಣೆಯ ವಿರುದ್ಧ ಪ್ರತಿಭಟನೆ ನಡೆಸಿದರು. ವಿಲ್ಲೂರು ಎನ್ನುವ ಹಳ್ಳಿಯಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದ್ದರಿಂದಾಗಿ ಭೂ ಸರ್ವೇಕ್ಷಣಾ ಕಾರ್ಯಕ್ಕೆ ತಡೆ ಉಂಟಾಯಿತು. ಕೊಜೆಂಟ್ರಿಕ್ಸ್

ಮತ್ತು ನಾಗಾರ್ಜುನ ಯೋಜನೆಗಳು ಕಳೆದ ಹತ್ತು ವರ್ಷಗಳಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನ ನಡೆಸುತ್ತಲೇ ಬಂದಿವೆ. ಈ ಎರಡು ಉಷ್ಣ ವಿದ್ಯುತ್ ಸ್ಥಾವರಗಳಿಗಾಗಿ ಪಡುಬಿದ್ರಿ ಗ್ರಾಮದ ಹೆಜಮಾಡಿ, ಇನ್ನ, ಉಲ್ಲೂರು, ಕೊಳಚೂರು, ಎಲ್ಲೂರು, ಮುದರಂಗಡಿ ಹಾಗೂ ನಂದಿಕೂರು ಹಳ್ಳಿಗಳು ತೆರವುಗೊಳ್ಳಬೇಕಾಗಿದೆ. ಒಟ್ಟು ಸುಮಾರು ಮೂರುಸಾವಿರ ಎಕರೆ ಪ್ರದೇಶ ಈ ಯೋಜನೆಗಳಿಗಾಗಿ ವಿನಿಯೋಗ ವಾಗಲಿದೆ. ಇಲ್ಲಿನ ನಿವಾಸಿಗಳಿಗೆ ತಮ್ಮ ಜಮೀನುಗಳನ್ನು ತೆರವುಗೊಳಿಸುವಂತೆ ನೋಟೀಸ್‌ಗಳನ್ನು ನೀಡಲಾಗುತ್ತಿದೆ. ಆದರೆ ಯಾರೂ ನೋಟೀಸ್‌ಗಳನ್ನು ಸ್ವೀಕರಿಸಲಿಲ್ಲ. ಅದೇ ರೀತಿ ಜಮೀನಿಗೆ ಬೆಲೆ ನಿಗದಿಗೊಳಿಸುವ ವಿಷಯದಲ್ಲೂ ಮನಸ್ತಾಪ ಉಂಟಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಪರಿಸರಾಸಕ್ತ ಒಕ್ಕೂಟ, ನಂದಿಕೂರು ಜನಜಾಗೃತಿ ಸಮಿತಿ, ನಾಗರಿಕ ಸೇವಾ ಟ್ರಸ್ಟ್ ಮತ್ತು ನಿಸರ್ಗ ಬಳಗ ಮುಂತಾದ ಸಂಘಟನೆಗಳು ಈ ಯೋಜನೆಗಳನ್ನು ವಿರೋಧಿಸುತ್ತಿವೆ. ದಕ್ಷಿಣ ಕನ್ನಡ ಉಳಿಸಿ ಅಭಿಯಾನ ಯೋಜನೆಯನ್ನೂ ಹಮ್ಮಿಕೊಂಡಿವೆ. ಕೈಗಾ ಅಣು ಸ್ಥಾವರ ಮತ್ತು ರಾಯಚೂರು ಉಷ್ಣವಿದ್ಯುತ್ ಸ್ಥಾವರಗಳಿಂದ ಆಗುತ್ತಿರುವ ಪರಿಸರ ಮಾಲಿನ್ಯದ ಅಧ್ಯಯನ ನಡೆಸಿರುವವರಿಗೆ ಮಾತ್ರ ಇವುಗಳ ಸಮಸ್ಯೆಯ ಅರಿವಾಗಲು ಸಾಧ್ಯ ಎನ್ನುವುದು ವಿವಿಧ ಸಂಘಟನೆಗಳ ಕಾರ್ಯಕರ್ತರ ಅಭಿಪ್ರಾಯ. ಏನೇ ಆದರೂ ಈ ಸಂಘಟನೆಗಳು ತಾತ್ಕಾಲಿಕ ತಡೆಯನ್ನಷ್ಟೇ ಮಾಡಲು ಸಾಧ್ಯ. ಇದು ಕರ್ನಾಟಕದ ವಿವಿಧ ಯೋಜನೆಗಳು ಅಸ್ತಿತ್ವಕ್ಕೆ ಬಂದ ಬಗೆಯನ್ನು ಗಮನದಲ್ಲಿ ಇಟ್ಟುಕೊಂಡು ಆಡಿರುವ ಮಾತು. ಕೊಜೆಂಟ್ರಿಕ್ಸ್‌ವಾದಿಗಳು ಸರಕಾರ ಮತ್ತು ಸಂಬಂಧಪಟ್ಟ ಇಲಾಖೆ ಗಳೊಡನೆ ಮೈತ್ರಿ ಸಂಪಾದಿಸಿಕೊಂಡಿರುವುದರಿಂದಾಗಿ ಅವರ ವಿರುದ್ಧ ನಡೆಯುವ ಯಾವುದೇ ಚಳವಳಿಯೂ ಗಟ್ಟಿಯಾಗಿ ಬೇರೂರಲು ಸಾಧ್ಯವಿಲ್ಲ.

೩.೮.೮. ಬಾರ್ಜ್ ಮೌಂಟೆಡ್ ವಿದ್ಯುತ್ ಸ್ಥಾವರ

ಕರಾವಳಿ ಪ್ರದೇಶದಲ್ಲಿ ಬೆಸ್ತರು ನಡೆಸಿರುವ ಚಳವಳಿಗಳ ಸಂಖ್ಯೆಯೇ ಹೆಚ್ಚಿನದು. ಹೆಚ್ಚಿನ ಉದ್ದಿಮೆಗಳು ಸಮುದ್ರತೀರದಲ್ಲಿಯೇ ಸ್ಥಾಪನೆಗೊಳ್ಳುತ್ತಿರುವುದು ಇದಕ್ಕೆ ಕಾರಣ. ಬಾರ್ಜ್ ಮೌಂಟೆಡ್ ವಿದ್ಯುತ್ ಸ್ಥಾವರವೂ ಇದಕ್ಕೊಂದು ಉದಾಹರಣೆ. ಅಮೇರಿಕಾ ಮೂಲದ ಸ್ಮಿತ್‌ಕೋ ಜನರೇಶನ್ ಸಂಸ್ಥೆಯು ಬೆಂಗ್ರೆಯಲ್ಲಿ ಈ ವಿದ್ಯುತ್ ಸ್ಥಾವರವನ್ನು ನಿರ್ಮಿಸಲು ಉದ್ದೇಶಿಸಿದೆ. ಇದನ್ನು ವಿರೋಧಿಸಿ ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಯ ಮೀನುಗಾರರು ಹಾಗೂ ಸಾರ್ವಜನಿಕರು ಚಳವಳಿ ನಡೆಸುತ್ತಿದ್ದಾರೆ. ಬೆಂಗ್ರೆಯಲ್ಲಿ ಸುಮಾರು ೨೦ ಸಾವಿರಕ್ಕಿಂತಲೂ ಹೆಚ್ಚಿನ ಮೀನುಗಾರ ಕುಟುಂಬಗಳಿವೆ. ಇವರು ವಿದ್ಯುತ್ ಸ್ಥಾವರವನ್ನು ಸ್ಥಾಪಿಸುವ ಯೋಜನೆಯನ್ನು ಸರಕಾರ ಕೈಬಿಡಬೇಕು ಮತ್ತು ಕೊಟ್ಟಿರುವ ಅನುಮತಿಯನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸುತ್ತಿದ್ದಾರೆ. ಆದರೆ ಬಹುರಾಷ್ಟ್ರೀಯ ಕಂಪೆನಿಯೊಡನೆ ಒಪ್ಪಂದವನ್ನು ಮಾಡಿಕೊಂಡಿರುವ ಸರಕಾರ ಯೋಜನೆಯನ್ನು ಕೈಬಿಡುವ ಸ್ಥಿತಿಯಲ್ಲಿಲ್ಲ.

ವಿದ್ಯುತ್ ಸ್ಥಾವರದ ನಿರ್ಮಾಣದ ಪ್ರಸ್ತಾವ ಮೀನುಗಾರರಲ್ಲಿ ಆತಂಕದ ಅಲೆಗಳನ್ನು ಎಬ್ಬಿಸಿದೆ. ಬೆಂಗ್ರೆಯ ಇಡೀ ಮೀನುಗಾರರ ಸಮೂಹ ಒಂದಾಗಿ ಯೋಜನೆಯ ವಿರುದ್ಧ

ಪ್ರತಿಭಟನೆ ನಡೆಸುತ್ತಿದೆ. ತಮ್ಮ ಅನ್ನಕ್ಕೆ ಕಲ್ಲು ಹಾಕುವ ಬಾರ್ಜ್ ಮೌಂಟೆಡ್ ವಿದ್ಯುತ್ ಸ್ಥಾವರ ಬೇಡವೇ ಬೇಡ ಎನ್ನುವ ಕೂಗು ಕರಾವಳಿಯಾದ್ಯಂತ ಕೇಳಿಬರುತ್ತಿದೆ. ಇದರರ್ಥ ಮೀನುಗಾರರು ಅಭಿವೃದ್ಧಿಯ ವಿರೋಧಿಗಳು ಎಂದಲ್ಲ. ವಿದ್ಯುತ್ ಯೋಜನೆಯು ಲಾಭವನ್ನು ಪಡೆದುಕೊಳ್ಳುವ ವರ್ಗ ಅದರಿಂದಾಗುವ ಮಾಲಿನ್ಯವನ್ನು ಮೀನುಗಾರರಿಗೆ ರವಾನಿಸುತ್ತದೆ. ಇದರ ವಿರುದ್ಧ ಮೀನುಗಾರರು ಚಳವಳಿ ನಡೆಸುವುದರಲ್ಲಿ ಯಾವುದೇ ತಪ್ಪಿಲ್ಲ. ಉದ್ದಿಮೆದಾರರು ಅಥವಾ ಸರಕಾರ ಯೋಜನೆಗೆ ಬೇರೆ ಪ್ರದೇಶವನ್ನು ಆಯ್ಕೆಮಾಡಿಕೊಳ್ಳಬಹುದು. ಆದರೆ ಮೀನುಗಾರರಿಗೆ ಆ ಸ್ವಾತಂತ್ರ್ಯ ಇಲ್ಲ. ಮೊದಲೇ ಸೂಚಿಸಲಾದ ಪ್ರದೇಶದಲ್ಲಿ ಮಾತ್ರ ಅವರು ಮೀನುಗಾರಿಕೆಯನ್ನು ನಡೆಸಲು ಸಾಧ್ಯ. ಇದರಿಂದಾಗಿ ಮೀನುಗಾರರು ನಡೆಸುವ ಚಳವಳಿ ತಮ್ಮ ಬದುಕಿನ ಪ್ರಶ್ನೆಯನ್ನು ಒಳಗೊಂಡಿದೆ. ಕೆಲವೊಂದು ಸಂದರ್ಭಗಳಲ್ಲಿ ಅದು ಹಿಂಸಾತ್ಮಕ ಮಟ್ಟಕ್ಕೂ ಹೋಗಬಹುದು. ಸರಕಾರ ಅಂಥ ಸಂದರ್ಭಗಳಲ್ಲಿ ಬಲಪ್ರಯೋಗ ನಡೆಸುವ ಬದಲು ಪರಿಹಾರ ಕ್ರಮಗಳತ್ತ ಹೆಚ್ಚಿನ ಗಮನವನ್ನು ನೀಡಬೇಕಾಗುತ್ತದೆ. ಸರಕಾರ ಆಧುನಿಕತೆಯ ಪ್ರಯೋಜನಗಳನ್ನು ನೀಡುವಲ್ಲಿ ವಿಫಲವಾದರೆ, ಸಾಂಪ್ರದಾಯಕ ಜೀವನ ವಿಧಾನಕ್ಕೆ ಅಡ್ಡಿಯುಂಟುಮಾಡಬಾರದು. ಇದು ಮಾನವ ಪರಿಸರವನ್ನು ಮಾಲಿನ್ಯಗೊಳಿಸುವ ಕೆಲಸವನ್ನಷ್ಟೇ ಮಾಡಲು ಸಾಧ್ಯ. ಕರಾವಳಿ ಪ್ರದೇಶದಲ್ಲಿ ಎಷ್ಟೇ ಉದ್ದಿಮೆಗಳು ಬಂದರೂ ಅದರಿಂದ ಸ್ಥಳೀಯ ಮೀನುಗಾರರಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚು.

ಬಾರ್ಜ್ ಮೌಂಟೆಡ್ ವಿದ್ಯುತ್ ಸ್ಥಾವರದ ನಿರ್ಮಾಣದ ಕುರಿತು ಚರ್ಚಿಸಲು ಸಭೆಗಳನ್ನು ಆಯೋಜಿಸಲಾಗಿತ್ತು. ಇಂಥ ಸಭೆಗಳಲ್ಲಿ ಸ್ಥಳೀಯ ಶ್ರೀಮಂತವರ್ಗದವರು, ರಾಜಕಾರಣಿಗಳು, ಹಾಗೂ ಅಧಿಕಾರಿಗಳು ಭಾಗವಹಿಸಿ ವೇದಿಕೆಯನ್ನು ತಮ್ಮ ಉದ್ದೇಶಗಳಿಗೆ ಬಳಸಿಕೊಂಡರು. ಭಾರತೀಯ ಜನತಾ ಪಕ್ಷದವರಿಗೆ ಜನತಾದಳ ಸರಕಾರವನ್ನು ದೂಷಿಸುವುದಕ್ಕೂ ಇದು ವೇದಿಕೆಯಾಯಿತು. ಸಾರ್ವಜನಿಕರ ಅಹವಾಲುಗಳನ್ನು ಆಲಿಸಲು ಜಿಲ್ಲಾಮಟ್ಟದ ಅನೇಕ ಸಮಿತಿಗಳ ಸದಸ್ಯರುಗಳು ನೇಮಕಗೊಂಡಿದ್ದರು. ಸಾರ್ವಜನಿಕರ ಅಹವಾಲುಗಳನ್ನು ದಾಖಲಿಸುವುದು ಸಮಸ್ಯೆಗೆ ಪರಿಹಾರವಲ್ಲ. ಮೌಖಿಕವಾಗಿದ್ದ ಅಹವಾಲುಗಳು ಲಿಖಿತರೂಪಕ್ಕೆ ಬಂದು ಸಂಬಂಧಿಸಿದ ಕಡತಗಳಲ್ಲಿ ದಾಖಲುಗೊಳ್ಳುವುದನ್ನೇ ಚಳವಳಿಯ ಯಶಸ್ಸು ಎಂದು ಭಾವಿಸುವುದು ಮೂರ್ಖತನವಾಗುತ್ತದೆ. ಇದು ಯೋಜನೆಗಳಿಂದ ನಿಜವಾಗಿಯೂ ತೊಂದರೆಗೊಳಗಾದ ಜನಸಮುದಾಯವನ್ನು ಇನ್ನಷ್ಟು ಸಮಸ್ಯೆಗಳಿಗೆ ಸಿಲುಕಿಸುವ ಕೆಲಸವನ್ನಷ್ಟೇ ಮಾಡಲು ಸಾಧ್ಯ. ಯೋಜನೆಗೆ ಸಂಬಂಧಿಸಿದ ಸಭೆಗಳಲ್ಲಿ ಪರ ಹಾಗೂ ವಿರೋಧ ನಿಲುವುಗಳು ವ್ಯಕ್ತವಾದರೂ ಅಂತಿಮ ತೀರ್ಮಾನವನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಯೋಜನೆಯ ಮಹತ್ವದ ತೀರ್ಮಾನಗಳು ಮೊದಲೇ ನಿರ್ಧಾರವಾಗಿರುತ್ತವೆ. ಈ ಕಾರಣಗಳಿಂದಾಗಿಯೇ ಸಭೆಗಳಲ್ಲಿ ವಿರೋಧಗಳು ವ್ಯಕ್ತವಾದರೂ ಯೋಜನೆಯ ಕೆಲಸ ಕಾರ್ಯಗಳಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳುವುದಿಲ್ಲ. ಜನರನ್ನು ಸಮಾಧಾನಪಡಿಸುವ ಮತ್ತು ಆ ಮೂಲಕ ಪ್ರಯೋಜನಗಳನ್ನು ಪಡೆಯುವುದಕ್ಕಷ್ಟೇ ಸಭೆಗಳು ಸೀಮಿತವಾಗಿರುತ್ತವೆ.

ಮೊಗವೀರ ಮಹಾಜನ ಸಭೆಯು ವಿದ್ಯುತ್ ಸ್ಥಾವರ ಯೋಜನೆಯನ್ನು ಆರಂಭದಿಂದಲೂ ವಿರೋಧಿಸುತ್ತಲೇ ಬಂದಿದೆ. ಆದರೆ ರಾಜಕೀಯದ ಪ್ರವೇಶ ಹಾಗೂ ರಾಜಕಾರಣಿಗಳ ಬದಲಾಗುತ್ತಿರುವ ನಿಲುವುಗಳಿಂದಾಗಿ ಮಹಾಜನ ಸಭೆಯು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದು ಕಷ್ಟಕರವಾಗಿದೆ. ಆದರೂ ತನ್ನ ನಿಲುವನ್ನು ಬದಲಿಸಿಕೊಂಡಿಲ್ಲ. ಮೊಗವೀರ ಮಹಾಜನ ಸಭೆಯು ರಾಜಕಾರಣಿಗಳ ಅವಕಾಶವಾದಿತನ ಹಾಗೂ ಬುದ್ಧಿಜೀವಿಗಳ ಪ್ರಚಾರಪ್ರಿಯತೆಯನ್ನು ತೀವ್ರವಾಗಿ ಖಂಡಿಸಿದೆ. ಪರಿಸರ ಜಾಗೃತಿ ಎನ್ನುವುದು ರಾಜಕಾರಣಿಗಳ ಚುನಾವಣೆಯ ವಸ್ತುವಲ್ಲ ಹಾಗೂ ಬುದ್ಧಿಜೀವಿಗಳ ವಿಚಾರ ಸಂಕಿರಣದ ವಸ್ತುವೂ ಅಲ್ಲ ಎನ್ನುವುದನ್ನು ಸಭೆಯು ಸ್ಪಷ್ಟಪಡಿಸಿದೆ. ನಮ್ಮ ಸಮಸ್ಯೆಗಳನ್ನು ವಿಷಯವನ್ನಾಗಿ ಇಟ್ಟುಕೊಂಡು ರಾಜಕಾರಣಿಗಳು ಮತ ಯಾಚಿಸುತ್ತಾರೆ ಹಾಗೂ ಬುದ್ಧಿಜೀವಿಗಳು ಲೇಖನ ಬರೆಯುತ್ತಾರೆ ಎನ್ನುವುದು ಮಹಾಜನ ಸಭೆಯ ಅಭಿಪ್ರಾಯ. ಈ ಅಭಿಪ್ರಾಯದಲ್ಲಿ ಸತ್ಯಾಂಶ ಖಂಡಿತವಾಗಿಯೂ ಇದೆ. ಆದರೆ ಪರಿಸರ ಜಾಗೃತಿ, ಚಳವಳಿಯ ಕುರಿತಾದ ಲೇಖನಗಳಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರಕಾರ ಯೋಜನೆಗಳ ಕುರಿತು ಮರುಚಿಂತನೆ ನೆಡಸುವಂತಾದರೆ ಲೇಖನಗಳ ಯಶಸ್ವಿಯಾಗುತ್ತವೆ. ಇಂದು ಯಾವುದೇ ಸಮಸ್ಯೆ ಕಾಣಿಸಿಕೊಂಡರೂ ಅದರ ಮೂಲ ಪ್ರಪಂಚದ ಯಾವುದೋ ಒಂದು ಮೂಲೆಯಲ್ಲಿ ಇರುತ್ತದೆ. ಆದ್ದರಿಂದ ಇಂಥ ಪ್ರಯತ್ನಗಳು ಅನಿವಾರ್ಯವೆನಿಸುತ್ತವೆ.

೩.೮.೫. ಸರಪಾಡಿ ಅಣೆಕಟ್ಟು ಯೋಜನೆ

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಅಣೆಕಟ್ಟು ಯೋಜನೆಯ ವಿರುದ್ಧ ನಡೆದ ಚಳವಳಿಗಳ ಕುರಿತು ಈಗಾಗಲೇ ಚರ್ಚಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯೂ ಇದಕ್ಕೆ ಹೊರತಾಗಿಲ್ಲ. ಇಲ್ಲಿನ ನೇತ್ರಾವತಿ ನದಿಗೆ ಬಂಟ್ವಾಳ ತಾಲೂಕಿನ ಸರಪಾಡಿ ಎಂಬಲ್ಲಿ ಅಣೆಕಟ್ಟು ನಿರ್ಮಿಸುವ ಯೋಜನೆಯೊಂದು ಸಿದ್ಧವಾಗಿದೆ. ಈ ಯೋಜನೆಯನ್ನು ಕರ್ನಾಟಕ ವಿದ್ಯುತ್ ನಿಗಮವು ರೂಪಿಸಿದೆ. ಸರಪಾಡಿ ಮತ್ತು ನಾವೂರ ಗ್ರಾಮಗಳ ಗಡಿಯಲ್ಲಿ ಬೊಳ್ಳಾಜೆ ಎಂಬಲ್ಲಿ ೪೭೯ ಮೀಟರ್ ಉದ್ದ, ೨೩.೫ ಮೀಟರ್ ಎತ್ತರದ ಅಣೆಕಟ್ಟನ್ನು ೩೭೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲು ತೀರ್ಮಾನಿಸಲಾಗಿದೆ. ಇದು ೯೦ ಮೆ.ವಾ. ಸಾಮರ್ಥ್ಯದ ಸ್ಥಾವರವಾಗಿದ್ದು, ಜಲಾಶಯ ನಿರ್ಮಾಣಕ್ಕೆ ೭೬೨ ಹೆಕ್ಟೇರ್‌ನಷ್ಟು ಭೂಮಿಯ ಅವಶ್ಯಕತೆ ಇದೆ. ಆದರೆ ಅಣೆಕಟ್ಟು ನಿರ್ಮಾಣದಿಂದಾಗಿ ಸುಮಾರು ೧೦೦೭ ಎಕರೆ ಭೂಮಿ ಮುಳುಗಡೆಯಾಗುವ ಭೀತಿಯಿದೆ. ಈ ಉದ್ದೇಶಿತ ಯೋಜನೆ ಪ್ರಾರಂಭಗೊಂಡರೆ ಶಂಭೂರು, ಬರಿಮಾಕಾ, ಭಾಳ್ತಿಲ, ಕಡೇಶ್ವಾಲ್ಯ, ಸರಪಾಡಿ, ಮಣಿನಾಲ್ಕೂರು ಮತ್ತು ತೆಕ್ಕಾರ್ ಗ್ರಾಮಗಳ ಒಟ್ಟು ೨೬೭ ಕುಟುಂಬಗಳು ನಿರಾಶ್ರಿತವಾಗಬೇಕಾಗುತ್ತದೆ.

ಉದ್ದೇಶಿತ ಅಣೆಕಟ್ಟಿನ ವಿರುದ್ಧ ಹೋರಾಡಲು ಸಮಿತಿಯೂ ರಚನೆಗೊಂಡಿದೆ. ಇದರೊಡನೆ ದಕ್ಷಿಣ ಕನ್ನಡ ಜಿಲ್ಲಾ ಪರಿಸರಾಸಕ್ತ ಒಕ್ಕೂಟ, ಕೃಷಿಕರ ವೇದಿಕೆ ಮುಂತಾದ ಪರಿಸರ ಸಂಘಟನೆಗಳೂ ಕೆಲಸ ಮಾಡುತ್ತಿವೆ. ಈ ಯೋಜನೆ ಒಮ್ಮಿಂದೊಮ್ಮೆಗೇ

ಪ್ರಾರಂಭಗೊಂಡಿಲ್ಲ. ಸುಮಾರು ೧೯೬೦ ರಿಂದೀಚೆಗೆ ಬಂಟ್ವಾಳದ ಆಸುಪಾಸಿನಲ್ಲಿ ಆರೇಳು ಬಾರಿ ಸರ್ವೇಕ್ಷಣೆ ನಡೆಸಲಾಗಿತ್ತು. ೧೯೮೯ರಲ್ಲಿ ಬಂಟ್ವಾಳದಿಂದ ನಾಲ್ಕು ಕಿ.ಮೀ. ದೂರದ ಮಡಿಮೊಗರು ಹೊಸಗದ್ದೆಯಲ್ಲಿ ೩೮೦ ಮೀಟರ್ ಉದ್ದದ, ೨೩.೫. ಮೀ. ಎತ್ತರದ ಅಣೆಕಟ್ಟನ್ನು ೧೮೬ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸುವ ಯೋಜನೆಯೊಂದು ಸಿದ್ಧವಾಗಿತ್ತು. ಆದರೆ ಆ ಸಂದರ್ಭದಲ್ಲಿ ಕಾಣಿಸಿಕೊಂಡ ಪರಿಸರ ಚಳವಳಿಗಳಿಂದಾಗಿ ಯೋಜನೆ ಸ್ಥಗಿತಗೊಂಡಿತು. ಆದರೆ ಪರಿಸರ ಚಳವಳಿಯೊಂದೇ ಕಾರಣವಲ್ಲದೆ ಹಣಕಾಸು ಹಾಗೂ ಇನ್ನಿತರ ಸಮಸ್ಯೆಗಳೂ ಕಾರಣವಾಗಿದ್ದವು. ಉದ್ದೇಶಿತ ಸರಪಾಡಿ ಅಣೆಕಟ್ಟಿನ ಕುರಿತು ಅಧ್ಯಯನ ನಡೆಸಿರುವ ಪರಿಸರ ಸಂಘಟನೆಗಳ ಪ್ರಕಾರ ಸುಮಾರು ೬೦೦೦ ಎಕರೆ ಗದ್ದೆ ಹಾಗೂ ತೋಟ ಪ್ರದೇಶ ಮುಳುಗಡೆಯಾಗಬಹುದು, ೨೦೦೦ ಮನೆಗಳು ನಾಶವಾಗುತ್ತವೆ, ಸುಮಾರು ೮೦೦೦ ಕೃಷಿ ಕಾರ್ಮಿಕರು ನಿರ್ಗತಿಕರಾಗಲಿದ್ದಾರೆ. ಕ.ವಿ.ನಿಗಮವು ಈ ಯೋಜನೆಯನ್ನು ರೂಪಿಸುವಾಗ ಸ್ಥಳೀಯರೊಡನೆ ಚರ್ಚಿಸಿಲ್ಲ ಎನ್ನುವ ಕೊರಗೂ ಕೇಳಿಬರುತ್ತಿದೆ. ಬೃಹತ್ ಬಂಡವಾಳ ಹೂಡಿ ಬೃಹತ್ ಜಲವಿದ್ಯುತ್ ಯೋಜನೆ ಪ್ರಾರಂಭಿಸುವುದಕ್ಕಿಂತ ತುಂಬೆಯಲ್ಲಿ ನಿರ್ಮಿಸಿರುವ ವೆಂಟೆಡ್ ಡ್ಯಾಂನ ತರದಲ್ಲಿ ನದಿಯುದ್ದಕ್ಕೂ ಪ್ರತಿ ಮೂರು ಕಿ. ಮೀ. ಅಂತರದಲ್ಲಿ ವೆಂಟೆಡ್ ಡ್ಯಾಂ ನಿರ್ಮಿಸುವುದು ಸೂಕ್ತ ಎಂಬ ಸಲಹೆಯನ್ನು ಇವರು ನೀಡಿದ್ದಾರೆ. ಆದರೆ ಈ ಯೋಜನೆಯೂ ಸಮಸ್ಯೆಗಳಿಂದ ಮುಕ್ತವಾದದ್ದಲ್ಲ. ಈ ಕುರಿತು ಯಾವುದೇ ಅಂತಿಮ ತೀರ್ಮಾನ ಇನ್ನೂ ರೂಪುಗೊಂಡಿಲ್ಲ.

೩.೮.೬. ಬಲ್ಲೇರಿ ರಕ್ಷಿತಾರಣ್ಯ ಉಳಿಸಿ ಚಳವಳಿ

ಪರಿಸರ ಚಳವಳಿಗಳಿಗೆ ಉದ್ದಿಮೆಗಳ ಸ್ಥಾಪನೆ ಅಥವಾ ಜಲಾಶಯ ನಿರ್ಮಾಣಗಳಷ್ಟೇ ಕಾರಣವಾಗಬೇಕು ಎಂದೇನೂ ಇಲ್ಲ. ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಆರ್ಯಾಪು ಎನ್ನುವಲ್ಲಿ ದೇವಾಲಯ ನಿರ್ಮಾಣವು ಪರಿಸರ ಚಳವಳಿಗೆ ಕಾರಣವಾಗಿದೆ. ಹಿಂದುತ್ವವಾದಿಗಳ ಹಟಮಾರಿತನವೇ ಈ ಚಳವಳಿಗೆ ಮುಖ್ಯ ಕಾರಣ. ಪುತ್ತೂರು ತಾಲೂಕಿನ ಸಂಟ್ಯಾರಿನ ಸಮೀಪದ ಕಾರ್ಪಾಡಿ ಸುಬ್ರಹ್ಮಣ್ಯ ದೇವಸ್ಥಾನದ ಮೂಲಸ್ಥಾನ ಬಲ್ಲೇರಿಯ ಶಿಖರದಲ್ಲಿತ್ತು ಎನ್ನುವುದೇ ಬಲ್ಲೇರಿ ರಕ್ಷಿತಾರಣ್ಯಕ್ಕೆ ಸಮಸ್ಯೆಯನ್ನು ತಂದೊಡ್ಡಿದೆ. ದೇವಾಲಯವನ್ನು ನಿರ್ಮಿಸುವ ಪಣತೊಟ್ಟವರ ಪ್ರಕಾರ ಬಲ್ಲೇರಿಯ ಇನ್ನೊಂದು ಭಾಗದಲ್ಲಿರುವ ಜನರಿಗೆ ಹತ್ತಿರದಲ್ಲಿ ಯಾವ ದೇವಸ್ಥಾನವೂ ಇಲ್ಲ, ಈ ಕಾರಣದಿಂದಾಗಿ ಈ ದೇವಾಲಯದ ಮೂಲಸ್ಥಾನವನ್ನು ಅಭಿವೃದ್ಧಿಪಡಿಸುವುದು ಅನಿವಾರ್ಯವಾಗಿದೆ. ಆದರೆ ಸ್ಥಳೀಯ ಪರಿಸರ ಪ್ರೇಮಿಗಳು ಈ ವಾದವನ್ನು ಒಪ್ಪುವುದೇ ಇಲ್ಲ. ಅವರ ಪ್ರಕಾರ ಬಲ್ಲೇರಿಯಲ್ಲಿ ಇನ್ನೊಂದು ದೇವಾಲಯ ನಿರ್ಮಾಣದ ಯಾವ ಅಗತ್ಯವೂ ಇಲ್ಲ, ಬಲ್ಲೇರಿ ರಕ್ಷಿತಾರಣ್ಯವನ್ನೇ ಪ್ರೀತಿ, ಗೌರವದಿಂದ ನೋಡಿಕೊಂಡರೆ ಸಾಕು.

ದೇವಾಲಯ ನಿರ್ಮಾಣವನ್ನು ಸ್ಥಳೀಯ ಪರಿಸರಾಸಕ್ತರು ಮತ್ತು ಸಂಘಟನೆಗಳು ವಿರೋಧಿಸುವುದಕ್ಕೆ ಅನೇಕ ಕಾರಣಗಳಿವೆ. ಬಲ್ಲೇರಿಯು ತನ್ನ ನಿತ್ಯಹರಿದ್ವರ್ಣದ ಕಾಡಿಗೆ ಹೆಸರುವಾಸಿಯಾಗಿದೆ. ಈಗಾಗಲೇ ಸಂಟ್ಯಾರಿನಲ್ಲಿ ಕಾಡುಗಳ್ಳರು ಬಲ್ಲೇರಿ ಕಾಡನ್ನು

ಲೂಟಿಮಾಡುತ್ತಿದ್ದಾರೆ. ಆದರೆ ಬಲ್ಲೇರಿ ರಕ್ಷಿತಾರಣ್ಯಕ್ಕೆ ಯಾವುದೇ ರಸ್ತೆ ಇಲ್ಲದಿರುವುದರಿಂದಾಗಿ ಕಾಡುಗಳ್ಳರಿಗೂ ಕಷ್ಟವಾಗಿದೆ. ಈಗ ದೇವಾಲಯ ನಿರ್ಮಾಣದ ಹೆಸರಿನಲ್ಲಿ ರಸ್ತೆ ನಿರ್ಮಾಣವಾದರೆ ಬಲ್ಲೇರಿ ಬೋಳಾಗುವ ಸಾಧ್ಯತೆ ಇದೆ ಎನ್ನುವುದು ಇವರ ಆತಂಕ. ಅದೇ ರೀತಿ ಅರಣ್ಯದಲ್ಲಿರುವ ವನ್ಯಜೀವಿಗಳು ಮತ್ತು ಅಮೂಲ್ಯ ಗಿಡ ಮೂಲಿಕೆಗಳು ನಾಶವಾಗುವುದು ಖಂಡಿತ ಎಂದೂ ಅಭಿಪ್ರಾಯಪಟ್ಟಿದ್ದಾರೆ.

೩.೮.೭ ಹಡಗು ಒಡೆಯುವ ಉದ್ದಿಮೆ

ಮಂಗಳೂರಿನ ತಣ್ಣೀರು ಬಾವಿ ಎಂಬಲ್ಲಿ ೧೯೯೩ರಲ್ಲಿ ಪರಿಸರ ಚಳವಳಿಯೊಂದು ಕಾಣಿಸಿಕೊಂಡಿತು. ಕರಾವಳಿ ಪ್ರದೇಶದಲ್ಲಿ ಏನೇ ಘಟನೆ ಸಂಭವಿಸಿದರೂ ಮೊದಲು ಪ್ರತಿಕ್ರಿಯಿಸುವವರು ಬೆಸ್ತರು. ಏಕೆಂದರೆ ಬೆಸ್ತರ ಬದುಕು ಸಮುದ್ರವನ್ನು ಅವಲಂಬಿಸಿಕೊಂಡಿದೆ. ಸಮುದ್ರ ನೀರಲ್ಲಿ ಮುಳುಗಿ ಏಳುತ್ತಲೇ ಬದುಕು ನಡೆಸುವ ಬೆಸ್ತರು ಸಮುದ್ರಕ್ಕೆ ಹಾನಿಯಾಗುವ ಯಾವುದೇ ಯೋಜನೆಯನ್ನೂ ವಿರೋಧಿಸುವುದು ಸಹಜಕ್ರಿಯೆಯೇ ಆಗಿದೆ. ೧೯೯೩ರಲ್ಲಿ ಚಳವಳಿ ಕಾಣಿಸಿಕೊಳ್ಳಲು ಕಾರಣವಾದದ್ದು ಹಡಗು ಒಡೆಯುವ ಉದ್ಯಮ. ಐರೋಪ್ಯ ರಾಷ್ಟ್ರಗಳಲ್ಲಿ ಹಡಗು ಒಡೆಯುವ ಉದ್ಯಮದ ವಿರುದ್ಧ ಪರಿಸರವಾದಿಗಳ ಆಕ್ಷೇಪಣೆ ಕಂಡುಬಂದಾಗ ಹಳೇ ಹಡಗುಗಳು ಭಾರತದ ಅದರಲ್ಲೂ ಕರ್ನಾಟಕದ ಕಡಲ ತೀರಕ್ಕೆ ಬಂದವು. ನಿರುಪಯುಕ್ತ ಹಳೇ ಹಡಗುಗಳನ್ನು ಒಡೆದು ಗುಜರಿಗೆ ಹಾಕುವ ಕೆಲಸವನ್ನು ಯಾವ ಅಭಿವೃದ್ಧಿ ಹೊಂದಿದ ರಾಷ್ಟ್ರವೂ ಕೈಗೆತ್ತಿಕೊಳ್ಳುವುದಿಲ್ಲ. ಏಕೆಂದರೆ ಹಳೇ ಹಡಗುಗಳನ್ನು ಒಡೆದಾಗ ಅವುಗಳಿಂದ ಹೊರ ಬರುವ ಕೊಳೆತ ವಸ್ತುಗಳು, ಕೊಳೆ ರಸಾಯನಗಳು ಸಮುದ್ರಕ್ಕೆ ಸೇರಿದಾಗ ಸಮುದ್ರ ಕಲುಷಿತಗೊಳ್ಳುತ್ತದೆ. ಅದೇ ರೀತಿ ಸುತ್ತಲಿನ ಪ್ರದೇಶದಲ್ಲಿ ದುರ್ನಾತವೂ ಕಾಣಿಸಿಕೊಳ್ಳುತ್ತದೆ. ಭಾರತದಲ್ಲಿ ಹಡಗು ಒಡೆಯುವ ಉದ್ಯಮ ಎಂಬತ್ತರ ದಶಕದಲ್ಲಿ ಕಾಣಿಸಿಕೊಂಡರೂ ಅದಕ್ಕೆ ಪ್ರತಿಯಾಗಿ ಸಂಘಟಿತ ರೂಪದ ಪ್ರತಿಭಟನೆ ಕಾಣಿಸಿಕೊಳ್ಳಲಿಲ್ಲ.

೧೯೯೩ರಲ್ಲಿ ಸಿಂಗಾಪುರದಿಂದ ಎಳೆದು ತಂದ ಹಳೇ ಹಡಗನ್ನು ತಣ್ಣೀರು ಬಾವಿಯ ಬಳಿ ಒಡೆಯಲು ಆರಂಭಿಸಿದಾಗ ಸಂಘಟಿತ ರೂಪದ ಚಳವಳಿ ಕಾಣಿಸಿಕೊಂಡಿತು. ಹಳೇ ಹಡಗಿನಲ್ಲಿದ್ದ ಕೊಳೆತ ಬೆಳ್ಳುಳ್ಳಿ, ಕೊಳೆ ಕೀಲೆಣ್ಣೆ, ಕಲ್ಲಿದ್ದಲ ಪುಡಿ ಮಿಶ್ರಣ ಸಮುದ್ರಕ್ಕೆ ಸೇರಿ ಸಮುದ್ರವನ್ನೇ ಕಲುಷಿತಗೊಳಿಸಿತು ಮತ್ತು ಅಸಹ್ಯ ವಾಸನೆ ಇಡೀ ಪ್ರದೇಶವನ್ನೇ ವ್ಯಾಪಿಸಿಕೊಂಡಿತು. ದಕ್ಷಿಣ ಕನ್ನಡ ನಾಡದೋಣಿ ಮೀನುಗಾರರ ಒಕ್ಕೂಟ ಬಂದರು ಅಧಿಕಾರಿಗಳ ಈ ನೀತಿಯನ್ನು ವಿರೋಧಿಸಿ ಬೃಹತ್ ಮೆರವಣಿಗೆ ನಡೆಸಿತು. ಹಡಗು ಒಡೆಯುವ ಕೆಲಸವನ್ನು ಸ್ಥಗಿತಗೊಳಿಸುವಂತೆ ಮಂಗಳೂರಿನ ಬಂದರು ಅಧಿಕಾರಿಯ ಮೇಲೆ ಒತ್ತಡ ಹೇರಲಾಯಿತು. ಚಳವಳಿಯ ತೀವ್ರತೆಯನ್ನು ಅರ್ಥೈಸಿಕೊಂಡ ಅಧಿಕಾರಿಗಳು ಹಡಗು ಒಡೆಯುವುದಕ್ಕೆ ತಾತ್ಕಾಲಿಕ ತಡೆಯಾಜ್ಞೆ ನೀಡಿದರು. ಆದರೆ ಹಡಗು ಒಡೆಯುವ ಕೆಲಸವನ್ನು ಗುತ್ತಿಗೆ ಪಡೆದಿದ್ದ ಗುತ್ತಿಗೆದಾರರು ಕೋರ್ಟಿನಲ್ಲಿ ಮೊಕದ್ದಮೆ ಹೂಡಿ ಕೆಲಸವನ್ನು ಮುಂದುವರೆಸುವ ಅನುಮತಿ ಪಡೆದುಕೊಂಡರು. ಇದರಿಂದಾಗಿ ಮೀನುಗಾರರ ಚಳವಳಿ ಇನ್ನಷ್ಟು ತೀವ್ರಗೊಂಡು ಸುಮಾರು ಮೂರು ತಿಂಗಳಿನಷ್ಟು ಕಾಲ ಮುಂದುವರಿಯಿತು. ಉದ್ದಿಮೆಯನ್ನು ನಿಲ್ಲಿಸಿಯೇ ಸಿದ್ಧ ಎನ್ನುವ ಹಟತೊಟ್ಟ ಚಳವಳಿಗಾರರು ಕೋರ್ಟಿನಲ್ಲಿ

ಪ್ರತಿಯಾಗಿ ಮೊಕದ್ದಮೆ ಹೂಡಿ ತಡೆಯಾಜ್ಞೆ ತರುವಲ್ಲಿ ಯಶಸ್ವಿಯಾದರು. ಆದರೆ ಈ ಚಳವಳಿ ಕರ್ನಾಟಕದ ಕರಾವಳಿ ತೀರದುದ್ದಕ್ಕೂ ಹಡಗು ಒಡೆಯುವ ಉದ್ಯಮವನ್ನು ನಿಲ್ಲಿಸುವಲ್ಲಿ ಯಶಸ್ವಿಯಾಗಲಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಉದ್ಯಮಕ್ಕೆ ಗುತ್ತಿಗೆದಾರರು ಹೊಸ ಸ್ಥಳದ ಆಯ್ಕೆಯಲ್ಲಿ ತೊಡಗಿದರು.

೩.೮.೮. ಕಡಂದಲೆ ರಸಾಯನಿಕ ಬಣ್ಣ ಉತ್ಪಾದಿಸುವ ಘಟಕ

ಮಂಗಳೂರು ಸಮೀಪದ ಕಡಂದಲೆಯಲ್ಲಿ ಎಂಜಲ್ ಹಾರ್ಡ್ ಪೈಲ್ಯಾಂಡ್ ಎಂಬ ಖಾಸಗೀ ರಸಾಯನಿಕ ಬಣ್ಣ ಉತ್ಪಾದಿಸುವ ಘಟಕವನ್ನು ನಿರ್ಮಿಸಲಾಗಿದೆ. ಆರಂಭದಿಂದಲೇ ಈ ಕಂಪೆನಿ ಸುತ್ತಲಿನ ಪ್ರದೇಶದ ಜನರ ವಿರೋಧವನ್ನು ಎದುರಿಸುತ್ತಿತ್ತು. ಈ ಘಟಕದಿಂದ ಸುತ್ತಲಿನ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ ಎಂಬುದಾಗಿ ಪರಿಸರ ಪ್ರೇಮಿಗಳು ವಾದಿಸುತ್ತಲೇ ಬಂದಿದ್ದಾರೆ. ಈ ಕಂಪೆನಿಯಿಂದ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮದ ಕುರಿತು ವರದಿ ಸಲ್ಲಿಸಲು ರಾಜ್ಯ ಸರಕಾರ ಕ್ಯಾಪ್ಟನ್ ರಾಜಾರಾಮ್ ಅವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ೧೨ ಮಂದಿ ಪರಿಣಿತರ ತಂಡ ಕಾರ್ಖಾನೆಯಿಂದ ಪರಿಸರದ ಮೇಲೆ ಯಾವುದೇ ತೊಂದರೆ ಇಲ್ಲ ಎಂಬ ವರದಿ ಸಲ್ಲಿಸಿತು. ಸ್ಥಳೀಯ ಪರಿಸರ ಸಂಘಟನೆಗಳು ಈ ವರದಿಯನ್ನು ರಾಜಕೀಯ ಪ್ರೇರಿತ ಎಂಬುದಾಗಿ ಕರೆದು ವಿರೋಧವನ್ನು ವ್ಯಕ್ತಪಡಿಸಿದವು. ೧೯೯೭ರ ಡಿಸೆಂಬರ್‌ನಲ್ಲಿ ಕಂಪೆನಿಯ ಹಲವಾರು ಲಕ್ಷ ರೂಪಾಯಿ ಮೌಲ್ಯದ ಉಪಕರಣ ಮತ್ತು ಕೇಬಲ್‌ಗಳನ್ನು ಪರಿಸರವಾದಿಗಳು ನಾಶಮಾಡಿದ್ದಾರೆ ಎಂದು ಕಂಪೆನಿಯ ಪ್ರಕಟಣೆ ತಿಳಿಸಿತು. ಈ ಘಟಕವನ್ನು ವಸ್ತುವನ್ನಾಗಿ ಇಟ್ಟುಕೊಂಡು ಸ್ಥಳೀಯ ರಾಜಕೀಯ ಶಕ್ತಿಗಳು ಪರಸ್ಪರ ಹೊಡೆದಾಟವನ್ನೂ ನಡೆಸಿದವು. ಆದರೆ ಇಲ್ಲಿ ಪರಿಸರ ಚರ್ಚೆಯ ವಸ್ತುವಾಗಿರದೆ ವೈಯಕ್ತಿಕ ಹಿತಾಸಕ್ತಿಗಳೇ ಪ್ರಮುಖವಾಗಿದ್ದವು.

೩.೮.೯. ಕೊಳವೆ ಮಾರ್ಗ ನಿರ್ಮಾಣ

ಮಂಗಳೂರು ತೈಲಾಗಾರದಿಂದ ಉತ್ಪನ್ನಗಳನ್ನು ಸಾಗಿಸಲು ಕೊಳವೆ ಮಾರ್ಗಗಳನ್ನು ನಿರ್ಮಿಸುವ ಯೋಜನೆಯನ್ನು ಎಚ್.ಪಿ.ಸಿ.ಎಲ್. ಹಾಕಿಕೊಂಡಿದೆ. ಇದೊಂದು ಬೃಹತ್ ಯೋಜನೆಯಾಗಿದ್ದು ನೂರಾರು ಎಕರೆ ಕೃಷಿ ಪ್ರದೇಶದ ಅಗತ್ಯವಿದೆ. ಈ ಕಾರಣಕ್ಕಾಗಿ ಜಿಲ್ಲೆಯ ಕೃಷಿಕರು ಹಾಗೂ ಸ್ಥಳೀಯ ಪರಿಸರಾಸಕ್ತರು ಈ ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ಫಲವತ್ತಾದ ಕೃಷಿ ಭೂಮಿಯಲ್ಲಿ ಕೊಳವೆ ಮಾರ್ಗ ನಿರ್ಮಿಸುವ ಬದಲು ನಿಂತು ಹೋಗಿರುವ ಹಾಸನ-ಮಂಗಳೂರು ರೈಲುಮಾರ್ಗ ಕಾಮಗಾರಿಯನ್ನು ಮುಗಿಸಿ ರೈಲುಮಾರ್ಗದ ಪಕ್ಕದಲ್ಲೇ ಕೊಳವೆಮಾರ್ಗ ನಿರ್ಮಿಸಬೇಕೆಂದು ಅವರು ಆಗ್ರಹಿಸುತ್ತಿದ್ದಾರೆ. ಈ ಬೇಡಿಕೆಗಳನ್ನು ಮೀರಿ ಕೊಳವೆ ಮಾರ್ಗ ರಚನೆಗೆ ಮುಂದಾದರೆ ಉಗ್ರ ಹೋರಾಟ ನಡೆಸುವುದಾಗಿ ಮುನ್ನೆಚ್ಚರಿಕೆ ನೀಡಿದ್ದಾರೆ. ಆದರೆ ರೈಲುಮಾರ್ಗದ ಪಕ್ಕದಲ್ಲೇ ಕೊಳವೆಮಾರ್ಗವನ್ನು ನಿರ್ಮಿಸಿದರೆ ಭದ್ರತೆಯ ದೃಷ್ಟಿಯಿಂದ ಅಷ್ಟೊಂದು ಸುರಕ್ಷಿತವಲ್ಲ ಎನ್ನುವ ಮಾತೂ ಕೇಳಿ ಬರುತ್ತಿದೆ. ಅದೇ ರೀತಿ ಜಿಲ್ಲೆಯಲ್ಲಿ ತೈಲಾಗಾರದ ಉತ್ಪನ್ನಗಳನ್ನು ಸಾಗಿಸಲು ಕೊಳವೆ ಮಾರ್ಗ ಅನಿವಾರ್ಯವೂ ಆಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಕೊಳವೆಮಾರ್ಗ ನಿರ್ಮಾಣದ ಅಂತಿಮ ರೂಪ ಇನ್ನೂ ಸ್ಪಷ್ಟವಾಗಿಲ್ಲ.

೩.೮.೧೦. ಕಡಲಕೊರೆತ

ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಪ್ರತಿವರ್ಷ ಕಡಲಕೊರೆತದಿಂದಾಗಿ ಹಲವಾರು ಮನೆ, ಆಸ್ತಿ ಸಮುದ್ರದ ಪಾಲಾಗುತ್ತಿದೆ. ಇದೊಂದು ನಿಸರ್ಗ ಪ್ರೇರಿತ ಆಕಸ್ಮಿಕವಾಗಿದ್ದು ಮಾನವನ ಕೈವಾಡ ಇರುವುದಿಲ್ಲ. ಆದರೂ ಪರಿಸರ ಚಳವಳಿಗಳ ಪಟ್ಟಿಯಲ್ಲಿ ಕಡಲಕೊರೆತವನ್ನೂ ಸೇರಿಸಿರುವುದು ಆಶ್ಚರ್ಯವೆನಿಸಬಹುದು. ಕಡಲಕೊರೆತದಲ್ಲಿ ಸರಕಾರ ಇಲ್ಲವೇ ಅಧಿಕಾರಿಗಳ ಪಾತ್ರ ಇಲ್ಲದಿದ್ದರೂ ಕಡಲಕೊರೆತಕ್ಕೆ ಶಾಶ್ವತ ಪರಿಹಾರಕ್ರಮಗಳನ್ನು ಕೈಗೊಳ್ಳುವುದರಲ್ಲಿ ಇವರ ಜವಾಬ್ದಾರಿ ಇದೆ. ಪ್ರತಿವರ್ಷ ಲಕ್ಷಾಂತರ ರೂಪಾಯಿಗಳು ಕಡಲಕೊರೆತವನ್ನು ತಡೆಗಟ್ಟುವುದಕ್ಕೆ ಬಿಡುಗಡೆಯಾಗುತ್ತಿವೆ. ಕೇವಲ ತಾತ್ಕಾಲಿಕ ಪರಿಹಾರ ಕ್ರಮಗಳಿಗಷ್ಟೇ ಈ ಹಣವನ್ನು ವಿನಿಯೋಗಿಸಲಾಗುತ್ತಿದೆ. ಪ್ರತಿವರ್ಷವೂ ನಿರ್ಮಿಸಿದ ತಡೆಗೋಡೆಗಳು ಸಮುದ್ರಪಾಲಾಗುತ್ತಿದೆ. ಶಾಶ್ವತ ಪರಿಹಾರ ಕ್ರಮಗಳತ್ತ ಸರಕಾರ ಗಮನಹರಿಸಿಲ್ಲ. ಕಡಲ ತೀರದ ಜನರು ಭಯದಿಂದಲೇ ಜೀವನ ಸಾಗಿಸಬೇಕಾಗಿದೆ. ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಹಲವಾರು ಪರಿಸರ ಸಂಘಟನೆಗಳು ಹಾಗೂ ಮೀನುಗಾರರ ಒಕ್ಕೂಟಗಳು ಸರಕಾರವನ್ನು ಎಚ್ಚರಿಸುವ ಕೆಲಸವನ್ನು ಮಾಡುತ್ತಲೇ ಬಂದಿವೆ. ಕಡಲ ಕೊರೆತ ಸಂಭವಿಸಿದಾಗ ಸಂಬಂಧಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನೊಂದವರಿಗೆ ಸಾಂತ್ವನ ಹೇಳಿ, ಇನ್ನಷ್ಟು ಆಶ್ವಾಸನೆಗಳನ್ನು ನೀಡಿ ಹಿಂತಿರುಗುವುದು ಸಂಪ್ರದಾಯವಾಗಿ ಬೆಳೆದು ಬಂದಿದೆ.

೩.೮.೧೧. ಕೊಂಕಣ ರೈಲು ಯೋಜನೆ

ಕೊಂಕಣ ರೈಲು ಯೋಜನೆಯ ಕಾಮಗಾರಿ ಯಶಸ್ವಿಯಾಗಿ ಕೊನೆಗೊಂಡಿರುವುದು ಎಲ್ಲರೂ ಹೆಮ್ಮೆಪಡಬೇಕಾದ ವಿಷಯ. ಇದು ಭಾರತ ದೇಶದ ಕನಸಿನ ಯೋಜನೆಯಾಗಿದ್ದು, ಈಗ ನನಸಾಗಿದೆ. ಆದರೆ ಈ ಯೋಜನೆಯ ಇನ್ನೊಂದು ಮುಖದ ಪರಿಚಯ ಸಾಕಷ್ಟು ಜನರಿಗೆ ಆಗಿಲ್ಲ. ಇದು ಕೊಂಕಣ ರೈಲ್ವೆಯ ಕುರಿತಾದ ಅಭಿಪ್ರಾಯಗಳನ್ನು ಮರುಚಿಂತನೆ ನಡೆಸುವಂತೆ ಮಾಡುವುದರಲ್ಲಿ ಸಂದೇಹವಿಲ್ಲ. ಇದು ಪರಿಸರ ಸಂರಕ್ಷಣೆಯ ಕುರಿತಾದ ಚಿಂತನೆಗಳು. ಕೊಂಕಣ ರೈಲ್ವೆಯ ನಿರ್ಮಾಣದ ಸಂದರ್ಭದಲ್ಲಿ ಪರಿಸರ ರಕ್ಷಣೆ ಅಷ್ಟೇನೂ ಮಹತ್ವದ ವಿಷಯವಾಗಿರಲಿಲ್ಲ. ಆಗಿನ ಮುಖ್ಯ ಉದ್ದೇಶ ಯೋಜನೆಯನ್ನು ಆದಷ್ಟು ಬೇಗ ಮುಗಿಸುವುದು. ಇದೊಂದು ಬೃಹತ್ ಯೋಜನೆಯಾಗಿದ್ದು ಪಶ್ಚಿಮ ಕರಾವಳಿಯ ದಕ್ಷಿಣ ತುದಿ ಮಂಗಳೂರಿನಿಂದ ಉತ್ತರ ತುದಿಯ ಮಹಾರಾಷ್ಟ್ರದ ರೋಹಾವರೆಗಿನ ೭೬೦ ಕಿಲೋಮೀಟರ್ ಉದ್ದ ವ್ಯಾಪಿಸಿದೆ. ಇದರಲ್ಲಿ ೧೭೯ ಬೃಹತ್ ಸೇತುವೆಗಳು, ೧೮೧೯ ಸಣ್ಣ ಸೇತುವೆಗಳು, ೯೨ ಸುರಂಗಗಳು ಒಳಗೊಂಡಿವೆ. ಈ ಯೋಜನೆಗೆ ಸುಮಾರು ಮೂರುಸಾವಿರ ಕೋಟಿ ರೂಪಾಯಿ ಖರ್ಚಾಗಿದೆ. ಕರ್ನಾಟಕವೊಂದರಲ್ಲೇ ೨೭೩ ಕಿಲೋಮೀಟರ್ ಉದ್ದದ ರೈಲುಮಾರ್ಗವನ್ನು ಇದು ಹೊಂದಿದೆ. ಈ ಯೋಜನೆಯಿಂದಾಗಿ ಮಂಗಳೂರು ಬೃಹತ್ ನಗರವಾಗಿ ಬೆಳೆಯುವುದರಲ್ಲಿ ಯಾವ ಸಂದೇಹವೂ ಇಲ್ಲ. ವಿದ್ಯುತ್ ಸ್ಥಾವರಗಳು, ತೈಲಾಗಾರ, ಕೈಗಾರಿಕೆಗಳು ಮುಂತಾದವುಗಳಿಗೆ ಕಚ್ಚಾವಸ್ತುಗಳನ್ನು ತರಲು ಮತ್ತು ಸಿದ್ಧ ಸರಕನ್ನು ಸಾಗಾಟಮಾಡಲು ಹಾಗೂ ಅತಿ ಬೇಗ ಪ್ರಯಾಣಿಸಲು ಇದು ಸಹಕಾರಿಯಾಗಿದೆ. ಈ

ದೃಷ್ಟಿಯಿಂದ ಇದು ಪಶ್ಚಿಮಕರಾವಳಿಯ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಬದಲಾಯಿಸಿದೆ ಎನ್ನಬಹುದು. ಆದರೆ ಕೊಂಕಣ ರೈಲ್ವೆ ಯೋಜನೆಯಿಂದಾಗಿ ಕಳೆದುಕೊಂಡಿರುವ ಅನೇಕ ವಿಚಾರಗಳ ಕಡೆಗೂ ಗಮನಹರಿಸಬೇಕಾಗಿದೆ.

ಕೊಂಕಣ ರೈಲು ಯೋಜನೆ ಪಶ್ಚಿಮಕರಾವಳಿಯ ಸುಮಾರು ೪,೮೫೦ ಹೆಕ್ಟೇರ್ ಭೂಮಿಯನ್ನು ಆವರಿಸಿಕೊಂಡಿದೆ. ಮಹತ್ವಾಕಾಂಕ್ಷೆಯ ಈ ಯೋಜನೆಗಾಗಿ ಸುಮಾರು ೪೪,೦೦೦ ಕುಟುಂಬಗಳು ತಮ್ಮ ಮನೆಮಾರು ಕಳೆದುಕೊಂಡಿವೆ. ನಿರ್ವಸಿತರಾದ ಜನರಿಗೆ ಪರಿಹಾರ ಸಂಪೂರ್ಣವಾಗಿ ಇನ್ನೂ ದೊರೆತಿಲ್ಲ. ಯೋಜನೆ ಪೂರ್ಣವಾದರೂ ಮೊದಲೇ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಸಿಗಬೇಕಾದ ಹಣ ಮತ್ತು ಉದ್ಯೋಗ ಇನ್ನೂ ಸಾವಿರಾರು ಕುಟುಂಬಗಳಿಗೆ ಸಿಕ್ಕಿಲ್ಲ. ಪರಿಸರ ಸಂಘಟನೆಗಳ ಪ್ರಕಾರ ಕೊಂಕಣ ರೈಲು ಯೋಜನೆ ತನ್ನ ಹಳಿಗಳನ್ನು ಭದ್ರಪಡಿಸಿಕೊಂಡು ಅಲ್ಲಿನ ಜನರ ಬದುಕಿನ ಹಳಿಗಳನ್ನು ಅಸ್ತವ್ಯಸ್ತಗೊಳಿಸಿದೆ. ಅದೇ ರೀತಿ ಕೇರಳ ಮತ್ತು ತಮಿಳುನಾಡಿನವರಿಗೆ ಹೆಚ್ಚಿನ ಉದ್ಯೋಗಗಳು ದೊರೆತಿದೆ ಎನ್ನುವ ದೂರೂ ಕೇಳಿ ಬರುತ್ತಿದೆ. ಉಡುಪಿ ಶಾಸಕ ಯು. ಸಭಾಪತಿಯವರು ನಿರ್ವಸಿತರ ಸಮಸ್ಯೆಗಳನ್ನು ಎತ್ತಿಹಿಡಿದಿದ್ದಾರೆ. ನಿರ್ವಸಿತರಿಗೆ ನ್ಯಾಯದೊರಕಿಸಲು ರೈಲ್ವೆ ಅದಾಲತ್ ಮಾಡಬೇಕೆಂದು ಅವರು ಒತ್ತಾಯಿಸಿದ್ದಾರೆ. ನಿರ್ವಸಿತರ ಸಮಸ್ಯೆ ಒಂದಾದರೆ ಪರಿಸರದ ಮೇಲಾಗಿರುವ ಪರಿಣಾಮಗಳು ಇನ್ನೊಂದು. ಪಶ್ಚಿಮ ಕರಾವಳಿ ಜೈವಿಕವಾಗಿ ಅತ್ಯಂತ ಸಂಪದ್ಭರಿತವಾಗಿದೆ. ವೈವಿಧ್ಯಮಯವಾದ ಸಸ್ಯ, ಪ್ರಾಣಿರಾಶಿ ಇಲ್ಲಡಗಿದೆ. ಕೊಂಕಣ ರೈಲು ಯೋಜನೆಯಿಂದಾಗಿ ಅಪಾರ ಪರಿಸರ ನಾಶವಾಗಿರುವುದಂತೂ ನಿಜ. ಆದರೆ ಇದನ್ನು ದೇಶದ ಅಭಿವೃದ್ಧಿಗಾಗಿ ಆದ ಪರಿವರ್ತನೆ ಎಂಬ ಹೊಸ ಹೆಸರಿನಿಂದ ಕರೆದು ಸರಕಾರ ಮತ್ತು ಅಧಿಕಾರಿಗಳು ಸುಮ್ಮನಾಗಿದ್ದಾರೆ. ಕೊಂಕಣ ರೈಲು ಯೋಜನೆಗೆ ನೀಡಿದಷ್ಟೇ ಪ್ರಾಮುಖ್ಯತೆಯನ್ನು ಅದರಿಂದಾಗಬಹುದಾದ ಸಮಸ್ಯೆಗಳಿಗೂ ಮೊದಲೇ ನೀಡಿದ್ದರೆ ಇದೊಂದು ಯಶಸ್ವೀ ಯೋಜನೆ ಎಂಬುದಾಗಿ ಕರೆಯಬಹುದಾಗಿತ್ತು. ಆದರೆ ಇಲಾಖೆಯ ವರದಿಗಳ ಪ್ರಕಾರ, ಪರಿಹಾರವನ್ನು ನೀಡಲಾಗಿದೆ ಮತ್ತು ಪುನರ್ವಸತಿಯನ್ನೂ ಕಲ್ಪಿಸಿಕೊಡಲಾಗಿದೆ. ಯೋಜನೆಯ ಕಾಮಗಾರಿ ನಡೆದ ಪ್ರದೇಶಗಳಿಗೆ ಭೇಟಿ ನೀಡಿದರೆ ಸಿಗುವ ಚಿತ್ರಣವೇ ಬೇರೆ. ಈ ಕಾರಣಗಳಿಂದಾಗಿ ಯೋಜನೆ ಪೂರ್ಣಗೊಂಡಿದ್ದರೂ ಅನೇಕ ವಿಚಾರಗಳಲ್ಲಿ ಇನ್ನೂ ಅಪೂರ್ಣವಾಗಿಯೇ ಉಳಿದಿದೆ. ಯೋಜನೆಯ ಕಾಮಗಾರಿಯನ್ನು ದಾಖಲೆ ರೀತಿಯಲ್ಲಿ ಪೂರ್ಣಗೊಳಿಸಿದ ಅಧಿಕಾರಿಗಳು ಪರಿಸರ ಸಂರಕ್ಷಣೆಗೂ ಅಷ್ಟೇ ಪ್ರಾಮುಖ್ಯತೆಯನ್ನು ನೀಡಿದ್ದರೆ ಯೋಜನೆ ಪರಿಸರದ ದೃಷ್ಟಿಯಿಂದ ಚರ್ಚೆಯ ವಸ್ತುವಾಗುತ್ತಿರಲಿಲ್ಲ.

೩.೯. ಕಾರ್ಗಿಲ್ ಸಂಸ್ಥೆಯ ವಿರುದ್ಧ ನಡೆದ ಚಳವಳಿ

ನವವಸಾಹತುಶಾಹಿ ಕೇವಲ ಕೈಗಾರಿಕೆಗಳ ಸ್ಥಾಪನೆಗಷ್ಟೇ ಸೀಮಿತಗೊಳ್ಳದೆ ಕೃಷಿ ಕ್ಷೇತ್ರವನ್ನೂ ಅಧೀನಗೊಳಿಸಿಕೊಂಡಿದೆ. ಇದಕ್ಕೆ ಡಂಕೆಲ್ ಪ್ರಸ್ತಾಪವೇ ಉತ್ತಮ ಉದಾಹರಣೆ. ರೈತರು ಬೀಜವನ್ನು ಬೆಳೆಸುವಂತಿಲ್ಲ. ಏಕೆಂದರೆ ಅವುಗಳು ಪೇಟೆಂಟು ಆಗಿರುತ್ತವೆ. ಇದರಿಂದಾಗಿ ರೈತರು ಬಿತ್ತನೆ ಬೀಜ, ಗೊಬ್ಬರ, ಕೀಟನಾಶಕಗಳಿಗೆ ಬಹುರಾಷ್ಟ್ರೀಯ ಕಂಪೆನಿಗಳನ್ನು ಅವಲಂಬಿಸಬೇಕಾಗಿದೆ. ಇಲ್ಲಿಯ ಘೋಷಣೆಯೆಂದರೆ

ಉತ್ತಮ ಇಳುವರಿ. ಆದರೆ ರೈತರ ಸ್ವಾತಂತ್ರ್ಯವನ್ನು ಬಂಡವಾಳದ ಮೂಲಕ ಕಸಿದುಕೊಳ್ಳುವುದೇ ಇಲ್ಲಿನ ಉದ್ದೇಶ. ಇದರಿಂದ ಶ್ರೀಮಂತ ರಾಷ್ಟ್ರಗಳ ಹಿತಸಂರಕ್ಷಣೆ ಸಾಧ್ಯ. ಕೃಷಿ ಪ್ರಧಾನ ದೇಶವಾದ ಭಾರತಕ್ಕೆ ಇದೊಂದು ಮಾರಕವಾಗಿ ಪರಿಣಮಿಸಿದೆ. ರೈತರು ಹೊಸ ವಿಧದ ಬೆಳೆ ಪದ್ಧತಿಯನ್ನು ಅನುಸರಿಸುವುದರಲ್ಲಿ ತಪ್ಪಿಲ್ಲ. ಇದು ಆಂತರಿಕ ಕೃಷಿ ನೀತಿಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆಯನ್ನೂ ತರಬಹುದು. ಆದರೆ ಇವುಗಳ ಹಿಂದಿರುವ ಬಂಡವಾಳಶಾಹಿ ಧೋರಣೆ ಬಡ ರೈತರನ್ನು ಕಂಗೆಡಿಸಿದೆ. ಶ್ರೀಮಂತ ರಾಷ್ಟ್ರಗಳು ಹೊಸ ಮಾರುಕಟ್ಟೆ ನೀತಿಯನ್ನು ಹೊಂದಿದ್ದು ಅವುಗಳ ಅನುಷ್ಠಾನಕ್ಕೆ ಹೊಸ ಹೊಸ ಪ್ರಸ್ತಾಪಗಳನ್ನು ಮುಂದಿಡುತ್ತಿವೆ. ಇವುಗಳು ಆಕರ್ಷಕವಾಗಿದ್ದು ಆರಂಭಿಕ ಹಂತದಲ್ಲಿ ರೈತರು ಮೋಸಹೋಗುವ ಪ್ರಮೇಯವೇ ಹೆಚ್ಚು. ಸ್ಥಳೀಯ ಶ್ರೀಮಂತವರ್ಗ ಬಂಡವಾಳಶಾಹಿಯೊಡನೆ ಒಡಂಬಡಿಕೆ ಏರ್ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರೂ ಅದು ತಾತ್ಕಾಲಿಕ ಸ್ವರೂಪದ್ದು. ಏಕೆಂದರೆ ಶ್ರೀಮಂತ ರಾಷ್ಟ್ರಗಳಿಗೆ ತಮ್ಮ ಪ್ರಯೋಗವನ್ನು ನಡೆಸಲು ಪ್ರತಿಯೊಂದು ದೇಶದಲ್ಲೂ ಏಜೆಂಟರುಗಳ ಅವಶ್ಯಕತೆ ಇರುತ್ತದೆ. ಸ್ಥಳೀಯ ಶ್ರೀಮಂತವರ್ಗ ಆ ಕೆಲಸವನ್ನಷ್ಟೇ ಮಾಡುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳು ಶೀಘ್ರ ಲಾಭಗಳಿಕೆಗೆ ಬೇಕಾಗುವಂಥ ಎಲ್ಲಾ ನೀತಿಗಳನ್ನೂ ಜಾರಿಗೊಳಿಸುತ್ತಿವೆ. ಗ್ಯಾಟ್ ಈ ಉದ್ದೇಶದಿಂದಲೇ ಹುಟ್ಟಿಕೊಂಡಿತು. ಇದರ ಎಂಟನೆಯ ಸುತ್ತಿನ ಮಾತುಕತೆ ದಕ್ಷಿಣ ಅಮೇರಿಕಾದ ಉರುಗ್ವೆಯಲ್ಲಿ ೧೯೮೬ರಲ್ಲಿ ನಡೆಯಿತು. ಗ್ಯಾಟ್‌ನ ಮಹಾನಿರ್ದೇಶಕ ಡಂಕೆಲ್ ತಮ್ಮ ಪ್ರಸ್ತಾಪಗಳನ್ನು ಅಲ್ಲಿ ಮಂಡಿಸಿದರು. ಇದನ್ನೇ ಡಂಕೆಲ್ ಪ್ರಸ್ತಾಪ ಎನ್ನುವುದಾಗಿ ಕರೆಯಲಾಯಿತು. ಅಂತರ್ ರಾಷ್ಟ್ರೀಯ ಮಾರುಕಟ್ಟೆಯನ್ನು ಪ್ರವೇಶಿಸುವುದು ಮತ್ತು ತಮ್ಮ ನೀತಿಯನ್ನು ಸ್ಥಾಪಿಸುವುದು ಇಲ್ಲಿನ ಗುರಿ. ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್‌ನಂತೆಯೇ ಇದು ಕಾರ್ಯನಿರ್ವಹಿಸುತ್ತಿದೆ.

ಡಂಕೆಲ್ ಪ್ರಸ್ತಾವದ ವಿರುದ್ಧ ಕರ್ನಾಟಕದಲ್ಲಿ ಚಳವಳಿ ಪ್ರಾರಂಭವಾಯಿತು. ೧೯೯೨ರಲ್ಲಿಯೇ ಇದು ಕಾಣಿಸಿಕೊಂಡರೂ ೧೯೯೩ರಲ್ಲಿ ಕಾರ್ಯರೂಪಕ್ಕೆ ಬಂತು. ರೈತರು ಬೆಂಗಳೂರಿನ ಕಾರ್ಗಿಲ್ ಕಂಪೆನಿಯ ವಿರುದ್ಧ ಚಳವಳಿ ಪ್ರಾರಂಭಿಸಿದರು. ನಂತರ ಇದು ದೇಶಾದ್ಯಂತ ಹರಡಿತು. ಬೆಂಗಳೂರಿನ ಕಾರ್ಗಿಲ್ ಸೀಡ್ಸ್ (ಇಂಡಿಯಾ) ಲಿಮಿಟೆಡ್ ಕಂಪೆನಿಯು ಬಹುರಾಷ್ಟ್ರೀಯ ಲಾಭಖೋರ ಸಂಸ್ಥೆ. ರೈತರು ಈ ಕಂಪೆನಿಯ ವಿರುದ್ಧ ಸಮರ ಸಾರಿ ಕೆಲವೊಂದು ಬೇಡಿಕೆಗಳನ್ನು ಸರಕಾರದ ಮುಂದಿಟ್ಟರು.

೧. ಭಾರತೀಯ ಕೃಷಿಗೆ ಮಾರಕವಾಗಬಹುದಾದ ಡಂಕೆಲ್ ಪ್ರಸ್ತಾವಗಳನ್ನು ಕೇಂದ್ರ ಸರಕಾರ ತಿರಸ್ಕರಿಸಬೇಕು.

೨. ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳು ನಮ್ಮ ದೇಶದ ಬೀಜೋದ್ಯಮವನ್ನು ಪ್ರವೇಶಿಸುವುದನ್ನು ನಿಷೇಧಿಸಬೇಕು.

೩. ಬೀಜ ಉತ್ಪಾದಿಸುವ, ಮಾರುವ ಹಕ್ಕನ್ನು ರೈತರಿಗೆ ಉಳಿಸಿಕೊಡಬೇಕು.

೪. ಸಬ್ಸಿಡಿಗಳನ್ನು ಉಳಿಸಿಕೊಳ್ಳಬೇಕು.

ಈ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಡೆದ ಚಳವಳಿಯಲ್ಲಿ ಬಡ ಮತ್ತು ಕೆಳವರ್ಗದ ರೈತರು ಮಾತ್ರ ಬಹುಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇದರಿಂದಾಗಿ ಈ

ಚಳವಳಿ ಕೇವಲ ಬಹುರಾಷ್ಟ್ರೀಯ ಕಂಪೆನಿಗಳ ವಸಾಹತುಶಾಹಿ ನೀತಿಯ ವಿರುದ್ಧ ಮಾತ್ರ ನಡೆದಿಲ್ಲ ಎನ್ನುವುದು ತಿಳಿದುಬರುತ್ತದೆ. ಇಲ್ಲಿ ಇನ್ನೂ ಅನೇಕ ಕಾರಣಗಳಿದ್ದವು. ಅವುಗಳೆಂದರೆ ಸಮಾಜದಲ್ಲಿನ ಊಳಿಗಮಾನ್ಯ ವ್ಯವಸ್ಥೆ, ಶ್ರೀಮಂತ ರೈತರು ಬಹುರಾಷ್ಟ್ರೀಯ ಕಂಪೆನಿಗಳೊಡನೆ ಮಾಡಿಕೊಂಡ ಒಪ್ಪಂದಗಳು, ಸ್ಥಳೀಯ ಅಧಿಕಾರಿಗಳ ಬೇಜವಾಬ್ದಾರಿತನ ಮತ್ತು ಹೊಣೆಗೇಡಿ ವರ್ತನೆ, ಹೊಸ ತಳಿಗಳಿಂದಾಗಬಹುದಾದ ಪರಿಸರ ಮಾಲಿನ್ಯ ಮುಂತಾದವುಗಳು. ಬಹುರಾಷ್ಟ್ರೀಯ ಕಂಪೆನಿಗಳು ಕೇವಲ ತಳಿಯನ್ನು ಅಭಿವೃದ್ಧಿಪಡಿಸುವದಕ್ಕಷ್ಟೇ ತಮ್ಮ ನೀತಿಯನ್ನು ಸೀಮಿತಗೊಳಿಸದೆ, ಅವುಗಳಿಗೆ ಸಹಾಯಕವಾಗುವ ಕೀಟನಾಶಕ, ಕಳೆನಾಶಕ ಉತ್ಪಾದಕ, ಔಷಧಿ ತಯಾರಿಕಾ ಕಂಪೆನಿಗಳ ಸ್ಥಾಪನೆಗೂ ಹೊರಟಿವೆ. ಈ ಕಂಪೆನಿಗಳು ತಮ್ಮ ತಳಿಗೆ ತಮ್ಮದೇ ಕಂಪೆನಿಯ ಕಳೆನಾಶಕವನ್ನು ಉಪಯೋಗಿಸಬೇಕೆಂದು ಶಿಫಾರಸ್ಸು ಮಾಡಿವೆ. ಇವುಗಳಿಂದಾಗಬಹುದಾದ ಪರಿಸರ ಮಾಲಿನ್ಯದ ಕುರಿತು ಯಾರೂ ತಲೆಕೆಡಿಸಿಕೊಂಡಿಲ್ಲ. ಪರಿಸರ ಚಳವಳಿಗಳೆಂದರೆ ಅವು ಕೇವಲ ಕೈಗಾರಿಕೆಗಳ ಸ್ಥಾಪನೆಯ ವಿರುದ್ಧವಷ್ಟೇ ನಡೆಯಬೇಕಾದದ್ದು ಎನ್ನುವ ನಂಬಿಕೆಯೂ ಇತ್ತು. ಆದರೆ ಬಹುರಾಷ್ಟ್ರೀಯ ಕಂಪೆನಿಗಳ ರಾಜಕೀಯ ಕೃಷಿಕ್ಷೇತ್ರವನ್ನೂ ಪರಿಸರ ಚಳವಳಿಯ ವ್ಯಾಪ್ತಿಗೆ ತಂದಿದೆ. ಕೃಷಿಗೆ ಸಂಬಂಧಿಸಿದ ಉದ್ಯಮಗಳು ನಗರ ಪ್ರದೇಶಗಳಲ್ಲಿಯೇ ಹೆಚ್ಚಾಗಿ ನಿರ್ಮಾಣಗೊಂಡಿವೆ. ಕೃಷಿಯ ವ್ಯಾಪ್ತಿ ವಿಸ್ತಾರವಾಗುತ್ತಿದ್ದಂತೆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಉದ್ದಿಮೆಗಳೂ ಹೆಚ್ಚಾಗುತ್ತಿವೆ. ಇವುಗಳನ್ನು ವಿರೋಧಿಸಿ ಪರಿಸರಪ್ರೀಯ ಕೃಷಿ ಸಂಘಟನೆಗಳು ಅಸ್ತಿತ್ವಕ್ಕೆ ಬರುತ್ತಿವೆ. ಸಾವಯವ ಕೃಷಿ ಪದ್ಧತಿಯನ್ನು ಜನಪ್ರಿಯಗೊಳಿಸುವ, ರೈತರಿಗೆ ಅವುಗಳ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಸಂಘಟನೆಗಳು ಹಮ್ಮಿಕೊಂಡಿವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ೧೯೯೭ರಲ್ಲಿ ಹಾಸನದಲ್ಲಿ ಆರಂಭಗೊಂಡ ಪರಿಸರಪ್ರೀಯ ಕೃಷಿ ಸಂಘಟನೆ. ಇದು ಕರ್ನಾಟಕದಾದ್ಯಂತ ಕೃಷಿಕರಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧ ಜಾಗೃತಿ ಮೂಡಿಸುವ ಕೆಲಸದಲ್ಲಿ ತೊಡಗಿದೆ.

೩.೧೦. ಕೈಗಾರಿಕಾ ನಗರಗಳು

ಕಳೆದ ಮೂರು ದಶಕಗಳಿಂದೀಚೆಗೆ ಕರ್ನಾಟಕದಲ್ಲಿ ಪೇಟೆಪಟ್ಟಣ, ನಗರಗಳು ಬೃಹತ್ ಗಾತ್ರದಲ್ಲಿ ಬೆಳೆಯಲಾರಂಭಿಸಿದವು. ಅಷ್ಟೇ ಗಾತ್ರದಲ್ಲಿ ಜನಸಂಖ್ಯೆಯೂ ವರ್ಧಿಸಲಾರಂಭಿಸಿತು. ಜನಸಂಖ್ಯೆ ಏರುಮುಖದಲ್ಲೇ ಇರುವುದರಿಂದ ನಾಗರಿಕ ಅನುಕೂಲಗಳು ದಿನದಿನಕ್ಕೆ ಹದಗೆಡುತ್ತ ಹೋಗುತ್ತಿವೆ. ಇದು ಅತಿರೇಕದ ನಗರೀಕರಣ ಮತ್ತು ಕೈಗಾರಿಕೀಕರಣದ ಫಲವಾಗಿ ಕಂಡುಬರುತ್ತದೆ. ಇದರಿಂದಾಗಿ ಕೊಳೆಗೇರಿಗಳು ಹೆಚ್ಚುತ್ತಾ ಹೋಗಿ ನೆಲಬಳಕೆಯ ಯೋಜನೆಗಳು ಏರುಪೇರಾಗುತ್ತಿವೆ. ನಗರ ಪರಿಸರವನ್ನು ಉತ್ತಮ ರೀತಿಯಲ್ಲಿ ಕಾಯ್ದುಕೊಳ್ಳಲು ಬೇಕಾಗಿರುವ ಯಾವುದೇ ನಿರ್ದಿಷ್ಟ ಯೋಜನೆ ರೂಪುಗೊಂಡಂತೆ ಕಂಡುಬರುವುದಿಲ್ಲ. ಯೋಜನೆಗಳ ಸ್ವರೂಪ ದಿನದಿಂದ ದಿನಕ್ಕೆ ಬದಲಾಗುತ್ತಿರುವುದು ನಗರಗಳ ಕ್ರಮಬದ್ಧ ಬೆಳವಣಿಗೆಗೆ ಅಡ್ಡಿಯಾಗಿದೆ. ನಗರೀಕರಣ ಕುರಿತ ರಾಷ್ಟ್ರೀಯ ಆಯೋಗವು ಈ ವಿವರಗಳನ್ನು ಒಳಗೊಂಡ ಸಂಪುಟಗಳನ್ನು ಹೊರತಂದಿದೆ. ಅವುಗಳ ವರದಿಗಳಲ್ಲಿ ನಗರೀಕರಣದ ಸ್ವರೂಪ ಹಾಗೂ ಪರಿಸರ

ಮಾಲಿನ್ಯದ ವಾಸ್ತವ ಚಿತ್ರಣ ಸಿಗುತ್ತದೆ. ಪರಿಸರಪ್ರೇಮಿ ಎಂ. ಎನ್. ಬುಚ್ ಅವರು ತಮ್ಮ "ಪರಿಸರ ಪ್ರಜ್ಞೆ ನಗರ ನಿರ್ಮಾಣ" (ಕನ್ನಡಕ್ಕೆ ಅನುವಾದಿಸಿದವರು ನಾಗೇಶ ಹೆಗಡೆ) ಎಂಬ ಕೃತಿಯಲ್ಲಿ ಆಯೋಗದ ಸಂಪುಟದ ವರದಿಗಳನ್ನು ಬಳಸಿಕೊಂಡು ನಗರ ನಿರ್ಮಾಣ ಮತ್ತು ಪರಿಸರ ಪ್ರಜ್ಞೆಯ ಕುರಿತಾಗಿ ವಿಶ್ಲೇಷಣೆ ನಡೆಸಿದ್ದಾರೆ (ಬುಚ್, ೧೯೯೩).

ನಗರೀಕರಣ ಕುರಿತ ರಾಷ್ಟ್ರೀಯ ಆಯೋಗದ ಸಂಪುಟ ೧ರ ವರದಿಯಲ್ಲಿ ನಗರಗಳ ನಿರ್ಮಾಣದ ಅನಿವಾರ್ಯತೆ ಹಾಗೂ ಅದರಿಂದಾಗಬಹುದಾದ ಪರಿಣಾಮಗಳ ವಿವರಣೆಗಳು ಸಿಗುತ್ತವೆ. ಅವುಗಳೆಂದರೆ,

೧. ರಾಷ್ಟ್ರಕ್ಕಾಗಿ ಅಮೂಲ್ಯ ಸಂಪತ್ತನ್ನೂ, ಕೌಶಲ್ಯಗಳನ್ನೂ ಕ್ರೋಢೀಕರಿಸುತ್ತಲೇ ಗ್ರಾಮೀಣ ವಲಸೆದಾರರಿಗೆ ಸೂಕ್ತ ಉದ್ಯೋಗಾವಕಾಶಗಳನ್ನು ಒದಗಿಸುವ ನಮ್ಮ ಪೇಟೆ, ಪಟ್ಟಣ, ನಗರ, ಮಹಾನಗರಗಳೆಲ್ಲ ಭಾರೀ ವೈರುಧ್ಯಗಳ ಆಗರವಾಗಿ ರಾಷ್ಟ್ರದ ಮಟ್ಟಿಗೆ ಒಂದು ಅಪೂರ್ವ ಸಂಪತ್ತಿನ ಸಾಗರವಾಗಿ ಕಂಗೊಳಿಸುತ್ತವೆ. ನಮ್ಮ ಜಲ, ನೆಲ, ಸಂಪನ್ಮೂಲಗಳಂತೆ ಈ ನಗರಗಳೂ ರಾಷ್ಟ್ರದ ಬಾಗಿಲುಗಳಾಗಿ ತೋರುತ್ತವೆ.

೨. ಈ ನಗರ ಕೇಂದ್ರಗಳೇ ನಿರ್ದಯಿ ಹಾಗೂ ಅಮಾನವೀಯ ನರಕಕೂಪಗಳಾಗಿ ಬೆಳೆಯುತ್ತಿವೆ. ಇಲ್ಲಿನ ಬಹುಸಂಖ್ಯಾತ ಪ್ರಜಾಸ್ತೋಮ ಕೊಳೆಗೇರಿಗಳಲ್ಲಿ ಬದುಕುತ್ತದೆ. ಮುಂಬರುವ ದಿನಗಳಲ್ಲಿ ಈ ನಮ್ಮ ನಗರಗಳಿಗೆ ಏನು ಕಾದಿದೆ ಎಂದು ಊಹಿಸಲೂ ಸಾಧ್ಯವಿಲ್ಲ. ಒಂದೇ ತಾಣದಲ್ಲಿ ಧನಾಢ್ಯರ ತಳುಕಿನ ಜೀವನ; ಅವರ ನೆರಳಿನಲ್ಲೇ ದಟ್ಟ ದರಿದ್ರ ಸ್ಥಿತಿಯಲ್ಲಿ ಬದುಕುವ ಜನದಟ್ಟಣೆ. ಈ ವೈಪರೀತ್ಯಗಳ ಮೂಸೆಯಲ್ಲಿ ಅದೆಂಥ ಸಂಘರ್ಷ ತಲೆದೋರುವುದೋ, ಯಾವ ಬಗೆಯ ರಾಜಕೀಯ ತುಮುಲ ಅಥವಾ ದೈಹಿಕ ಮಾರಾಮಾರಿ ನಡೆಯುವುದೋ ಈಗಲೇ ಹೇಳಲು ಬರುವಂತಿಲ್ಲ.

ನಗರಗಳು ವಿಸ್ತಾರವಾಗಿ ಬೆಳೆದಂತೆಲ್ಲ ನೆಲಬಳಕೆಯ ಕುರಿತಾದ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಸುತ್ತಲಿನ ಭೂಮಿಯನ್ನೆಲ್ಲ ನಗರ ಬಳಕೆಗೆಂದೇ ಪರಿವರ್ತಿಸಬೇಕಾದ ಅನಿವಾರ್ಯತೆಯೂ ಕಾಣಿಸಿಕೊಳ್ಳುತ್ತದೆ. ನೆಲಬಳಕೆಯ ಕುರಿತಾಗಿ ಆಯೋಗದ ಸಂಪುಟ ೨ರ ವರದಿಯಲ್ಲಿ ಈ ರೀತಿ ಹೇಳಲಾಗಿದೆ. "ನಗರಗಳಲ್ಲಿ ದೂರ ಭವಿಷ್ಯದ ಪರಿಣಾಮಗಳನ್ನು ಲೆಕ್ಕಿಸದೆ ಇಂದಿನ ದಿನದಂದು ಅತ್ಯಧಿಕ ಲಾಭ ಬರುವ ದಿಸೆಯಲ್ಲಿ ನೆಲವನ್ನು ಪರಿವರ್ತಿಸಲಾಗುತ್ತದೆ. ನೆಲಬಳಕೆ ತಜ್ಞರ ಶ್ರಮವೆಲ್ಲ ನಗರಗಳ ಮಾಸ್ಟರ್‌ಪ್ಲಾನ್ ತಯಾರಿಸುವುದಕ್ಕಷ್ಟೇ ಸೀಮಿತವಾಗಿರುತ್ತದೆ." ಈ ವರದಿ ವಾಸ್ತವ ಸ್ಥಿತಿಯನ್ನು ಪರಿಚಯಿಸುತ್ತದೆ. ಕೇವಲ ನೆಲಬಳಕೆಯ ಯೋಜನೆ ಸಿದ್ಧವಾದ ಮಾತ್ರಕ್ಕೆ ನಗರಗಳ ಸ್ಥಿತಿ ಬದಲಾಗಲು ಸಾಧ್ಯವಿಲ್ಲ. ಅವುಗಳು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳಬೇಕು. ಇದು ಕೇವಲ ನಗರಗಳಿಗಷ್ಟೇ ಸೀಮಿತವಾಗಿರದೆ ಗ್ರಾಮೀಣ ಪ್ರದೇಶಗಳಿಗೂ ಸಂಬಂಧಿಸಿದ ವಿಷಯವಾಗಿದೆ. ರಾಸಾಯನಿಕ ಕೃಷಿ ಪದ್ಧತಿ ಜಾರಿಗೆ ಬಂದಂದಿನಿಂದ ಗ್ರಾಮೀಣ ಪ್ರದೇಶದಲ್ಲೂ ನೆಲಬಳಕೆಯ ಕುರಿತಾದ ಸಮಸ್ಯೆಗಳು ಕಾಣಿಸಿಕೊಂಡಿವೆ.

ಬೃಹತ್ ಕೈಗಾರಿಕಾ ನಗರಗಳು ಸುತ್ತಲಿನ ಗ್ರಾಮೀಣ ಭೂಮಿಯನ್ನೆಲ್ಲಾ ನುಂಗುತ್ತಲೇ ಇನ್ನಷ್ಟು ವಿಸ್ತಾರವಾಗಿ ಬೆಳೆಯುತ್ತಾ ಹೋಗುತ್ತವೆ. ಇದರಿಂದಾಗಿ ಇಂದು ಸಾವಿರಾರು ಎಕರೆ ಕೃಷಿಭೂಮಿ ಹರಿದು ಹಂಚಿ ಹೋಗಿದೆ. ನಗರಕೇಂದ್ರಗಳ ಹೊರವಲಯಗಳಲ್ಲಿ ಉದ್ದಿಮೆಗಳು ಪ್ರಾರಂಭಗೊಂಡು ಕ್ರಮೇಣ ಅವು ನಗರವ್ಯಾಪ್ತಿಯೊಳಗೆ ಸೇರಿಕೊಳ್ಳುತ್ತವೆ. ಇದು ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ನಿರಂತರ ಪ್ರಕ್ರಿಯೆ. ಇದು ತಪ್ಪು ಎಂದಲ್ಲವಾದರೂ ಸಾಮಾಜಿಕ ಲಾಭ-ನಷ್ಟಗಳ ಅರಿವೂ ಇರಬೇಕಾಗುತ್ತದೆ. ಕೇವಲ ಬಂಡವಾಳಶಾಹಿ ವ್ಯವಸ್ಥೆಯಷ್ಟೇ ಗಟ್ಟಿಗೊಳ್ಳುತ್ತಾ ಹೋದರೆ ಸಾಮಾಜಿಕ ಸಮತೋಲನ ಸ್ಥಿತಿಯನ್ನು ಕಾಯ್ದುಕೊಳ್ಳುವುದು ಕನಸಿನ ಮಾತಾಗುತ್ತದೆ. ಬೃಹತ್ ಕೈಗಾರಿಕೆಗಳ ಸ್ಥಾಪನೆ ಕೇವಲ ಆರ್ಥಿಕಾಭಿವೃದ್ಧಿಗೆ ಮಾತ್ರವಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವ ಉದ್ದೇಶವನ್ನೂ ಹೊಂದಿತ್ತು. ಕೈಗಾರಿಕೆಗಳಿಗೆ ಸಂಬಂಧಿಸಿದ ವರದಿಗಳಲ್ಲಿ ಈ ಕುರಿತ ವಿವರಗಳೂ ಸಿಗುತ್ತವೆ. ಅದೇ ರೀತಿ ವಶಪಡಿಸಿಕೊಳ್ಳುವ ಜಮೀನಿನ ಪ್ರಮುಖ ನೈಸರ್ಗಿಕ ಲಕ್ಷಣಗಳನ್ನು ಹಾಗೆಯೇ ಉಳಿಸಿಕೊಂಡು ಸಂರಕ್ಷಿಸುವ ಮಾತೂ ಇದೆ. ಪರಿಸರ ಚಳವಳಿಗಳೂ ಈ ಹಿನ್ನೆಲೆಯಿಂದಲೇ ಹುಟ್ಟಿಕೊಂಡವು. ಯೋಜನೆಗಳನ್ನು ಸಾರಾಸಗಟಾಗಿ ವಿರೋಧಿಸುವ ಬದಲು ಯೋಜನೆಯೊಳಗಿನ ರಾಜಕೀಯವನ್ನು ಮೊದಲು ಅರ್ಥೈಸಿಕೊಳ್ಳಬೇಕಾಗುತ್ತದೆ. ಯಾವುದೇ ಯೋಜನೆಯೂ ಮೊದಲು ಸಮಾಜವಾದಿ ವ್ಯವಸ್ಥೆಯ ಚಿತ್ರಣವನ್ನು ಮುಂದಿಟ್ಟುಕೊಂಡೇ ಪ್ರವೇಶ ಪಡೆಯುತ್ತದೆ. ಆದರೆ ಅದರೊಳಗಿನ ಬಂಡವಾಳಶಾಹಿ ಹಿತಾಸಕ್ತಿಗಳು ಬೆಳಕಿಗೆ ಬರುವುದು ಯೋಜನೆ ಆರಂಭಗೊಂಡ ನಂತರದ ದಿನಗಳಲ್ಲಿ. ಇದರಿಂದ ಸಂಪತ್ತಿನ ಸಮಾನ ಹಂಚಿಕೆಯಾಗಲಿ, ಸಮಾನ ಅವಕಾಶಗಳಾಗಲಿ ಸಾಧ್ಯವಿಲ್ಲ. ಸಂಪತ್ತು ಮತ್ತು ಸವಲತ್ತುಗಳು ಕೇವಲ ಸೀಮಿತ ಜಾತಿ/ವರ್ಗದಲ್ಲಷ್ಟೇ ಕೇಂದ್ರೀಕೃತಗೊಳ್ಳುತ್ತವೆ.

ಕೆಲವೇ ನಗರಗಳು ಬೃಹತ್ ನಗರಗಳಾಗಿ ಬೆಳೆಯಲು ಬಲವಾದ ಚಾರಿತ್ರಿಕ ಕಾರಣಗಳಿವೆ. ಇವನ್ನು ನಗರೀಕರಣ ಕುರಿತ ರಾಷ್ಟ್ರೀಯ ಆಯೋಗದ ಸಂಪುಟ ೨ರ ವರದಿಯಲ್ಲಿ ಕಾಣಬಹುದಾಗಿದೆ. ವರದಿಯಲ್ಲಿ ಹೀಗೆ ಹೇಳಲಾಗಿದೆ:

"ಬ್ರಿಟಿಷರು ದೊಡ್ಡ ನಗರಗಳೇ ಇನ್ನೂ ದೊಡ್ಡದಾಗಿ ಬೆಳೆಯಲು ಪ್ರೋತ್ಸಾಹ ನೀಡುತ್ತಿದ್ದರು. ಏಕೆಂದರೆ ಅವರ ವಸಾಹತುಶಾಹಿ ಧೋರಣೆಗೆ ಕೆಲವೇ ನಗರಗಳು ಸಮೃದ್ಧಿಯಿಂದ ಬೆಳೆದರೆ ಅನುಕೂಲವಾಗುತ್ತಿತ್ತು. ನಮಗೆ ಅಂಥ ಧೋರಣೆ ಬೇಕಾಗಿಲ್ಲ. ನಮಗೆ ಬಹಳಷ್ಟು ನಗರಗಳಲ್ಲಿ ಸಂಪತ್ತಿನ ಕ್ರೋಢೀಕರಣವಾಗುವುದು ಬೇಕಿದೆ. ಸಣ್ಣಪುಟ್ಟ ಪಟ್ಟಣಗಳಲ್ಲಿಯೂ ಬಹುದೊಡ್ಡ ಸಂಖ್ಯೆಯ ನಿರುದ್ಯೋಗಿ ದುಡಿಯುವ ಕೈಗಳು ಲಭ್ಯವಿವೆ. ಈ ಪಟ್ಟಣಗಳಲ್ಲಿ ಸಂಪರ್ಕ ವ್ಯವಸ್ಥೆ, ಸಂಚಾರ ವ್ಯವಸ್ಥೆ, ನೀರು ಮತ್ತು ಒಳಚರಂಡಿ ವ್ಯವಸ್ಥೆ, ಗೃಹ ನಿರ್ಮಾಣ ಸೌಲಭ್ಯ, ಮತ್ತಿತರ ಸಾಮಾಜಿಕ ಸೌಕರ್ಯಗಳನ್ನು ವೃದ್ಧಿ ಮಾಡಿದರೆ ಇಲ್ಲಿಗೆ ಬಂಡವಾಳ ಹೂಡಲು ಜನ ಬಂದೇ ಬರುತ್ತಾರೆ." ಆಯೋಗದ ಪ್ರಕಾರ ಮಹಾನಗರಗಳ ಅನಿಯಂತ್ರಿತ ಬೆಳವಣಿಗೆಯನ್ನು ನಿಲ್ಲಿಸಬೇಕಾದರೆ ಪಟ್ಟಣಗಳ ಹಾಗೂ ಮಧ್ಯಮಗಾತ್ರದ ನಗರಗಳ ಬೆಳವಣಿಗೆ ಆಗಬೇಕಾಗಿದೆ. ಪರಿಸರದ ದೃಷ್ಟಿಯಿಂದಲೂ ಈ ಯೋಜನೆ ಸಮಂಜಸವೇ ಆಗಿದೆ. ಆದರೆ ಉತ್ಪಾದನಾ ವ್ಯವಸ್ಥೆಯಲ್ಲಿ ಮೂಲಭೂತ

ಬದಲಾವಣೆಗಳಾಗದೆ ಯಾವುದೇ ಬದಲಾವಣೆಯನ್ನೂ ನಿರೀಕ್ಷಿಸಲು ಸಾಧ್ಯವಾಗುವುದಿಲ್ಲ. ಆಯೋಗವು ಈ ಕುರಿತು ಹೆಚ್ಚು ಚಿಂತನೆ ನಡೆಸಿದಂತೆ ಕಂಡುಬರುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಮಹಾನಗರ ಪ್ರದೇಶಗಳಲ್ಲಿಯೇ ಕೈಗಾರಿಕೆಗಳು ಸ್ಥಾಪನೆಗೊಳ್ಳುತ್ತಿರುವುದು ಕಂಡುಬರುತ್ತದೆ. ಇದರಿಂದಾಗಿ ಬೃಹತ್ ಕೈಗಾರಿಕಾ ನಗರಗಳು ರೂಪುಗೊಳ್ಳುತ್ತಿವೆ. ಇದನ್ನು ತಪ್ಪಿಸುವ ಉದ್ದೇಶದಿಂದ ಕೈಗಾರಿಕೆಗಳ ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸಲಾಯಿತು. ಆದರೆ ಈ ಪ್ರಯೋಗ ಯಶಸ್ವಿಯಾಗಲಿಲ್ಲ. ಯಶಸ್ವಿಯಾಗದೇ ಇರುವುದಕ್ಕೆ ಉದ್ಯಮಪತಿಗಳು ಮತ್ತು ಸ್ಥಳೀಯ ಶ್ರೀಮಂತ ವರ್ಗದ ರಾಜಕೀಯವೇ ಮೂಲಕಾರಣವಾಗಿ ಕಂಡುಬರುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಹೊಸ ಕೈಗಾರಿಕಾ ಪ್ರದೇಶಗಳನ್ನು ನಿರ್ಮಾಣಗೊಳಿಸಲಾಯಿತಾದರೂ ಅವು ಯೋಜನಾ ಬದ್ಧವಾಗಿ ಕೆಲಸ ನಿರ್ವಹಿಸದೆ ಸಮಸ್ಯೆಯ ಆಗರವಾಗಿ ರೂಪು ತಳೆದಿವೆ. ಕರ್ನಾಟಕ ಸರಕಾರ ಕೈಗಾರಿಕಾ ಕ್ಷೇತ್ರಗಳನ್ನು ಹೆಚ್ಚಿನ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಸ್ಥಾಪಿಸಿದೆ. ಇವುಗಳಲ್ಲಿ ಬೆಂಗಳೂರಿನ ಪೀಣ್ಯ, ಮಹದೇವಪುರ, ವೈಟ್‌ಫೀಲ್ಡ್, ಬೊಮ್ಮನಹಳ್ಳಿ, ಇಲೆಕ್ಟ್ರಾನಿಕ್ ನಗರ, ಕೋರಮಂಗಲ, ಮೈಸೂರಿನ ಬೊಗಾದಿ, ಹುಣಸೂರು ರಸ್ತೆ, ಮಂಗಳೂರಿನ ಬೈಕಂಪಾಡಿ, ಬಂದರು ಪ್ರದೇಶ, ಶಿವಮೊಗ್ಗದ ಸಾಗರ ರಸ್ತೆಯಲ್ಲಿರುವ ಕೈಗಾರಿಕಾ ಕ್ಷೇತ್ರಗಳು ಮತ್ತು ಹತ್ತಿರದ ಭದ್ರಾವತಿ ಮೊದಲಾದವುಗಳನ್ನು ಹೆಸರಿಸಬಹುದು. ಇವುಗಳಲ್ಲದೆ ನಗರಕೇಂದ್ರಗಳ ಆಸುಪಾಸಿನಲ್ಲಿ ಬೃಹತ್ ಉದ್ದಿಮೆಗಳು ಸ್ಥಾಪನೆಗೊಳ್ಳುತ್ತಿವೆ. ಉದಾಹರಣೆಗೆ, ಮಂಗಳೂರು ನಗರದ ಆಸುಪಾಸಿನಲ್ಲಿ ಸ್ಥಾಪನೆಗೊಳ್ಳುತ್ತಿರುವ ಎಂ.ಆರ್.ಪಿ.ಎಲ್. ಮತ್ತು ಕೊಜೆಂಟ್ರಿಕ್ಸ್. ಈ ಕಾರಣಗಳಿಂದಾಗಿಯೇ ಎಲ್ಲಾ ನಗರ ಕೇಂದ್ರಗಳಲ್ಲಿಯೂ ಅನೇಕ ಪರಿಸರ ಸಂಘಟನೆಗಳು ಹಾಗೂ ಪರಿಸರ ಪರ ಕೆಲಸಮಾಡುವ ಸಂಘ-ಸಂಸ್ಥೆಗಳು ಹುಟ್ಟಿಕೊಂಡಿವೆ. ಇವುಗಳೊಡನೆ ಪರಿಸರ ಪ್ರೇಮಿಗಳು, ಪರಿಸರ ವಾದಿಗಳು, ಸಮಾಜ ಕಾರ್ಯಕರ್ತರು, ಪರಿಸರ ವಿಜ್ಞಾನಿಗಳು ಕಾಣಿಸಿಕೊಳ್ಳಲಾರಂಭಿ ಸಿದರು. ಇವರಲ್ಲಿ ಹೆಚ್ಚಿನವರು ಜನರಲ್ಲಿ ಗೊಂದಲವನ್ನುಂಟು ಮಾಡುವ ಕೆಲಸವನ್ನಷ್ಟೇ ಮಾಡುತ್ತಿದ್ದಾರೆ. ಇನ್ನು ಕೆಲವರು ಪರಿಸರದ ಹೆಸರಿನಲ್ಲಿ ಹಣಸಂಗ್ರಹಿಸುವ, ಗೌರವ, ಪ್ರತಿಷ್ಠೆಗಳನ್ನು ಹೆಚ್ಚಿಸಿಕೊಳ್ಳುವ ಕೆಲಸದಲ್ಲಿಯೂ ನಿರತರಾಗಿದ್ದಾರೆ. ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ ಕಡಿಮೆಯಿದ್ದು, ಇವರನ್ನು ದಾರಿತಪ್ಪಿಸುವವರ ಸಂಖ್ಯೆ ಹೆಚ್ಚಿದೆ.

ಕೈಗಾರಿಕಾ ನಗರಗಳ ಮತ್ತು ಕೈಗಾರಿಕಾ ಪ್ರದೇಶಗಳ ಕುರಿತು ಚರ್ಚಿಸುವಾಗ ಕರ್ನಾಟಕದ ಅನೇಕ ನಗರಗಳು ಚರ್ಚೆಯ ವ್ಯಾಪ್ತಿಯಲ್ಲಿ ಬರುತ್ತವಾದರೂ ರಾಜಧಾನಿ ಬೆಂಗಳೂರು ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಬಹುರಾಷ್ಟ್ರೀಯ ಕಂಪೆನಿಗಳು ಸಾಲುಸಾಲಾಗಿ ಬರುತ್ತಿರುವುದು ಹಾಗೂ ಸರಕಾರಿ ಸ್ವಾಮ್ಯದ ಮತ್ತು ಖಾಸಗೀ ವಲಯದ ಉದ್ದಿಮೆಗಳು ಎಲ್ಲೆಂದರಲ್ಲಿ ಸ್ಥಾಪನೆಗೊಳ್ಳುತ್ತಿರುವುದು ಇದಕ್ಕೆ ಕಾರಣವಾಗಿ ಕಂಡುಬರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ ತನ್ನ ಮೇರೆಗಳನ್ನು ಇನ್ನಷ್ಟು ವಿಸ್ತರಿಸಿಕೊಂಡಿದೆ. ಏಷ್ಯಾದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಎಂಬ ಬಿರುದನ್ನು ಹೊಂದಿರುವ ಬೆಂಗಳೂರು ಅತಿಯಾದ

ನಗರೀಕರಣ ಮತ್ತು ಕೈಗಾರಿಕೀಕರಣದಿಂದಾಗಿ ಪರಿಸರ ಚಳವಳಿಕಾರರಿಗೆ ಚರ್ಚೆಯ ವಿಷಯವೂ ಆಗಿದೆ. ಗಂಭೀರ ಸ್ವರೂಪದ ವಾಯುಮಾಲಿನ್ಯ ಮತ್ತು ಜಲಮಾಲಿನ್ಯ ಸಮಸ್ಯೆಗಳು ಹುಟ್ಟಿಕೊಂಡಿರುವುದು ವಾಸ್ತವ ಸಂಗತಿಯಾಗಿದೆ. ೧೯೯೩ರಲ್ಲಿ ಜಪಾನ್ ತಂತ್ರಾಧಾರಿತ ಕೈಗಾರಿಕಾ ಕಾಲೋನಿಯ ಹೆಸರು ಕೇಳಿಬಂದಾಗ ವ್ಯಾಪಕ ಪ್ರತಿಭಟನೆ ಪ್ರಾರಂಭಗೊಂಡಿತು. ಸಮಾಜದ ಎಲ್ಲ ವರ್ಗದ ಜನರೂ ಈ ಚಳವಳಿಯಲ್ಲಿ ಪಾಲ್ಗೊಂಡರು. ಜಪಾನ್ ಕೈಗಾರಿಕಾ ಕಾಲೋನಿಯ ಸ್ಥಾಪನೆಯನ್ನು ನವವಸಾಹತುಶಾಹಿಯ ಪ್ರವೇಶ ಎಂಬುದಾಗಿ ಕರೆದು ವ್ಯಾಪಕವಾಗಿ ಪ್ರತಿಭಟಿಸಲಾಯಿತು. ಚಳವಳಿಕಾರರು ಸರಕಾರವನ್ನು ನೇರವಾಗಿ ತರಾಟೆಗೆ ತೆಗೆದುಕೊಂಡರು.

ಹಲವಾರು ಪರಿಸರ ಸಂಘಟನೆಗಳು ಒಗ್ಗೂಡಿ ಜಪಾನ್ ಕೈಗಾರಿಕಾ ನಗರ ವಿರೋಧಿ ಒಕ್ಕೂಟವನ್ನು ಸ್ಥಾಪಿಸಿದವು. ಈ ಒಕ್ಕೂಟ ಕೈಗಾರಿಕಾ ನಗರದ ವಿರುದ್ಧ ಜನರನ್ನು ಸಂಘಟಿಸಿ, ವ್ಯಾಪಕ ಪ್ರತಿಭಟನೆಯನ್ನು ನಡೆಸಿತು. ಕನ್ನಡ ಚಳವಳಿಗಾರ ಚಿದಾನಂದಮೂರ್ತಿ, ಕೆ.ಪಿ. ಸುಬ್ಬಣ್ಣ ಮುಂತಾದವರು ಚಳವಳಿಯಲ್ಲಿ ಪಾಲ್ಗೊಂಡರು. ಅಪಾರ ಸಂಖ್ಯೆಯ ರೈತರು, ಪರಿಸರ ಪ್ರೇಮಿಗಳು, ನಗರವಾಸಿಗಳು, ವಿವಿಧ ಸಂಘಟನೆಗಳ ಸದಸ್ಯರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಸಂಬಂಧಿಸಿದ ಇಲಾಖೆಗಳಿಗೆ ಮನವಿ ಸಲ್ಲಿಸಿ ಬೀದಿ ಪ್ರದರ್ಶನವನ್ನು ನಡೆಸಲಾಯಿತು. ಬೆಂಗಳೂರು ನಗರವನ್ನು ಇನ್ನಷ್ಟು ಮಾಲಿನ್ಯಕ್ಕೀಡು ಮಾಡಬಹುದಾದ ಈ ಯೋಜನೆ ಅದೆಷ್ಟೇ ಆಕರ್ಷಕವಾಗಿದ್ದರೂ ನಮಗೆ ಬೇಡ ಎನ್ನುವ ಒತ್ತಾಯವನ್ನು ಸರಕಾರದ ಮೇಲೆ ಹೇರಲಾಯಿತು. ಚಳವಳಿಯ ತೀವ್ರತೆಯನ್ನು ಅರ್ಥೈಸಿಕೊಂಡ ಸರಕಾರ ಜಪಾನ್ ಕೈಗಾರಿಕಾ ನಗರ ಯೋಜನೆಯನ್ನು ಕೈಬಿಟ್ಟಿತು. ಈ ಘಟನೆ ಆದ ನಂತರ ಕರ್ನಾಟಕದ ಹಲವಾರು ನಗರಗಳಲ್ಲಿ ಕೈಗಾರಿಕೆಗಳ ವಿರುದ್ಧ ಚಳವಳಿ ಕಾಣಿಸಿಕೊಂಡಿತು. ಆದರೆ ಯಾವ ಚಳವಳಿಯೂ ಯಶಸ್ವಿಯಾಗಲಿಲ್ಲ. ಕೈಗಾರಿಕೆಗಳ ಯೋಜನೆಯ ಹಂತದಲ್ಲೇ ಮಾಲಿನ್ಯ ನಿಯಂತ್ರಣ, ಅಪಾಯಗಳ ವಿರುದ್ಧ ಭದ್ರತೆ ಹಾಗೂ ಪರಿಸರ ರಕ್ಷಣಾ ನಿಯಮಗಳನ್ನು ಒಪ್ಪಿಕೊಂಡರೆ ಮಾತ್ರ ಉದ್ದಿಮೆಗಳ ಸ್ಥಾಪನೆಗೆ ಅನುಮತಿ ನೀಡಬೇಕು ಎನ್ನುವ ವಾದ ಎಲ್ಲರೂ ಒಪ್ಪುವಂತದ್ದು. ಇಲ್ಲಿ ಉದ್ದಿಮೆಗಳು ಬೇಡ ಎನ್ನುವ ಧ್ವನಿ ಇರುವುದಿಲ್ಲ. ಆಧುನಿಕ ಸೌಲಭ್ಯ, ಸವಲತ್ತುಗಳಿಂದ ವಂಚಿತರಾದ ಜನವರ್ಗ ಈ ರೀತಿಯ ವಾದವನ್ನು ಮುಂದಿಡುವುದರಲ್ಲಿ ತಪ್ಪಿಲ್ಲ. ಆದರೆ ಆಧುನಿಕತೆಯ ಸೌಲಭ್ಯಗಳನ್ನು ಪಡೆದುಕೊಂಡ ವರ್ಗ ಉದ್ದಿಮೆಗಳು ಬೇಡ ಎನ್ನುವ ವಾದವನ್ನು ಮುಂದಿಟ್ಟರೆ ಅದು ಹಲವಾರು ಪ್ರಶ್ನೆಗಳ ಹುಟ್ಟಿಗೆ ಕಾರಣವಾಗುತ್ತದೆ. ಇದನ್ನು ಪರಿಸರ ಚಳವಳಿಯೊಳಗಿನ ವರ್ಗ ರಾಜಕೀಯ ಎಂದಷ್ಟೇ ಕರೆಯಬಹುದಾಗಿದೆ.

೩.೧೧. ನಂಜನಗೂಡು ಅನಿಲ ದುರಂತ

ನಂಜನಗೂಡಿನ ಕೈಗಾರಿಕಾ ಪ್ರದೇಶದಲ್ಲಿರುವ ಔಷಧಿ ತಯಾರಿಕಾ ಘಟಕ ಮ್ಯಾಕ್ಲಿ ಫಾರ್ಮಾ ೧೯೯೭ರಲ್ಲಿ ರಾಜ್ಯಾದ್ಯಂತ ಸುದ್ದಿ ಮಾಡಿತು. ಇದಕ್ಕೆ ಕಾರಣ ಒಂದೇ ವರ್ಷದಲ್ಲಿ ಮೂರು ಬಾರಿ ಆದ ಅನಿಲ ಸೋರಿಕೆ. ಈ ಕಾರ್ಖಾನೆಯು ಕಾನೂನು ಉಲ್ಲಂಘಿಸಿ, ಪರಿಸರವನ್ನು ಮಲಿನಗೊಳಿಸುತ್ತಿದೆಯೆಂದು ಸ್ಥಳೀಯ ಪರಿಸರ ಸಂಘಟನೆಗಳು ಆಪಾದಿಸಿವೆ. ಅನಿಲ ಸೋರಿಕೆಯಿಂದಾಗಿ ಅನೇಕ ಪಶುಗಳು ಸತ್ತು ಅನೇಕರು ಪ್ನ್ಯೂಮೋನಿಯ

ಸಲ್ಫೈಟ್ ಕುಡಿದು ಅಸ್ವಸ್ಥರಾಗಿದ್ದರು. ಇವರಲ್ಲಿ ನಾಲ್ಕು ಜನ ಕಾರ್ಮಿಕರು ಅಸುನೀಗಿದರು. ಇದನ್ನು ವಿರೋಧಿಸಿ ಕಾರ್ಖಾನೆಯ ಆಡಳಿತ ಮಂಡಳಿ ಹಾಗೂ ಮಾಲೀಕರ ವಿರುದ್ಧ ಮೊಕದ್ದಮೆಯನ್ನು ಹೂಡಲಾಯಿತು. ಮಾಲಿನ್ಯ ನಿಯಂತ್ರಣ ಮಂಡಳಿಯು ಹೊಸ ಅನುಮತಿ ನೀಡುವವರೆಗೂ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ಮುಚ್ಚಬೇಕೆಂದು ಆಗ್ರಹ ಪಡಿಸಲಾಯಿತು. ಆದರೆ ಹೆಚ್ಚಿನ ಕಾರ್ಮಿಕರು ಪರಿಸರ ಸಂಘಟನೆಗಳೊಡನೆ ಬೆರೆಯಲಿಲ್ಲ. ಸ್ಥಳೀಯರ ಪ್ರಕಾರ ಈ ಕಾರ್ಮಿಕರು ಹೊರ ರಾಜ್ಯಗಳವರಾಗಿದ್ದು, ಮಾಲೀಕರ ವಿರುದ್ಧ ಹೋರಾಟ ನಡೆಸಲು ಆಸಕ್ತಿ ತೋರಿಸಲಿಲ್ಲ. ಹೋರಾಟ ನಡೆಸಿದರೆ ತಾವು ಕೆಲಸಗಳನ್ನೇ ಕಳೆದುಕೊಳ್ಳಬೇಕಾದೀತೆಂಬ ಭಯ ಇವರಿಗಿತ್ತು. ದೊಡ್ಡ ಹುದ್ದೆಗಳಲ್ಲಿರುವ ಅಧಿಕಾರಿಗಳಿಗೆ ಎಲ್ಲಾ ಸವಲತ್ತು ಸೌಕರ್ಯಗಳೂ ಇರುವುದರಿಂದಾಗಿ ಇವರ್‍ಯಾರೂ ಹೋರಾಟಕ್ಕೆ ಬೆಂಬಲ ನೀಡಲಿಲ್ಲ. ಇದರಿಂದಾಗಿ ಅನಿಲ ಸೋರಿಕೆ ಉಂಟಾದರೂ ಕಾರ್ಖಾನೆಯ ಕೆಲಸ ಕಾರ್ಯಗಳು ನಡೆಯುತ್ತಲೇ ಇದ್ದವು.

ಪರಿಸರ ಚಳವಳಿಕಾರರು ಈ ಕಾರ್ಖಾನೆಯನ್ನು ವಿರೋಧಿಸಲು ಇನ್ನೊಂದು ಮುಖ್ಯ ಕಾರಣವೆಂದರೆ ಈ ಕಾರ್ಖಾನೆಯಿಂದಾಗಿ ನೆರೆಯ ಗ್ರಾಮದ ಮೇಲಾಗಿರುವ ಕೆಟ್ಟ ಪರಿಣಾಮಗಳು. ಕಾರ್ಖಾನೆಯ ಹಿಂಬದಿಯಲ್ಲಿಯೇ ಇರುವ ಕಲ್ಲಹಳ್ಳಿಯ ಜನರು ಕಾರ್ಖಾನೆಯ ಘಾಟು ವಾಸನೆಯನ್ನು ಕುಡಿಯುತ್ತಾ, ಚರ್ಮರೋಗ, ಟಿ.ಬಿ. ಮೊದಲಾದ ರೋಗಗಳನ್ನು ಅನುಭವಿಸಬೇಕಾಗಿದೆ. ಬಡಜನರಿಂದಲೇ ತುಂಬಿರುವ ಈ ಹಳ್ಳಿಯನ್ನು ಕಾರ್ಖಾನೆಯ ಅಧಿಕಾರಿಗಳು ನಿಯಂತ್ರಣದಲ್ಲಿ ಇಡುವಲ್ಲಿ ಯಶಸ್ವಿಯಾಗಿದ್ದಾರೆ. ಮ್ಯಾಕ್ಸ್ ಫಾರ್ಮಾ ನಿರ್ಮಾಣವಾಗುವ ಹೊತ್ತಿನಲ್ಲಿ ಈ ಹಳ್ಳಿಯ ಅನೇಕರು ಜಮೀನುಗಳನ್ನು ಕಳೆದುಕೊಂಡಿದ್ದರು. ಅವರಿಗೆ ಉದ್ಯೋಗ ನೀಡುವುದಾಗಿ ಭರವಸೆಯನ್ನು ನೀಡಲಾಗಿತ್ತು. ಆದರೆ ಈ ಭರವಸೆ ಇಂದಿನವರೆಗೂ ಈಡೇರಿಲ್ಲ ಮತ್ತು ಹೆಚ್ಚಿನ ಉದ್ಯೋಗಗಳು ಹೊರರಾಜ್ಯಗಳಿಂದ ಬಂದವರಿಗೇ ಸಿಕ್ಕಿದೆ. ಈ ಕಾರ್ಖಾನೆಯಿಂದ ಹೊರಬೀಳುವ ಕಲ್ಮಶ ನೀರು ಪೈಪ್ ಮೂಲಕ ಕಲ್ಲಹಳ್ಳಿಯ ಹೊಲಗಳ ಮಧ್ಯೆ ಹರಿದು ಕಬಿನಿ ನದಿಯನ್ನು ಸೇರುತ್ತದೆ. ಈ ನೀರನ್ನು ಕುಡಿದು ಹಳ್ಳಿಯ ಅನೇಕ ಹಸುಗಳು ಸತ್ತಿವೆ. ಅಲ್ಲಿನ ಜನರು ನಾನಾ ರೋಗಗಳಿಗೆ ತುತ್ತಾಗಿದ್ದಾರೆ. ಈ ಎಲ್ಲಾ ಕಾರಣಗಳನ್ನು ಮುಂದಿಟ್ಟುಕೊಂಡು ಜನರು ಹೋರಾಟ ನಡೆಸಿದರೂ ಸರಕಾರ ಮತ್ತು ಕಾರ್ಖಾನೆಯ ಆಡಳಿತ ಮಂದಿ ಕಾರ್ಖಾನೆಯ ಕಾರ್ಯಸ್ವರೂಪದಲ್ಲಿ ಯಾವುದೇ ಬದಲಾವಣೆಯನ್ನು ತಂದಿಲ್ಲ ಮತ್ತು ಈ ಹೋರಾಟಗಳಿಗೂ ತಮಗೂ ಯಾವುದೇ ಸಂಬಂಧವಿಲ್ಲ ಎನ್ನುವ ರೀತಿಯಲ್ಲಿ ವ್ಯವಹರಿಸುತ್ತಿದೆ ಎನ್ನುವುದು ಸ್ಥಳೀಯ ಹೋರಾಟಗಾರರ ಅಭಿಪ್ರಾಯ.

೩.೧೨. ಬೆಂಗಳೂರು - ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ

ಈ ಯೋಜನೆ ಬಡಜನರ ಊಹೆಗೂ ನಿಲುಕದ ಮತ್ತು ಅವರಿಗೆ ಯಾವ ರೀತಿಯ ಪ್ರಯೋಜನವೂ ಇಲ್ಲದ ಶ್ರೀಮಂತ ವರ್ಗದ ಯೋಜನೆಯಾಗಿದೆ. ಇದರ ಕುರಿತು ಇತ್ತೀಚೆಗೆ ವಿವರವಾದ ವರದಿಯೊಂದು ವಾರ ಪತ್ರಿಕೆಯೊಂದರಲ್ಲಿ ಪ್ರಕಟಗೊಂಡಿತ್ತು (ಶಿವಸುಂದರ್, ೧೯೯೯). ಆ ವಿವರಗಳನ್ನೂ ಸೇರಿಸಿಕೊಂಡಂತೆ ಇನ್ನಷ್ಟು ಮಾಹಿತಿಗಳನ್ನು ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಪರಿಸರ

ಚಳವಳಿಗಳ ದೃಷ್ಟಿಯಿಂದ ಈ ಯೋಜನೆ ಮಹತ್ವದ್ದಾಗಿದೆ. ಈ ಯೋಜನೆಗೆ ೧೯೮೪ರಲ್ಲಿಯೇ ಪರಿಶೀಲನೆ ನಡೆಸಲಾಗಿತ್ತು. ೧೯೮೮ರಲ್ಲಿ ಯೋಜನೆಯ ನಿರ್ಮಾಣಕ್ಕಾಗಿ ಟೆಂಡರ್ ಕರೆಯಲಾಗಿತ್ತು. ಕಲ್ಯಾಣಿ ಉದ್ಯಮ ಗುಂಪಿನವರು ೧೯೯೪ರಲ್ಲಿ ಸರಕಾರದೊಡನೆ ಒಡಂಬಡಿಕೆಯನ್ನು ಮಾಡಿಕೊಂಡಾಗ ಯೋಜನೆಗೆ ಚಾಲನೆ ಸಿಕ್ಕಿತು. ಈ ಒಡಂಬಡಿಕೆ ವಿಚಿತ್ರವಾದದ್ದಾಗಿದೆ. ಅದೇನೆಂದರೆ ಖಾಸಗಿ ಕಂಪೆನಿಯವರು ರಸ್ತೆ ನಿರ್ಮಾಣಕ್ಕೆ ಮುಂದೆ ಬರಬೇಕಾದರೆ ಶೇಕಡಾ ೨೦ರಷ್ಟು ವೆಚ್ಚವನ್ನು ಸಬ್ಸಿಡಿ ರೂಪದಲ್ಲಿ ನೀಡಬೇಕಲ್ಲದೆ ರಸ್ತೆ ಬದಿ ಜಮೀನನ್ನು ರಿಯಲ್ ಎಸ್ಟೇಟ್ ರೀತಿ ಅಭಿವೃದ್ಧಿಪಡಿಸಲು ಅನುಮತಿ ನೀಡಬೇಕೆನ್ನುವುದು. ಇದರ ಪ್ರಕಾರ ಕಲ್ಯಾಣಿ ಗುಂಪು ಅಮೆರಿಕಾದ ಕೆಲವು ಬಹುರಾಷ್ಟ್ರೀಯ ಕಂಪೆನಿಗಳೊಡನೆ ಸೇರಿಕೊಂಡು ಕೂಟವೊಂದನ್ನು ರಚಿಸಿ ಹೆದ್ದಾರಿ ಯೋಜನೆಗೆ ಆಸಕ್ತಿ ವಹಿಸಿತು. ಇದೇ ಪ್ರಕಾರ ೧೯೯೭ರಲ್ಲಿ ಸರಕಾರದೊಡನೆ ಒಪ್ಪಂದವೂ ಏರ್ಪಟ್ಟಿತು. ಆದರೆ ನಂತರ ಈ ಕೂಟವು ತನ್ನ ನಿಲುವನ್ನು ತುಸು ಬದಲಾಯಿಸಿ ರಸ್ತೆ ನಿರ್ಮಾಣದೊಂದಿಗೆ ಏಳು ಹೊಸ ನಗರ ನಿರ್ಮಿಸಲೂ ಅನುಮತಿ ನೀಡಬೇಕೆಂದು ಕೇಳಿತು. ಸರಕಾರ ಇದಕ್ಕೆ ಒಪ್ಪಿಗೆಯನ್ನು ನೀಡಿತು. ಇದರಿಂದಾಗಿ ಮೊದಲಿನ ಎಕ್ಸ್‌ಪ್ರೆಸ್ ಹೆದ್ದಾರಿ ಯೋಜನೆ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಾಗಿ ಪರಿವರ್ತನೆಗೊಂಡಿತು. ಒಟ್ಟಾರೆ ಈ ಯೋಜನೆಗೆ ೨೧ ಸಾವಿರ ಎಕರೆ ಜಮೀನು ಬೇಕಾಗಿದ್ದು, ಸುಮಾರು ೨,೦೦೦ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಹೂಡಬೇಕಾಗಿದೆ.

ಕರ್ನಾಟಕ ವಿಮೋಚನಾ ರಂಗವು ಈ ಯೋಜನೆಯ ವಿರುದ್ಧ ಚಳವಳಿ ಪ್ರಾರಂಭಿಸಿತು. ಹಲವಾರು ಪರಿಸರ ಸಂಘಟನೆಗಳೂ ಇದರೊಡನೆ ಸೇರಿಕೊಂಡವು. ಪರಿಸರದ ಕುರಿತು ಕೆಲಸಮಾಡುತ್ತಿರುವ ಯಲ್ಲಪ್ಪರೆಡ್ಡಿ, ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟದ ಅಧ್ಯಕ್ಷರಾದ ಎಚ್.ಎಸ್. ದೊರೆಸ್ವಾಮಿ, ಕರ್ನಾಟಕ ವಿಮೋಚನಾ ರಂಗದ ಅಧ್ಯಕ್ಷ ಸಿರಿಮನೆ ನಾಗರಾಜ್, ಪ್ರಜಾತಾಂತ್ರಿಕ ಜನರ ವೇದಿಕೆಯ ನಗರಗೆರೆ ರಮೇಶ್, ಚಿಂತಕ ಶಿವಸುಂದರ್ ಮುಂತಾದವರು ಈ ಯೋಜನೆಯ ಉದ್ದೇಶ ಮತ್ತು ಸ್ವರೂಪದ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು ಇಲ್ಲಿಯವರೆಗೆ ಗೌಪ್ಯವಾಗಿದ್ದ ಈ ಯೋಜನೆಯ ಪ್ರಸ್ತಾವವನ್ನು ಇವರೆಲ್ಲರೂ ಸಾರ್ವಜನಿಕರ ಮುಂದಿಟ್ಟರು. ಈಗಾಗಲೇ ಅನೇಕ ರೈತರು ತಮ್ಮ ಜಮೀನನ್ನು ಈ ಯೋಜನೆಗೆ ನೀಡುವುದಿಲ್ಲ ಎಂದು ನಿರ್ಧರಿಸಿದ್ದಾರೆ. ಉದ್ದೇಶಿತ ಯೋಜನೆ ಜಾರಿಗೆ ಬಂದರೆ ರೈತರು ತಮ್ಮ ಹೊಲಗಳಿಗೆ ೮-೧೦ ಕಿ.ಮೀ. ಸುತ್ತಾಡಿ ಹೋಗಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಏಕೆಂದರೆ ರಸ್ತೆಯ ಎರಡೂ ಕಡೆಗೂ ತಡೆಗೋಡೆಗಳನ್ನು ನಿರ್ಮಿಸಲಾಗುತ್ತದೆ. ರಸ್ತೆಯಲ್ಲಿ ಓಡಾಡುವ ವಾಹನಗಳು ಸುಂಕವನ್ನು ಕೊಡಲೇಬೇಕಾಗುತ್ತದೆ. ಹೊಸ ನಗರಗಳ ನಿರ್ಮಾಣವೂ ಕೇವಲ ಬಹುರಾಷ್ಟ್ರೀಯ ಕಂಪೆನಿಗಳು ನಡೆಸುವ ಅವ್ಯವಹಾರಗಳ ಕೇಂದ್ರಗಳಾಗುವ ಸಾಧ್ಯತೆಯೂ ಇದೆ. ಈ ಎಲ್ಲಾ ಕಾರಣಗಳಿಂದಾಗಿ ಇದೊಂದು ಶ್ರೀಮಂತವರ್ಗದ ಯೋಜನೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಯೋಜನೆಯ ವಿರೋಧಿಗಳು ಕಾರಿಡಾರ್ ಯೋಜನೆಯನ್ನು ಕೈಬಿಡುವಂತೆ ಸರಕಾರಕ್ಕೆ ಒತ್ತಡ ತರುವ ಕೆಲಸವನ್ನು ಮಾಡುತ್ತಲೇ ಬಂದಿದ್ದಾರೆ. ಆದೇ

ರೀತಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಯೋಜನೆಗೆ ಪರ್ಯಾಯ ಮಾರ್ಗವನ್ನೂ ಸೂಚಿಸಿದ್ದಾರೆ. ಸರಕಾರ ಬಹುರಾಷ್ಟ್ರೀಯ ಕಂಪೆನಿಗಳೊಡನೆ ಸೇರಿಕೊಂಡು ತನ್ನ ಸ್ವಾತಂತ್ರ್ಯವನ್ನು ತಾನೇ ಮೊಟಕುಗೊಳಿಸಿಕೊಂಡಿದೆ ಎಂದೂ ಪರಿಸರವಾದಿಗಳು ಆಪಾದಿಸಿದ್ದಾರೆ. ಏನೇ ವಿರೋಧವಿದ್ದರೂ ಯೋಜನೆಯ ನಿರ್ಮಾಣದ ಕಾಮಗಾರಿಗಳು ಪ್ರಾರಂಭಗೊಂಡವು. ೧೯೯೯ರಲ್ಲಿ ಕಲ್ಯಾಣಿ ಗುಂಪು ಸರಕಾರದ ಸಹಭಾಗಿತ್ವದೊಂದಿಗೆ ರಸ್ತೆ ನಿರ್ಮಾಣವನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾಯಿತು. ಅದೇ ರೀತಿ ಪರಿಸರ ಪ್ರೇಮಿಗಳ ಚಳವಳಿಯೂ ಮುಂದುವರಿಯಿತು.

೩.೧೩. ಕಬ್ಬನ್ ಪಾರ್ಕ್ ಉಳಿಸಿ ಚಳವಳಿ

ಪರಿಸರ ಚಳವಳಿಗಳಿಗೆ ರಾಜ್ಯದ ಉದ್ಯಾನಗಳೂ ವಸ್ತುಗಳಾಗಿವೆ. ರಾಜ್ಯದ ಹೆಚ್ಚಿನ ಉದ್ಯಾನಗಳು ಬೆಂಗಾಡಿನಂತಿವೆ, ನಗರಪಾಲಿಕೆಗಳು ಅವುಗಳನ್ನು ಕಡೆಗಣಿಸಿವೆ ಎಂಬುದಾಗಿ ಪರಿಸರ ಪ್ರೇಮಿಗಳು ಆಪಾದಿಸಿದ್ದಾರೆ. ಉದ್ಯಾನಗಳನ್ನು ರಕ್ಷಿಸಿ ಎನ್ನುವ ಹೋರಾಟವೂ ರಾಜ್ಯದಲ್ಲಿ ನಡೆಯುತ್ತಿದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ೧೯೯೮ರಲ್ಲಿ ನಡೆದ ಕಬ್ಬನ್ ಪಾರ್ಕ್ ಉಳಿಸಿ ಚಳವಳಿ. ಶಾಸಕರ ಭವನದ ವಿಸ್ತರಣೆ ನಿರ್ಮಾಣ ಮತ್ತಿತರ ಕೆಲಸಗಳಿಗಾಗಿ ಕಬ್ಬನ್‌ಪಾರ್ಕ್‌ನ್ನು ಬಳಸಿಕೊಳ್ಳುವುದಾಗಿ ಸರಕಾರ ತೀರ್ಮಾನಿಸಿದಾಗ ವ್ಯಾಪಕ ಆಂದೋಲನ ಪ್ರಾರಂಭವಾಯಿತು. ಇದು ಭಾರಿ ವಿವಾದವನ್ನೇ ಸೃಷ್ಟಿಸಿ 'ಕಬ್ಬನ್ ಪಾರ್ಕ್ ಉಳಿಸಿ' ಎಂಬ ಪರಿಸರ ಚಳವಳಿಯಾಗಿ ಇಡೀ ರಾಜ್ಯದ ಗಮನ ಸೆಳೆಯಿತು. ಈ ವಿಚಾರ ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ಪ್ರಸ್ತಾಪವಾಗಿ ಶಾಸಕಾಂಗ ಮತ್ತು ನ್ಯಾಯಾಂಗದ ನಡುವಣ ಘರ್ಷಣೆಗೂ ನಾಂದಿಯಾಯಿತು. ಆದರೆ ಕಿಡಿ ಹೆಚ್ಚಿನ ಹಾನಿ ಉಂಟುಮಾಡದೆ ಆರಿಹೋಗಿದ್ದು ಆಶ್ಚರ್ಯಕರ. ಇದೊಂದು ಪ್ರತಿಷ್ಠೆಯ ಪ್ರಶ್ನೆಯೂ ಆಗಿದ್ದು ಕೆಲವು ಕಾಲ ಉದ್ವಿಗ್ನ ಪರಿಸ್ಥಿತಿಯನ್ನು ಸೃಷ್ಟಿಸಿತು. ರಾಜಕೀಯ ಧುರೀಣರು ಪ್ರಶ್ನೆಗೆ ಸಂಬಂಧಿಸಿದ ಉತ್ತರವನ್ನು ನೀಡದೆ ಗೊಂದಲವನ್ನುಂಟುಮಾಡಿದರು. ಸಾರ್ವಜನಿಕರು ಸಮಸ್ಯೆಯ ಮೂಲವನ್ನು ತಿಳಿಯದೆ ತಾವೂ ಗೊಂದಲಕ್ಕೀಡಾದರು.

ಬೆಂಗಳೂರಿನ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಇತರ ಖಾಸಗಿ ಸಂಸ್ಥೆಗಳ ಕಾರ್ಯಕರ್ತರು ಕಬ್ಬನ್ ಪಾರ್ಕ್ ಉಳಿಸಿ ಆಂದೋಲನದ ಅಂಗವಾಗಿ ವಿಕ್ಟೋರಿಯಾ ರಾಣಿ ಪ್ರತಿಮೆ ಬಳಿ ಧರಣಿ ನಡೆಸಿದರು. ಪ್ರತಿದಿನ ಶಾಲೆ ಹಾಗೂ ಕಾಲೇಜುಗಳ ವಿದ್ಯಾರ್ಥಿಗಳು ಕಬ್ಬನ್ ಪಾರ್ಕ್ ಉಳಿಸಿ ಮೆರವಣಿಗೆಯನ್ನು ಸರದಿಯ ಮೇಲೆ ಸಂಘಟಿಸಿದರು. ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್‌ನ ಸಂಚಾಲಕ ಲಿಯೋ ಸಲ್ಡಾನಾ ಮತ್ತು ಬಿಮಲ್‌ದೇಸಾಯಿ ಇವುಗಳ ನೇತೃತ್ವ ವಹಿಸಿದರು. ನರ್ಮದಾ ಉಳಿಸಿ ಚಳವಳಿಯ ನಾಯಕಿ ಮೇಧಾ ಪಾಟ್ಕರ್ ತಮ್ಮ ಬೆಂಬಲವನ್ನು ಈ ಚಳವಳಿಗೆ ಸೂಚಿಸಿದರು. ನಾಟಕಕಾರ ಗಿರೀಶ್ ಕಾರ್ನಾಡ್, ಪರಿಸರತಜ್ಞ ಅ.ನ. ಯಲ್ಲಪ್ಪ ರೆಡ್ಡಿ, ನಿವೃತ್ತ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸ ರಾವ್ ಮತ್ತು ನಗರದ ಪರಿಸರ ಪ್ರಿಯರು ಧರಣಿ ನಡೆಸಿದರು. ಈ ಚಳವಳಿ ಬೆಂಗಳೂರು ನಗರದ ನಾಗರಿಕರೆಲ್ಲರ ಸಾಂಸ್ಕೃತಿಕ ಚಳವಳಿಯಾಗಬೇಕೆಂದು ಇವರೆಲ್ಲ ಕರೆ ನೀಡಿದರು.

೩.೧೪. ಉತ್ತರ ಕರ್ನಾಟಕದ ಕೆರೆ ಉಳಿಸಿ ಚಳವಳಿ

ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕದಲ್ಲಿ ನಡೆದ ಪರಿಸರ ಚಳವಳಿಗಳಿಗೆ ಹೋಲಿಸಿಕೊಂಡರೆ ಉತ್ತರ ಕರ್ನಾಟಕದಲ್ಲಿ ಕೆಲವು ಘಟನೆಗಳನ್ನು ಬಿಟ್ಟರೆ ಅಷ್ಟೇನೂ ಮಹತ್ವದ ಚಳವಳಿಗಳು ನಡೆದಿಲ್ಲ. ಇದಕ್ಕಿರುವ ಕಾರಣಗಳನ್ನು ಅಧ್ಯಯನದ ಮೊದಲ ಭಾಗದಲ್ಲಿ ವಿವರಿಸಲಾಗಿದೆ. ಕೆರೆಗಳು ಉತ್ತರ ಕರ್ನಾಟಕದ ಚರಿತ್ರೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ. ಅದೇ ರೀತಿ ಸಮಸ್ಯೆಗಳ ಆಗರವೂ ಆಗಿವೆ. ಇಂದಿನ ನಗರೀಕರಣ ಹಾಗೂ ಕೈಗಾರಿಕೀಕರಣಗಳಿಂದಾಗಿ ಕೆರೆಗಳು ತಮ್ಮ ಸ್ವರೂಪದಲ್ಲಿ ಬದಲಿಸದಾಗದಂಥ ಬದಲಾವಣೆಗಳನ್ನು ತಂದಿವೆ. ಕೆರೆಗಳ ಹೆಸರಿನಲ್ಲಿ ನಡೆಯುವ ರಾಜಕೀಯ ಈ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಿದೆ. ಕೆರೆಗಳ ಹೂಳೆತ್ತುವುದು, ಕೆರೆಗಳ ಪುನರ್ ನಿರ್ಮಾಣ ಹಾಗೂ ಹೊಸದಾಗಿ ಕೆರೆಗಳನ್ನು ನಿರ್ಮಿಸುವುದು ಮುಂತಾದ ಕೆಲಸಕಾರ್ಯಗಳು ಒಂದಲ್ಲ ಒಂದು ರೀತಿಯಲ್ಲಿ ಚರ್ಚೆಯ ವಸ್ತುಗಳಾಗಿವೆ. ಇಲ್ಲಿ ಉತ್ತರ ಕರ್ನಾಟಕದ ಕೆಲವು ಕೆರೆಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಅಲ್ಲಿನ ಸಮಸ್ಯೆಗಳು ಮತ್ತು ನಡೆಯುತ್ತಿರುವ ಪರಿಸರ ಚಳವಳಿಗಳ ಅಧ್ಯಯನವನ್ನು ನಡೆಸುವ ಪ್ರಯತ್ನವನ್ನು ಮಾಡಲಾಗಿದೆ.

ಹುಬ್ಬಳ್ಳಿ - ಧಾರವಾಡಗಳು ಕೆರೆಯ ವಿಚಾರದಲ್ಲಿ ಹೆಚ್ಚು ಚರ್ಚೆಗೊಳಗಾಗುತ್ತಿವೆ. ಈ ಅವಳಿ ನಗರಗಳಲ್ಲಿ ಎರಡನೇ ಅತಿ ದೊಡ್ಡ ಕೆರೆಯಾದ ಕೆಲಗೇರಿ ಕೆರೆ ಇಂದು ವಿವಾದಗಳಿಂದ ಕೂಡಿದೆ. ಕೆಲಗೇರಿ ಕೆರೆ ಧಾರವಾಡ ನಗರದಿಂದ ೫ ಕಿ.ಮೀ ಅಂತರದಲ್ಲಿ ಪಣಜಿ-ಗೋವಾ ರಸ್ತೆಯ ಪಕ್ಕದಲ್ಲಿದೆ. ಈ ಕೆರೆ ಸುಮಾರು ೧೭೪ ಎಕರೆ ಪ್ರದೇಶದಲ್ಲಿದೆ. ೧೯೧೧ರಲ್ಲಿಯೇ ಈ ಕೆರೆಯ ನಿರ್ಮಾಣಕಾರ್ಯ ಪ್ರಾರಂಭಗೊಂಡಿತ್ತು. ಇಡೀ ಧಾರವಾಡ ನಗರಕ್ಕೆ ನೀರು ಪೂರೈಸುವ ಕೆಲಸವನ್ನು ಈ ಕೆರೆಯೇ ಮಾಡುತ್ತಿತ್ತು. ಆದರೆ ಇಂದು ಕೆರೆಯು ಅತಿಯಾಗಿ ಮಲಿನಗೊಂಡಿರುವುದರಿಂದಾಗಿ ಕುಡಿಯಲೂ ಯೋಗ್ಯವಲ್ಲದಾಗಿದೆ. ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಯು ಸುಮಾರು ೧೫-೨೦ ವರ್ಷಗಳ ಹಿಂದೆ ಕೆಲಗೇರಿ ಕೆರೆಯ ಮೇಲಿನ ತನ್ನೆಲ್ಲ ಹಕ್ಕು ಸ್ವಾಯತ್ತತೆಯನ್ನು ಧಾರವಾಡದ ಕೃಷಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿತ್ತು. ಕೃಷಿ ವಿ.ವಿ.ಯು ಕೆರೆಯ ಅಭಿವೃದ್ಧಿ ಯೋಜನೆಯನ್ನು ಪ್ರಕಟಿಸಿತ್ತಾದರೂ ಹಣಕಾಸಿನ ಅಭಾವದಿಂದ ಅವುಗಳು ಜಾರಿಗೆ ಬಂದಿಲ್ಲ. ಕೆರೆಯನ್ನು ಉಳಿಸಬೇಕೆನ್ನುವ ಸ್ಥಳೀಯ ಪರಿಸರ ಸಂಘಟನೆಗಳ ಒತ್ತಾಯದಿಂದಾಗಿ ಈಗ ಮತ್ತೊಮ್ಮೆ ಮಹಾನಗರಪಾಲಿಕೆ ಮತ್ತು ಕೃಷಿ ವಿ.ವಿ. ಕೆರೆಯ ಕುರಿತು ಮರು ಆಲೋಚನೆ ನಡೆಸುತ್ತಿವೆ. ಪರಿಸರ ಸಂಘಟನೆಗಳ ಪ್ರಕಾರ ಧಾರವಾಡದಲ್ಲಿ ಸುಮಾರು ೩೩ ಕೆರೆಗಳಿದ್ದವು. ಆದರೆ ಈಗ ಕೇವಲ ೧೧ ಕೆರೆಗಳು ಮಾತ್ರ ಉಳಿದಿದ್ದು ಅವು ಸಹ ನಿರ್ನಾಮಗೊಳ್ಳುವ ಹಂತದಲ್ಲಿವೆ.

ಹುಬ್ಬಳ್ಳಿ ನಗರಕ್ಕೆ ನೀರು ಸರಬರಾಜು ಮಾಡುತ್ತಿದ್ದ ಉಣಕಲ್ ಕೆರೆ ಇಂದು ಮಲಿನಕೆರೆಯಾಗಿದೆ. ಈ ಕೆರೆಯನ್ನು ೧೮೮೩ರಲ್ಲಿ ಅಂದಿನ ಜನಸಂಖ್ಯೆಯ ಆಧಾರದ ಮೇಲೆ ಯೋಜಿಸಲಾಗಿತ್ತು. ಸರ್. ಎಂ. ವಿಶ್ವೇಶ್ವರಯ್ಯ ನೇತೃತ್ವದಲ್ಲಿ ಈ ಕೆರೆ ೧೯೦೩ರಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಹುಬ್ಬಳ್ಳಿ ನಗರ ವಿಶಾಲವಾಗಿ ಬೆಳೆಯುತ್ತಿದ್ದು ಅದರ ತ್ಯಾಜ್ಯ

ವಸ್ತುಗಳಿಗೆಲ್ಲಾ ಇಂದು ಉಣಕಲ್ ಕೆರೆಯೇ ಕಸದ ಬುಟ್ಟಿಯಾಗಿದೆ. ಈ ಕಾರಣದಿಂದಾಗಿ ೧೯೯೫ರಲ್ಲಿ ಹುಬ್ಬಳ್ಳಿ ನಗರಕ್ಕೆ ಈ ಕೆರೆಯಿಂದ ಆಗುತ್ತಿದ್ದ ನೀರಿನ ಸರಬರಾಜನ್ನು ನಿಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಧಾರವಾಡದ ನಾಗರಿಕ ಪರಿಸರ ವೇದಿಕೆಯು ಈ ಕೆರೆಯನ್ನು ಉಳಿಸಬೇಕೆಂದು ತೀವ್ರ ಚಳವಳಿ ನಡೆಸಲಾರಂಭಿಸಿತು. ಈ ವೇದಿಕೆಯೊಡನೆ ಉಣಕಲ್ ಕೆರೆ ಸುಧಾರಣಾ ಸಮಿತಿಯೂ ಧ್ವನಿಗೂಡಿಸಿತು. ಪರಿಸರ ವಿಜ್ಞಾನಿಗಳೂ ಈ ಕೆರೆಯ ಅಧ್ಯಯನ ನಡೆಸಿ ರಾಜ್ಯ ಸರಕಾರಕ್ಕೆ ವೈಜ್ಞಾನಿಕ ವರದಿ ಸಲ್ಲಿಸಿದರು. ೧೯೮೬ರಲ್ಲಿ ರಾಜ್ಯ ಸರಕಾರ ಕೆರೆಗಳ ಸಂಬಂಧವಾಗಿ ವಿಶೇಷ ಸಮಿತಿಯನ್ನು ರಚಿಸಿತ್ತು. ಆದರೆ ಉಣಕಲ್ ಕೆರೆ ಈ ಸಮಿತಿಯ ಗಮನಕ್ಕೆ ಬಂದಿರಲಿಲ್ಲ. ಆದರೆ ಹುಬ್ಬಳ್ಳಿ-ಧಾರವಾಡದ ಜನರಿಗೆ ನೀರುಣಿಸಿರುವ ಈ ಕೆರೆ ಇಂದು ಮಾಯವಾಗುತ್ತಿರುವುದನ್ನು ಕಂಡು ಮನನೊಂದು ಧಾರವಾಡದ ನಾಗರಿಕ ಪರಿಸರ ವೇದಿಕೆ ಇನ್ನಿತರ ಸಂಘ-ಸಂಸ್ಥೆಗಳೊಡನೆ ಸೇರಿಕೊಂಡು ಚಳವಳಿ ನಡೆಸುತ್ತಿದೆ. ಇವರು ಕೆಲವೊಂದು ಉದ್ದೇಶಗಳನ್ನು ಇಟ್ಟುಕೊಂಡಿದ್ದಾರೆ. ಅವುಗಳೆಂದರೆ,

೧. ಉಣಕಲ್ ಜಲಾನಯನ ಪ್ರದೇಶವನ್ನು ನೇರವಾಗಿ ಅರಣ್ಯ ಇಲಾಖೆಯ ಅಧೀನಕ್ಕೆ ತರುವುದು.

೨. ಜನತೆಯಲ್ಲಿ ಕೆರೆಯ ಮಹತ್ವದ ಕುರಿತು ಅರಿವು ಮೂಡಿಸುವುದು.

೩. ಕೆರೆಯಲ್ಲಿನ ಹೂಳು ತೆಗೆಯುವುದು

೪. ಕೆರೆಯ ಸುತ್ತಲಿನ ಪ್ರದೇಶದ ಸೌಂದರ್ಯ ವೃದ್ಧಿಸುವುದು ಮತ್ತು ಗಿಡಗಳನ್ನು ನೆಟ್ಟು ಹಸಿರಿನ ವಾತಾವರಣ ನಿರ್ಮಿಸುವುದು.

೫. ಕೆರೆಯ ಸುತ್ತಲೂ ಫಲಕ ಹಾಕಿ ಯಾರೂ ತ್ಯಾಜ್ಯ ವಸ್ತುಗಳನ್ನು ಕೆರೆಗೆ ಹಾಕದಂತೆ ನೋಡಿಕೊಳ್ಳುವುದು

ಈ ಉದ್ದೇಶಗಳ ಈಡೇರಿಕೆಗಾಗಿ ಪರಿಸರ ಸಂಘಟನೆಗಳು ಮಹಾನಗರಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ, ನೀರು ಸರಬರಾಜು ಮಂಡಳಿ, ಅರಣ್ಯ ಇಲಾಖೆ ಹಾಗೂ ತೋಟಗಾರಿಕಾ ಇಲಾಖೆಗಳ ನೆರವನ್ನು ಪಡೆಯುವ ಪ್ರಯತ್ನವನ್ನು ಮಾಡುತ್ತಿದ್ದಾವೆ. ಆದರೆ ಇದು ಕಷ್ಟದ ಕೆಲಸ. ಏಕೆಂದರೆ ಈ ಇಲಾಖೆಗಳ ನಿರ್ಲಕ್ಷ್ಯದಿಂದಾಗಿಯೇ ಉಣಕಲ್ ಕೆರೆ ಮುಚ್ಚಿ ಹೋಗುವ ಸ್ಥಿತಿಗೆ ಬಂದಿರುವುದು.

ಗದಗ ನಗರದಲ್ಲಿ ಸುಮಾರು ೧೦೩ ಎಕರೆ ಪ್ರದೇಶವನ್ನು ಆವರಿಸಿರುವ ಭೀಷ್ಮಕೆರೆ ವಿವಾದದಲ್ಲಿ ಸಿಲುಕಿದೆ. ಈ ಕೆರೆಯು ಸುಮಾರು ೧೨ನೇ ಶತಮಾನದಲ್ಲಿ ನಿರ್ಮಾಣಗೊಂಡಿತ್ತು. ಗದಗ ನಗರ ಇಂದು ಈ ಕೆರೆಯ ಸುತ್ತಮುತ್ತ ಬೆಳೆದು ನಿಂತಿದೆ. ೧೯೯೨ರಲ್ಲಿ ಗದಗದ ನಗರಾಭಿವೃದ್ಧಿ ಪ್ರಾಧಿಕಾರವು ಇಂದು ಕೊಳಚೆ ಕೆರೆಯಾಗಿರುವ ಭೀಷ್ಮಕೆರೆಯ ೧೫ ಎಕರೆ ಭೂಮಿಯನ್ನು ಬಸ್ ನಿಲ್ದಾಣಕ್ಕೆ ಹಾಗೂ ವಾಣಿಜ್ಯ ಸಂಕೀರ್ಣದ ನಿರ್ಮಾಣದ ಉದ್ದೇಶಕ್ಕೆ ಗುರುತು ಮಾಡಿಕೊಂಡಿತು. ಆದರೆ ಈ ಉದ್ದೇಶವನ್ನು ಪರಿಸರವಾದಿಗಳು ಇಂದಿನವರೆಗೂ ವಿರೋಧಿಸುತ್ತಲೇ ಬಂದಿದ್ದಾರೆ. ಇದೊಂದು ಪುರಾತನ ಕೆರೆ, ಇದರ ರಕ್ಷಣೆ ಅಗತ್ಯವಾಗಿ ಆಗಬೇಕಾಗಿದೆ ಎನ್ನುವುದು ಇವರ ನಿಲುವು. ಅಧಿಕಾರಿಗಳು ಮತ್ತು ರಾಜಕಾರಣಿಗಳ ಪ್ರಕಾರ ನಗರದ ಮಧ್ಯದಲ್ಲಿ ಕೆರೆಯೊಂದು ಹೊಲಸು

ತಂಗುದಾಣವಾಗಿರುವುದು ಅಷ್ಟೇನೂ ಸರಿ ಕಾಣುವುದಿಲ್ಲ, ಮತ್ತು ಈ ಕೆರೆಯ ನಿರರ್ಥಕ ಭಾಗವನ್ನು ಮಾತ್ರ ನಗರದ ಸೌಂದರ್ಯವನ್ನು ಹೆಚ್ಚಿಸಲು ಉಪಯೋಗಿಸಲಾಗುತ್ತದೆ, ಇದರಿಂದ ಕೆರೆಯ ಸೌಂದರ್ಯವೂ ಹೆಚ್ಚಾಗುತ್ತದೆ. ಈ ಮಾತಿನಲ್ಲೂ ಸತ್ಯಾಂಶವಿದೆ. ಏಕೆಂದರೆ ನಗರದ ಮಧ್ಯ ಭಾಗದಲ್ಲಿ ಸುಮಾರು ೧೦೩ ಎಕರೆ ಪ್ರದೇಶವನ್ನು ಈ ಕೆರೆ ಆವರಿಸಿಕೊಂಡಿದೆ. ಕೆರೆಯನ್ನು ನಿರ್ಮಾಣ ಮಾಡಿದ ಸಂದರ್ಭದಲ್ಲಿ ಭೂಮಿಯ ಅವಶ್ಯಕತೆ ಅಷ್ಟಾಗಿ ಇರಲಿಲ್ಲ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಕೆರೆಯ ನೀರು ನಿಲ್ಲದೆ ಇರುವ ಪ್ರದೇಶವನ್ನು ನಗರದ ಅಭಿವೃದ್ಧಿಗೆ ಉಪಯೋಗಿಸಿಕೊಂಡರೆ ತಪ್ಪಿಲ್ಲ. ಆದರೆ ಇದು ಪ್ರಾಮಾಣಿಕ ಪ್ರಯತ್ನವಾಗಿರಬೇಕು. ಅದೇ ರೀತಿ ಪರಿಸರವಾದಿಗಳ ಚರ್ಚೆಯ ಕುರಿತಾಗಿಯೂ ವಿಶ್ಲೇಷಣೆ ನಡೆಸಬೇಕಾಗುತ್ತದೆ. ಇತಿಹಾಸಪ್ರಸಿದ್ಧ ಅಥವಾ ಧಾರ್ಮಿಕ ಮಹತ್ವ ಪಡೆದಿರುವ ಕೆರೆಗಳನ್ನು ಆ ಕಾರಣಕ್ಕಾಗಿ ಮಾತ್ರ ಉಳಿಸಬೇಕೆನ್ನುವ ವಾದದಲ್ಲಿ ಹುರುಳಿಲ್ಲ. ಇದು ಗದಗಿನ ಕೆರೆಗೆ ಸಂಬಂಧಿಸಿದ ಪ್ರಶ್ನೆಯಾಗಿರದೆ ಒಟ್ಟು ಉತ್ತರ ಕರ್ನಾಟಕದಾದ್ಯಂತ ಇರುವ ಕೆರೆಗಳಿಗೆ ಸಂಬಂಧಿಸಿದ್ದಾಗಿದೆ. ಕೆಲವು ಧಾರ್ಮಿಕವಾದಿಗಳನ್ನು ಪರಿಸರವಾದಿಗಳೆಂದು ತಪ್ಪಾಗಿ ಅರ್ಥೈಸಿಕೊಂಡಿರುವುದೇ ಇದಕ್ಕೆ ಕಾರಣ.

ಕೆರೆಗಳು ಕೇವಲ ನಗರಗಳಿಗೆ ನೀರುಣಿಸುವ ಕೇಂದ್ರಗಳಾಗಿರದೆ ಕೃಷಿಯಲ್ಲಿ ಇವುಗಳ ಮಹತ್ವ ಅಡಗಿದೆ. ಉತ್ತರ ಕರ್ನಾಟಕದಲ್ಲಿ ರೈತರು ಕೆರೆ ಮತ್ತು ಜಲಾಶಯಗಳನ್ನೇ ತಮ್ಮ ಕೃಷಿಗಾಗಿ ಅವಲಂಬಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಸುಮಾರು ೩೮,೦೦೦ ಕೆರೆಗಳಿದ್ದು ಇನ್ನೂ ಅನೇಕ ಕೆರೆಗಳು ನಿರ್ಮಾಣಗೊಳ್ಳುತ್ತಿವೆ. ಅದೇ ರೀತಿ ಹಿಂದಿದ್ದ ಅನೇಕ ಕೆರೆಗಳು ಕಣ್ಮರೆಯಾಗುತ್ತಿವೆ. ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಕೆರೆಗಳು ಅನೇಕ ಸಮಸ್ಯೆಗಳನ್ನು ತಂದೊಡ್ಡಿವೆ. ಉದಾಹರಣೆಗೆ, ಬೀದರ್‌ನಲ್ಲಿ ಕೆರೆಗಳ ಪುನರ್ ನಿರ್ಮಾಣ ಸಂದರ್ಭದಲ್ಲಾದ ಘಟನೆಗಳು. ಬೀದರ್‌ನ ಜಮಿಸ್ತಾನಪುರ ಮತ್ತು ಹೊಕರಾಣ ಕೆರೆಗಳನ್ನು ಪುನರ್ ನಿರ್ಮಿಸಲಾಯಿತು. ಜಮಿಸ್ತಾನಪುರ ಕೆರೆ ಯೋಜನೆಗೆ ೧೯೮೭ರಲ್ಲಿ ಮಂಜೂರಾತಿ ದೊರಕಿತ್ತು. ಆದರೆ ನಿರ್ಮಾಣಕಾರ್ಯದ ಸಂದರ್ಭದಲ್ಲಿ ಭೂಮಿ ಮುಳುಗಡೆಯಾಗುವ ಪ್ರದೇಶದ ಜನರ ತೀವ್ರ ವಿರೋಧವನ್ನು ಎದುರಿಸಬೇಕಾಯಿತು. ಭೂಮಾಲೀಕರು ಪರಿಹಾರಕ್ಕೆ ಒತ್ತಾಯಿಸಿ ನಿರ್ಮಾಣಕಾರ್ಯಕ್ಕೆ ಅಡ್ಡಿಯುಂಟು ಮಾಡಿದರು. ಹೊಕರಾಣ ಕೆರೆ ಯೋಜನೆಯೂ ಇದೇ ರೀತಿಯ ವಿರೋಧವನ್ನು ಎದುರಿಸಿತು. ಮುಳುಗಡೆ ಪ್ರದೇಶದ ರೈತರು ಭೂಮಿಯನ್ನು ತೆರವು ಮಾಡಲು ಸಿದ್ಧರಿರಲಿಲ್ಲ. ಏಕೆಂದರೆ ಸರಕಾರದ ಪುನರ್ವಸತಿ ಯೋಜನೆಯಲ್ಲಿ ರೈತರಿಗೆ ವಿಶ್ವಾಸವಿರಲಿಲ್ಲ. ಆದರೂ ೧೯೯೬ರಲ್ಲಿ ನಬಾರ್ಡ್ ಬ್ಯಾಂಕ್‌ನ ನೆರವಿನಿಂದ ನಿರ್ಮಾಣ ಕಾರ್ಯಗಳು ನಡೆದವು. ಆದರೆ ರೈತರಿಗೆ ಯೋಗ್ಯ ಪರಿಹಾರ ದೊರೆಯಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಕರ್ತವ್ಯ ಮುಗಿದಿದೆ ಎಂದು ಭಾವಿಸಿ ಸುಮ್ಮನಿರುವುದು ಸ್ಥಳೀಯರು ತೀವ್ರ ಹೋರಾಟ ನಡೆಸುವಂತೆ ಮಾಡಿತು.

೩.೧೫. ಹರಿಹರ ಪಾಲಿಫೈಬರ್ ಕಾರ್ಖಾನೆ

ಪಾಲಿಫೈಬರ್ ಕಾರ್ಖಾನೆ ನಿರ್ಮಾಣಗೊಳ್ಳುವ ಹಂತದಲ್ಲಿ ರಾಜ್ಯಾದ್ಯಂತ ಪ್ರತಿಭಟನೆಗಳು ಕಾಣಿಸಿಕೊಂಡವು. ಬಿರ್ಲಾ ಮೂಲದ ಈ ಉದ್ದಿಮೆ ಪ್ರತಿಭಟನೆಗಳನ್ನು

ಎದುರಿಸುವಲ್ಲಿ ಯಶಸ್ವಿಯಾಯಿತು. ಕಾಮಗಾರಿಯೂ ಪೂರ್ಣಗೊಂಡಿತು. ಆದರೂ ಹರಿಹರ ಮತ್ತು ದಾವಣಗೆರೆಯಲ್ಲಿ ನಿರಂತರವಾಗಿ ಈ ಕಾರ್ಖಾನೆಯ ವಿರುದ್ಧ ಚಳವಳಿಗಳು ನಡೆಯುತ್ತಿವೆ. ಪಾಲಿಫೈಬರ್ ಮತ್ತು ಗ್ರಾಸಿವರ್ ಕಾರ್ಖಾನೆಗಳು ತುಂಗಭದ್ರಾ ನದಿಯನ್ನು ಅವಲಂಬಿಸಿಕೊಂಡಿರುವುದೇ ಚಳವಳಿಗಳಿಗೆ ಮೂಲಕಾರಣ. ತುಂಗಭದ್ರಾ ನದಿಯ ನೀರು ಮಾಲಿನ್ಯಕ್ಕೊಳಗಾಗುತ್ತಿದೆ ಎನ್ನುವುದು ಇವರ ವಾದ. ವಾಯುಮಾಲಿನ್ಯ ಮತ್ತು ಜಲಮಾಲಿನ್ಯವನ್ನು ಉಂಟುಮಾಡುವ ಈ ಕಾರ್ಖಾನೆಯನ್ನು ಮುಚ್ಚಬೇಕೆಂದು ಈಗಾಗಲೇ ಅನೇಕ ಪರಿಸರ ಸಂಘಟನೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಸರಕಾರಕ್ಕೆ ಎಚ್ಚರಿಕೆಯ ಮನವಿಯನ್ನು ಸಲ್ಲಿಸಿವೆ. ಆದರೆ ಇವು ಎಚ್ಚರಿಕೆ ಮೂಡಿಸುವ ಬದಲು ಸಂಬಂಧಪಟ್ಟ ಕಡತಗಳಿಗೂ ಸೇರಲಿಲ್ಲ. ರಾಜಕಾರಣಿಗಳು, ಅಧಿಕಾರಿಗಳು ಮತ್ತು ಸರಕಾರಿ ತಂತ್ರಜ್ಞರ ತೀರ್ಮಾನವೇ ಅಂತಿಮವಾಗಿರುವುದರಿಂದಾಗಿ ಹರಿಹರ ಮತ್ತು ದಾವಣಗೆರೆಯಲ್ಲಿನ ಚಳವಳಿಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿಲ್ಲ. ಚಳವಳಿಯೊಳಗಿನ ಆಂತರಿಕ ಭಿನ್ನತೆಗಳೂ ಇದಕ್ಕೆ ಕಾರಣವಾಗಿವೆ.

ಪಾಲಿಫೈಬರ್ ಕಾರ್ಖಾನೆಯು ವಿಷಪೂರಿತ ಕೊಳಕು ನೀರನ್ನು ತುಂಗಭದ್ರಾ ನದಿಗೆ ಹರಿಬಿಟ್ಟಿದ್ದರಿಂದಾಗಿ ತುಂಗಭದ್ರಾ ನದಿಯ ಮೀನುಗಳೆಲ್ಲ ಸತ್ತವು ಎನ್ನುವ ವರದಿ ವ್ಯಾಪಕ ಜನಪ್ರತಿಭಟನೆಗೆ ಕಾರಣವಾಯಿತು. ಕೃಷಿಕರು, ಮೀನುಗಾರರು ಹಾಗೂ ನಗರವಾಸಿಗಳೂ ಸೇರಿದಂತೆ ಬೃಹತ್ ಸಂಖ್ಯೆಯಲ್ಲಿ ಸೇರಿ ಈ ಘಟನೆಯ ವಿರುದ್ಧ ಕಾರ್ಖಾನೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಆದರೆ ಕಾರ್ಖಾನೆಯ ಮಾಲೀಕರು ಈ ಪ್ರಕರಣಕ್ಕೆ ಬೇರೆಯೇ ಕಾರಣವನ್ನು ನೀಡಿದರು. ಅವರ ಪ್ರಕಾರ ಇದು ದುಷ್ಕರ್ಮಿಗಳು ಮಾಡಿರುವ ಕೆಲಸ. ವಿಮಾನದಿಂದ ನದಿಗೆ ವಿಷವನ್ನು ಚಿಮುಕಿಸಿ ಮೀನುಗಳು ಸಾಯುವಂತೆ ಮಾಡಲಾಗಿದೆ, ಇದರಲ್ಲಿ ಕಾರ್ಖಾನೆಯ ಯಾವ ಕೈವಾಡವೂ ಇಲ್ಲ ಎಂದು ಸ್ಪಷ್ಟಪಡಿಸಿದರು. ಪ್ರಭಾವಿ ವಕೀಲರ ಸಹಾಯದಿಂದ ಮಾಲೀಕರ ಈ ವಾದ ನ್ಯಾಯ ಮಂಡಲಿಯಲ್ಲಿ ಗಟ್ಟಿಯಾಗಿ ಉಳಿಯಿತು. ಈ ರೀತಿಯ ಅನೇಕ ಘಟನೆಗಳು, ವಿರೋಧಗಳು ಕಾರ್ಖಾನೆಯ ಚರಿತ್ರೆಯಲ್ಲಿ ನಡೆದಿವೆ. ಅವುಗಳಲ್ಲಿ ಅನೇಕ ಹೋರಾಟಗಳು ಕಾಣಿಸಿಕೊಂಡಷ್ಟೇ ವೇಗದಲ್ಲಿ ಮರೆಯಾಗಿ ಹೋಗಿದ್ದಾವೆ. ಧಾರವಾಡದ ಸಮಾಜ ಪರಿವರ್ತನ ಸಮುದಾಯವು ಹರಿಹರದ ಪಾಲಿಫೈಬರ್ ಮತ್ತು ಗ್ರಾಸಿವರ್ ಕಾರ್ಖಾನೆಗಳು ತುಂಗಭದ್ರಾ ನದಿಯ ನೀರನ್ನು ಮಾಲಿನ್ಯಗೊಳಿಸುವುದರ ವಿರುದ್ಧ ಚಳವಳಿ ನಡೆಸುತ್ತಿದೆ.

೩.೧೬. ಹಟ್ಟಿ ಚಿನ್ನದ ಗಣಿ ಯೋಜನೆ

ಕರ್ನಾಟಕದಲ್ಲಿ ಕೋಲಾರ ಮತ್ತು ರಾಯಚೂರಿನ ಹಟ್ಟಿ ಚಿನ್ನದ ನಿಕ್ಷೇಪಕ್ಕೆ ಹೆಸರುವಾಸಿಯಾಗಿವೆ. ಕೋಲಾರದ ಚಿನ್ನದ ಗಣಿಯಿಂದ ಕಳೆದ ಒಂದು ಶತಮಾನದಿಂದ ನಿರಂತರವಾಗಿ ಚಿನ್ನವನ್ನು ಪಡೆಯಲಾಗಿದೆ. ಈಗ ಚಿನ್ನ ಸಿಗುವ ಪ್ರಮಾಣ ತುಂಬಾ ಕಡಿಮೆಯಾಗಿ ತ್ಯಾಜ್ಯದ ಪ್ರಮಾಣ ಅಧಿಕವಾಗಿದೆ. ಈ ತ್ಯಾಜ್ಯದ ದೊಡ್ಡ ಬೆಟ್ಟಗಳೇ ನೂರಾರು ಹೆಕ್ಟೇರ್ ಪ್ರದೇಶದಲ್ಲಿ ಹರಡಿಕೊಂಡಿವೆ. ರಾಯಚೂರಿನ ಹಟ್ಟಿಯೂ ಇದಕ್ಕೆ ಹೊರತಾಗಿಲ್ಲ. ಎರಡೂ ಪ್ರದೇಶಗಳಲ್ಲಿಯೂ ಚಿನ್ನದ ಗಣಿಗಾರಿಕೆಯಿಂದಾಗುವ ಪರಿಸರ ಮಾಲಿನ್ಯದ ವಿರುದ್ಧ ಪರಿಸರ ಸಂಘಟನೆಗಳು ಧ್ವನಿ ಎತ್ತುತ್ತಲೇ ಇವೆ. ಗಣಿ ಅದಿರಿನ

ತ್ಯಾಜ್ಯ ಹತ್ತಿರದ ಹೊಲಗದ್ದೆ, ಕೆರೆ ಕಾಲುವೆಗಳಿಗೆ ಹರಿದು ಸುತ್ತಮುತ್ತಲಿನ ಪರಿಸರವನ್ನು ಮಲಿನಗೊಳಿಸಿವೆ. "ನಮ್ಮ ಜಿಲ್ಲೆಯಲ್ಲಿ ಚಿನ್ನದ ಗಣಿಯಿರುವುದು ನಮಗೆ ಹೆಮ್ಮೆ ತಂದಿದೆ. ಆದರೆ ಚಿನ್ನದ ನಾಡು ಮಲಿನಗೊಳ್ಳುತ್ತಿರುವುದು ದುಃಖದ ಸಂಗತಿ," ಇದು ಸ್ಥಳೀಯ ನಿವಾಸಿಗಳ ಮಾತು. ಹಟ್ಟಿ ಚಿನ್ನದ ಗಣಿ ಆಡಳಿತ ಮಂಡಳಿಯು ಗಣಿಗಾರಿಕೆಯ ಆಧುನೀಕರಣ, ವಿಸ್ತರಣೆ ಹಾಗೂ ಯಾಂತ್ರೀಕರಣ ಯೋಜನೆಯನ್ನು ಸಿದ್ಧಪಡಿಸಿತು. ಹಟ್ಟಿಯಲ್ಲಿ ಸದ್ಯಕ್ಕೆ ಪ್ರತಿದಿನ ೧೦೦೦ ಟನ್ ಅದಿರು ಅರೆಯುತ್ತಿದ್ದು ಹೆಚ್ಚುವರಿಯಾಗಿ ೧೦೦೦ ಟನ್ ಅರೆಯುವ ಪ್ರಸ್ತಾಪವನ್ನು ಮಂಡಳಿಯು ಮುಂದಿಟ್ಟಿತು. ಪರಿಸರ ಇಲಾಖೆಯ ಅನುಮತಿ ಸಿಗುವುದು ಕಷ್ಟದ ಕೆಲಸವಲ್ಲವಾದರೂ ಸ್ಥಳೀಯ ನಿವಾಸಿಗಳನ್ನು ಒಪ್ಪಿಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಪರಿಸರ ಸಂರಕ್ಷಣೆಯ ಎಲ್ಲಾ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವ ಭರವಸೆಯನ್ನು ನೀಡಲಾಯಿತು. ಈ ಯೋಜನೆಯ ಸಂಬಂಧವಾಗಿ ಹುಟ್ಟಿಕೊಂಡ ಇನ್ನೊಂದು ಪ್ರಶ್ನೆ ಪುನರ್ವಸತಿಗೆ ಸಂಬಂಧಿಸಿದ್ದು. ಉದ್ದೇಶಿತ ಯೋಜನೆಗೆ ಹೆಚ್ಚುವರಿ ಜಮೀನಿನ ಅವಶ್ಯಕತೆ ಇದೆ. ಜಮೀನನ್ನು ಸ್ವಾಧೀನ ಪಡಿಸಿಕೊಂಡ ನಂತರ ಪುನರ್ವಸತಿಗೆ ಸಂಸ್ಥೆಯ ಕಾರ್ಯಸೂಚಿಯಲ್ಲಿ ಆದ್ಯತೆ ಇದೆಯೇ ಎನ್ನುವುದು ಪ್ರಶ್ನಾರ್ಹವಾಗಿದೆ. ಏಕೆಂದರೆ ಕರ್ನಾಟಕದ ಯಾವ ಪ್ರದೇಶದಲ್ಲೂ ಪುನರ್ವಸತಿ ಕಾರ್ಯ ಯಶಸ್ವಿಯಾಗಿ ನಡೆದಿಲ್ಲ.

೩.೧೭. ಬೀದರ್ ಕೈಗಾರಿಕಾ ಪ್ರದೇಶ

ಕರ್ನಾಟಕದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲೂ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇವರಲ್ಲಿ ಸ್ಥಳೀಯ ಉದ್ಯಮಿಗಳ ಪಾಲು ತುಂಬಾ ಕಡಿಮೆ. ಹೊರರಾಜ್ಯಗಳ ಹಾಗೂ ಹೊರರಾಷ್ಟ್ರಗಳ ಉದ್ಯಮಿಗಳು ಕೈಗಾರಿಕಾ ಪ್ರದೇಶದ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದಾರೆ. ಆದರೆ ಇದೊಂದು ಅವಸರದ ನಿರ್ಣಯವಾಗಿದ್ದು ವ್ಯವಸ್ಥಿತ ಅಭಿವೃದ್ಧಿಗೆ ದಾರಿಮಾಡಿಕೊಟ್ಟಿಲ್ಲ. ಕರ್ನಾಟಕದಲ್ಲಿರುವ ಹೆಚ್ಚಿನ ಎಲ್ಲಾ ಕೈಗಾರಿಕಾ ಪ್ರದೇಶಗಳ ಸ್ಥಿತಿಯೂ ಇದೇ ಆಗಿದೆ. ಹೊಸದಾಗಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುವಾಗ ಸಂಬಂಧಿಸಿದ ಇಲಾಖೆಗಳು ಹಾಗೂ ಆಡಳಿತವರ್ಗದ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನ ಆರಂಭಿಕ ಹಂತದಲ್ಲೇ ಸಮಸ್ಯೆಗಳು ಕಾಣಿಸಿಕೊಳ್ಳುವಂತೆ ಮಾಡುತ್ತವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಬೀದರ್ ಕೈಗಾರಿಕಾ ಪ್ರದೇಶ. ಬೀದರ್ ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆ. ೧೯೮೩ರಲ್ಲಿ ಕೇಂದ್ರ ಸರಕಾರ ಬೀದರ್ ಜಿಲ್ಲೆಯನ್ನು ಕೈಗಾರಿಕಾ ರಹಿತ ಜಿಲ್ಲೆ ಎಂಬುದಾಗಿ ಘೋಷಿಸಿತು. ಇದರ ನಂತರ ಬೀದರ್‌ನಲ್ಲಿ ಕೈಗಾರಿಕೀಕರಣ ಪ್ರಕ್ರಿಯೆ ಕಾಣಿಸಿಕೊಳ್ಳಲಾರಂಭಿಸಿತು. ಬೀದರ್‌ನ ಕೋಳಾರ ಮತ್ತು ನೌಬಾದ್ ಗ್ರಾಮಗಳನ್ನು ಕೈಗಾರಿಕಾ ಪ್ರದೇಶವಾಗಿ ಅಭಿವೃದ್ಧಿಪಡಿಸಲಾಯಿತು. ಈ ಅಭಿವೃದ್ಧಿ ಕಾರ್ಯಕ್ಕಾಗಿ ಆ ಗ್ರಾಮಗಳಲ್ಲಿನ ನಿವಾಸಿಗಳನ್ನು ಒಕ್ಕಲೆಬ್ಬಿಸಲಾಯಿತು. ನಿರಾಶ್ರಿತರಿಗೆ ಸೂಕ್ತ ಪರಿಹಾರ ಮತ್ತು ಪುನರ್ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಡುವಲ್ಲಿ ಸಂಬಂಧಿಸಿದ ಅಧಿಕಾರಿಗಳು ಆಸಕ್ತಿ ತೋರಿಸಲಿಲ್ಲ. ಇದು ಅಲ್ಲಿನ ಜನರಿಗಾದ ಅಭಿವೃದ್ಧಿಯ ಮೊದಲ ಪಾಠ. ಸುಮಾರು ೧೫ ರಾಸಾಯನಿಕ ಹಾಗೂ ಔಷಧಿ ಉತ್ಪಾದನಾ ಕಾರ್ಖಾನೆಗಳು ಬೀದರ್ ಕೈಗಾರಿಕಾ ಪ್ರದೇಶದಲ್ಲಿ ಕೆಲಸ

ನಿರ್ವಹಿಸಲಾರಂಭಿಸಿದವು. ಇವು ಆರಂಭಿಕ ಹಂತದಲ್ಲಿಯೇ ಪರಿಸರ ಮಾಲಿನ್ಯ ನಿವಾರಣೆಗೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಂಡಿರಲಿಲ್ಲ ಹಾಗೂ ನೀರು ಶುದ್ಧೀಕರಣ ಘಟಕವನ್ನೂ ಅಳವಡಿಸಿಕೊಂಡಿರಲಿಲ್ಲ. ಆದರೂ ಅವುಗಳ ವಿರುದ್ಧ ಕಾಣಿಸಿಕೊಂಡ ಮೊದಲ ಹಂತದ ಪ್ರತಿಭಟನೆ ತೀವ್ರ ಸ್ವರೂಪವನ್ನು ಪಡೆದುಕೊಂಡಿರಲಿಲ್ಲ.

ಕೈಗಾರಿಕೆಗಳನ್ನು ಸ್ಥಾಪಿಸಿ ಅಭಿವೃದ್ಧಿ ಸಾಧಿಸುವ ಹುಮ್ಮಸ್ಸಿನಲ್ಲಿ ಸುತ್ತಲಿನ ಪರಿಸರವನ್ನು ಶೋಷಣೆಗೊಳಪಡಿಸಲಾಯಿತು. ೧೯೯೧ರಲ್ಲಿ ಕೈಗಾರಿಕಾ ಪ್ರದೇಶದ ಹತ್ತಿರವಿರುವ ಚಾಮಪುರ ಕೆರೆಗೆ ನೀರು ಕುಡಿಯಲು ಹೋದ ನೂರಾರು ಆಕಳುಗಳು, ಕುರಿಗಳು, ಎಮ್ಮೆಗಳು ಸತ್ತುಹೋದವು. ಕೈಗಾರಿಕೆಗಳ ವಿಷಪೂರಿತ ನೀರು ಕೆರೆಯನ್ನು ಸೇರಿರುವುದೇ ಇದಕ್ಕೆ ಕಾರಣ. ಇದರಿಂದ ಸಿಟ್ಟಿಗೆದ್ದ ಗ್ರಾಮಸ್ಥರು ಸತ್ತುಹೋದ ತಮ್ಮ ಜಾನುವಾರುಗಳ ಮೃತದೇಹಗಳನ್ನು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ರಾಶಿ ಹಾಕಿ ಪ್ರದರ್ಶನವನ್ನು ನಡೆಸಿದರು. ಆದರೆ ಇದರಲ್ಲೂ ಗ್ರಾಮಸ್ಥರಿಗೆ ನ್ಯಾಯದೊರಕಲಿಲ್ಲ. ಈ ಘಟನೆಯಾದ ಕೆಲವು ವರ್ಷಗಳ ಬಳಿಕ ಇಬ್ಬರು ಕಾರ್ಮಿಕರು ಕಾರ್ಖಾನೆಯ ವಿಷ ಗಾಳಿ ಸೇವಿಸಿ ಮೃತರಾದರು. ಅವರ ಕುಟುಂಬಗಳಿಗೆ ನ್ಯಾಯಬದ್ಧ ಪರಿಹಾರವೂ ಸಿಗಲಿಲ್ಲ. ಕರ್ನಾಟಕ ವಿಮೋಚನಾ ರಂಗವು ಬೀದರ್ ಕೈಗಾರಿಕಾ ಪ್ರದೇಶದ ಅವ್ಯವಸ್ಥೆಯನ್ನು ಖಂಡಿಸಿ ಚಳವಳಿ ಪ್ರಾರಂಭಿಸಿತು. ಬಂಜಗೆರೆ ಜಯಪ್ರಕಾಶ್, ಸಿರಿಮನೆ ನಾಗರಾಜ್, ಸಂಜೀವ ಕುಮಾರ್ ಹಾಗೂ ಇನ್ನೂ ಅನೇಕ ಪರಿಸರ ಪ್ರೇಮಿಗಳು ಚಳವಳಿಯಲ್ಲಿ ಭಾಗವಹಿಸಿದರು. ಪೊಲೀಸ್ ಪಡೆಗಳ ಪ್ರವೇಶ ಚಳವಳಿಯನ್ನು ಹಿಂಸಾತ್ಮಕಗೊಳಿಸಿತು. ಪರಿಸರ ಮಾಲಿನ್ಯ ನಿಯಂತ್ರಣ ಕಾನೂನು ಕಾಯಿದೆಗಳನ್ನು ತಿರಸ್ಕರಿಸಿದ ಕೈಗಾರಿಕೆಗಳನ್ನು ಶಾಶ್ವತವಾಗಿ ಮುಚ್ಚುವಂತೆ ಚಳವಳಿಗಾರರು ಸರಕಾರವನ್ನು ಆಗ್ರಹಿಸಿದರು. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯವೈಖರಿಯನ್ನು ಮತ್ತು ನಿಷ್ಕ್ರಿಯತೆಯನ್ನು ತೀವ್ರವಾಗಿ ವಿರೋಧಿಸಲಾಯಿತು. ಮಾಲಿನ್ಯವನ್ನುಂಟು ಮಾಡಿದ ಕೈಗಾರಿಕೆಗಳ ಗೇಟುಗಳಿಗೆ ಬೀಗಮುದ್ರೆ ಜಡಿಯುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಚಳವಳಿಯ ಪರಿಣಾಮವಾಗಿ ೧೯೯೫ರಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ನಾಲ್ಕು ಕೈಗಾರಿಕೆಗಳನ್ನು ಮುಚ್ಚುವಂತೆ ಆದೇಶಿಸಿತು. ಇನ್ನುಳಿದ ಕೈಗಾರಿಕೆಗಳು ನೀರು ಶುದ್ಧೀಕರಣ ಘಟಕವನ್ನು ಸ್ಥಾಪಿಸಲು ಒಪ್ಪಿಕೊಂಡವು.

ಮಂಡಳಿಯು ಯಾವುದೇ ಕ್ರಮಗಳನ್ನು ಕೈಗೊಂಡರೂ ಈಗಾಗಲೇ ಕಲುಷಿತವಾದ ಅಂತರ್ಜಲವನ್ನು ನಿರ್ಮಲಗೊಳಿಸಲು ಸಾಧ್ಯವಿಲ್ಲ. ಅದೇರೀತಿ ಯೋಜನೆಯಿಂದಾಗಿ ಪ್ರಾಣವನ್ನು ಕಳೆದುಕೊಂಡ ಕಾರ್ಮಿಕರಿಗೆ ಹಾಗೂ ಜಾನುವಾರುಗಳಿಗೆ ಪುನರ್ಜನ್ಮವನ್ನು ನೀಡಲೂ ಸಾಧ್ಯವಿಲ್ಲ. ಬೀದರ್ ಕೈಗಾರಿಕಾ ಪ್ರದೇಶದ ಸ್ಥಾಪನೆಯಿಂದ ಉಂಟಾದ ಪರಿಸರ ಮಾಲಿನ್ಯವನ್ನು ವಿರೋಧಿಸಿ ಅನೇಕ ಸಮಿತಿಗಳು ಕೆಲಸ ಮಾಡಿವೆ. ಅವುಗಳಲ್ಲಿ ಕೋಳಾರ್ ಕೈಗಾರಿಕಾ ಪ್ರದೇಶ ಗ್ರಾಮೀಣ ಹೋರಾಟ ಸಮಿತಿಯೂ ಒಂದು. ಇದು ನೌಬಾದ್ ಮತ್ತು ಕೋಳಾರ ಕೈಗಾರಿಕಾ ಪ್ರದೇಶದಲ್ಲಿರುವ ರಾಸಾಯನಿಕ ಘಟಕಗಳ ತ್ಯಾಜ್ಯ ವಸ್ತುಗಳಿಂದಾಗಿ ಉಂಟಾಗುತ್ತಿರುವ ಪರಿಸರ ಮಾಲಿನ್ಯದಿಂದ ಈ ಭಾಗದ ಜನರು ತೀವ್ರ ತೊಂದರೆಯಲ್ಲಿ ಸಿಲುಕಿರುವ ಬಗ್ಗೆ ಆತಂಕ ವ್ಯಕ್ತಪಡಿಸಿತು. ಸಮಿತಿಯ ರಾಮಚಂದ್ರ,

ಬಂಡೆಪ್ಪ, ರಾಮಶೆಟ್ಟಿ, ವೀರೇಂದ್ರಕುಮಾರ್ ಹಾಗೂ ಇನ್ನಿತರರು ಕೈಗಾರಿಕಾ ಪ್ರದೇಶದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಯಾವುದೇ ಕ್ರಮವನ್ನೂ ಕೈಗೊಳ್ಳದಿರುವುದನ್ನು ತೀವ್ರವಾಗಿ ವಿರೋಧಿಸಿದರು. ರಾಸಾಯನಿಕ ಘಟಕಗಳು ಹೊರಬಿಡುತ್ತಿರುವ ವಿಷಯುಕ್ತ ತ್ಯಾಜ್ಯ ವಸ್ತುಗಳಿಂದಾಗಿ ಈ ಭಾಗದ ಸುಮಾರು ೩೫ ಸಾವಿರ ಜನರು ಮತ್ತು ಸುಮಾರು ೫,೦೦೦ ಎಕರೆಗೂ ಅಧಿಕ ಭೂಮಿ ಅಪಾಯದಲ್ಲಿದೆ ಎಂಬ ಆತಂಕವನ್ನು ಸಮಿತಿಯು ವ್ಯಕ್ತಪಡಿಸಿತು.

ಕೈಗಾರಿಕಾ ಪ್ರದೇಶದ ಸುತ್ತಮುತ್ತಲಿನ ಭೂಮಿಯ ಫಲವತ್ತತೆ ಹಾಳಾಗಿ ಮಾಲಿನ್ಯವೂ ಉಂಟಾಗಲು ಕಾರ್ಖಾನೆಗಳ ವಿಷ ಮಿಶ್ರಿತ ಕಲ್ಮಶಗಳೇ ಪ್ರಮುಖ ಕಾರಣ. ಕಾರಂಜಾ ರಬ್ಬರ್ ಕಾರ್ಖಾನೆ ಹಾಗೂ ಇನ್ನಿತರ ಘಟಕಗಳು ರಾತ್ರಿ ಸಮಯದಲ್ಲಿ ದುರ್ವಾಸನೆಯುಳ್ಳ ಹೊಗೆ ಬಿಡುವುದರಿಂದ ಇಡೀ ವಾತಾವರಣ ದುರ್ಗಂಧದಿಂದ ತುಂಬಿ ಸುತ್ತಲಿನ ನಿವಾಸಿಗಳು ದಿನನಿತ್ಯವೂ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಈ ಕುರಿತು ಗ್ರಾಮೀಣ ಹೋರಾಟ ಸಮಿತಿಯು ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಪತ್ರ ಸಲ್ಲಿಸಿತು. ಆದರೆ ಇಲ್ಲಿಯವರೆಗೆ ಯಾವ ಪ್ರಯೋಜನವೂ ಆಗಲಿಲ್ಲ ಎನ್ನುವುದು ಬೀದರ್ ಕೈಗಾರಿಕಾ ಪ್ರದೇಶವನ್ನು ನೋಡಿದಾಗ ತಿಳಿಯುವ ವಾಸ್ತವ ಸಂಗತಿಯಾಗಿದೆ. ಇದು ಬೀದರ್ ಕೈಗಾರಿಕಾ ಪ್ರದೇಶವೊಂದರ ಚಿತ್ರಣ ಮಾತ್ರವಾಗಿರದೆ ಕರ್ನಾಟಕದ ಇತರ ಎಲ್ಲಾ ಜಿಲ್ಲೆಗಳಲ್ಲಿನ ಕೈಗಾರಿಕಾ ಪ್ರದೇಶಗಳ ಸ್ಥಿತಿಯೂ ಆಗಿದೆ. ಇದು ಅಭಿವೃದ್ಧಿಯ ಉದ್ದೇಶವನ್ನು ಹೊಂದಿದ್ದರೂ ಬಳಸಿದ ವಿಧಾನ ಅಭಿವೃದ್ಧಿಯನ್ನು ಮೊಟಕುಗೊಳಿಸುವಂತದ್ದೇ ಆಗಿದೆ. ಖಾಸಗಿ ವಲಯದ ಬೃಹತ್ ಕಂಪೆನಿಗಳು ಬಂಡವಾಳ ಹೂಡಲು ಹಾತೊರೆಯುತ್ತಿರುವುದು ಈ ಸ್ಥಿತಿಗೆ ಒಂದು ಕಾರಣವಾಗಿ ಕಂಡುಬರುತ್ತದೆ. ಇದರ ವಿರುದ್ಧ ನಡೆಯುವ ಚಳವಳಿಗಳು ಯಾವುದೇ ಒಂದು ಅಂತಿಮ ತೀರ್ಮಾನಕ್ಕೆ ಬರುವಲ್ಲಿ ವಿಫಲವಾಗಿವೆ. ಏಕೆಂದರೆ ಸ್ಥಳೀಯ ಶ್ರೀಮಂತವರ್ಗ, ರಾಜಕೀಯ ಹಾಗೂ ಅಧಿಕಾರಿಗಳ ನಾನಾ ರೀತಿಯ ಹಿತಾಸಕ್ತಿಗಳು ಮತ್ತು ಒತ್ತಡಗಳು ಚಳವಳಿಯ ದಿಕ್ಕನ್ನು ಬದಲಿಸಿವೆ. ಅದೇ ರೀತಿ ಕೈಗಾರಿಕಾ ಪ್ರದೇಶಗಳ ಆಯ್ಕೆ ಮತ್ತು ಉದ್ದಿಮೆಗಳ ಸ್ಥಾಪನೆಯ ಕುರಿತಾದ ನಿರ್ಣಯಗಳು ಬಂಡವಾಳಶಾಹಿ ವ್ಯವಸ್ಥೆಯಿಂದಲೇ ತೀರ್ಮಾನಿಸಲ್ಪಡುತ್ತವೆ. ಇಲ್ಲಿ ಅಭಿವೃದ್ಧಿ ಮತ್ತು ಪರಿಸರ ಕುರಿತ ಪರ-ವಿರೋಧ ನಿಲುವುಗಳ ದ್ವಂದ್ವಾತ್ಮಕ ಚಿತ್ರಣವಷ್ಟೇ ಸಿಗಲು ಸಾಧ್ಯ.

೩.೧೮. ಆಲಮಟ್ಟಿ ಅಣೆಕಟ್ಟು ವಿವಾದ

ಉತ್ತರ ಕರ್ನಾಟಕದಲ್ಲಿ ಪ್ರಮುಖವಾಗಿ ಕೃಷ್ಣಾನದಿ ಯೋಜನೆಯೇ ಇಂದು ಹೆಚ್ಚು ಪ್ರಚಾರದಲ್ಲಿ ಮತ್ತು ಚರ್ಚೆಯಲ್ಲಿ ಇರುವ ವಿಷಯವಾಗಿದೆ. ಉತ್ತರ ಕರ್ನಾಟಕದ ಬರಗಾಲ ಜಿಲ್ಲೆಗಳೆಂದೇ ಹೆಸರಿಸಿರುವ ಬಿಜಾಪುರ, ಗುಲ್ಬರ್ಗಾ ಮತ್ತು ರಾಯಚೂರುಗಳಲ್ಲಿ ಈ ನದಿ ಹರಿಯುತ್ತದೆ. ಅನೇಕ ಬಾರಿ ಅನೇಕ ರೀತಿಯ ಚರ್ಚೆಗಳಿಗೂ ಇದು ಆಸ್ಪದ ಮಾಡಿಕೊಟ್ಟಿದೆ. ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸುವ ವಿಷಯದಲ್ಲಿ ವಿವಾದ ಸೃಷ್ಟಿಯಾಗಿದೆ. ಕರ್ನಾಟಕ ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸಿದರೆ ಆಂಧ್ರಕ್ಕೆ ಇಲ್ಲಿಯವರೆಗೆ ಹೋಗುತ್ತಿದ್ದ ನೀರಿನ ಪ್ರಮಾಣ ಕಡಿಮೆಯಾಗಬಹುದೆಂಬ ಭಯವೇ ಈ ವಿವಾದವನ್ನು ಹುಟ್ಟಿಹಾಕಿದೆ.

ಕೃಷ್ಣಾ ಜಲವಿವಾದ ಮಂಡಳಿ ೧೯೬೯ರಲ್ಲಿ ರಚನೆಗೊಂಡು ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶಗಳು ಎಷ್ಟೆಷ್ಟು ಟಿಎಂಸಿ ನೀರನ್ನು ಬಳಸಿಕೊಳ್ಳಬೇಕೆಂಬುದನ್ನು ತೀರ್ಮಾನಿಸಿತು. ೧೯೭೩ರಲ್ಲಿ ಬಚಾವತ್ ಆಯೋಗ ನೀರು ಹಂಚಿಕೆಯ ವಿಷಯದಲ್ಲಿ ತನ್ನ ತೀರ್ಪನ್ನು ನೀಡಿತು. ಮೂರು ರಾಜ್ಯಗಳೂ ಈ ತೀರ್ಪನ್ನು ಒಪ್ಪಿದವು. ಆದರೆ ಕರ್ನಾಟಕ ನಿಗದಿಪಡಿಸಿದಷ್ಟು ನೀರನ್ನು ಬಳಸಿಕೊಳ್ಳಲಿಲ್ಲ, ಇದರ ೧/೩ ಭಾಗ ಇಂದಿಗೂ ಆಂಧ್ರಪ್ರದೇಶದ ಪಾಲಾಗುತ್ತಿದೆ ಎನ್ನುವುದು ಅಧಿಕಾರಿಗಳ ವಿವರಣೆ. ಇದಕ್ಕಾಗಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ಕಾಮಗಾರಿ ಪ್ರಾರಂಭಗೊಂಡಿತು. ಆದರೆ ಇದೇ ಈ ವಿವಾದಕ್ಕೆ ಕಾರಣವಾಯಿತು. ಇದೊಂದು ಅನಗತ್ಯವಾದ ರಾಜಕೀಯ ಪ್ರೇರಿತ ವಿವಾದ ಎನ್ನುವುದು ಹಲವರ ಅಭಿಪ್ರಾಯ.

ಈ ವಿವಾದವೇ ಪರಿಸರ ಚಳವಳಿಯನ್ನು ಹುಟ್ಟುಹಾಕಿತು. ಇದಕ್ಕೆ ಮುಖ್ಯ ಕಾರಣ ಪುನರ್ವಸತಿ ಸಮಸ್ಯೆ. ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದಾಗಿ ಅನೇಕ ಹೆಕ್ಟೇರ್ ಭೂಪ್ರದೇಶ ಮುಳುಗಡೆಯಾಗಿದ್ದು, ಪುರ್ವಸತಿ ಸಮಸ್ಯೆ ಇನ್ನೂ ಬಗೆಹರಿದಿಲ್ಲ, ಪುನರ್ವಸತಿ ಕ್ರಮಗಳು ಕುಂಟಿತಗೊಂಡಿದೆ ಎನ್ನುವುದು ನಿರಾಶ್ರಿತರ ಅಳಲು. ಆದ್ದರಿಂದ ಪುನರ್ವಸತಿಗೆ ಮೊದಲ ಆದ್ಯತೆ ನೀಡಬೇಕು, ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು, ಇದಾದ ನಂತರ ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡಿ ಎನ್ನುವುದು ನಿರಾಶ್ರಿತರ ಸಲಹೆ. ಈ ರೀತಿ ಮಾಡಿದಾಗ ಮಾತ್ರ ಉತ್ತರ ಕರ್ನಾಟಕದ ಪ್ರಗತಿ ಸಾಧ್ಯ ಎನ್ನುವುದು ಚಳವಳಿಕಾರರ ಅಭಿಪ್ರಾಯ. ಪುನರ್ವಸತಿ ಒದಗಿಸುವುದು ಅತಿ ಕ್ಲಿಷ್ಟವಾದ ಮತ್ತು ಸೂಕ್ಷ್ಮ ವಿಷಯವಾಗಿದ್ದು, ರಾಜಕಾರಣಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಹಗುರವಾಗಿ ಮಾತನಾಡುತ್ತಿರುವುದು ಚಳವಳಿಕಾರರನ್ನು ಸಿಟ್ಟುಗೊಳಿಸಿದೆ. ಆಲಮಟ್ಟಿ ಅಣೆಕಟ್ಟಿನಿಂದಾಗಿ ಮುಳುಗಡೆಯಾಗುವ ಬಾಗಲಕೋಟೆ ಇಂದು ಸಮಸ್ಯೆಯ ಆಗರವಾಗಿದೆ. ದಿನಕ್ಕೊಂದು ರೀತಿಯ ಸುದ್ದಿಗಳು ಸೃಷ್ಟಿಯಾಗುತ್ತಿವೆ. ಬಾಗಲಕೋಟೆ ನಗರದ ಸಂತ್ರಸ್ಥರು ಚಳವಳಿ ಇನ್ನೂ ಚುರುಕುಗೊಳ್ಳಲಿ ಎನ್ನುವ ಕಾರಣಕ್ಕಾಗಿ ಬೆಂಗಳೂರಿಗೆ ತೆರಳಿ ಪ್ರತಿಭಟನೆ ನಡೆಸಿದರು. ಮುಳುಗಡೆ ಪ್ರಾಂತದಲ್ಲಂತೂ ಪ್ರತಿದಿನ ಪ್ರತಿಭಟನೆಗಳು ನಡೆಯುತ್ತಿವೆ. ಸುಮಾರು ಮೂವತ್ತು ಸಾವಿರ ಕುಟುಂಬಗಳು (೧೩೬ ಗ್ರಾಮಗಳು) ಈ ಯೋಜನೆಯಿಂದ ನೇರವಾಗಿ ಭಾದಿತವಾಗುತ್ತವೆ. ಚಳವಳಿಕಾರರ ಪ್ರಕಾರ ಸರಕಾರ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸುವ ಸಾಹಸಕ್ಕೆ ಕೈಹಾಕುವ ಮೊದಲು ಮುಳುಗಡೆಯಾಗಬಹುದಾದ ಗ್ರಾಮಗಳಲ್ಲಿನ ಕುಟುಂಬಗಳನ್ನು ಸ್ಥಳಾಂತರಿಸುವ ಮತ್ತು ಸೂಕ್ತ ಪುನರ್ವಸತಿ ಒದಗಿಸುವ ಕೆಲಸವನ್ನು ಮಾಡಬೇಕು. ಈ ಕುರಿತು ನಿರ್ಲಕ್ಷ್ಯತಾಳಿದರೆ ಮುಂದಿನ ಪರಿಣಾಮ ಆಂಧ್ರಪ್ರದೇಶ ಹುಟ್ಟುಹಾಕಿದ ವಿವಾದಕ್ಕಿಂತಲೂ ತೀವ್ರ ಸ್ವರೂಪದ್ದಾಗಿರುತ್ತದೆ ಎನ್ನುವ ಎಚ್ಚರಿಕೆಯನ್ನು ಸರಕಾರಕ್ಕೆ ನೀಡಲಾಯಿತು.

ಯಾವುದೇ ಯೋಜನೆಯ ಸಂದರ್ಭದಲ್ಲೂ ಸರಕಾರ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಪರಿಸರ ಚಳವಳಿಗಳನ್ನು ತಾವಾಗಿಯೇ ಸೃಷ್ಟಿಸುತ್ತಾರೆ. ಅದು ಹೇಗೆಂದರೆ, ಯೋಜನೆಯ ಕಾಮಗಾರಿ ಪ್ರಾರಂಭಗೊಳ್ಳುವ ಪ್ರದೇಶದ ಸುತ್ತಮುತ್ತಲಿನ ಪರಿಸರವನ್ನು

ಇವರ್ಯಾರೂ ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಯೋಜನೆ ಪ್ರಾರಂಭಗೊಳ್ಳುವ ಮೊದಲೇ ಅಲ್ಲಿನ ಸ್ಥಳೀಯ ನಿವಾಸಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರೊಡನೆ ಚರ್ಚಿಸಿ ಹಾಗೂ ಯೋಜನೆಯ ಅನಿವಾರ್ಯತೆಯ ಬಗೆಗೆ ವಿವರಿಸಬೇಕಾಗುತ್ತದೆ. ಸೂಕ್ತ ಪರಿಹಾರ ಮತ್ತು ಪುನರ್ವಸತಿಯ ಬಗ್ಗೆ ಮೊದಲೇ ನಿರ್ಧಾರಗಳನ್ನು ತೆಗೆದುಕೊಂಡರೆ ಸ್ಥಳೀಯ ಜನರ ವಿರೋಧವನ್ನು ತಪ್ಪಿಸಬಹುದು. ಯೋಜನೆಯ ಕಾಮಗಾರಿ ನಡೆಯುತ್ತಿದ್ದಂತೆಯೇ ಇನ್ನೊಂದು ಕಡೆ ಪುನರ್ವಸತಿ ಕೆಲಸವೂ ಪ್ರಾರಂಭಗೊಂಡು ಎರಡೂ ಕಾಮಗಾರಿಗಳೂ ಒಮ್ಮೆಗೆ ಮುಕ್ತಾಯಗೊಂಡರೆ ಚಳವಳಿಗಳು ನಡೆಯುವ ಪ್ರಮೇಯವೇ ಇರುವುದಿಲ್ಲ. ಯಾರೂ ಅಭಿವೃದ್ಧಿಯ ವಿರೋಧಿಗಳಲ್ಲ ಎನ್ನುವುದನ್ನು ಸರಕಾರ ಮೊದಲು ತಿಳಿಯಬೇಕು. ಅದೇ ರೀತಿ ಅಭಿವೃದ್ಧಿ ಯಾವ ರೀತಿ ನಡೆಯುತ್ತಿದೆ ಎನ್ನುವ ಕಡೆಗೂ ಗಮನಹರಿಸಬೇಕು. ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸುವ ಪ್ರಶ್ನೆಯ ಸಂದರ್ಭದಲ್ಲಿ ಪುನರ್ವಸತಿ ಪ್ರಶ್ನೆ ಅತ್ಯಂತ ಚಿಕ್ಕದಾಗಿ ಕಾಣಿಸಿಕೊಂಡರೂ ಒಂದೊಮ್ಮೆ ಪುನರ್ವಸತಿ ಪ್ರಶ್ನೆಯೇ ಆಲಮಟ್ಟಿಗಿಂತಲೂ ಎತ್ತರವಾಗಿ ಬೆಳೆಯುವ ಸಾಧ್ಯತೆ ಇದೆ.

೩.೧೯. ಕಳೆಗಳ ವಿರುದ್ಧ ಪ್ರಚಾರ ಚಳವಳಿ

ಪರಿಸರ ಚಳವಳಿಗಳಿಗೆ ಉದ್ದಿಮೆಗಳು ಅಥವಾ ರಾಸಾಯನಿಕ ಕೃಷಿ ಕಾರಣವಾದಂತೆ ಕೆಲವೊಂದು ಜಾತಿಯ ಸಸ್ಯಗಳೂ ಕಾರಣವಾಗಿವೆ. ಇವುಗಳ ನಿಯಂತ್ರಣಕ್ಕೆ ಗ್ರಾಮೀಣ ಮತ್ತು ನಗರ, ಬಡವ ಮತ್ತು ಶ್ರೀಮಂತ ಎನ್ನುವ ಭೇದವನ್ನು ಮಾಡದೆ ಎಲ್ಲರೂ ಭಾಗವಹಿಸಬೇಕಾದ ಅನಿವಾರ್ಯತೆ ಇದೆ. ಈ ಕಾರಣಕ್ಕಾಗಿಯೇ ಇದು ಚಳವಳಿಯ ಸ್ವರೂಪವನ್ನು ಪಡೆದುಕೊಂಡಿದೆ. ಇದು ಯಾವುದೇ ಒಂದು ಜಿಲ್ಲೆಗೆ ಸಂಬಂಧಪಟ್ಟ ಸಮಸ್ಯೆಯಾಗಿರದೆ ಕರ್ನಾಟಕದಾದ್ಯಂತ ಹರಡಿಕೊಂಡಿದೆ. ಇವುಗಳಲ್ಲಿ ಹೆಚ್ಚು ಚರ್ಚೆಯಲ್ಲಿರುವ ಕಳೆಗಳೆಂದರೆ ಪಾರ್ಥೇನಿಯಂ, ಅಂತರ್‌ಗಂಗೆ ಮತ್ತು ಯುಪಟೋರಿಯಂ. ಬೆಳೆಗಳ ಮಧ್ಯೆ ಸ್ಪರ್ಧೆ ನಡೆಸುವಂತೆ ಪಾರ್ಥೇನಿಯಂ ಕಾಣಿಸಿಕೊಂಡರೆ, ಹರಿಯುವ ನೀರು ಮಲಿನಗೊಳ್ಳುವಂತೆ ಅಂತರ್‌ಗಂಗೆ ಮಾಡುತ್ತದೆ. ಅದೇ ರೀತಿ ಯುಪಟೋರಿಯಂ ಅರಣ್ಯ ಪ್ರದೇಶಗಳನ್ನು ಆಯ್ಕೆಮಾಡಿಕೊಂಡಿದೆ. ರಾಜ್ಯದ ಮಲೆನಾಡಿನಲ್ಲಂತೂ ಯುಪಟೋರಿಯಂ ನಿವಾರಿಸಲು ಸಾಧ್ಯವಾಗದಷ್ಟು ಮಟ್ಟಕ್ಕೆ ಬೆಳೆದು ನಿಂತಿದೆ. ಸಸ್ಯಗಳ ಹಾಗೂ ಪ್ರಾಣಿಗಳ ಬದುಕಿಗೆ ಕಂಟಕವಾಗಿರುವ ಈ ಕಳೆಗಳನ್ನು ನಿಯಂತ್ರಿಸುವುದು, ಪರಿಸರವನ್ನು ರಕ್ಷಿಸುವುದು ಬೃಹತ್ ಸವಾಲಾಗಿ ಕಂಡುಬಂದಿದೆ. ಬೃಹತ್ ಉದ್ದಿಮೆಗಳನ್ನು ವಿರೋಧಿಸುವ ಸಂದರ್ಭದಲ್ಲಿ ಅನೇಕ ಪರಿಸರ ಸಂಘಟನೆಗಳು ಅಷ್ಟಕ್ಕೇ ತಮ್ಮ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡಿವೆ. ಆದರೆ ಕಳೆಗಳ ಸಮಸ್ಯೆ ಯಾವ ಉದ್ದಿಮೆಗಿಂತಲೂ ಕಡಿಮೆಯಿಲ್ಲ. ಅನೇಕ ಬಾರಿ ರೈತರು ಇದರಿಂದಾಗಿ ಸಂಪೂರ್ಣ ನಷ್ಟಕ್ಕೊಳಗಾಗಿ ದಿವಾಳಿಗಳಾಗಿರುವ ಉದಾಹರಣೆಗಳು ಕರ್ನಾಟಕದಲ್ಲಿ ಸಾಕಷ್ಟಿವೆ.

ಕರ್ನಾಟಕದಲ್ಲಿ ಕಳೆಗಳು ಕಾಣಿಸಿಕೊಂಡಿರುವುದು ಏಕೀಕರಣಗೊಂಡ ನಂತರದ ಅವಧಿಯಲ್ಲಿ. ವಿಜ್ಞಾನಿಗಳ ಪ್ರಕಾರ, ಐವತ್ತರ ದಶಕದ ಕೊನೆಯಲ್ಲಿ ಭಾರತಕ್ಕೆ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಂಡ ಸಂದರ್ಭದಲ್ಲಿ ಈ ಕಳೆಗಳ ಬೀಜಗಳು ಬಂದಿರಬೇಕು. ೧೯೫೬ರಲ್ಲಿ ಪ್ರಥಮ ಬಾರಿ ಪಾರ್ಥೇನಿಯಂ ಕಳೆಯಿಂದಾಗಿ

ಚರ್ಮರೋಗಕ್ಕೆ ವ್ಯಕ್ತಿಯೋರ್ವರು ತುತ್ತಾಗಿರುವ ಪ್ರಕರಣ ಬೆಳಕಿಗೆ ಬಂದಿತ್ತು. ಜನರು ಹಾಗೂ ಪ್ರಾಣಿಗಳ ಆರೋಗ್ಯದ ಮೇಲೆ, ಮೇವಿನ ಉತ್ಪಾದನೆಯ ಮೇಲೆ, ಅರಣ್ಯ ಪ್ರದೇಶಗಳ ಮೇಲೆ ಈ ಕಳೆಗಳಿಂದಾಗುವ ಪರಿಣಾಮಗಳು ಭೀಕರ ಸ್ವರೂಪದ್ದಾಗಿವೆ. ಕಾರ್ಖಾನೆಗಳು, ಮನೆಗಳು ಮತ್ತು ಹೊಲಗದ್ದೆಗಳಿಂದ ಹರಿದು ಹೋಗುವ ಕಲ್ಮಶ ನೀರಿನಿಂದಲೂ ಈ ಕಳೆಗಳು ವೃದ್ಧಿಸುತ್ತವೆ. ಮನುಷ್ಯ, ಪ್ರಾಣಿ ಹಾಗೂ ಸಸ್ಯಗಳ ಬದುಕಿಗೆ ಅಡಚಣೆ ಒಡ್ಡಿರುವ ಈ ಕಳೆಗಳನ್ನು ನಿಯಂತ್ರಿಸುವ ಜವಾಬ್ದಾರಿ ಸರಕಾರ ಮತ್ತು ಸಾರ್ವಜನಿಕರದ್ದಾಗಿದೆ. ಈಗಾಗಲೇ ಹಲವಾರು ಸ್ವಯಂ ಸೇವಾ ಸಂಸ್ಥೆಗಳು, ಪರಿಸರ ಸಂಘಟನೆಗಳು ಈ ಕಳೆಯ ವಿರುದ್ಧ ಪ್ರಚಾರಾಂದೋಲನವನ್ನು ಹಮ್ಮಿಕೊಂಡಿವೆ.

೩.೨೦. ಅರಣ್ಯ ಒತ್ತುವರಿ

ಜಲಾಶಯಗಳ ನಿರ್ಮಾಣ, ವಿದ್ಯುತ್ ಯೋಜನೆಗಳು, ಅಣುಸ್ಥಾವರಗಳು ಮುಂತಾದವುಗಳಿಂದ ಆಗುವ ಅರಣ್ಯನಾಶದ ಕುರಿತು ವ್ಯಾಪಕ ಚರ್ಚೆ ನಡೆಯುತ್ತಿದೆ. ಆದರೆ ಅರಣ್ಯ ನಾಶದಲ್ಲಿ ಅಕ್ರಮ ಅರಣ್ಯ ಒತ್ತುವರಿಯ ಪಾಲು ಇದ್ದು ಅದು ಸದ್ದಿಲ್ಲದೆ ನಡೆಯುತ್ತಿದೆ. ಇದು ಕರ್ನಾಟಕದ ಯಾವುದೋ ಒಂದು ಭಾಗಕ್ಕೆ ಸಂಬಂಧಿಸಿದ್ದಾಗಿರದೆ ವ್ಯಾಪಕವಾಗಿ ಹರಡಿದೆ. ಪರಿಸರ ಸಂಬಂಧಿ ಚಳವಳಿಗಳು ಅರಣ್ಯ ಒತ್ತುವರಿಯತ್ತ ಹೆಚ್ಚಿನ ಗಮನಕೊಟ್ಟಂತೆ ಕಂಡುಬರುವುದಿಲ್ಲ. ಅರಣ್ಯ ಒತ್ತುವರಿಯು ಮೇಲ್ನೋಟಕ್ಕೆ ಕಂಡಂತೆ ನಡೆಯುತ್ತಿಲ್ಲ. ಅವುಗಳ ಸೂಕ್ಷ್ಮ ಅಧ್ಯಯನ ಕೈಗೊಂಡಾಗ ಅನೇಕ ವಿಚಾರಗಳು ತಿಳಿದು ಬರುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ಅರಣ್ಯ ಒತ್ತುವರಿ ಉದ್ದೇಶಪೂರ್ವಕವಾಗಿ ನಡೆದರೆ ಇನ್ನು ಕೆಲವು ಸಂದರ್ಭಗಳಲ್ಲಿ ಅದು ಅನಿವಾರ್ಯವಾಗುತ್ತದೆ. ಅನಿವಾರ್ಯವಾದಾಗ ಅದು ಅಕ್ರಮವಾದರೂ ಸಕ್ರಮ ಎನ್ನುವ ಭಾವನೆ ಮೂಡಿಸುತ್ತದೆ. ಶ್ರೀಮಂತ ರೈತರು ಕಾಫಿ ತೋಟ, ತೆಂಗು ಅಥವಾ ಇನ್ಯಾವುದೋ ವಾಣಿಜ್ಯಿಕ ಕೃಷಿಗಾಗಿ ಅರಣ್ಯ ಒತ್ತುವರಿ ನಡೆಸುವುದು ಮಾಮೂಲಿಯಾಗಿಬಿಟ್ಟಿದೆ. ಆದರೆ ಬಡರೈತರು ಅಥವಾ ಸ್ವಂತ ಜಮೀನನ್ನು ಹೊಂದದೇ ಇರುವ ಜನರು ಒತ್ತುವರಿ ನಡೆಸುವುದು ಇದಕ್ಕಿಂತ ಭಿನ್ನವಾಗಿದೆ. ಅಲ್ಲಿರುವ ಹಿತಾಸಕ್ತಿಗಳೂ ಬೇರೆಯದೇ ಆಗಿವೆ. ಈ ಕಾರಣಗಳಿಂದಾಗಿ ಅರಣ್ಯ ಒತ್ತುವರಿಗೆ ಏಕರೂಪದ ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಸ್ವಂತ ಜಮೀನು ಇಲ್ಲದೆ ಹೊಟ್ಟೆಪಾಡಿಗಾಗಿ ಅರಣ್ಯ ಜಮೀನನ್ನು ಒತ್ತುವರಿ ಮಾಡಿರುವ ಬಡಜನರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಸಹಾನುಭೂತಿಯನ್ನು ತೋರಿಸಬೇಕಾಗುತ್ತದೆ. ಅದೇ ರೀತಿ ಪರಿಸರ ಸಂರಕ್ಷಣೆಯ ಮಹತ್ವವನ್ನೂ ತಿಳಿಸಬೇಕಾಗುತ್ತದೆ. ಶ್ರೀಮಂತ ರೈತರು ಒತ್ತುವರಿ ಮಾಡಿದ್ದಲ್ಲಿ ಅದನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಿಸುವುದರಲ್ಲಿ ತಪ್ಪಿಲ್ಲ. ಇಲ್ಲಿ ವಾಸ್ತವ ಸಂಗತಿಯೆಂದರೆ ಲಂಚಕ್ಕಾಗಿ ಬಾಯಿಬಿಡುವ ಅರಣ್ಯಾಧಿಕಾರಿಗಳ ಸಹಾಯದಿಂದಲೇ ಒತ್ತುವರಿ ನಡೆಯುತ್ತಿರುವುದು. ನಗರ ಪ್ರದೇಶಗಳಲ್ಲಿ ಪರವಾನಿಗೆ ಅಥವಾ ಮಂಜೂರಾತಿ ಇಲ್ಲದೆ ಅನಧಿಕೃತವಾಗಿ ಕಟ್ಟಡ ನಿರ್ಮಿಸುವಲ್ಲಿ ಭ್ರಷ್ಟ ಅಧಿಕಾರಿಗಳ ಪಾತ್ರ ಇರುವಂತೆ ಶ್ರೀಮಂತರು ನಡೆಸುವ ಅರಣ್ಯ ಒತ್ತುವರಿಯಲ್ಲಿಯೂ ಇದೆ. ಈ ಸೂಕ್ಷ್ಮಗಳನ್ನು ಅರ್ಥೈಸಿಕೊಂಡು ಕಾರ್ಯಪ್ರವೃತ್ತರಾದರೆ ಮಾತ್ರ ಪರಿಸರ ಚಳವಳಿಗಾರರು ತಕ್ಕಮಟ್ಟಿನ ಯಶಸ್ಸನ್ನು ಗಳಿಸಲು ಸಾಧ್ಯ.

೩.೨೧. ಕೊಳವೆ ಬಾವಿ ನಿರ್ಮಾಣ

ಕರ್ನಾಟಕದಲ್ಲಿ ಕೊಳವೆಬಾವಿಯ ಬಗ್ಗೆ ಶ್ರೀಮಂತ ಕೃಷಿಕರು ಹಾಗೂ ಉದ್ಯಮಿಗಳು ತೋರಿಸುತ್ತಿರುವ ಆಸಕ್ತಿ ಪರಿಸರ ಪ್ರೇಮಿಗಳನ್ನು ಕಂಗೆಡಿಸಿದೆ. ದಕ್ಷಿಣ ಕರ್ನಾಟಕದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಅದರಲ್ಲೂ ಕರಾವಳಿ ಜಿಲ್ಲೆಗಳಲ್ಲಿ ಕೊಳವೆ ಬಾವಿಗಳ ಸಂಖ್ಯೆ ಅತಿಯಾಗಿದೆ. ಕೊಳವೆ ಬಾವಿಗಳ ಸಂಖ್ಯೆ ಹೆಚ್ಚಾದಂತೆ ಅಂತರ್ಜಲದ ಮಟ್ಟ ಇಳಿಮುಖವಾಗುತ್ತಾ ಹೋಗುತ್ತದೆ ಎನ್ನುವುದು ಪರಿಸರತಜ್ಞರ ಅಭಿಪ್ರಾಯ. ಅಂತರ್ಜಲದ ಮಟ್ಟ ಕಡಿಮೆಯಾಗಿರುವುದರಿಂದಾಗಿ ಅನೇಕ ಪ್ರದೇಶಗಳು ಇಂದು ಬರಡು ಭೂಮಿಯಾಗಿ ಪರಿವರ್ತಿತವಾಗಿವೆ. ಶ್ರೀಮಂತ ಕೃಷಿಕನೊಬ್ಬ ತನ್ನ ಜಮೀನಿನಲ್ಲಿ ಕೊಳವೆಬಾವಿ ತೋಡಿಸಿದಾಗ ಸುತ್ತಮುತ್ತಲಿನ ಸಣ್ಣ ರೈತರು ನೀರಿಗಾಗಿ ಪರದಾಡಬೇಕಾಗುತ್ತದೆ. ಇದರಿಂದಾಗಿ ಕೃಷಿಗಾಗಿ ಅಲ್ಲದೆ ಕುಡಿಯಲು ಸಹ ನೀರು ಸಿಗದೇ ಇರುವ ಅನೇಕ ಪ್ರದೇಶಗಳು ನಿರ್ಮಾಣಗೊಂಡಿವೆ. ಕೊಳವೆ ಬಾವಿ ನಿರ್ಮಾಣದ ಹಿಂದೆ ದೊಡ್ಡ ಬಂಡವಾಳಶಾಹಿ ಸಿದ್ಧಾಂತವೇ ಅಡಕಗೊಂಡಿದೆ. ನಗರ ಪ್ರದೇಶಕ್ಕಿಂತಲೂ ಹೆಚ್ಚಾಗಿ ಇದನ್ನು ಗ್ರಾಮೀಣ ಪ್ರದೇಶದಲ್ಲಿ ಕಾಣಬಹುದಾಗಿದೆ. ಭೂಮಾಲೀಕವರ್ಗಕ್ಕೆ ಕೊಳವಬಾವಿಯ ನಿರ್ಮಾಣ ಅನಿವಾರ್ಯಕ್ಕಿಂತಲೂ ಹೆಚ್ಚಾಗಿ ಪ್ರತಿಷ್ಠೆಯ ವಿಷಯ ವಾಗಿದೆ. ಕೆರೆ, ಬಾವಿಯನ್ನೇ ನಂಬಿಕೊಂಡು ಕೃಷಿ ಮಾಡುತ್ತಿದ್ದ ಸಣ್ಣ ರೈತರು ಇದರಿಂದ ಚಿಂತೆಗೀಡಾಗಿದ್ದಾರೆ. ಕೊಳವೆ ಬಾವಿಯನ್ನು ತೋಡುವುದು ಅವರಿಗೆ ಅನಿವಾರ್ಯ ವಾದರೂ ಬಂಡವಾಳದ ಕೊರತೆಯಿದೆ. ಇದರಿಂದಾಗಿ ಅತಿಕಡಿಮೆ ಬೆಲೆಗೆ ತಮ್ಮ ಜಮೀನನ್ನು ಶ್ರೀಮಂತ ರೈತರಿಗೆ ಮಾರುವುದು ಅನಿವಾರ್ಯವೂ ಆಯಿತು. ಈಗಾಗಲೇ ಭೂಮಾಲೀಕವರ್ಗ ಕೊಳವೆ ಬಾವಿ ನಿರ್ಮಾಣದ ಮೂಲಕ ಅನೇಕ ಬಡರೈತರ ಜಮೀನನ್ನು ತನ್ನದಾಗಿಸಿಕೊಂಡಿವೆ. ಇದೊಂದು ವ್ಯವಸ್ಥಿತ ಬೆಳವಣಿಗೆಯಾಗಿದ್ದು, ಹೆಚ್ಚಿನ ಪ್ರಮಾಣದ ವಿರೋಧವನ್ನು ಎದುರಿಸಿಲ್ಲ. ಇದನ್ನು ಕೇವಲ ಅಂತರ್ಜಲದ ಸಮಸ್ಯೆಯನ್ನಾಗಿ ಮಾತ್ರ ನೋಡಲಾಗಿದೆ.

ಕೊಳವೆ ಬಾವಿಗಳು ಅಂತರ್ಜಲದ ಸಮಸ್ಯೆಯನ್ನು ಹುಟ್ಟು ಹಾಕಿರುವುದು ನಿಜವೇ ಆದರೂ ಅದರ ಹಿಂದಿರುವ ಸಾಮಾಜಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ಕುರಿತು ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿದೆ. ಭೂ ಮತ್ತು ಗಣಿ ವಿಜ್ಞಾನ ಇಲಾಖೆ, ನೀರಾವರಿ ಇಲಾಖೆ ಹಾಗೂ ಕೃಷಿ ಇಲಾಖೆಗಳು ಈ ಕುರಿತು ಕೆಲಸಮಾಡಬೇಕಾಗಿದೆ. ಆದರೆ ಈ ಇಲಾಖೆಗಳು ಒಟ್ಟು ಗೊಂದಲವನ್ನು ಸೃಷ್ಟಿಸಿವೆಯೇ ಹೊರತು ಸಮಸ್ಯೆಗೊಂದು ಪರಿಹಾರವನ್ನು ಕಂಡುಹಿಡಿದಿಲ್ಲ. ೧೯೯೬ರಲ್ಲಿ ಮಂಗಳೂರಿನಲ್ಲಿ ನಡೆದ ಅಂತರ್ಜಲ ಮರುಪೂರಣ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಭೂಗರ್ಭ ಶಾಸ್ತ್ರಜ್ಞರು ಹಾಗೂ ಸರಕಾರದ ಪ್ರತಿನಿಧಿಗಳು ಇನ್ನೆಷ್ಟು ಅಂತರ್ಜಲವನ್ನು ಬಳಸಬೇಕೆಂಬುದಾಗಿಯೇ ಮಾತನಾಡಿದರು. ಇವರ ಮಾತಿನ ಉದ್ದೇಶ ಏನೇ ಇದ್ದರೂ ಬಡರೈತರ ದೃಷ್ಟಿಯಿಂದಲೂ ಸಮಸ್ಯೆಯನ್ನು ನೋಡಬೇಕಾಗಿತ್ತು. ಕೊಳವೆ ಬಾವಿ ನಿರ್ಮಾಣದ ವಿರುದ್ಧ ವ್ಯಾಪಕ ಚಳವಳಿ ಕಾಣಿಸಿಕೊಂಡಿಲ್ಲವಾದರೂ ಗ್ರಾಮೀಣ ಮಟ್ಟದಲ್ಲಿ ಇದು ದಿನನಿತ್ಯದ ಮಾತಿನ ವಸ್ತುವಾಗಿದೆ. ನೂರಾರು ಬಡರೈತರು ತಮ್ಮ ಜಮೀನನ್ನು ಮಾರಿ ಅತಂತ್ರ ಸ್ಥಿತಿಯಲ್ಲಿದ್ದಾರೆ.

ಕೊಳವೆ ಬಾವಿಗಳು ಪರಿಸರ ಸಮಸ್ಯೆಯನ್ನಷ್ಟೇ ಅಲ್ಲದೆ ಬಡಜನರ ಬದುಕನ್ನೂ ಬಲಿ ತೆಗೆದುಕೊಳ್ಳುತ್ತಿರುವುದು ಜನಪರ ಧೋರಣೆಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯೂ ಚಿಂತಿಸಬೇಕಾದ ವಿಷಯವಾಗಿದೆ. ಶ್ರೀಮಂತ ರೈತರು ಕೃಷಿಗಾಗಿ ನೀರಿನ ಇತರ ಮೂಲಗಳಿದ್ದರೂ ಕೊಳವೆ ಬಾವಿಯನ್ನು ಉದ್ದೇಶಪೂರ್ವಕವಾಗಿ ನಿರ್ಮಿಸುತ್ತಿರುವುದರ ವಿರುದ್ಧ ವ್ಯಾಪಕ ಚಳವಳಿ ನಡೆಯಬೇಕಾಗಿದೆ. ಇದೊಂದು ಮೇಲ್ವರ್ಗ ಮತ್ತು ಕೆಳವರ್ಗದ ಸಮಸ್ಯೆಯಾಗಿದ್ದು, ವರ್ಗ ಹಿನ್ನೆಲೆಯಿಂದಲೇ ಅಧ್ಯಯನ ನಡೆಸಬೇಕಾಗುತ್ತದೆ.

❑❑

೪. ಉಪಸಂಹಾರ

ಪರಿಸರ ಚಳವಳಿ ಎಂಬುದು ಪರಿಸರದ ಚಲನೆ, ಸ್ಥಿತ್ಯಂತರ ಅಥವಾ ಬದಲಾವಣೆಗೆ ಸಂಬಂಧಿಸಿ ನಡೆಯುವ ಒಂದು ವ್ಯವಸ್ಥಿತ ಮತ್ತು ಸ್ವಾಭಾವಿಕ ಕ್ರಿಯೆ. ಇದು ವ್ಯವಸ್ಥಿತ ಏಕೆಂದರೆ ಇದರ ಹಿಂದೆ ಒಂದು ಧ್ಯೇಯ, ಯೋಜನೆ, ಹಿತಾಸಕ್ತಿಗಳು ಹಾಗೂ ಕಾರ್ಯಕ್ರಮ ಇರುತ್ತದೆ. ಸ್ವಾಭಾವಿಕ ಕ್ರಿಯೆ ಹೇಗೆಂದರೆ ಮಾನವ ಜನಾಂಗದ ವಿಕಾಸದ ವಿವಿಧ ಮಜಲುಗಳಲ್ಲಿ ಇಂಥ ಚಳವಳಿಗಳು ಉದ್ದಕ್ಕೂ ನಡೆದಿವೆ ಮತ್ತು ನಡೆಯುತ್ತಲಿವೆ. ಇವು ಒಂದಿಲ್ಲೊಂದು ರೂಪದಲ್ಲಿ ಘಟಿಸುತ್ತಿರುತ್ತವೆ. ಇವುಗಳನ್ನು ವ್ಯವಸ್ಥೆ ಹತ್ತಿಕ್ಕಲು ಪ್ರಯತ್ನಿಸುತ್ತಿರುತ್ತದೆ ಅಥವಾ ಚಳವಳಿಯೊಳಗೇ ಹತ್ತಿಕ್ಕುವ ಪ್ರವೃತ್ತಿಗಳು ಕಂಡುಬರುತ್ತವೆ. ಇಂಥ ಸಂದರ್ಭಗಳಲ್ಲಿ ಚಳವಳಿಗಳು ಸ್ವತಂತ್ರವಾಗಿ ಇಲ್ಲವೇ ನಿರಂತರವಾಗಿ ಮುಂದುವರಿಯಲು ಸಾಧ್ಯವಿಲ್ಲ. ಕೆಲವು ಪರಿಸರವಾದಿಗಳೆಂದು ಕರೆಯಿಸಿಕೊಳ್ಳುವವರು ಎಲ್ಲಾ ಯೋಜನೆಗಳನ್ನೂ ವಿರೋಧಿಸುತ್ತಿರುತ್ತಾರೆ. ಇಂಥ ಪರಿಸರವಾದಿಗಳು ಲಭ್ಯವಿರುವ ಎಲ್ಲಾ ಆಧುನಿಕ ಸೌಲಭ್ಯಗಳನ್ನು ಹಿಂದೆ ಮುಂದೆ ನೋಡದೆ ಬಳಸಿಕೊಳ್ಳುತ್ತಾರೆ. ಇವರು ನಡೆಸುವ ಚಳವಳಿ ಪರಿಸರ ಚಳವಳಿಯಾಗಿರದೆ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಫಲಿತಾಂಶವಷ್ಟೇ ಆಗಿರುತ್ತದೆ. ಇದರಿಂದಾಗಿ ವಿವಿಧ ಯೋಜನೆಗಳಿಂದ ನಿಜವಾಗಿಯೂ ತೊಂದರೆಗೊಳಗಾದ ಜನವರ್ಗ ನಡೆಸುವ ಚಳವಳಿ ವಿವಿಧ ಸ್ವರೂಪದ ಒತ್ತಡಗಳಿಗೆ ಮಣಿಯಬೇಕಾಯಿತು. ಒತ್ತಡಗಳನ್ನು ಹೇರುವ ಶಕ್ತಿಗಳು ಉತ್ಪಾದನಾ ವ್ಯವಸ್ಥೆಯ ಮೇಲೆ ನೇರ ಹತೋಟಿಯನ್ನು ಹೊಂದಿದ್ದು, ಸಾಮಾಜಿಕ ನಿಯಂತ್ರಣ ವ್ಯವಸ್ಥೆಯ ನಿರ್ಧಾರಕ ಶಕ್ತಿಗಳೇ ಆಗಿವೆ. ಇದು ವರ್ತಮಾನದ ಪರಿಸ್ಥಿತಿಯಷ್ಟೇ ಆಗಿರದೆ ಚರಿತ್ರೆಯುದ್ದಕ್ಕೂ ನಡೆದು ಬಂದ ವಾಸ್ತವ ಸಂಗತಿಯಾಗಿದೆ. ಈ ಕಾರಣಕ್ಕಾಗಿಯೇ ಸಾಮಾನ್ಯ ಜನ ಸಮುದಾಯದ ಚರಿತ್ರೆ ದಾಖಲಿಸಲ್ಪಡದೆ ಬಹಿಷ್ಕರಿಸಲ್ಪಟ್ಟಿತು. ಆಧುನಿಕ ಸಂದರ್ಭದಲ್ಲಿ ವ್ಯವಸ್ಥೆ ತಕ್ಕಮಟ್ಟಿನ ಬದಲಾವಣೆಯನ್ನು ಕಂಡಿದ್ದರೂ ಪರಿಸರ ಚಳವಳಿಗಳಂಥ ಅನೇಕ ಚಳವಳಿಗಳು ಮತ್ತೊಮ್ಮೆ ಶ್ರೀಮಂತವರ್ಗದ ಪ್ರಭಾವಿ ನೆಲೆಯೊಳಗೇ ಕಾರ್ಯನಿರ್ವಹಿಸುತ್ತಿವೆ. ಅದಕ್ಕೆ ಪೂರಕವಾದ ವಾತಾವರಣವೂ ಸೃಷ್ಟಿಗೊಂಡಿದೆ. ಇಂಥ ವರ್ಗಕ್ಕೆ ಪರಿಸರ ಚಳವಳಿ ಫ್ಯಾಷನ್ ಆಗಿದೆ. ಇವರು ನಡೆಸುವ ಚಳವಳಿಯು ಸ್ವಾರ್ಥಪೂರಿತವಾಗಿದ್ದು, ಸಮಾಜದಿಂದ ಬೇರ್ಪಟ್ಟ ರೀತಿಯಲ್ಲಿ ಇರುತ್ತವೆ.

ಅಭಿವೃದ್ಧಿಯನ್ನು ಯಾರೂ ಪ್ರಶ್ನೆ ಮಾಡಲು ಆಗುವುದಿಲ್ಲ. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ಮನುಷ್ಯನ ಜೀವನಾಧಾರವನ್ನೇ ಬುಡಮೇಲು ಮಾಡುವ ಯೋಜನೆಗಳನ್ನು ಪ್ರಶ್ನಿಸುವುದರಲ್ಲಿ ತಪ್ಪಿಲ್ಲ. ಇಲ್ಲಿ ಅಭಿವೃದ್ಧಿ, ಪರಿಸರ ರಕ್ಷಣೆ ಹಾಗೂ ಚಳವಳಿ ಇವು ಮೂರೂ ಅನಿವಾರ್ಯವೆಂಬಂತೆ ಕಂಡುಬರುತ್ತವೆ. ಏಕೆಂದರೆ ಪ್ರಕೃತಿಯಲ್ಲಿ ಲಭ್ಯವಿರುವ

ಸಂಪನ್ಮೂಲ ಹಾಗೂ ಮಾನವ ನಿರ್ಮಿತ ಸಂಪನ್ಮೂಲಗಳ ನಡುವೆ ತಿಕ್ಕಾಟ ನಡೆಯುತ್ತಿರುತ್ತದೆ. ಇಲ್ಲಿ ಬಹುಮುಖ್ಯ ಸಂಗತಿಯೆಂದರೆ ಯೋಜನೆಗಳನ್ನು ರೂಪಿಸುವುದು. ಯೋಜನೆಗಳು ಏನು ಎನ್ನುವುದನ್ನು ತಿಳಿದುಕೊಳ್ಳುವ ಹಕ್ಕು ಜನರಿಗಿದೆ. ಅದರಲ್ಲೂ ಮುಖ್ಯವಾಗಿ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಜನರಿಗಿದೆ. ಆದರೆ ಈ ನಿಯಮ ವಿರುದ್ಧವಾಗಿ ಕೆಲಸ ಮಾಡುತ್ತಿದೆ. ಜನರ ಸಹಭಾಗಿತ್ವದಲ್ಲಿ ಯೋಜನೆಗಳು ರೂಪುಗೊಳ್ಳುತ್ತಿಲ್ಲ. ಈ ಕಾರಣಗಳಿಂದಾಗಿಯೇ ಪರಿಸರ ಚಳವಳಿಗಳ ಸಂದರ್ಭದಲ್ಲಿ ಪುನರ್ವಸತಿ ಸಮಸ್ಯೆ ಹೆಚ್ಚು ಚರ್ಚೆಗೊಳಗಾಗುತ್ತಿದೆ. ಯೋಜನೆಗಳಿಗೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ನಂತರದ ಪರಿಣಾಮಗಳಿಗೆ ಕೊಡದಿರುವುದೇ ಗೊಂದಲ ಸೃಷ್ಟಿಯಾಗಲು ಕಾರಣವಾಗಿದೆ. ಇಲ್ಲಿ ಸಮಾಜದ ಮೇಲ್ವರ್ಗ ಮತ್ತು ಬಂಡವಾಳಶಾಹಿ ನಿರ್ಣಾಯಕ ಪಾತ್ರವನ್ನು ವಹಿಸಿರುವುದಂತೂ ನಿಜ. ಈ ಒಡಂಬಡಿಕೆ ಚಳವಳಿಯನ್ನು ಅದು ಇಡೀ ವ್ಯವಸ್ಥೆಯನ್ನು ಪ್ರಶ್ನಿಸುವ ಹಂತಕ್ಕೆ ಬರುವ ಮೊದಲೇ ಹಿಮ್ಮೆಟ್ಟಿಸುತ್ತದೆ. ಇಲ್ಲಿ ಆಧುನೀಕರಣದ ಲಾಭ ಸಮಾಜದ ಯಾವ ವರ್ಗಕ್ಕೆ ಹೋಗುತ್ತದೆ ಎನ್ನುವುದು ಸ್ಪಷ್ಟ. ಸಂಪನ್ಮೂಲಗಳ ಹಂಚಿಕೆಯಲ್ಲಿ ತಾರತಮ್ಯ ಇರುವಲ್ಲಿಯವರೆಗೆ ಚಳವಳಿಗಳು ಯಶಸ್ವಿಯಾಗಲು ಸಾಧ್ಯವಿಲ್ಲ. ಆದರೆ ಮೇಲ್ವರ್ಗ ಮತ್ತು ಬಂಡವಾಳಶಾಹಿ ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಾಧ್ಯ. ಇಲ್ಲಿರುವ ಅಭಿವೃದ್ಧಿಯ ಕಲ್ಪನೆ ಸೀಮಿತಾರ್ಥದಿಂದ ಕೂಡಿದ್ದಾಗಿದೆ. ಈ ರಾಜಕೀಯ ಪ್ರೇರಿತ ಪ್ರಮೇಯದಿಂದ ಸಮುದಾಯದ ಅಭಿವೃದ್ಧಿಯೂ ಸಾಧ್ಯವಿಲ್ಲ, ಅದೇ ರೀತಿ ಪರಿಸರ ರಕ್ಷಣೆಯೂ ಸಾಧ್ಯವಿಲ್ಲ. ಇದರಿಂದಾಗಿ ಪರಿಸರ ಚಳವಳಿಗಳು ಚಳವಳಿಯ ಸ್ವರೂಪವನ್ನು ಪಡೆದುಕೊಳ್ಳದೆ ವಿಫಲವಾಗಿವೆ. ಹೆಚ್ಚೆಂದರೆ ಇವು ಪರಿಸರ ಬಿಕ್ಕಟ್ಟಿಗೆ ಕಾರಣವಾಗಬಹುದು. ಜಾತಿ/ವರ್ಗಭೇದಗಳ ಗಡಿಯನ್ನು ದಾಟಿ ಒಂದು ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಿಕೊಂಡರೆ ಮಾತ್ರ ಪರಿಸರ ಚಳವಳಿಗಳು ನಿರೀಕ್ಷಿಸಿದ ಯಶಸ್ಸನ್ನು ಗಳಿಸಲು ಸಾಧ್ಯ.

ಸೈದ್ಧಾಂತಿಕ ನಿಲುವುಗಳಿಲ್ಲದೆ ನಡೆಯುತ್ತಿರುವ ಪರಿಸರ ಚಳವಳಿಗಳು ಸಾಮಾಜಿಕ ವಾಸ್ತವ ಸ್ಥಿತಿಯನ್ನು ವಿರೂಪಗೊಳಿಸುವ ಸಾಧ್ಯತೆಯೇ ಹೆಚ್ಚು. ಹೆಚ್ಚಿನ ಪರಿಸರ ಸಂಬಂಧಿ ಚಳವಳಿಗಳು ಈ ಕೆಲಸವನ್ನಷ್ಟೇ ಮಾಡಿವೆ. ಪರಿಸರಕ್ಕೂ ಮಾನವನ ಬದುಕಿಗೂ ಯಾವ ಸಂಬಂಧವೂ ಇಲ್ಲ ಎನ್ನುವ ರೀತಿಯಲ್ಲಿ ವ್ಯಾಖ್ಯಾನಗಳು ಹುಟ್ಟಿಕೊಂಡಿವೆ. ಪರಿಸರ ಚಳವಳಿಗಳು ಆಯಾ ಸಂದರ್ಭದ ಉತ್ಪಾದನಾ ವ್ಯವಸ್ಥೆಯೊಳಗಿನಿಂದಲೇ ಹುಟ್ಟಿಕೊಳ್ಳುತ್ತವೆ ಎನ್ನುವ ವಾಸ್ತವಾಂಶಕ್ಕೆ ಇಲ್ಲಿಯವರೆಗೆ ಚರ್ಚೆಯ ವ್ಯಾಪ್ತಿಯಲ್ಲಿ ಪ್ರವೇಶ ಸಿಕ್ಕಿಲ್ಲ. ಇದಕ್ಕೆ ಸೈದ್ಧಾಂತಿಕ ನಿಲುವಿನ ಕೊರತೆಯೇ ಮೂಲ ಕಾರಣ. ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಗೆ ಹಾಗೂ ಬಂಡವಾಳ ಶಾಹಿಯಿಂದ ಸಮಾಜವಾದಿ ವ್ಯವಸ್ಥೆಗೆ ಒಟ್ಟು ವ್ಯವಸ್ಥೆ ಪರಿವರ್ತನೆ ಹೊಂದುತ್ತದೆ ಎನ್ನುವುದನ್ನು ಆದರ್ಶವನ್ನಾಗಿ ಇಟ್ಟುಕೊಂಡು ಅನೇಕ ಅಧ್ಯಯನಗಳು ನಡೆದಿವೆ. ಆದರೆ ಈ ಪರಿವರ್ತನೆಯನ್ನು ಪ್ರೋತ್ಸಾಹಿಸುವ ಮತ್ತು ತಡೆದು ನಿಲ್ಲಿಸುವ ಪ್ರಯತ್ನಗಳೂ ನಡೆಯುತ್ತಿರುತ್ತವೆ ಎನ್ನುವುದರತ್ತ ಈ ಅಧ್ಯಯನಗಳು ಗಮನಹರಿಸಿಲ್ಲ. ಪ್ರತಿಯೊಂದು ಸಮಾಜವೂ ವೈರುಧ್ಯಗಳಿಂದ ಕೂಡಿರುತ್ತದೆ. ಅವುಗಳಲ್ಲಿ ಏಕರೂಪದ ಬೆಳವಣಿಗೆಯನ್ನು ಕಾಣಲು ಸಾಧ್ಯವಿಲ್ಲ.

ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಮತ್ತು ವಿರೋಧಿಸುವ ಪ್ರವೃತ್ತಿಗಳು ಪ್ರತಿಯೊಂದು ಸಂದರ್ಭದಲ್ಲೂ ಕಾಣಸಿಗುತ್ತವೆ. ಪರಿಸರ ಚಳವಳಿಗಳಲ್ಲಿ ಈ ಎರಡೂ ಅಂಶಗಳು ಸೇರಿಕೊಂಡಿವೆ. ಇದು ಸಮುದಾಯದ ಅಸ್ತಿತ್ವ ಮತ್ತು ವರ್ಗ ಪ್ರತಿಷ್ಠೆಯ ಪ್ರಶ್ನೆಯಾಗಿಯೂ ಕಂಡುಬರುತ್ತದೆ. ಸಂಪನ್ಮೂಲಗಳ ಹಂಚಿಕೆಯಲ್ಲಿನ ತಾರತಮ್ಯವೇ ಅಸ್ತಿತ್ವ ಮತ್ತು ಪ್ರತಿಷ್ಠೆಯ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇದು ವಿವಿಧ ಚಳವಳಿಗಳ ಮೂಲಕ ಅಭಿವ್ಯಕ್ತಗೊಳ್ಳುತ್ತಿರುತ್ತದೆ. ಆದರೆ ಮೇಲ್ನೋಟಕ್ಕೆ ಇವು ಯಾವುವೂ ಕಾಣಸಿಗುವುದಿಲ್ಲ. ಈ ಹಿನ್ನೆಲೆಯಿಂದ ಅಧ್ಯಯನ ನಡೆಸಿದಾಗ ಪರಿಸರ ಸಂಬಂಧಿ ಚಳವಳಿಗಳು ಆಯಾ ಸಮಯ ಮತ್ತು ಸಂದರ್ಭದ ಉತ್ಪಾದನಾ ವ್ಯವಸ್ಥೆಯ ಒಟ್ಟು ಫಲಿತಾಂಶವಾಗಿ ಕಂಡುಬರುತ್ತವೆ.

❏❏

ಪರಾಮರ್ಶನ ಬರಹಗಳು

೧. **ಶ್ರೀನಿವಾಸ, ಎಂ.ಎನ್.,** ಕಾಸ್ಟ್ ಇನ್ ಮಾಡರ್ನ್ ಇಂಡಿಯಾ ಆಂಡ್ ಅದರ್ ಎಸ್ಸೇಸ್, ಏಷ್ಯಾ ಪಬ್ಲಿಷಿಂಗ್ ಹೌಸ್, ಕಲ್ಕತ್ತಾ, ೧೯೬೨

೨. **ಹಿಲ್ಟನ್ ರೋಡ್ನಿ.,** (ಸಂ.), ದಿ ಟ್ರಾನ್ಸಿಶನ್ ಫ್ರಮ್ ಫ್ಯೂಡಲಿಸಮ್ ಟು ಕ್ಯಾಪಟಲಿಸಮ್ ಲಂಡನ್, ಅನ್‌ವಿನ್ ಬ್ರದರ್ಸ್, ೧೯೭೮

೩. **ವೇಗ್ನರ್, ಆರ್.,** ದ ಇನ್‌ವೆನ್‌ಶನ್ ಆಫ್ ಕಲ್ಚರ್, ಯೂನಿವರ್ಸಿಟಿ ಆಫ್ ಚಿಕಾಗೊ ಪ್ರೆಸ್, ಚಿಕಾಗೊ, ೧೯೮೧

೪. **ಫಿಲಿಪ್ಸ್ ಲೋವ್ ಆಂಡ್ ಜೇನ್ ಗ್ಯೊಡರ್.,** ಎನ್‌ವಾಯರನ್‌ಮೆಂಟಲ್ ಗ್ರೂಪ್ಸ್ ಇನ್ ಪಾಲಿಟಿಕ್ಸ್, ಜಾರ್ಜ್ ಆಲೆನ್ ಅಂಡ್ ಅನ್‌ವಿನ್ ಲಂಡನ್, ೧೯೮೩

೫. **ಓವ್‌ವೆಟ್ ಗೈಲ್.,** ಇಕಾಲಜಿ ಆಂಡ್ ಸೋಷಿಯಲ್ ಮೂವ್‌ಮೆಂಟ್ಸ್, ಇಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ನವೆಂಬರ್ ೩, ೧೯೮೪

೬. **ರಾಜಶೇಖರ್, ಜಿ.,** ಸಮಾಜವಾದ ಮತ್ತು ಪರಿಸರ (ವಿಲಿಯಂ ರೇಮಂಡ್ಸ್‌ರವರ ಸೋಶ್ಯಾಲಿಸಂ ಆಂಡ್ ಎನ್‌ವಾಯರನ್‌ಮೆಂಟ್‌ನ ಅನುವಾದ), ಸ್ನೇಹಿತರ ಬಳಗ ಪ್ರಕಾಶನ, ಉಡುಪಿ ೧೯೮೬

೭. **ಕಾರಂತ, ಶಿವರಾಮ ಕೆ.,** (ಸಂಗ್ರಹಾನುವಾದ) ಭಾರತದ ಪರಿಸರ-ದ್ವಿತೀಯ ಸಮೀಕ್ಷೆ - ೧೯೮೪ - ೮೫, ಅಕ್ಷರ ಪ್ರಕಾಶನ, ಹೆಗ್ಗೋಡು ೧೯೮೬

೮. **ಗೋರ್, ಎಂ.ಎಸ್.,** ಸೋಶ್ಯಲ್ ಮೂವ್‌ಮೆಂಟ್ಸ್ ಆಂಡ್ ದ ಪಾರಾಡಿಮ್ ಆಫ್ ಫನ್‌ಕ್ಷನಲ್ ಅನಾಲಿಸಿಸ್, ಇಕಾನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಏಪ್ರಿಲ್, ೪, ೧೯೮೯

೯. **ಹಾಬ್ಸ್‌ವಾಮ್, ಇ. ಜೆ.,** ದಿ ಏಜ್ ಆಫ್ ಕ್ಯಾಪಿಟಲ್, ರೂಪ ಆಂಡ್ ಕಂಪೆನಿ, ಮುಂಬಯಿ, ೧೯೯೨

೧೦. **ಅಗರ್‌ವಾಲ್ ಅನಿಲ್, ನಾರಾಯಣ್ ಸುನೀತಾ.,** ಹಸಿರು ಹಳ್ಳಿಗಳು, ಸೆಂಟರ್ ಫಾರ್ ಸೈನ್ಸ್ ಆಂಡ್ ಎನ್‌ವಾಯರನ್‌ಮೆಂಟ್, ನವದೆಹಲಿ ಮತ್ತು ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೨

೧೧. **ಗುಹಾ, ರಾಮಚಂದ್ರ.,** ಪ್ರಿ ಹಿಸ್ಟರಿ ಆಫ್ ಇಂಡಿಯನ್ ಎನ್‌ವಾಯರನ್‌ಮೆಂಟಾಲಿಸಮ್ : ಇಂಟಲೆಕಚ್ವಲ್ ಟ್ರೆಡೀಷನ್ಸ್, ಇಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ೪-೧೧, ಜನವರಿ ೧೯೯೨

೧೨. **ಬುಚ್, ಎಂ.ಎನ್.,** ಅನುವಾದ ಹೆಗಡೆ, ನಾಗೇಶ., ಪರಿಸರ ಪ್ರಜ್ಞೆ-ನಗರ ನಿರ್ಮಾಣ, ಓರಿಯಂಟ್ ಲಾಂಗ್‌ಮೆನ್, ೧೯೯೩

೧೩. **ಫತೇ ಅಲಿ ಲಯಿಖ್**, ಅನುವಾದ ಶ್ರೀಧರ ಭಾ. ವೈ., ನಮ್ಮ ಪರಿಸರ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ, ೧೯೯೩

೧೪. **ರಂಗರಾಜನ್**., ಸರ್ವೆ ಆಫ್ ದ ಎನ್‌ವಾಯರನ್‌ಮೆಂಟ್, ದಿ ಹಿಂದೂ, ಮದ್ರಾಸ್, ೧೯೯೩

೧೫. **ಹೆಗಡೆ, ನಾಗೇಶ**., ಪಶ್ಚಿಮ ಘಟ್ಟಗಳ ಅಳಿವು-ಉಳಿವು, ಪಶ್ಚಿಮ ಘಟ್ಟಗಳು ನೆನ್ನೆ - ಇಂದು, ಮಣ್ಣು ರಕ್ಷಣಾ ಕೂಟ, ಬೆಂಗಳೂರು ೧೯೯೩

೧೬. **ಸಲ್ಡಾನಾ, ಜೆ. ಸೆಸಿಲ್**., ಕರ್ನಾಟಕ ಸ್ಟೇಟ್ ಎನ್‌ವಾಯರನ್‌ಮೆಂಟ್ ರಿಪೋರ್ಟ್-೪, ಸೆಂಟರ್ ಪಾರ್ ಟಾಕ್ಸೊನಾಮಿಕ್ ಸ್ಟಡೀಸ್, ಸೈಂಟ್ ಜೋಸೆಫ್ಸ್ ಕಾಲೇಜ್, ಬೆಂಗಳೂರು ೧೯೯೩

೧೭. **ಬನ್ನಾಡಿ, ವಸಂತ**., (ಅನುವಾದ), ಬಂಡವಾಳಶಾಹಿ ಮತ್ತು ಪರಿಸರ, ಮಂತ್ಲಿ ರಿವ್ಯೂ, ನ್ಯೂಯಾರ್ಕ್ (ಸಂ.), ಅರಿವು ಬರಹ, ಮಂಗಳಗಂಗೋತ್ರಿ, ೧೯೯೩

೧೮. **ಗುಹಾ, ರಾಮಚಂದ್ರ**., (ಸಂ), ಸೋಷಿಯಲ್ ಇಕಾಲಜಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ೧೯೯೪

೧೯. **ವಾಸುಕಿ, ಕೆ. ಜೆ**., ಕರ್ನಾಟಕದ ಪರಿಸರ, ಕನ್ನಡ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫

೨೦. **ಭಟ್, ಭಾರತಿ**., ಬೇಡ್ತಿ ಚಳವಳಿ ಸಾಗಿ ಬಂದ ದಾರಿ, ಉತ್ತರ ಕನ್ನಡ ಜಿಲ್ಲಾ ಜಲವಿದ್ಯುತ್ ಯೋಜನಾ ವಿರೋಧಿ ಸಮಿತಿ, ಶಿರಸಿ, ೧೯೯೫

೨೧. **ಬಾಲ್ಡ್‌ವಿನ್, ರಿಚಾರ್ಡ್**., ಡಸ್ ಸಸ್ಟೈನೆಬಿಲಿಟಿ ರಿಕ್ವಾಯರ್ ಗ್ರೋಥ್?, ಎಕನಾಮಿಕ್ಸ್ ಆಫ್ ಸಸ್ಟೈನೆಬಲ್ ಡೆವಲಪ್‌ಮೆಂಟ್, ಇಯಾನ್ ಗೋಲ್ಡ್‌ವಿನ್ ಅಂಡ್ ಅಲಾನ್ ವಿಂಟರ್ಸ್ (ಸಂ.), ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ಕೇಂಬ್ರಿಡ್ಜ್, ೧೯೯೫

೨೨. **ಚಟ್‌ವಾಲ್. ಜಿ. ಆರ್**., ಎನ್‌ವಾಯರನ್‌ಮೆಂಟಲ್ ಅನಾಲಿಸಿಸ್, ಅನ್‌ಮೋಲ್ ಪಬ್ಲಿಕೇಷನ್ಸ್ ಪ್ರ. ಲಿಮಿಟೆಡ್. ನ್ಯೂಡೆಲ್ಲಿ, ೧೯೯೬

೨೩. **ಶರ್ಮಾ, ಸತೀಶ್ ಕೆ**., ಮಲ್ಟಿ ಕಲ್ಚರಾಲಿಸಂ ಅಂಡ್ ಎತ್ನಿಸಿಟಿ ಇನ್ ಗ್ಲೋಬಲ್ ಕಾನ್‌ಟೆಕ್ಸ್ಟ್, ರಾವತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೧೯೯೬

೨೪. **ಚಪ್ಪರಿಕೆ, ಸತೀಶ್. ರೆಡ್ಡಿ, ಯಲ್ಲಪ್ಪ** ಅ.ನ., ಮತ್ತೊಂದು ಮೌನ ಕಣಿವೆ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ ೧೯೯೭

೨೫. **ಶಶಿಧರ್, ಆರ್**., ಸಂಪ್ರದಾಯ ಮತ್ತು ಆಧುನಿಕತೆ, ಅರಿವು ಬರಹ, ಸಂಚಿಕೆ - ೧೩, ಮಂಗಳಗಂಗೋತ್ರಿ, ೧೯೯೭

೨೬. **ಪೂಜಾರಿ, ಚಂದ್ರ ಎಂ**., ಪರಿಸರ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೨೭. **ಗಣಪತಿ, ಬಿ**., ಕೊಡಸಳ್ಳಿ ಅಣೆಕಟ್ಟು - ಕಣ್ಣೀರ ಕತೆ, ತರಂಗ, ಆಗಸ್ಟ್ ೧೬, ೧೯೯೮

೨೮. **ಶಿವಸುಂದರ್**., ಬೆಂಗಳೂರು - ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ, ಸುಧಾ, ಫೆಬ್ರವರಿ ೭, ೧೯೯೯

೨೯. **ಗಣಪತಿ, ಬಿ**., ಸೀಬರ್ಡ್ ನೌಕಾನೆಲೆ, ತರಂಗ, ಮಾರ್ಚ್ ೧೧, ೧೯೯೯

೩೦. ಪತ್ರಿಕೆಗಳು ಮತ್ತು ವರದಿಗಳು

೧. ದಿ ಹಿಂದೂ
೨. ಪ್ರಜಾವಾಣಿ
೩. ಸಂಯುಕ್ತ ಕರ್ನಾಟಕ
೪. ಉದಯವಾಣಿ
೫. ಪರಿಸರ ಕುರಿತ ಕರ್ನಾಟಕ ರಾಜ್ಯದ ವರದಿಗಳು
೬. ನಗರೀಕರಣ ಕುರಿತ ರಾಷ್ಟ್ರೀಯ ಆಯೋಗದ ವರದಿಗಳು
೭. ವಿವಿಧ ಪರಿಸರ ಸಂಘಟನೆಗಳು ಹಾಗೂ ಸಂಘ-ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ವರದಿಗಳು.

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನಪದ್ಧತಿಯಾಗಿದೆ. ಕನ್ನಡಿಗರ ಇಂಥಹ ಜೀವನಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ವರ್ಮಾನದಲ್ಲಿ ಆರ್ಯ–ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕು ಮಾಡಿದೆ. ಹಿಂದಿನದು ಕನ್ನಡ ಸಂಸ್ಕೃತ ದ್ವಿಭಾಷಾ ಸಂದರ್ಭ. ಇಂದಿನದು ಕನ್ನಡ–ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿ ಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿ ಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶಿ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶಿಸತ್ಯ'ಗಳನ್ನು ಶೋಧಿಸುವುದು.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, ಅದನ್ನು ತನ್ನ ಪ್ರಸಾರಾಂಗದ ಮೂಲಕ ಪ್ರಧಾನವಾಗಿ ಪೂರೈಸುತ್ತಲಿದೆ. ಈ ನಿಟ್ಟಿನಲ್ಲಿ ಪ್ರಕಟವಾದ ಇತ್ತೀಚಿನ ಪುಸ್ತಕ, 'ಪರಿಸರ ಚಳವಳಿಗಳು'.

ಅನ್ಯಾಯವನ್ನು ಸಹಿಸಿಕೊಂಡು ಹೋಗುತ್ತಲಿರುವ ಸ್ವಭಾವದ ಭಾರತೀಯರು ಇತ್ತೀಚೆ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ಮನೋಧರ್ಮವನ್ನು ರೂಢಿಸಿಕೊಂಡಿರುವ ಫಲ 'ಚಳವಳಿ'. ಏಕೀಕರಣೋತ್ತರ ಕರ್ನಾಟಕದಲ್ಲಿ ತಲೆದೋರಿದ ಇಂಥ ಆರು ಮುಖ್ಯ ಚಳವಳಿಗಳನ್ನು ಕುರಿತು ಇತಿಹಾಸ ವಿಭಾಗ ಯೋಜನೆ ಯೊಂದನ್ನು ಕೈಗೆತ್ತಿಗೊಂಡಿದೆ. ಇದರ ಅಂಗವಾಗಿ ಪ್ರಕಟವಾಗು ತ್ತಲಿರುವ ಆರು ಕೃತಿಗಳಲ್ಲಿ 'ಪರಿಸರ ಚಳವಳಿಗಳು' ಒಂದು. ಇದನ್ನು ರಚಿಸಿದ ಶ್ರೀ ಕೆ. ಮೋಹನ್‌ಕೃಷ್ಣರೈ ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಎಂ. ಎಂ. ಕಲಬುರ್ಗಿ
ಕುಲಪತಿಗಳು